"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

8ನೇ ಫೆಬ್ರವರಿ 2021
ಸೋಮವಾರ

## ವಿಷಯಾನುಕ್ರಮಣಿಕೆ


1. ಪ್ರಶ್ನೋತ್ತರ

ಅ) ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗೆ ಮೌಖಿಕವಾಗಿ ನೀಡಲಾದ ಉತ್ತರ.

414– ರಾಜ್ಯದಲ್ಲಿ ಜಾರಿ ಇರುವ 'ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್ ಯೋಜನೆಯ' ಕುರಿತು

– ಶ್ರೀ ಹೆಚ್.ಎಂ.ರಮೇಶ್ ಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
(ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರ ಪರವಾಗಿ)

02. ನಿಯಮ 330–ಎ ಅಡಿಯಲ್ಲಿ ವಿಶೇಷ ಪ್ರಸ್ತಾವ

"ಅನ್ಯ ರಾಜ್ಯದ ಕಂಪನಿಯ ರೆಡ್ ಆಂಬ್ಯುಲೆನ್ಸ್ ದೊಡ್ಡ ಮಟ್ಟದಲ್ಲಿ ವ್ಯವಹಾರ ವಿಸ್ತರಿಸಿಕೊಂಡು ಲಾಭ ಮಾಡುತ್ತಿದ್ದು, ನಮ್ಮ ರಾಜ್ಯದ ಆಂಬ್ಯುಲೆನ್ಸ್ ಅತಂತ್ರವಾಗುವ ಪರಿಸ್ಥಿತಿ ಒದಗಿರುವ ಬಗ್ಗೆ."

– ಡಾ:ತೇಜಸ್ವಿನಿ ಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

03. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

ಅ) ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಲೋಂಡ–ಗೋವಾ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ನಿರ್ಮಿಸಲು ಪರಿಸರವಾದಿಗಳು ತಕರಾರು ತೆಗೆದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಆ ಭಾಗದ ಸುಮಾರು 30ಕ್ಕೂ ಹೆಚ್ಚು ಹಳ್ಳಿಗಳ ಸಾರ್ವಜನಿಕರಿಗೆ ತಾಲ್ಲೂಕು ಕೇಂದ್ರಕ್ಕೆ ಬರಲು ತೊಂದರೆಯಾಗುತ್ತಿರುವ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ ಪರವಾಗಿ)

ಆ) ಶೀಘ್ರವೇ ಒಂದು ಸೂಕ್ತ ಸ್ಥಳವನ್ನು ಗುರುತಿಸಿ ಸಂವಿಧಾನ ಶಿಲ್ಪಿ ಭಾರತರತ್ನ ಮಹಾನ್ ಮಾನವತಾವಾದಿ ಡಾ॥ಬಾಬಾಸಾಹೇಬ ಬಿ.ಆರ್.ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪನೆ ಮಾಡಬೇಕೆಂಬ ಬಗ್ಗೆ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ ಮತ್ತು ಸಕ್ಕರೆ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣದ ಹಿತದೃಷ್ಟಿಯಿಂದ ಶೇ.30ರ ಅನುಪಾತವನ್ನು ಶೇ.25ಕ್ಕೆ ಇಳಿಕೆ ಮಾಡಿ ಮತ್ತು ಆದಾಯ ತೆರಿಗೆ ಪಾವತಿಸುವವರಿಗೆ ಶುಲ್ಕ ವ್ಯಾಪ್ತಿಯಿಂದ ಕೈಬಿಟ್ಟು ಆದೇಶವನ್ನು ಮಾರ್ಪಡಿಸಬೇಕೆಂಬ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

ಈ) ನೇಕಾರರ ಅಭಿವೃದ್ಧಿ ಸಲುವಾಗಿಯೇ ಒಂದು ನಿಗಮವನ್ನು ಸ್ಥಾಪನೆ ಮಾಡಿ ಎಲ್ಲಾ ರೀತಿಯ ಸೌಲಭ್ಯಗಳು ಅವರಿಗೆ ಸಿಗುವಂತೆ ಅನುಕೂಲ ಮಾಡಿಕೊಡಬೇಕೆನ್ನುವ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವರ ಪರವಾಗಿ)

ಉ) ಪಾರದರ್ಶಕ ರೀತಿಯಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳು ಕಾರ್ಯನಿರ್ವಹಿಸುವಂತಾಗಲು ಸೂಕ್ತ ಕ್ರಮ ಕೈಗೊಳ್ಳಬೇಕೆನ್ನುವ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ ಪರವಾಗಿ)

04. ಕಾರ್ಯದರ್ಶಿಯವರ ವರದಿ

05. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ವಿಧೇಯಕ, 2021

– ಶ್ರೀ ಎನ್.ನಾಗರಾಜು(ಎಂ.ಟಿ.ಬಿ.)(ಪೌರಾಡಳಿತ ಹಾಗೂ ಕಬ್ಬು ಅಭಿವೃದ್ಧಿ ಸಚಿವರು)
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಮರಿತಿಬ್ಬೇಗೌಡ
– ಶ್ರೀ ನಸೀರ್ ಅಹ್ಮದ್
– ಶ್ರೀ ಹೆಚ್.ಎಂ.ರಮೇಶ ಗೌಡ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಗೋವಿಂದರಾಜು
– ಶ್ರೀ ಪಿ.ಆರ್.ರಮೇಶ್
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಅರವಿಂದ ಲಿಂಬಾವಳಿ(ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)
– ಶ್ರೀ ಎನ್.ರವಿಕುಮಾರ್

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕರ್ನಾಟಕ ಪೌರಸಭೆಗಳ(ಎರಡನೇ ತಿದ್ದುಪಡಿ) ವಿಧೇಯಕ, 2021

– ಶ್ರೀ ಎನ್.ನಾಗರಾಜು(ಎಂ.ಟಿ.ಬಿ) (ಪೌರಾಡಳಿತ ಹಾಗೂ ಕಬ್ಬು ಅಭಿವೃದ್ಧಿ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2021

– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಪಿ.ಆರ್.ರಮೇಶ್
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ನಸೀರ್ ಅಹ್ಮದ್
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಮರಿತಿಬ್ಬೇಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

06. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

– ಶ್ರೀ ಆಯನೂರು ಮಂಜುನಾಥ್
– ಶ್ರೀ ಕೆ.ಟಿ.ಶ್ರೀಕಂಠೇಗೌಡ

07. ಪ್ರಕಟಣೆ

08. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

– ಶ್ರೀ ಎಸ್.ವ್ವಿ.ಸಂಕನೂರ
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಯು.ಬಿ.ವೆಂಕಟೇಶ್
– ಡಾ||ತಳವಾರ್ ಸಾಬಣ್ಣ
– ಶ್ರೀ ಕೆ.ಟಿ.ಶ್ರೀಕಂಠೇಗೌಡ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**09. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಈ) ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020**

- ಶ್ರೀ ಪ್ರಭು ಬಿ. ಚವ್ಹಾಣ್ (ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು)
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಸವರಾಜ ಬೊಮ್ಮಾಯಿ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಎನ್.ರವಿಕುಮಾರ್
- ಶ್ರೀ ನಸೀರ್ ಅಹ್ಮದ್
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎಸ್.ರವಿ
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಆರ್.ಬಿ.ತಿಮ್ಮಾಪೂರ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(202) 8-2-2021/11-10 bkp-rn

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 8ನೇ ಫೆಬ್ರವರಿ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.**

**ಹಂಗಾಮಿ ಸಭಾಪತಿ (ಶ್ರೀ ಎಂ.ಕೆ.ಪ್ರಾಣೇಶ್) ರವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು ಎನಿಸುತ್ತದೆ. ಅವರುಗಳು ಸದನವನ್ನು ತ್ಯಾಗ ಮಾಡಿದ್ದಾರೆಯೇ?

**01. ಪ್ರಶ್ನೋತ್ತರ**

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಪ್ರಶ್ನೆ ಸಂಖ್ಯೆ 414**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ. ರಮೇಶ ಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರವನ್ನು ನೋಡಿದರೆ ಗೊತ್ತಾಗುತ್ತದೆ. ಇದು 2014 ರಲ್ಲಿ ಜಾರಿಗೆ ಬಂದಿರುವುದಾಗಿದೆ. **'ಬೆರಿ'** ಯೋಜನೆಯ ಘಟಕಗಳಲ್ಲಿ ವಿದ್ಯುತ್ ಉತ್ಪಾದನಾ ವೆಚ್ಚ ಪ್ರತಿ ಯೂನಿಟ್‌ಗೆ ರೂ. 8.50 ಆಗಲಿದ್ದು, ವಿದ್ಯುತ್ ಖರೀದಿ ದರ ರೂ. 2.85 ಆಗಿರುತ್ತದೆ. ಆದರೆ, ಇಂತಹ ಒಂದು ಯೋಜನೆಯನ್ನು ತರುವುದಕ್ಕಿಂತ ಮುಂಚೆ ತಾವು ಯಾವುದೇ ಅಭಿಪ್ರಾಯವನ್ನಾಗಲಿ ಅಥವಾ ತಜ್ಞರ ಒಂದು ವರದಿಯನ್ನಾಗಲಿ ತೆಗೆದುಕೊಂಡಿಲ್ಲವೇ? ಈ ಯೋಜನೆಗೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ಯೋಜನೆಯನ್ನು ಸ್ಥಗಿತ ಮಾಡುವುದಾದರೆ ರಾಜ್ಯದ ತೆರಿಗೆ ಹಣವನ್ನು ಪೋಲು ಮಾಡಿದಂತಾಗುವುದಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು **"ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್"** (Biomass Energy for Rural India- "BERI") ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ.

**(ಮುಂದು...**

**(203) 08.02.2021 11.20 ಎಸ್‌ವಿ–ವಿಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**

ವಾಸ್ತವಿಕವಾಗಿ, BERI (Biomass Energy for Rural India) ಎನ್ನುವ ಯೋಜನೆಯನ್ನು 2001ರಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. 2015ರಲ್ಲಿ ಈ ಯೋಜನೆಯು ಸ್ಥಗಿತಗೊಂಡಿದೆ. ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡಲಿಕ್ಕೆ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಕಬ್ಬಿಗೆರೆ, ಮಧುಗಿರಿ ತಾಲ್ಲೂಕಿನ ಬೋರಾಗುಂಟೆ ಮತ್ತು ಸೀಬಿನಯ್ಯನಪಾಳ್ಯ ಈ ಮೂರು ಕಡೆಗಳಲ್ಲಿ ಯೋಜನೆಯನ್ನು ರೂಪಿಸಲಾಯಿತು. ಒಟ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯ ವೆಚ್ಚ ರೂ.49.46 ಕೋಟಿಗಳಾಗಿದ್ದು, ಅದನ್ನು ಹಂತಹಂತವಾಗಿ ಸರ್ಕಾರ ಬಿಡುಗಡೆ ಮಾಡುತ್ತದೆ. ಈ ಯೋಜನೆಯ ಮೂಲಕ ಉತ್ಪಾದನೆ ಮಾಡಿದಂತಹ ವಿದ್ಯುತ್ ಖರೀದಿಯು ಅತ್ಯಂತ ಕಡಿಮೆಯಾಗಿದೆ ಹಾಗೂ ಉತ್ಪಾದನಾ ವೆಚ್ಚ ಅತ್ಯಂತ ಹೆಚ್ಚಾಗಿದೆ. ಆದ್ದರಿಂದ 2014ರಲ್ಲಿ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿದ್ದು, ಅದರ ಯಂತ್ರೋಪಕರಣಗಳನ್ನು ಹರಾಜು ಮಾಡಲಾಗಿದೆ. ಈ BERI ಯೋಜನೆಯು ಮತ್ತೊಮ್ಮೆ ಜೀವದಾನವನ್ನು ಪಡೆದುಕೊಳ್ಳುವಂತಹ ಸ್ಥಿತಿಯಲ್ಲಿಲ್ಲ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಮುಂದುವರೆದು, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನೇನಾದರೂ ವ್ಯಕ್ತಪಡಿಸಿದರೆ, ಉತ್ತರವನ್ನು ನೀಡಲಾಗುವುದು. "

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಈ ಯೋಜನೆಗಾಗಿ ವಿನಿಯೋಗಿಸಲಾದ ಹಣವು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿದೆಯೇ ಅಥವಾ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದೆಯೇ? ಎರಡನೆಯದಾಗಿ ದಿ:31.01.2014ರಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿದೆ ಎಂದು ಹೇಳಲಾಗಿದೆ. ಆದರೆ ಉತ್ತರದ ಕೊನೆಯಲ್ಲಿ 'ಬೆರಿ' ಯೋಜನೆಯು 2012ರಿಂದ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ವಿದ್ಯುತ್ ಉತ್ಪಾದನೆಯನ್ನು ಮಾಡಿರುವುದಿಲ್ಲ ಎಂದು ಉತ್ತರದ ಕೊನೆಯ ಭಾಗದಲ್ಲಿ ಹೇಳಲಾಗಿದೆ. ಉತ್ತರ ಮೊದಲ ಪುಟದಲ್ಲಿ '2014ರಲ್ಲಿ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಲಾಗಿದೆ' ಎಂದು ಹೇಳಿದ್ದು, ಉತ್ತರದ ಕೊನೆಯ ಭಾಗದಲ್ಲಿ '2012ರಲ್ಲಿ ಈ ಯೋಜನೆ ಸ್ಥಗಿತವಾಗಿದೆ' ಎಂದು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 2014ನೇ ಸಾಲಿನಲ್ಲಿ ಇದನ್ನು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಲಾಯಿತು. ಸಸ್ಯಾಧಾರಿತ ವಿದ್ಯುತ್ ಅನ್ನು ಉತ್ಪಾದನೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶವಾಗಿತ್ತು. ಆ ಘಟಕ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಿರಲಿಲ್ಲ. ಈ ಘಟಕದಲ್ಲಿ ವಿದ್ಯುತ್ ಉತ್ಪಾದನೆಯ ವೆಚ್ಚ ಯೂನಿಟ್‌ಗೆ ರೂ.8.50 ಆಗುತ್ತಿತ್ತು. ವಿದ್ಯುತ್ ಖರೀದಿ ದರ ಒಪ್ಪಂದದ ಪ್ರಕಾರ ರೂ.2.85 ಆಗಿತ್ತು. ಸಾರ್ವಜನಿಕ ಹಣದಿಂದ ಬಹುಕಾಲ ಇದನ್ನು ನಡೆಸುವುದು ಕಷ್ಟ ಎನ್ನುವ ಅಭಿಪ್ರಾಯಗಳು ಬಂದ ಹಿನ್ನೆಲೆಯಲ್ಲಿ ಅದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಲಾಯಿತು. ಜೈವಿಕ ಮಂಡಳಿಯ ಹಿಂದಿನ ಕಾರ್ಯಾಧ್ಯಕ್ಷರಾಗಿದ್ದ ಶ್ರೀ ವೈ.ಬಿ.ರಾಮಕೃಷ್ಣ ಎನ್ನುವವರ ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಉಪ ಸಮಿತಿಯನ್ನು ರಚಿಸಲಾಗುತ್ತದೆ. ಆ ಸಮಿತಿಯವರು ಈ ಬೆರಿ ಯೋಜನೆಯ ವಿದ್ಯುತ್ ಉತ್ಪಾದನಾ ಘಟಕವನ್ನು ಪುನಃ ಸ್ಥಾಪಿಸಿದರೂ ಕೂಡ ಅದರಿಂದ ನಷ್ಟಗಳೇ ಹೆಚ್ಚು ಎಂದು ಹೇಳಿದ ಕಾರಣ ಹಿಂದಿನ ಸರ್ಕಾರವು ಆ ಯೋಜನೆಯನ್ನು ಸ್ಥಗಿತಗೊಳಿಸಿದೆ. ನನ್ನ ದೃಷ್ಟಿಯಲ್ಲಿ ಇದನ್ನು ಮುಂದುವರೆಸುವುದು ಕಠಿಣವೆನಿಸುತ್ತದೆ. ಮಾನ್ಯ ಸದಸ್ಯರ ಅಭಿಪ್ರಾಯವೇನು?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಚಿವರೇ, ತಾವು ಹೇಳುತ್ತಿರುವುದು ಸರಿಯಿದೆ. ಇದಕ್ಕೆ ವೆಚ್ಚ ಮಾಡಿರುವುದು ರಾಜ್ಯ ಸರ್ಕಾರದ ಹಣವೇ ಅಥವಾ ಕೇಂದ್ರ ಸರ್ಕಾರದ ಹಣವೇ? ಎರಡನೆಯದಾಗಿ ತಮ್ಮ ಅಧಿಕಾರಿಗಳು ನೀಡಿರುವ ಉತ್ತರ ತಮಗೆ ತೃಪ್ತಿದಾಯಕವಾಗಿದೆಯೇ? 2014ರಲ್ಲಿ ಅದು ಹಸ್ತಾಂತರವಾಗುತ್ತದೆ. ಆದರೆ ಉತ್ತರದಲ್ಲಿ 2012ರಲ್ಲಿ ಸಂಪೂರ್ಣವಾಗಿ ಸ್ಥಗಿತಗೊಂಡಿದೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದನ್ನು ಒಪ್ಪಿಕೊಳ್ಳಬೇಕು? ಆದ್ದರಿಂದ ಅಧಿಕಾರಿಗಳು ಸದನಕ್ಕೆ ಏನಾದರೂ ತಪ್ಪು ಮಾಹಿತಿಯನ್ನು ನೀಡಿದ್ದರೆ ದಯಮಾಡಿ ಇದನ್ನು ಹಕ್ಕುಚ್ಯುತಿಗೆ ವರ್ಗಾವಣೆ ಮಾಡಬೇಕು ಮತ್ತು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ವಿಚಾರವನ್ನು ಪೂರ್ಣವಾಗಿ ಅರ್ಥ ಮಾಡಿಕೊಂಡು ಅವರಿಗೆ ಸಮರ್ಪಕವಾದ ಉತ್ತರವನ್ನು ಒದಗಿಸಿಕೊಡುತ್ತೇವೆ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾನಾಯಕರೇ, ಅಧಿಕಾರಿಗಳು ನೀಡಿರುವ ತಪ್ಪು ಮಾಹಿತಿಯು ಕಣ್ಣೆದುರಿಗೆ ಕಾಣುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ರಮೇಶ್ ಗೌಡ ಅವರೇ, ನಿಮಗೆ ನೀಡಿರುವ ಉತ್ತರದಲ್ಲಿ ಏನಾದರೂ ತಪ್ಪುಗಳಿದ್ದಲ್ಲಿ ಅದನ್ನು ತಿದ್ದುಪಡಿ ಮಾಡಿ ಸರಿಯಾದ ಉತ್ತರವನ್ನು ತಮಗೆ ಒದಗಿಸಿಕೊಡಲಾಗುವುದು. ತಪ್ಪು ಮಾಹಿತಿಯನ್ನು ನೀಡಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಒಟ್ಟಾರೆ ಈ ಯೋಜನೆಯನ್ನು ಪುನರಾರಂಭಿಸುವುದು ಕಷ್ಟವಾಗಿದ್ದು, ಸದನಕ್ಕೆ ತಪ್ಪು ಮಾಹಿತಿಯನ್ನು ನೀಡಿರುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಹಕ್ಕುಚ್ಯುತಿಯಂತಹ ಗೊಂದಲದಲ್ಲಿ ಏನೂ ಆಗುವುದಿಲ್ಲ. ತಮಗೆ ಆತಂಕ ಬೇಡ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಚಿವರೇ, ಈ ಯೋಜನೆಗೆ ನೀಡಿದ ಹಣ ರಾಜ್ಯ ಸರ್ಕಾರದ್ದೇ ಅಥವಾ ಕೇಂದ್ರ ಸರ್ಕಾರದ್ದೇ? ನನಗಿರುವ ಮಾಹಿತಿಯ ಪ್ರಕಾರ ಇದಕ್ಕೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೂರು ಸಂಸ್ಥೆಗಳ ಅನುದಾನದೊಂದಿಗೆ ಈ ಯೋಜನೆಯು ನಡೆಯುತ್ತಿದ್ದು, ಅದರಲ್ಲಿ ರಾಜ್ಯ ಸರ್ಕಾರದ ಅನುದಾನವೂ ಸೇರಿದೆ. ಅಧಿಕಾರಿಗಳು ನೀಡಿರುವ ಮಾಹಿತಿಯ ಪ್ರಕಾರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಈ ಯೋಜನೆಯಿದ್ದು, ನಿಖರವಾದ ಅಂಕಿ ಅಂಶಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**02. <u>ನಿಯಮ 330-ಎ ಅಡಿಯಲ್ಲಿ ವಿಶೇಷ ಪ್ರಸ್ತಾವ</u>**

**ವಿಷಯ:- ಅನ್ಯ ರಾಜ್ಯದ ಕಂಪನಿಯ ರೆಡ್ ಆಂಬ್ಯುಲೆನ್ಸ್ ದೊಡ್ಡ ಮಟ್ಟದಲ್ಲಿ ವ್ಯವಹಾರ ವಿಸ್ತರಿಸಿಕೊಂಡು ಲಾಭ ಮಾಡುತ್ತಿದ್ದು, ನಮ್ಮ ರಾಜ್ಯದ ಆಂಬ್ಯುಲೆನ್ಸ್ ಅತಂತ್ರವಾಗುವ ಪರಿಸ್ಥಿತಿ ಒದಗಿರುವ ಬಗ್ಗೆ.**

- - -

**ಡಾ:ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜಗತ್ತನ್ನು ಕಾಡಿದ ಕೋವಿಡ್ ಚಿಕಿತ್ಸೆಯಲ್ಲಿ ಆಂಬ್ಯುಲೆನ್ಸ್‌ಗಳ ಮಾನವೀಯ ಸೇವಾ ಕಾರ್ಯ ನಮ್ಮೆಲ್ಲರ ಹೃದಯ ಗೆದ್ದಿದೆ.

ಸ್ಟಾನ್‌ಪ್ಲಸ್ ಟೆಕ್ನಾಲಜೀಸ್ ಎಂಬ ವಿದೇಶಿ ಸಹಯೋಗದ ಹೈದರಾಬಾದ್ ಮೂಲದ ಕಾರ್ಪೊರೇಟ್ ಕಂಪನಿಯವರು ರೆಡ್ ಆಂಬ್ಯುಲೆನ್ಸ್ ಹೆಸರಿನಲ್ಲಿ ಏಕಾಏಕಿ ಕರ್ನಾಟಕ ರಾಜ್ಯಕ್ಕೆ ಬಂದು ದೊಡ್ಡ ಮಟ್ಟದಲ್ಲಿ ಆಂಬ್ಯುಲೆನ್ಸ್ ವ್ಯವಹಾರವನ್ನು ವಿಸ್ತರಿಸಿ ಪ್ರತಿಷ್ಠಿತ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಅವರ ರಾಜ್ಯದ ವಾಹನಗಳನ್ನು ತಂದು ಉಪಯೋಗಿಸುತ್ತಿದ್ದಾರೆ.

ಇದರ ಪರಿಣಾಮವಾಗಿ ಆಂಬ್ಯುಲೆನ್ಸ್ ಉದ್ಯೋಗವನ್ನೇ ನಂಬಿಕೊಂಡು ಬದುಕುತ್ತಿರುವ ನಮ್ಮ ಕರ್ನಾಟಕ ರಾಜ್ಯದ ಲಕ್ಷಾಂತರ ಕುಟುಂಬಗಳು ಬೀದಿಗೆ ಬೀಳುತ್ತಿವೆ ಹಾಗೂ ಆಸ್ಪತ್ರೆಗಳು ಶೇ.20 ರಿಂದ 30ರಷ್ಟು ಕಮಿಷನ್ ಹಣವನ್ನು ಲಾಭವನ್ನಾಗಿಸಿಕೊಳ್ಳುತ್ತಿವೆ. ಸಾರ್ವಜನಿಕರಿಗೂ ಆಂಬ್ಯುಲೆನ್ಸ್ ಸೇವೆಯಿಂದ ಆರ್ಥಿಕ ಹೊರೆ ಬೀಳುವ ಸಂಭವವಿರುತ್ತದೆ. ಅಲ್ಲದೆ ಇದನ್ನೇ ನೆಚ್ಚಿಕೊಂಡಿರುವ ನಮ್ಮ ರಾಜ್ಯದ ಆಂಬ್ಯುಲೆನ್ಸ್ ವಾಹನ ಮಾಲೀಕರು ಮತ್ತು ಸಿಬ್ಬಂದಿಗಳು ನಿರುದ್ಯೋಗಿಗಳಾಗುವ ಅಪಾಯವಿರುತ್ತದೆ. ಈ ಸಂಬಂಧ ಇಂದಿನಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅವರು ಉಪವಾಸ ಧರಣಿ ಸತ್ಯಾಗ್ರಹವನ್ನು ಆರಂಭಿಸಿರುತ್ತಾರೆ. ಹೀಗಾಗಿ ಕೂಡಲೇ ಸರ್ಕಾರವು ಮಧ್ಯ ಪ್ರವೇಶಿಸಿ ನಮ್ಮ ರಾಜ್ಯದ ಆಂಬ್ಯುಲೆನ್ಸ್ ಮಾಲೀಕರ-ಸಿಬ್ಬಂದಿಯ ಜೀವನ ಭದ್ರತೆ ಕಾಪಾಡಬೇಕಾಗಿ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 330 ಎ ಅಡಿಯ ವಿಶೇಷ ಪ್ರಸ್ತಾವದಲ್ಲಿ ಮಾನ್ಯ ತೇಜಸ್ವಿನಿಗೌಡ ಅವರು ರಾಜ್ಯದ ಆಂಬ್ಯುಲೆನ್ಸ್ ಮಾಲೀಕರ-ಸಿಬ್ಬಂದಿಯ ಜೀವನದ ಭದ್ರತೆಯನ್ನು ಕುರಿತಂತೆ ವಿವರಿಸಿದ್ದಾರೆ. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

03. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ:- ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಲೋಂಡ-ಗೋವಾ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಪರಿಸರವಾದಿಗಳು "ಲೋಂಡಾ-ಗೋವಾ ರಾಷ್ಟ್ರೀಯ ಹೆದ್ದಾರಿ" ನಿರ್ಮಿಸಲು ತಕರಾರು ತೆಗೆದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಆ ಭಾಗದ ಸುಮಾರು 30ಕ್ಕೂ ಹೆಚ್ಚು ಹಳ್ಳಿಗಳ ಸಾರ್ವಜನಿಕರಿಗೆ ತಾಲ್ಲೂಕು ಕೇಂದ್ರಕ್ಕೆ ಬರಲು ತೊಂದರೆಯಾಗುತ್ತಿರುವ ಬಗ್ಗೆ.**

- - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಹಾಂತೇಶ ಮ.ಕವಟಗಿಮಠ ಅವರು ದಿನಾಂಕ 01.02.2021ರಂದು ಪ್ರಸ್ತಾಪಿಸಿರುವ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ವಿಷಯ:– ಶೀಘ್ರವೇ ಒಂದು ಸೂಕ್ತ ಸ್ಥಳವನ್ನು ಗುರುತಿಸಿ ಸಂವಿಧಾನ ಶಿಲ್ಪಿ ಭಾರತರತ್ನ ಮಹಾನ್ ಮಾನವತಾವಾದಿ ಡಾ॥ಬಾಬಾಸಾಹೇಬ ಬಿ.ಆರ್.ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪನೆ ಮಾಡಬೇಕೆಂಬ ಬಗ್ಗೆ**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ ಮತ್ತು ಸಕ್ಕರೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ ವಿ. ಮಾನೆ ಅವರು ದಿನಾಂಕ 01.02.2021ರಂದು ಪ್ರಸ್ತಾಪಿಸಿರುವ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಇ) ವಿಷಯ:– ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣದ ಹಿತದೃಷ್ಟಿಯಿಂದ ಶೇ.30ರ ಅನುಪಾತವನ್ನು ಶೇ.25ಕ್ಕೆ ಇಳಿಕೆ ಮಾಡಿ ಮತ್ತು ಆದಾಯ ತೆರಿಗೆ ಪಾವತಿಸುವವರಿಗೆ ಶುಲ್ಕ ವ್ಯಾಪ್ತಿಯಿಂದ ಕೈಬಿಟ್ಟು ಆದೇಶವನ್ನು ಮಾರ್ಪಡಿಸಬೇಕೆಂಬ ಬಗ್ಗೆ**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಅವರು ದಿನಾಂಕ 03.02.2021ರಂದು ಪ್ರಸ್ತಾಪಿಸಿರುವ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:– ನೇಕಾರರ ಅಭಿವೃದ್ಧಿ ಸಲುವಾಗಿಯೇ ಒಂದು ನಿಗಮವನ್ನು ಸ್ಥಾಪನೆ ಮಾಡಿ ಎಲ್ಲಾ ರೀತಿಯ ಸೌಲಭ್ಯಗಳು ಅವರಿಗೆ ಸಿಗುವಂತೆ ಅನುಕೂಲ ಮಾಡಿಕೊಡಬೇಕೆನ್ನುವ ಬಗ್ಗೆ**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ ಅವರು ದಿನಾಂಕ 03.02.2021ರಂದು ಪ್ರಸ್ತಾಪಿಸಿರುವ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉ) ವಿಷಯ:– ಪಾರದರ್ಶಕ ರೀತಿಯಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳು ಕಾರ್ಯನಿರ್ವಹಿಸುವಂತಾಗಲು ಸೂಕ್ತ ಕ್ರಮ ಕೈಗೊಳ್ಳಬೇಕೆನ್ನುವ ಬಗ್ಗೆ**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ಅವರು ದಿನಾಂಕ 05.02.2021ರಂದು ಪ್ರಸ್ತಾಪಿಸಿರುವ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್ ಅವರು ದಿನಾಂಕ 04.02.2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯವನ್ನು ನಿಯಮ 68ಕ್ಕೆ ಪರಿವರ್ತಿಸಲಾಗಿದೆ.

**04. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021
2) ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2021
3) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2021

**ಹಂಗಾಮಿ ಸಭಾಪತಿಯವರು:-** ಮಂಡಿಸಲಾಯಿತು.

**05.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.) (ಪೌರಾಡಳಿತ ಹಾಗೂ ಕಬ್ಬು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021 ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

(...ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(204) 08.02.2021, 11.30. KG.VK

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.) (ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, 2020–21ನೇ ಹಣಕಾಸು ವರ್ಷದಲ್ಲಿ ಕೊರೋನಾ–19ರ ಸಾಂಕ್ರಾಮಿಕ ಕಾಯಿಲೆಯಿಂದಾಗಿ, ಆಸ್ತಿ ತೆರಿಗೆ ಪಾವತಿಯ ಕಾಲಮಿತಿಯನ್ನು ವಿಸ್ತರಿಸಲು ಹಾಗೂ ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಶೇಕಡ ಐದರ ರಿಯಾಯಿತಿಯನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸಲೂ ಸಹ ಕರ್ನಾಟಕ ಪೌರಸಭೆಯಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ. ಆದ್ದರಿಂದ, ಈ ವಿಧೇಯಕವನ್ನು ಮಂಡಿಸಲಾಗಿದೆ.

ಮಾನ್ಯ ಸಭಾಪತಿಯವರೇ, ಆಸ್ತಿ ತೆರಿಗೆಯನ್ನು ನಿಗದಿತ ಅವಧಿಯೊಳಗಡೆ ಕಟ್ಟುವವರಿಗೆ ಶೇಕಡ ಐದರ ರಿಯಾಯಿತಿ ಕೊಡುವುದು ಇದರ ಉದ್ದೇಶವಾಗಿತ್ತು. ಆದರೆ, ಕೊರೋನಾ–19 ಬಂದಿದ್ದರಿಂದ ಅದನ್ನು ಇನ್ನೊಂದು ತಿಂಗಳ ಕಾಲ ವಿಸ್ತರಿಸಿದ್ದೇವೆ. ಈ ವಿಧೇಯಕ ಮಂಡನೆಯಾದ ಮೇಲೆ ತೆರಿಗೆ ಕಟ್ಟುವವರಿಗೆ ಒಂದು ತಿಂಗಳು ಹೆಚ್ಚಿಗೆ ಕಾಲವಕಾಶವನ್ನು ನೀಡಿದ್ದೇವೆ.

**ಹಂಗಾಮಿ ಸಭಾಪತಿಯವರು:–** ಈ ವಿಧೇಯಕದ ಮೇಲೆ ಯಾರಾದರೂ ಸದಸ್ಯರು ಚರ್ಚೆ ಮಾಡವಂತಿದ್ದರೆ ಮಾಡಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದು ಯಾವಾಗ?

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರೇ, ಈ ವಿಧೇಯಕ ಮುಗಿದ ತಕ್ಷಣ ತೆಗೆದುಕೊಳ್ಳೋಣ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡುವುದು ಯಾವಾಗ? ಮಾನ್ಯ ರಾಜ್ಯಪಾಲರು ದೊಡ್ಡವರೋ ಅಥವಾ ಈ ವಿದೇಯಕದ ದೊಡ್ಡದೋ? ಈಗ ಸದನವನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಮತ್ತು ಅದನ್ನು ಅಂಗೀಕರಿಸುವುದಕ್ಕೆ ಕರೆಯಲಾಗಿದೆ. ತಾವು ಇದನ್ನು ಹತ್ತು ದಿವಸಗಳಿಂದ ಮೂಲೆಗೆ ಒತ್ತುಬಿಟ್ಟು, ಈಗ ಚಿಲ್ಲರೆ–ಪಲ್ಲರೆ ವಿಧೇಯಕಗಳೆಂದು ಹೇಳುತ್ತಿದ್ದೀರಿ. ಮೊದಲು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ತೆಗೆದುಕೊಂಡು ಅದನ್ನು ಅಂಗೀಕರಿಸಿದ ನಂತರ ಈ ವಿಧೇಯಕಗಳನ್ನು ತೆಗೆದುಕೊಳ್ಳಬಹುದಲ್ಲವೇ; ಮಾನ್ಯ ರಾಜ್ಯಪಾಲರಿಗೆ ಸರ್ಕಾರವೇ ಗೌರವ ಕೊಡದಿದ್ದರೆ, ಇನ್ಯಾರು ಗೌರವ ಕೊಡುವವರು?

**ಹಂಗಾಮಿ ಸಭಾಪತಿಯವರು:–**ಮಾನ್ಯ ಸದಸ್ಯರುಗಳೇ, ತಾವುಗಳು ಐದು ನಿಮಿಷಗಳಲ್ಲಿ ಅಂಗೀಕರಿಸಿ ಕೊಡಿ. ವಿಧೇಯಕ ಮಂಡನೆಯಾದ ತಕ್ಷಣವೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಂದುವರಿಸೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಹೇಳಿದ್ದಾರೆ, ಈ ವಿಧೇಯಕ ಮಂಡನೆಯಾದ ತಕ್ಷಣವೇ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಅವಕಾಶ ಕೊಡಿ.

**ಹಂಗಾಮಿ ಸಭಾಪತಿಯವರು:–**ಮಾನ್ಯ ಸಭಾನಾಯಕರೇ, ಆಯಿತು. ಮಾನ್ಯ ಪಿ.ಆರ್.ರಮೇಶ್‌ರವರೇ, ತಾವೀಗ ವಿಧೇಯಕದ ಬಗ್ಗೆ ಚರ್ಚೆ ಮಾಡಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರುವಂತಹ ತಿದ್ದುಪಡಿಗಳಿಂದ ನಗರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪಂಚಾಯಿತಿ ಪ್ರದೇಶಗಳಲ್ಲಿ ಇರುವಂತಹ ತೆರಿಗೆದಾರರು ಮತ್ತು ಆಸ್ತಿ ತೆರಿಗೆದಾರರಿಗೆ ಎಷ್ಟರ ಮಟ್ಟಿಗೆ ಒಳ್ಳೆಯದಾಗುತ್ತದೆ ಎನ್ನುವುದರ ಬಗ್ಗೆ ವಿಶ್ಲೇಷಣೆ ಮಾಡಬೇಕಾಗುತ್ತದೆ. ಪ್ರತಿವರ್ಷ ಪರಿಷ್ಕರಣೆ ಮಾಡುವುದಕ್ಕೆ 3% ಹಾಕಿದ್ದಾರೆ. ಈ ಹಿಂದೆ ಐದು ವರ್ಷಗಳಿಗೊಮ್ಮೆ ಪರಿಷ್ಕರಣೆ ಮಾಡುವಂತಹ ಅಭ್ಯಾಸ ನಗರ ಸ್ಥಳೀಯ ಸಂಸ್ಥೆಗಳಲ್ಲಿತ್ತು. ಆದರೆ, ಈಗ ಪ್ರತಿವರ್ಷ 3% ಅನ್ನು ಹೆಚ್ಚಿಗೆ ಮಾಡಿದರೆ, ಇದರಿಂದ ಬಹಳ ಹೆಚ್ಚಿಗೆ ನಗರ ಪ್ರದೇಶಗಳಲ್ಲಿ corruption ಆಗುತ್ತದೆ. ಇದರ ಜೊತೆಗೆ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತದೆ. ಕೋವಿಡ್ ಮತ್ತು ನೋಟ್‌ಬ್ಯಾನ್ ಆದಮೇಲೆ ಸಾರ್ವಜನಿಕರು ಆವತ್ತಿನಿಂದ ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆಯೇ ಹೊರತು, ಅದರಿಂದ ಇವತ್ತಿನವರೆಗೂ ಚೇತರಿಸಿಕೊಳ್ಳುವುದಕ್ಕೆ ಆಗಲಿಲ್ಲ. ಮಾನ್ಯ ಸಚಿವರು ತಂದಿರುವಂತಹ ಈ ವಿಧೇಯಕದಲ್ಲಿ, enhancement ಮಾಡುವಂತಹದೊಂದು ಮತ್ತು 5 per cent rebate ಕೊಡುವಂತಹದ್ದು, ಅಂದರೆ, ತೆರಿಗೆ ಕಟ್ಟುವುದರಲ್ಲಿ 5% ವಿನಾಯಿತಿ ಕೊಡುವಂತಹದ್ದು, ಈ 5% ವಿನಾಯಿತಿ ಕೊಡುವಂತಹದ್ದು usual ಆಗಿ ಬಹಳ ಹಿಂದಿನಿದಲೂ ಇದೆ. ಅದು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಾರಭವಾಗಿದ್ದು. ಈಗ ಕೋವಿಡ್ ಇದೆ. ಹಾಗಾಗಿ, ಕೋವಿಡ್ ಹೋದ ಮೇಲೆ, ಈ ವಾತಾವರಣ ತಿಳಿಯಾದ ಮೇಲೆ ಈ ಕಾಯಿದೆ ಹಾಗೆಯೇ ಉಳಿಯುತ್ತದೆ. ಇದು ಎಲ್ಲಿಯವರೆಗೆ ಇರುತ್ತದೆಯೋ, ಅಲ್ಲಿಯವರೆಗೂ ಈ ಕಾಯಿದೆಯನ್ನು ಮಾಡಿಕೊಂಡು ಹೋಗುತ್ತಾರೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, 3% ಹಾಕುವುದು ಬೇಡ. ಕನಿಷ್ಠ ಐದು ವರ್ಷಗಳಿಗೆ ಒಂದು ಬಾರಿ 10% ಹಾಕಲಿ. 10% ಹಾಕಬಹುದು. ಈ ಹಿಂದೆ Municipal Corporation ನಲ್ಲಿಯೂ ಆ provisions ಇತ್ತು. Maximum 10 per cent ವರೆಗೂ ಮಾಡಬಹುದೆಂದು ಇತ್ತು. ಅದರ ಬಗ್ಗೆ ಸ್ಥಳೀಯ ಸಂಸ್ಥೆಯವರು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಇಲ್ಲಿ ಸರ್ಕಾರದವರೇ ನಿರ್ಣಯ ತೆಗೆದುಕೊಳ್ಳುತ್ತಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಸಂವಿಧಾನದ 74ನೇ ತಿದ್ದುಪಡಿಯನ್ನು ನೋಡಬೇಕಾಗುತ್ತದೆ. ಸಂವಿಧಾನದಲ್ಲಿ ಕಂದಾಯಗಳನ್ನು ವಿಧಿಸುವಂತಹದ್ದು ಆಯಾಯಾ ಸ್ಥಳೀಯ ಸಂಸ್ಥೆಗಳಿಗೆ ನಿರ್ಭಂದವಾಗಿದೆ ದಿದೆ. ಆದರೆ, ಈ ಕಾಯಿದೆಯಿಂದ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆ? ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ supportive ಆಗಿ ಇರಬೇಕು. ಆದರೆ, ಇಲ್ಲಿ ಅವರ ಎಲ್ಲಾ ಅಧಿಕಾರವನ್ನು ಕಸಿದುಕೊಳ್ಳುತ್ತಿದೆ. ಆದ್ದರಿಂದ, ಸಂವಿಧಾನದ 74 ನೇ ತಿದ್ದುಪಡಿಯ ಆಶಯಗಳು ಏನಿವೆ, ಆ ಆಶಯಗಳಿಗೆ ವಿರುದ್ಧವಾಗಿ ಹೋಗುತ್ತಿರುವುದು ಬಹಳ ಗಂಭೀರವಾದಂತಹ ವಿಚಾರವಾಗುತ್ತದೆ ಎಂದು ನನ್ನ ಅನಿಸಿಕೆ. ಮಾನ್ಯ ಸಚಿವರು ಇದಕ್ಕೆ ದಯವಿಟ್ಟು ಸ್ಪಷ್ಟೀಕರಣ ಕೊಡಬೇಕು. ಅಲ್ಲದೇ, ಪ್ರತಿವರ್ಷ 3% ಮಾಡುವುದಕ್ಕೆ ಹೊರಟ್ಟಿದ್ದಾರೆ, ಇದು ಖಂಡಿತವಾಗಿ ಜನರಿಗೆ ಹೊರೆಯಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ತಮಗೆ ಒಂದು ವಿಚಾರವನ್ನು ಹೇಳುತ್ತೇನೆ. ಉದಾಹರಣೆಗೆ, ನಮ್ಮ ಬೆಂಗಳೂರು ನಗರವನ್ನೇ ತೆಗೆದುಕೊಳ್ಳಿ ಅಥವಾ ಬೇರೆ ಬೇರೆ ನಗರ ಪ್ರದೇಶಗಳನ್ನೇ ತೆಗೆದುಕೊಳ್ಳಿ, ಇಲ್ಲಿ ಕಂದಾಯ ಹಾಕುವಂತಹ ಎಷ್ಟೋ ಕಟ್ಟಡಗಳು ಇಲ್ಲವೇ ಇಲ್ಲ, escape ಆಗಿವೆ. ಬಹಳಷ್ಟು ಕಟ್ಟಡಗಳು ಇಲ್ಲವೇ ಇಲ್ಲ. ಅಂತಹವುಗಳನ್ನು network ಗೆ ತೆಗೆದುಕೊಂಡು ಬರುವುದಕ್ಕೆ ನೋಡಬೇಕು. ಇದರ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕು. ಅದು ಪಟ್ಟಣ ಪಂಚಾಯಿತಿ ಇರಹಬಹುದು, Municipality ಇರಬಹುದು, ನಗರ ಪಾಲಿಕೆಗಳು ಇರಬಹುದು ಅಥವಾ ಮಹಾನಗರ ಪಾಲಿಕೆಗಳು ಇರಬಹುದು, ಇವರಿಗೆ ಅಧಿಕಾರವನ್ನು ಕೊಟ್ಟರೆ, ಅವರು ವಾತವರಣವನ್ನು ನೋಡಿಕೊಂಡು ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದುಕೊಂಡು, ಸಾರ್ವಜನಿಕರ ಆಶಯಗಳಂತೆ, ಅದು ಅಲ್ಲಿನ ಪ್ರತಿನಿಧಿಗಳ ಸಭೆಯಲ್ಲಿ ನಿರ್ಧಾರವಾಗುತ್ತದೆ. ಅಂತಹದ್ದನ್ನು ಇಲ್ಲಿ ಕಾಯಿದೆಯಲ್ಲಿಯೇ ಸೇರಿಸಿಬಿಟ್ಟರೆ, ನಾವು ಸಂವಿಧಾನಕ್ಕೆ ಎಲ್ಲೋ ಒಂದು ಕಡೆ ಅಗೌರವ ಕೊಟ್ಟಂತೆ ಆಗುತ್ತದೆ. ಸಂವಿಧಾನದಲ್ಲಿ ಕೊಟ್ಟಿರುವಂತಹ ಅಧಿಕಾರ ಏನಿದೆ, ಇಲ್ಲಿ ಆ ಸಂವಿಧಾನದ ಅಧಿಕಾರವನ್ನು ಕಸಿದುಕೊಳ್ಳುತ್ತಿದ್ದಾರೆ. ಆದ್ದರಿಂದ, ದಯವಿಟ್ಟು ಈ ಕೆಲಸವನ್ನು ಮಾಡಬಾರದು. ಪ್ರತಿ ವರ್ಷ 3% ಹಾಕುವುದಕ್ಕೆ ನಾವು ಒಪ್ಪುವುದಿಲ್ಲ. ಮಾನ್ಯ ಸಚಿವರು 10% ಹಾಕುವುದಕ್ಕೆ ಏನು ಬೇಕೋ ಅದನ್ನು ಮಾಡುವುದಕ್ಕೆ ಒತ್ತನ್ನು ಕೊಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಇವತ್ತು ಸಾರ್ವಜನಿಕರು ಎರಡು ಹೊತ್ತಿನ ಊಟಕ್ಕೂ ಸಹ ಬಹಳ ಕಷ್ಟ ಪಡುವಂತಹ ಸನ್ನಿವೇಶ ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೇ, ಇಡೀ ದೇಶದಲ್ಲಿಯೇ ಇದೆ. ಕೋವಿಡ್ ಬಂದ ಮೇಲೆ ಇನ್ನಷ್ಟು ಕಷ್ಟವಾಗಿದೆ, ಇವತ್ತು ಎಷ್ಟೋ property ಗಳಲ್ಲಿ ಬಾಡಿಗೆ ಇಲ್ಲದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಮಾನ್ಯ ಸಚಿವರಿಗೂ ಚೆನ್ನಾಗಿ ಗೊತ್ತಿದೆ. ಅವರ ಎಷ್ಟೋ buildings ಗಳು ಖಾಲಿ ಇವೆ ಎಂದು ನಾನು ಅಂದುಕೊಂಡಿದ್ದೇನೆ. ಎಲ್ಲರ building ಗಳು ಖಾಲಿ ಇವೆ. ಇದರಿಂದ ನಮಗೆ ಬರುವಂತಹ ಆದಾಯವೇ ಬರುತ್ತಿಲ್ಲ. ಅದು ಪೌರಡಾಳಿತದ್ದು ಇರಬಹುದು ಅಥವಾ ನಗರ ಪಾಲಿಕೆಯದ್ದು ಇರಬಹುದು, ಎರಡೂ ಕಡೆ ಬೇಕಾದಷ್ಟು buildings ಗಳಿವೆ. ಆ buildings ಗಳಿಗೆ ಬಾಡಿಗೆಯೇ ಬರುತ್ತಿಲ್ಲ. ಈ ರೀತಿಯ ಪರಿಸ್ಥಿತಿ ಇರುವಾಗ, property tax ಗಳನ್ನು ಎಲ್ಲಿಂದ ಕಟ್ಟುವುದ್ದಕ್ಕೆ ಆಗುತ್ತದೆ?

ಮಾನ್ಯ ಸಭಾಪತಿಯವರೇ, ನಾನು ಕಳೆದ ವರ್ಷ ಬಾಡಿಗೆಗೆ ಕೊಟ್ಟಿರುವಂತಹದ್ದು, ಈ ವರ್ಷ 25% ಕಡಿಮೆಯಾಗಿದೆ. ಅಂದರೆ, ಬಾಡಿಗೆಗೆ ಇರುವವರು ನಮಗೆ ಕೋವಿಡ್ ಬಂದಿದೆ, 10 ಸಾವಿರ ರೂಪಾಯಿ ಬಾಡಿಗೆ ಕೊಡುವಂತಹ ಕಡೆಗಳಲ್ಲಿ, ಎಂಟು ಸಾವಿರ ರೂಪಾಯಿ ಕೊಡುತ್ತೇವೆ. ನೀವು ಇರಿ ಎಂದರೆ, ಇರುತ್ತೇವೆ. ಇಲ್ಲವೆಂದರೆ ಹೋಗುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕೆ ನಾವು ಇವತ್ತು 8 ಸಾವಿರ ಕೊಟ್ಟು ಇರಿ ಎನ್ನುವಂತಹ ಪರಿಸ್ಥಿತಿ ಬಂದಿದೆ. ಅಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೇ, ಇಡೀ ನಮ್ಮ ದೇಶದಲ್ಲಿಯೇ ಆಗಿದೆ. ಹಾಗಾಗಿ, ಇಂತಹ ಸಂದರ್ಭದಲ್ಲಿ ಪರಿಷ್ಕರಣೆ ಮಾಡುವಂತಹದ್ದು, ಪ್ರತಿವರ್ಷ 3% ಎಂದರೆ, ಇದು ಬಹಳ ಖೇದನೀಯ ಎಂದು ನನಗೆ ಅನಿಸುತ್ತದೆ. ಆದ್ದರಿಂದ, ಇದನ್ನು ಜನಪರವಾಗಿ ಮತ್ತು ನಾಗರೀಕರವಾಗಿ ಪರವಾಗಿ ಪುನರ್‌ಪರಿಶೀಲಿಸುವುದು ಸೂಕ್ತವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಈಗ ಯಾವ ವಿಧೇಯಕ ತಿದ್ದುಪಡಿಗೆ ಮಂಡನೆಯಾಗಿದೆ ಅದರ ಬಗ್ಗೆ ಹೇಳಬೇಕು. ಆದರೆ, ಮಾನ್ಯ ಸದಸ್ಯರು ಅದನ್ನು ಬಿಟ್ಟು ಬೇರೆ ವಿಧೇಯಕದ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.) (ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ತಂದಿರುವಂತಹ ವಿಧೇಯಕದಲ್ಲಿ 5 per cent rebate ಕೊಡುವುದಕ್ಕೆ ಮತ್ತು one month extend ಮಾಡುವುದಕ್ಕೆ ಮಾತ್ರ. ಆದರೆ, ಮಾನ್ಯ ಸದಸ್ಯರು 2ನೇ ವಿಧೇಯಕದ ಬಗ್ಗೆ ಮಾತನಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಾವೀಗ ಪ್ರಸ್ತಾಪ ಮಾಡಿರುವಂತಹ ವಿಧೇಯಕದ ಬಗ್ಗೆ ಮಾತನಾಡಲಿಲ್ಲ. 2ನೇ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಾನು ಇಲ್ಲಿಯವರೆಗೆ ಚರ್ಚೆ ಮಾಡಿದಂತಹ ವಿಷಯ ಮಾನ್ಯ ಸಚಿವರು ಮಂಡನೆ ಮಾಡುವಂತಹ ಇನ್ನೊಂದು ಬಿಲ್ಲಿನಲ್ಲಿದೆ. ಹಾಗಾಗಿ, ನಾನು ಇಲ್ಲಿಯವರೆಗೆ ಮಾತನಾಡಿದ್ದನ್ನು ಆ ವಿಧೇಯಕಕ್ಕೆ consider ಮಾಡಿಕೊಳ್ಳಿ.

(ಮುಂದು)

(205)08-02-2021(11-40)ಎಂವಿ-ಬಿಎನ್‌ಎಸ್

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಕೋವಿಡ್-19 ಬಂದಂತಹ ಸಂದರ್ಭದಲ್ಲಿ ನಾವು ಮೂರು-ನಾಲ್ಕು ತಿಂಗಳುಗಳ ಕಾಲ ಯಾವುದೇ ರೀತಿಯ ತೆರಿಗೆಯನ್ನು ಸಂಗ್ರಹಿಸುವುದಕ್ಕೆ ಆಗಿಲ್ಲ. ಅದಕ್ಕೆ ಮೂರು-ನಾಲ್ಕು ತಿಂಗಳು extend ಮಾಡಿ, ಅದನ್ನು on time ನಲ್ಲಿ ಕಟ್ಟಿದರೆ, ಶೇಕಡಾ 5ರಷ್ಟು ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-**ಮಾನ್ಯ ಸಭಾಪತಿಯವರೇ, ಹಾಗಾದರೆ next year ಯಾವಾಗ ಕಟ್ಟಬಹುದು?

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಇದನ್ನು specifically ಕೊಟ್ಟಿರುವಂಥದ್ದು. ಇದನ್ನು ಕೋವಿಡ್-19 ಬಂದಿರುವ ಸಂದರ್ಭದಲ್ಲಿ ಮಾತ್ರ ಮಾಡಿದ್ದೇವೆ. ಅದೇ ಬೇರೆಯದರಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ಈಗ ತಂದಿರುವ ವಿಧೇಯಕದಲ್ಲಿ ಸಾರ್ವಜನಿಕರು on time ಕಟ್ಟಿದರೆ ಶೇಕಡಾ 5ರಷ್ಟು ರಿಯಾಯಿತಿ ಎಂದು ಹೇಳಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ತೆರಿಗೆ ಕಟ್ಟಬೇಕಾಗಿರುವುದು ಏಪ್ರಿಲ್ ಒಂದನೆ ತಾರೀಖಿಗೆ. ಈಗ ಅದನ್ನು ಯಾವಾಗ ಕಟ್ಟಬೇಕು? ನಾವು ಅದನ್ನು ಜೂನ್ ಅಥವಾ ಸೆಪ್ಟೆಂಬರ್ ತಿಂಗಳಿನಲ್ಲಿ ಕಟ್ಟಬಹುದೆ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಅದನ್ನು ಜೂನ್ ತಿಂಗಳಿನಲ್ಲಿ ಕಟ್ಟಿದರೆ, ಅದು ಏನಿದೆ ಅದನ್ನು ಕಟ್ಟಬೇಕಾಗುತ್ತದೆ. ಅನುಮೋದನೆಯಾದ ಮೇಲೆ ಇದನ್ನು ಕಡ್ಡಾಯವಾಗಿ ಮಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.) (ಪೌರಾಡಳಿತ ಸಚಿವರು ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಕಾರ್ಪೋರೇಷನ್ ಮತ್ತು ಮುನ್ಸಿಪಾಲಿಟಿ ಈ ಎರಡಕ್ಕೂ ಅನ್ವಯಿಸುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಒಂದು ಸ್ಪಷ್ಟೀಕರಣ ಬೇಕು. ವಿಧೇಯಕದಲ್ಲಿ ಏನನ್ನು ಹೇಳುತ್ತಾರೆಂದರೆ, '2020-21ನೇ ಹಣಕಾಸು ವರ್ಷಕ್ಕೆ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ಮಾಲೀಕ ಅಥವಾ ಅಧಿಭೋಗದಾರನು ಆತನ ವಿವರಪಟ್ಟಿಕೆ (ರಿಟರ್ನ್ಸ್) ಸಲ್ಲಿಸಿದಲ್ಲಿ ಮತ್ತು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಬಾಕಿ ಇರುವ ತೆರಿಗೆಯನ್ನು ಕೂಡ ಪಾವತಿಸಿದಲ್ಲಿ ಆತನು ಪಾವತಿಸಬಹುದಾದ ತೆರಿಗೆಯ ಮೇಲೆ ಆತನಿಗೆ ಶೇಕಡಾ 5ರ ರಿಯಾಯಿತಿಯನ್ನು ನೀಡುತ್ತಾರೆ'. ಮತ್ತೆ ಮುಂದಿನ ಪ್ಯಾರಾದಲ್ಲಿ ಏನು ಹೇಳುತ್ತಾರೆಂದರೆ, 'ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು,' ಇದು ನನಗೆ ಅರ್ಥವಾಗಿಲ್ಲ. ಮೊದಲು ಒಂದು ಕಡೆ ರಿಯಾಯಿತಿ ಕೊಡಬೇಕು ಎನ್ನುತ್ತಾರೆ. ಆಮೇಲೆ ಅನಂತರದ ವರ್ಷಗಳಲ್ಲಿ ಅದನ್ನು ಹೊಂದಾಣಿಕೆ ಮಾಡಿಕೊಳ್ಳಬೇಕು ಎನ್ನುತ್ತಾರೆ. ಆದುದರಿಂದ ಇದಕ್ಕೆ ರಿಯಾಯಿತಿ ಕೊಡುತ್ತಿದ್ದಾರೋ ಇಲ್ಲವೋ ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ರಿಯಾಯಿತಿ ಕೊಡುವುದು ಎಂದರೆ, ವಿಧೇಯಕ ಅಂಗೀಕಾರವಾದ ಒಂದು ತಿಂಗಳ ಒಳಗಾಗಿ ಬಾಕಿ ಇರುವ ತೆರಿಗೆಯನ್ನು ಕೂಡಾ ಪಾವತಿಸಿದಲ್ಲಿ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು. ನಾವು ಒಂದು ತಿಂಗಳ ಒಳಗೆ ಹಣವನ್ನು ಪಾವತಿ ಮಾಡಿಬಿಡುತ್ತೇವೆ. ಅದಕ್ಕೆ ಅವರು ಶೇಕಡಾ 5ರಷ್ಟು ರಿಯಾಯಿತಿ ಕೊಡುತ್ತಾರೆ. ಹಾಗಾದರೆ, ಈ ರೀತಿಯ ಮಾತು ಏಕೆ? ಅಂದರೆ, 'ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು' ಎಂದು ಇದೆ. ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಸ್ಪಷೀಕರಣ ನೀಡಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕಾಗಿ ವಂದಿಸುತ್ತಾ, ಇವತ್ತು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನು (ತಿದ್ದುಪಡಿ) ವಿಧೇಯಕ, 2021ರ ವಿಧೇಯಕವನ್ನು ತಂದಿದ್ದಾರೆ. ವಿಧೇಯಕಕ್ಕೆ ಸಂಬಂಧಪಟ್ಟಂತೆ ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮಾತನಾಡುವಾಗ ಹೇಳಿದ ಹಾಗೆ ನನಗೂ ಸಹ ಅದೇ ರೀತಿಯ ಅನುಮಾನವಿದೆ. ಇವತ್ತು ಕೋವಿಡ್-19 ಬಂದಿರುವಂತಹ ಸಂದರ್ಭದಲ್ಲಿ ತೆರಿಗೆಯನ್ನು ಯಾರು ಕಟ್ಟುತ್ತಾರೆ, ಅಂದರೆ ಯಾರು ಸಮಯಕ್ಕೆ ಸರಿಯಾಗಿ ತೆರಿಗೆಯನ್ನು ಕಟ್ಟುತ್ತಾರೋ ಅಂತಹವರಿಗೆ ಶೇಕಡಾ 5ರಷ್ಟು ರಿಯಾಯಿತಿಯನ್ನು ನೀಡುತ್ತೇವೆಂದು ಹೇಳಿರುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಕಾನೂನು ಇದೆ. ಈಗ ಕೋವಿಡ್-19 ಬಂದಿರುವುದಕ್ಕೋಸ್ಕರವಾಗಿ, ಇದನ್ನು ಒಂದು ತಿಂಗಳು ಕಾಲಾವಕಾಶವನ್ನು ವಿಸ್ತರಿಸಿ, ಶೇಕಡಾ 5ರಷ್ಟನ್ನು ರಿಯಾಯಿತಿ ಕೊಡುತ್ತೇವೆ ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಶೇಕಡಾ 5ರಷ್ಟನ್ನು ರಿಯಾಯಿತಿ ಕೊಡುವುದು ಈಗಾಗಲೇ ಕಾನೂನಿನಲ್ಲಿ ಇದೆ. ಇವತ್ತು ಕೊರೊನಾ ಎಂಬ ಈ ಮಾರಕ ರೋಗಕ್ಕೆ ನಮ್ಮ ರಾಜ್ಯ ಮತ್ತು ದೇಶವಲ್ಲ ಇಡೀ ಪ್ರಪಂಚವೇ ತುತ್ತಾಗಿ ಪ್ರಪಂಚದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಹೋಗಿರುವಂಥದ್ದು ನಮಗೆ ಮತ್ತು ನಿಮಗೆ ಚೆನ್ನಾಗಿ ಗೊತ್ತಿದೆ. ಇವತ್ತು ನಾವು ತೆರಿಗೆಯನ್ನೇ ಕಟ್ಟಲಾರದಂತಹ ಪರಿಸ್ಥಿತಿಯಲ್ಲಿದ್ದೇವೆ. ಮಾನ್ಯ ಸಚಿವರೇ, ಒಂದು ಉದಾಹರಣೆ ಹೇಳುವುದಾದರೆ, ನಮ್ಮ ಪಕ್ಕದ ರಾಜ್ಯವಾದ ತೆಲಂಗಾಣ ರಾಜ್ಯ ಒಂದು ಐತಿಹಾಸಿಕವಾದ ತೀರ್ಮಾನವನ್ನು ತೆಗೆದುಕೊಂಡಿದೆ. ನಮ್ಮ ರಾಜ್ಯದಲ್ಲಿ ಶೇಕಡಾ 5ರಷ್ಟು ರಿಯಾಯಿತಿ ಕೊಡುತ್ತೇವೆಂದು ಹೇಳುತ್ತಾರೆ. ಆ ರಾಜ್ಯದಲ್ಲಿ ತೆರಿಗೆಯನ್ನೇ ಹೆಚ್ಚಿಸಿಲ್ಲ. ಆದರೆ, ಅವರು ಶೇಕಡಾ 50ರಷ್ಟು ರಿಯಾಯಿತಿಯನ್ನು ನೀಡಿದ್ದಾರೆ. ಅಂದರೆ, ಈ ಒಂದು ವರ್ಷಕ್ಕೆ ಏನು ತೆರಿಗೆಯನ್ನು ಕಟ್ಟುತ್ತಿದ್ದಾರೆ, ಅದಕ್ಕೆ ತೆಲಂಗಾಣ ರಾಜ್ಯ ಶೇಕಡಾ 50ರಷ್ಟು ರಿಯಾಯಿತಿಯನ್ನು ನೀಡಿದೆ. ಹಾಗಾದರೆ, ಕರ್ನಾಟಕ ರಾಜ್ಯದಲ್ಲಿ ಆ ರೀತಿಯ ಕೆಲಸವನ್ನು ಏಕೆ ಮಾಡಬಾರದು? ಶೇಕಡಾ 5ರಷ್ಟು ರಿಯಾಯಿತಿ ಕೊಡುವುದಕ್ಕೆ ಕೇವಲ ಒಂದು ತಿಂಗಳ ಸಮಯವನ್ನು ನೀಡುತ್ತೇವೆಂದು ಹೇಳುತ್ತಾರೆ. ಅದು ಆದಮೇಲೆ ಕೊನೆಯಲ್ಲಿ ಹೇಳುತ್ತಾರೆ, '2020-21ನೇ ಹಣಕಾಸು ವರ್ಷದಲ್ಲಿ ಪೂರ್ತಿಯಾಗಿ ಆಸ್ತಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು' ಎನ್ನುತ್ತಾರೆ. ಈ ವರ್ಷ ರಿಯಾಯಿತಿ ಕೊಟ್ಟು ಬಿಡುತ್ತಾರೆ. ಆದರೆ, ಇಲ್ಲಿ ಮುಂದಿನ ವರ್ಷಕ್ಕೆ ಶೇಕಡಾ 5ರಷ್ಟು ಹೆಚ್ಚಿಗೆ ತೆರಿಗೆ ಹಾಕುತ್ತೇವೆ ಎನ್ನುವಂತಹ ಅರ್ಥ ಕೊಡುತ್ತಿದೆ. ಈಗ ಏನು ಶೇಕಡಾ 5ರಷ್ಟು ರಿಯಾಯಿತಿಯನ್ನು ಕೊಡುತ್ತಾರೆ, ಅದನ್ನು ಮುಂದಿನ ವರ್ಷದಲ್ಲಿ ಹೊಂದಿಸಿಕೊಳ್ಳತಕ್ಕದ್ದು ಎಂದು ಇದೆ. ನಾವು ಅರ್ಥ ಮಾಡಿಕೊಂಡಿರುವಂತಹ ರೀತಿಯಲ್ಲಿ ಈ ವರ್ಷ ಏನು ರಿಯಾಯಿತಿಯನ್ನು ಕೊಡುತ್ತಿದ್ದಾರೆ, ಅದನ್ನು ಮುಂದಿನ ವರ್ಷಕ್ಕೆ ಹೆಚ್ಚಿಗೆ ಮಾಡಿ ಕಲೆಕ್ಟ್ ಮಾಡುವುದಕ್ಕೆ ಮಾಡುತ್ತಿದ್ದಾರೆಯೆ ಎನ್ನತಕ್ಕಂಥದ್ದನ್ನು ಮಾನ್ಯ ಸಚಿವರು ಸ್ವಲ್ಪ ವಿವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಹಂಗಾಮಿ ಸಭಾಪತಿಯವರು:-**ಮಾನ್ಯ ಸಚಿವರೇ, ಎಲ್ಲವನ್ನು ಸಹ ಒಟ್ಟಾಗಿ ನೋಟ್ ಮಾಡಿಕೊಂಡು, ತಾವು ಉತ್ತರ ನೀಡುವಾಗ ಒಟ್ಟಿಗೆ ಸೇರಿಸಿಕೊಂಡು ಹೇಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ತಂದಿರುವಂತಹ ವಿಧೇಯಕದಲ್ಲಿ ಸ್ವಲ್ಪ ಗೊಂದಲವಿದೆ. ಅಂದರೆ, 'ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು' ಎಂದು ವಿಧೇಯಕದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗಳಿಗೂ ಒಟ್ಟಿಗೆ ಸೇರಿಸಿ ಉತ್ತರ ನೀಡುತ್ತೇನೆ.

**ಹಂಗಾಮಿ ಸಭಾಪತಿಯವರು:–**ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಎಲ್ಲಾ ಪ್ರಶ್ನೆಗಳಿಗೂ ಒಟ್ಟಿಗೆ ಸೇರಿಸಿ ಉತ್ತರ ನೀಡುತ್ತಾರಂತೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕೋವಿಡ್–19 ರಭಸವಿದ್ದಾಗ ಯಾವುದೇ ರೀತಿಯ ತೆರಿಗೆ ಹಾಕುವುದಿಲ್ಲ. ಎಲ್ಲಾ ರೀತಿಯ ತೆರಿಗೆಗಳನ್ನು ಮಾಫ್ ಮಾಡುತ್ತೇವೆಂದು ಹೇಳಿದರು. ಕೋವಿಡ್–19 ಸ್ವಲ್ಪ ಕಡಿಮೆಯಾಯಿತು ಎಂದರೆ, sudden ಆಗಿ ತೆರಿಗೆ ನೀಡಿ ಎಂದು ಬೆನ್ನು ಹತ್ತಿದ್ದಾರೆ. ಅವರಿಗೆ ಬಾಡಿಗೆ ಬಂದರೆ ಅಲ್ಲವೆ ಅವರು ತೆರಿಗೆ ಕೊಡುವುದು. ಈಗ ಅವರಿಗೆ ಆದಾಯವಿಲ್ಲ. ಈಗ ಎಷ್ಟು ಬಾಡಿಗೆ ಬರುತ್ತಿದೆ ಮತ್ತು ಇಲ್ಲವೆನ್ನುವುದು ಮಾನ್ಯ ಸಚಿವರಿಗೆ ಗೊತ್ತಿದೆ. ಅವರ ಅನುಭವದ ಪ್ರಕಾರ ಅದನ್ನು ಮಾನ್ಯ ಸಚಿವರೆ ಏಕೆ ಮಾಡಬಾರದು? ಈಗ ಬಾಡಿಗೆದಾರರೆ ಸಿಗುತ್ತಿಲ್ಲ. ಮಾನ್ಯ ಪೌರಾಡಳಿತ ಸಚಿವರು ಅತಿ ಹೆಚ್ಚಿನ ಬಾಡಿಗೆ ಪಡೆಯುವಂತಹವರು ಮತ್ತು ಅವರ ಪಕ್ಕ ಕುಳಿತಿರುವಂತಹ ಮಾನ್ಯ ಸಚಿವರಾದ ಬಿ.ಎ.ಬಸವರಾಜ್‌ರವರು ಸಹ. ನಮಗೆ ದೇವರು ಚೆನ್ನಾಗಿ ಇಟ್ಟಿದ್ದಾನೆ ಮತ್ತು ನಾನು ಸಂತೋಷವಾಗಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಅನುಭವವಿದೆ. ಈಗ ಒಂದು ಮನೆ ಇಟ್ಟುಕೊಂಡು ಅದರಿಂದ ಜೀವನ ಮಾಡುವಂತಹವರು ಎಷ್ಟೋ ಜನರಿದ್ದಾರೆ. ಅವರಿಗೆ ತಿಂಗಳಿಗೆ ಏಳರಿಂದ ಎಂಟು ಸಾವಿರ ಬಾಡಿಗೆ ಬಂದರೆ ಅದರಿಂದ ಜೀವನ ಮಾಡಬೇಕು. ಆದರೆ, ಅವರಿಗೆ ಆರು ತಿಂಗಳಿನಿಂದ ಬಾಡಿಗೆಯೇ ಬಂದಿಲ್ಲ. ಅಂತಹವರಿಗೆ ತೆರಿಗೆ ನೀಡಿ ಎನ್ನುವಂಥದ್ದು. ಎರಡನೆಯದಾಗಿ, ಶೇಕಡಾ 5ರಷ್ಟು ರಿಯಾಯಿತಿ ನೀಡಿದ ಹಾಗೆ ಮಾಡಿ, ಇದನ್ನು ಮುಂದಿನ ವರ್ಷ ಹೊಂದಿಸಿಕೊಳ್ಳುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಕೋವಿಡ್–19ರ ಸಂಕಷ್ಟದ ಪರಿಸ್ಥಿತಿಯಲ್ಲಿ ಯಾರೂ ಸಹ ಮೂರು ತಿಂಗಳ ಬಾಡಿಗೆಯನ್ನು ಕಟ್ಟಬೇಡಿ ಎಂದು ಸರ್ಕಾರ ಕೆಲವು ರಿಯಾಯಿತಿಗಳನ್ನು ಘೋಷಣೆ ಮಾಡಿತು. ಈಗ ಅದನ್ನು ನೆನಪಿಸಿಕೊಳ್ಳಬೇಕು. ಆ ಸಂದರ್ಭದಲ್ಲಿ ಬಹಳಷ್ಟು ಜನರು ಬಾಡಿಗೆಯನ್ನು ಕಟ್ಟಲಿಲ್ಲ. ನಿರ್ದಿಷ್ಟವಾಗಿ ಈ ಕೋವಿಡ್–19 ವರ್ಷದಲ್ಲಿ 2020–21ನೇ ಸಾಲಿಗೆ ಸೀಮಿತವಾಗಿ ಎಂದು ಈ ವಿಧೇಯಕವನ್ನು ತಂದಿದ್ದಾರೆ. ಆದರೆ, ತೆರಿಗೆಯೇ ದುಬಾರಿಯಾಗಿರುವಂತಹ ಈ ಕಾಲದಲ್ಲಿ, ಏನೋ ಸುಮ್ಮನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡಾ 5ರಷ್ಟು ರಿಯಾಯಿತಿ ಎನ್ನುವುದು ಯಾರಿಗೂ ಸಹ ಸಮಾಧಾನವಾಗುವುದಿಲ್ಲ. ಮತ್ತೆ ಮುಂದಿನ ವರ್ಷ ಅದನ್ನು ಬೇರೆ ಮಾರ್ಗದಲ್ಲಿ ವಸೂಲು ಮಾಡಲಾಗುವುದು ಎಂದು ಈ ವಿಧೇಯಕದಲ್ಲಿ ಸೂಚಿಸಿದ್ದಾರೆ. ಆದುದರಿಂದ ಮಾನ್ಯ ಸಚಿವರು ಇದನ್ನು ಪುನರ್‌ಪರಿಶೀಲನೆ ಮಾಡಲಿ. ಈ ಕೋವಿಡ್-19ರ ಅವಧಿಯಲ್ಲಿ, ಈ ವರ್ಷದಲ್ಲಿ ದಯವಿಟ್ಟು ಕನಿಷ್ಠ ಶೇಕಡಾ 50ರಷ್ಟಾದರೂ ರಿಯಾಯಿತಿ ನೀಡುವಂತಹ ವ್ಯವಸ್ಥೆಯನ್ನು ಜಾರಿಗೆ ತರಲಿ. ಏಕೆಂದರೆ, ಬಹಳಷ್ಟು ಜನರಿಗೆ ತುಂಬಾ ಅನಾನುಕೂಲವಾಗಿದೆ. ಇದರಲ್ಲಿ ಮತ್ತೊಂದು ಏನೆಂದರೆ, ಇಲ್ಲಿ ತೆರಿಗೆ ಕಟ್ಟುವವರಿಗೆ ಮತ್ತು ಬಡವರಿಗೆ ಎಲ್ಲರಿಗೂ ಸಹ ಒಂದೇ ರೀತಿ ಮಾಡಿದ್ದಾರೆ. ಅಂದರೆ, ಶೇಕಡಾ 5ರಷ್ಟು ಎಂದು ಒಟ್ಟಿಗೆ ಹೇಳಿಬಿಟ್ಟಿದ್ದಾರೆ. ಈಗ ಕೋಟಿಗಟ್ಟಲೆ ತೆರಿಗೆ ಕಟ್ಟುವಂತಹವರಿಗೂ ಒಂದೆ ಮತ್ತು ಕಡುಬಡವರಿಗೂ ಸಹ ಒಂದೇ ರೀತಿ ಮಾಡಿದ್ದಾರೆ. ಕನಿಷ್ಠಪಕ್ಷ ಕಡುಬಡವರು ಯಾರಿದ್ದಾರೆ ಮತ್ತು ತೆರಿಗೆ ವ್ಯಾಪ್ತಿ ಒಳಗಡೆ ಯಾರು ಬರುವುದಿಲ್ಲ ಅಂತಹವರಿಗೆ ಶೇಕಡಾ 50ರಷ್ಟಾದರೂ ರಿಯಾಯಿತಿ ನೀಡಲಿ. ದಯವಿಟ್ಟು ತೆರಿಗೆ ಕಟ್ಟುವಂತಹವರಿಗೆ ಶೇಕಡಾ 5ರಷ್ಟು ರಿಯಾಯಿತಿಯನ್ನು ನೀಡಿ. ಜನಸಾಮಾನ್ಯರಿಗೆ ಶೇಕಡಾ 5ರಷ್ಟು ರಿಯಾಯಿತಿಯಿಂದ ಯಾವುದೇ ರೀತಿಯ ಉಪಯೋಗವಾಗುವುದಿಲ್ಲ. ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಿ, ಶೇಕಡಾ 50ರಷ್ಟು ವಿನಾಯಿತಿ ಕೊಡುವಂಥದ್ದು ಮತ್ತೆ ಮುಂದಿನ ವರ್ಷ ಅದನ್ನು ಯಾವುದೋ ಬೇರೆ ಮಾರ್ಗದಲ್ಲಿ ವಸೂಲಿ ಮಾಡುವಂಥದ್ದನ್ನು ಕೈಬಿಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ನಸೀರ್ ಅಹಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪ್ರಮಾಣ ವಚನ ಸ್ವೀಕರಿಸಿ ಹತ್ತರಿಂದ ಹದಿನೈದು ದಿನಗಳಾಗಿರಬಹುದು. ಅದಕ್ಕೂ ಮೊದಲೇ ಈ Ordinance ಬಂದುಬಿಟ್ಟಿದೆ. ಮಾನ್ಯ ಸಚಿವರಿಗೆ ಇದನ್ನು ಅಧ್ಯಯನ ಮಾಡುವುದಕ್ಕೆ ಅವಕಾಶ ನೀಡಬೇಕು. ಈಗ ವಿಶೇಷವಾಗಿ ಮಾನ್ಯ ಸಚಿವರು ತಾವೇ ಆಸ್ತಿಯನ್ನು ಹೊಂದಿರುವಂತಹವರು. ಈಗ ನಮಗೆ ತಿಳಿದ ಹಾಗೆ ಬೇಕಾದಷ್ಟು ಮಾಲ್‌ಗಳು ಮತ್ತು commercial properties ಆಗಿರಬಹುದು. ಅಂತಹವುಗಳನ್ನು ಯಾರ್‍ಯಾರು ಬಾಡಿಗೆಗೆ ನಡೆಸಿಕೊಂಡು ಹೋಗುತ್ತಿದ್ದರು, ಅಂತಹವರಿಗೆ ಬಾಡಿಗೆ ನೀಡುವುದರಲ್ಲಿ six months ರಿಯಾಯಿತಿ ನೀಡಿದ್ದಾರೆ. ಕೆಲವರಿಗೆ ಶೇಕಡಾ 25ರಷ್ಟು ಮತ್ತೆ ಕೆಲವರಿಗೆ 50ರಷ್ಟು ಬಾಡಿಗೆ ತೆಗೆದುಕೊಂಡಿದ್ದಾರೆ. ಇದೆಲ್ಲಾ ಮಾನ್ಯ ಸಚಿವರಿಗೆ ಗೊತ್ತಿರುತ್ತದೆ. ಈ ರೀತಿಯ ಒಂದು ಸನ್ನಿವೇಶವಿದ್ದಾಗ, ಶೇಕಡಾ 5ರಷ್ಟು ರಿಯಾಯಿತಿ ಕೊಡುತ್ತೇವೆ, ಸಂಪೂರ್ಣ ತೆರಿಗೆಯನ್ನು ಕಟ್ಟಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹಾಗಾಗಿ, ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಈ Bill ಅನ್ನು withdraw ಮಾಡಲಿ. ಅವರು ಅದನ್ನು study ಮಾಡಿ, ಎಲ್ಲವನ್ನು ಚರ್ಚೆ ಮಾಡಿ, ಕೊನೆಗೆ ಒಂದು ಹಂತಕ್ಕೆ ಬರಲಿ ಎಂದು ನಿಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

(ಮುಂದು...)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(206) 08.02.2021 11.50 LL-BNS

**ಶ್ರೀ ಹೆಚ್.ಎಂ. ರಮೇಶ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಮಾನ್ಯ ಶ್ರೀಕಂಠೇಗೌಡರು ಮತ್ತು ಮಾನ್ಯ ಮರಿತಿಬ್ಬೇಗೌಡರು ಹೇಳಿದ ಹಾಗೆ, ಈ ವಿಧೇಯಕಕ್ಕೆ ಏನು ತಿದ್ದುಪಡಿ ತಂದಿದ್ದಾರೆ ಅದರಲ್ಲಿ, ಯಾರು ಆಸ್ತಿ ತೆರಿಗೆಯನ್ನು ಅದರಲ್ಲಿಯೂ ಬೆಂಗಳೂರು ನಗರದಲ್ಲಿರಬಹುದು ಅಥವಾ ಇಡೀ ರಾಜ್ಯದಲ್ಲಿರಬಹುದು. ಸಾಕಷ್ಟು ಜನ ಆಸ್ತಿ ತೆರಿಗೆಯನ್ನು ಪ್ರಾಮಾಣಿಕವಾಗಿ ಕಟ್ಟುವವರು ಇದ್ದಾರೆ. ಅದೇ ರೀತಿ ಇದುವರೆವಿಗೂ ತೆರಿಗೆಯನ್ನು ಕಟ್ಟದೇ ಇರುವವರು ಸಹ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ, ಯಾರು ತೆರಿಗೆಯನ್ನು ಕಟ್ಟುವುದಿಲ್ಲವೋ ಅವರಿಗೆ ಯಾವುದಾದರೂ ಕಾನೂನುಗಳನ್ನು ತರಬೇಕಾಗುತ್ತದೆಯೇ ಹೊರತು ಕಟ್ಟುವವರಿಗೆ ಕಾನೂನು ತರುವಂಥದ್ದಲ್ಲ. ಈ ಸರ್ಕಾರದ ನೀತಿ-ನಿಯಮಗಳು ಯಾವ ರೀತಿ ಇದೆಯೆಂದರೆ, ದಾರಿಯಲ್ಲಿ ಹೋಗುವವರು ಶಾಸ್ತ್ರದವರಿಗೆ ಕೈ ತೋರಿಸಿದವರಿಗೆ ಮಾತ್ರ ಅವರು ಶಾಸ್ತ್ರ ಹೇಳುತ್ತಾರೆ. ಹಾಗಾಗಿ, ಯಾರು ಪ್ರಾಮಾಣಿಕವಾಗಿ ತೆರಿಗೆಯನ್ನು ಕಟ್ಟುತ್ತಿದ್ದಾರೆ, ಅವರಿಗೆ ಪುನಃ ಬರೆ ಎಳೆಯುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಹಾಗಾಗಿ, ಸರ್ಕಾರದಿಂದ ಯಾವ್ಯಾವ ವಿಧೇಯಕಗಳನ್ನು ತಿದ್ದುಪಡಿ ತರುತ್ತಿದ್ದಾರೆ... ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ portfolios ಬಹಳಷ್ಟು ಸಾರಿ ಬದಲಾವಣೆಯಾಗಿರುತ್ತದೆ. ಅದೇ ರೀತಿ ಮಂತ್ರಿಗಳು ಸಹ ಬದಲಾವಣೆಯಾಗುತ್ತಿರುತ್ತಾರೆ. ಈಗಾಗಲೇ ಮಾನ್ಯ ಮರಿತಿಬ್ಬೇಗೌಡರವರು ಹೇಳಿದ ಹಾಗೆ, ಕೋವಿಡ್-19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ, "ಬಾಡಿಗೆದಾರರು ಯಾರು ಕೂಡ ಬಾಡಿಗೆಯನ್ನು ಕಟ್ಟಬೇಡಿ" ಎಂದು ಸೂಚನೆ ನೀಡಿರುತ್ತದೆ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಸಹ ಒಂದೊಂದು ದಿನ ಒಂದೊಂದು ಹೇಳಿಕೆಯನ್ನು ಕೊಡುತ್ತಾರೆ. ಆ ರೀತಿ ಆಗಬಾರದು. ದಯಮಾಡಿ, ಪ್ರಸ್ತುತ ಯಾವ ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತಾರೆ, ಅದರಲ್ಲಿ ಯಾರು ಸರ್ಕಾರಕ್ಕೆ ಪ್ರಾಮಾಣಿಕವಾಗಿ ತೆರಿಗೆಯನ್ನು ಕಟ್ಟುತ್ತಾರೆ, ಅವರಿಗೆ ವಿನಾಯಿತಿ ನೀಡಬೇಕು. ಪ್ರತಿ ವರ್ಷ ಶೇಕಡ 3 ರಿಂದ 5 ರಷ್ಟು ತೆರಿಗೆಯಲ್ಲಿ ಹೆಚ್ಚಳ ಮಾಡಿದರೆ ಹೇಗೆ? ಈ ವಿಧೇಯಕದಲ್ಲಿ ಒಂದು ವರ್ಷಕ್ಕೆ ಮಾತ್ರ ಎಂದು ತಿದ್ದುಪಡಿ ತಂದಿರುತ್ತಾರೆ. ಆದರೆ, ಇದು ಪ್ರತಿ ವರ್ಷ ಪುನರಾವರ್ತನೆಯಾಗುತ್ತಿರುತ್ತದೆ. ಹಾಗಾಗಿ, ಯಾರು ತೆರಿಗೆಯನ್ನು ಸರ್ಕಾರಕ್ಕೆ ಪ್ರಾಮಾಣಿಕವಾಗಿ ಕಟ್ಟುವುದಿಲ್ಲವೋ ಅವರಿಗೆ ಕಾನೂನನ್ನು ಈ ವಿಧೇಯಕಗಳಲ್ಲಿ ತಿದ್ದುಪಡಿ ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಗೋವಿಂದರಾಜು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಒಂದು ವಿಧೇಯಕವನ್ನು ಏನು ತಿದ್ದುಪಡಿಗೆ ತಂದಿದ್ದಾರೆ, ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಕೂಡ ಇದರಿಂದ ಹೊರತುಪಡಿಸಿರುವುದಿಲ್ಲ. ಏಕೆಂದರೆ, ನಾನು ಕೂಡ ಬಾಡಿಗೆ ತೆಗೆದುಕೊಳ್ಳುವಂತಹ ಒಬ್ಬ ವ್ಯಕ್ತಿಯಾಗಿರುತ್ತೇನೆ. ಕೋವಿಡ್-19 ಬಂದ ನಂತರ ಏನು ಬಾಡಿಗೆದಾರರು ಬಾಡಿಗೆಯನ್ನು ಕೊಡುತ್ತಿದ್ದರು, ಆ ದಿನಗಳಲ್ಲಿ ಅವರು ಬಾಡಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವಂತಹ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ, ಆ ಸಂದರ್ಭದಲ್ಲಿ ಲಾಕ್‌ಡೌನ್ ಪರಿಸ್ಥಿತಿಯಿತ್ತು. ಅಂಗಡಿ–ಮುಂಗಟ್ಟುಗಳನ್ನು ತೆರೆಯುವುದಕ್ಕೆ ಸರ್ಕಾರವೇ ಅನುಮತಿ ನೀಡಿರಲಿಲ್ಲ. ಆ ಬಾಡಿಗೆದಾರರು ಬಾಡಿಗೆಯನ್ನು ಕೊಡುವುದಕ್ಕೆ ಸಮರ್ಥರಿದ್ದರೂ ಸಹ ಸರ್ಕಾರವೇ ಸೂಚನೆ ಕೊಟ್ಟಿದ್ದನ್ನು ನಾವೆಲ್ಲರೂ ದಿನಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನೋಡಿರುತ್ತೇವೆ. ಅದೇನೆಂದರೆ, "ಯಾರು ಕೂಡ ಬಾಡಿಗೆಯನ್ನು ಒತ್ತಾಯ ಮಾಡಿ ವಸೂಲಿ ಮಾಡಬಾರದು. ಒಂದು ವೇಳೆ ಆ ರೀತಿ ಒತ್ತಾಯ ಮಾಡಿ ಬಾಡಿಗೆ ವಸೂಲಿ ಮಾಡಿದ್ದೇ ಆದರೆ, ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ" ಎಂದು ಸರ್ಕಾರ ಆದೇಶ ಕೂಡ ಮಾಡಿರುತ್ತದೆ. ಇದಲ್ಲದೇ, ಶೇಕಡ 25 ರಷ್ಟು ಅಥವಾ 50 ರಷ್ಟು ಬಾಡಿಗೆಯನ್ನು ಕಡಿಮೆ ಮಾಡಿ ಆ ಬಾಡಿಗೆದಾರರನ್ನು ಅಲ್ಲಿಯೇ ಮುಂದುವರೆಸುವಂತಹ ಪ್ರಕ್ರಿಯೆ ಕೂಡ ನಡೆದಿರುತ್ತದೆ.

ಇದಲ್ಲದೇ, ಶೇಕಡ 50 ರಷ್ಟು commercial properties ಸಹ ಇವೊತ್ತಿನ ದಿವಸ ಖಾಲಿ ಇರುತ್ತವೆ. ಇದು ಅಲ್ಲದೇ, ಅಷ್ಟೋ ಇಷ್ಟೋ ಬಾಡಿಗೆ ಕಟ್ಟಿದ್ದರೂ ಸಹ ಕೇಂದ್ರ ಸರ್ಕಾರದಿಂದ ಶೇಕಡ 18 ರಷ್ಟು ಏನು ಜಿ.ಎಸ್.ಟಿ. ಇದೆ, ಅದನ್ನು ಸಹ ಸರ್ಕಾರ ಕಡಿಮೆ ಮಾಡಿರುವುದಿಲ್ಲ. ಈಗ ಮಾರ್ಚ್ ತಿಂಗಳು ಬರುತ್ತಿದೆ. ಆದಾಯ ತೆರಿಗೆ ಸ್ಲಾಬ್ ಏನಿದೆ, ಅದರಲ್ಲಿ ಮಾಲೀಕರು ಕಟ್ಟಿದಂತಹ ಬಾಡಿಗೆಗಳಲ್ಲಿಯೂ ಸಹ ಶೇಕಡ 33 ರಷ್ಟು ಮತ್ತು ಅದು 1 ಕೋಟಿ ರೂಪಾಯಿ ಮೇಲೆ ಹೋದರೆ ಅದಕ್ಕೆ ಶೇಕಡ 15 ರಷ್ಟು surcharge ಮುಂದುವರೆಸಿರುವುದರಿಂದ, ಇವೊತ್ತಿನ ದಿವಸ ಸರ್ಕಾರ ಕೊಟ್ಟಿರುವಂತಹ ಶೇಕಡ 5 ರಷ್ಟು ರಿಯಾಯಿತಿ ಇದೆ, ಅದು ಈ ಹಿಂದಿನಿಂದಲೂ ಇದ್ದಂತಹ ರಿಯಾಯಿತಿ ಆಗಿರುತ್ತದೆ. ಅಂದರೆ, ಸರಿಯಾದ ಸಮಯಕ್ಕೆ ಯಾರು ತೆರಿಗೆ ಕಟ್ಟುತ್ತಾರೆ, ಅವರಿಗೆ ಶೇಕಡ 5 ರಷ್ಟು ತೆರಿಗೆ ವಿನಾಯಿತಿಯನ್ನು ಕೊಡುತ್ತಿದ್ದರು. ಆದರೆ, ಕೋವಿಡ್–19 ರಂತಹ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರ ಕೊಡುತ್ತಿರುವ ರಿಯಾಯಿತಿ ಏನೆಂದರೆ, ತೆರಿಗೆ ಕಟ್ಟುವುದಕ್ಕೆ ಕೇವಲ ಒಂದು ತಿಂಗಳು ಸಮಯ ವಿಸ್ತರಣೆ ಮಾಡಿರುವುದಾಗಿದೆ. ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಈ ಬಗ್ಗೆ ಹೇಳಿದ್ದಾರೆ.

ಮಾನ್ಯ ನಾರಾಯಣಸ್ವಾಮಿರವರು ಹೇಳಿದ ಹಾಗೆ, ನೆರೆಯ ರಾಜ್ಯದಲ್ಲಿ ಯಾವ ರೀತಿ ಶೇಕಡ 50 ರಷ್ಟು ತೆರಿಗೆ ರಿಯಾಯಿತಿ ಕೊಟ್ಟಿದ್ದಾರೆ, ಆ ರೀತಿ ತೆರಿಗೆ ವಿನಾಯಿತಿಯನ್ನು ನಮ್ಮ ರಾಜ್ಯದಲ್ಲಿಯೂ ಕೊಟ್ಟಿದ್ದೇ ಆದರೆ, ಕಟ್ಟಡಗಳ ಮಾಲೀಕರು ತಮ್ಮ ಕಟ್ಟಡಗಳನ್ನು ಉಳಿಸಿಕೊಂಡು, ಬಾಕಿ ಇರುವಂತಹ ಸಾಲದ ಕಂತುಗಳನ್ನು ಕಟ್ಟುವುದಕ್ಕೆ ಸಹಾಯ ಆಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಿ, ಮಾನ್ಯ ನಸೀರ್ ಅಹ್ಮದ್‌ರವರು ಹೇಳಿದ ಹಾಗೆ, ಪ್ರಸ್ತುತ ತಂದಿರುವಂತಹ ವಿಧೇಯಕವನ್ನು abeyance ನಲ್ಲಿ ಇಟ್ಟು, ಮುಂದಿನ ದಿನಗಳಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲರ ಪರವಾಗಿ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. 2020-21ನೇ ಸಾಲಿನ ಹಣಕಾಸು ವರ್ಷದಲ್ಲಿ ಈ ವಿಧೇಯಕವನ್ನು ಮಂಡಿಸುತ್ತಿದ್ದೇವೆ. ಇದರಲ್ಲಿ ಮುಖ್ಯವಾಗಿ ಏನು ತಿದ್ದುಪಡಿ ತಂದಿದ್ದೇವೆಂದರೆ, ಈ ಮೊದಲು ಆಸ್ತಿ ತೆರಿಗೆಯನ್ನು ಪೂರ್ತಿಯಾಗಿ ಪಾವತಿಸದಿದ್ದಲ್ಲಿ ಅಂತಹ ಮಾಲೀಕರಿಗೆ ಶೇಕಡ 5 ರಿಯಾಯಿತಿ ಮುಂದಿನ ವರ್ಷದಲ್ಲಿ ಆಸ್ತಿ ತೆರಿಗೆ ಪಾವತಿಸಿದ ಸಂದರ್ಭದಲ್ಲಿಯೂ ಕೂಡ ಕಡಿಮೆಗೊಳಿಸುವ ಅವಕಾಶವನ್ನು ಇದರಲ್ಲಿ ಕಲ್ಪಿಸಲಾಗುತ್ತಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅಂದರೆ, ಮುಂದಿನ ವರ್ಷದ ಆಸ್ತಿ ತೆರಿಗೆಯನ್ನು ಸೇರಿಸಿ ಕಟ್ಟಬೇಕು ಎನ್ನುವುದಲ್ಲ. ಮುಂದಿನ ವರ್ಷದಲ್ಲಿಯೂ ಸಹ ಶೇಕಡ 5 ರಷ್ಟು ರಿಯಾಯಿತಿಯನ್ನು ಕಲ್ಪಿಸಿಕೊಡುವುದಕ್ಕೆ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತಾರೆ. ಹಾಗಾಗಿ ದಯಮಾಡಿ, ಈ ವಿಧೇಯಕಕ್ಕೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದು ಮೊದಲಿಂದಲೂ ಇರುವುದಾಗಿದೆ. ಈ ವಿಧೇಯಕದಲ್ಲಿ ಹೊಸದಾಗಿ ಯಾವ ತಿದ್ದುಪಡಿ ತರಲಾಗಿದೆ? ಪ್ರತಿ ವರ್ಷವೂ ಸಹ ಶೇಕಡ 5 ರಷ್ಟು rebate ಇದ್ದೇ ಇರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದೊಂದು ಪ್ರಶ್ನೆಗೆ ಸ್ಪಷ್ಟೀಕರಣ ನೀಡಿರುವುದಿಲ್ಲ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆಯೆಂದರೆ, ಪ್ರತಿ 3 ರಿಂದ 5 ವರ್ಷಕ್ಕೊಮ್ಮೆ ತೆರಿಗೆಗಳನ್ನು ಮಹಾನಗರ ಪಾಲಿಕೆಗಳಲ್ಲಿ, ನಗರಸಭೆಗಳಲ್ಲಿ, ಪುರಸಭೆಗಳಲ್ಲಿ ಹೆಚ್ಚು ಮಾಡಿಕೊಂಡು ಬಂದಿರುವಂತಹ ಪ್ರವೃತ್ತಿಯಾಗಿರುತ್ತದೆ. ಆ ಆಧಾರದ ಮೇರೆಗೆ ಈ ತಿದ್ದುಪಡಿ ತಂದಿರುತ್ತೇವೆ. ಅದರಂತೆ, ಪ್ರತಿ ವರ್ಷಕ್ಕೊಮ್ಮೆ ನಾವು ತೆರಿಗೆ ಹೆಚ್ಚಳ ಮಾಡುತ್ತಿರುವುದಿಲ್ಲ. ಅದನ್ನು 3 ರಿಂದ 5 ವರ್ಷಕ್ಕೊಮ್ಮೆ ಮಾತ್ರ ನಾವು ಹೆಚ್ಚಳ ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅದು ಬೇರೆ ವಿಚಾರ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದು ಆ ರೀತಿ ಆಗಿರುವುದಿಲ್ಲ. ಅದು ಕಾರ್ಪೋರೇಷನ್ ಕಛೇರಿಯಲ್ಲಿ ಸಭೆ ನಡೆಸಿ ಹೆಚ್ಚು ಮಾಡುವಂತಹ ತೆರಿಗೆಯಾಗಿರುತ್ತದೆ. ಅದರಂತೆ, ಪ್ರತಿ ವರ್ಷ ಅವರು ನಗರಸಭೆಯಲ್ಲಿ ಸಭೆ ನಡೆಸಿ, ಅದರಲ್ಲಿ ತೀರ್ಮಾನ ತೆಗೆದುಕೊಳ್ಳುವುದಾಗಿದೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪರಿಷ್ಕರಣೆ ಮಾಡುವುದು ಬೇರೆ ವಿಚಾರ.

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಈ ವರ್ಷದಲ್ಲಿ ಯಾರು ಪೂರ್ತಿಯಾಗಿ ಆಸ್ತಿ ತೆರಿಗೆಯನ್ನು ಪಾವತಿ ಮಾಡುತ್ತಾರೆ. ಅವರಿಗೆ ಮುಂಬರುವ ವರ್ಷದಲ್ಲಿಯೂ ಸಹ ರಿಯಾಯಿತಿಯನ್ನು ಕೊಡುವ ಮಾತನ್ನು ಈ ವಿಧೇಯಕದಲ್ಲಿ ಹೇಳಿರುತ್ತೇವೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಈ ಇಬ್ಬರಲ್ಲಿ ಯಾರು ಸಚಿವರು ಎಂದು ನನಗೆ ಅನುಮಾನವಾಗುತ್ತಿದೆ. ಹಾಗಾಗಿ, ಯಾರಾದರೂ ಒಬ್ಬರು ಉತ್ತರ ನೀಡಲಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಧೆಯಕದ ಬಗ್ಗೆ ನನಗೆ ಯಾವ ಸ್ಪಷ್ಟೀಕರಣ ಬೇಕಾಗಿದೆಯೆಂದರೆ, ಪ್ರತಿ ವರ್ಷ ನಿಗದಿತ ಸಮಯದಲ್ಲಿ ಆಸ್ತಿ ತೆರಿಗೆ ಪಾವತಿ ಮಾಡಿದವರಿಗೆ ಶೇಕಡ 5 ರಷ್ಟು ರಿಯಾಯಿತಿ ನೀಡುವಂತಹ ನಿಯಮ ಇದೆ. ಹಾಗಾಗಿ, ಪ್ರಸ್ತುತ ಕೊಡುತ್ತಿರುವಂತಹ ಶೇಕಡ 5 ರಷ್ಟು ರಿಯಾಯಿತಿಯನ್ನು, ಹಿಂದಿನ ಶೇಕಡ 5 ರಷ್ಟು ರಿಯಾಯಿತಿಗೆ ಸೇರಿಸಿ, ಒಟ್ಟಾರೆಯಾಗಿ ರಿಯಾಯಿತಿ ನೀಡಲಾಗುತ್ತಿದೆಯೇ ಎಂಬ ಸ್ಪಷ್ಟೀಕರಣ ಬೇಕು. ಎರಡನೆಯದಾಗಿ, ಶೇಕಡ 5 ರಷ್ಟು ರಿಯಾಯಿತಿಯನ್ನು ಮುಂದಿನ ವರ್ಷಗಳಲ್ಲಿ recovery ಮಾಡಬೇಕು adjust ಮಾಡಬೇಕು ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆಯೂ ಸಹ ಸ್ಪಷ್ಟೀಕರಣ ಬೇಕು. ತದನಂತರ, ಈಗಾಗಲೇ ಬಹಳ ಜನ ಸದಸ್ಯರು ಹೇಳಿದಂತೆ, ಕೋವಿಡ್-19 ಸಂದರ್ಭದಲ್ಲಿ ಸುಮಾರು 10-11 ತಿಂಗಳ ಅವಧಿಯಲ್ಲಿ ಬಹಳಷ್ಟು ಜನ ಮಾಲೀಕರು ಬಾಡಿಗೆ ಪಡೆಯುವಂತಹ ಸ್ಥಿತಿಯಲ್ಲಿ ಇರುವುದೇ ಇಲ್ಲ. ಹಾಗಾಗಿ, ಬಹಳಷ್ಟು ಜನ ಮಾಲೀಕರು ಬಾಡಿಗೆ ವಸೂಲಿ ಮಾಡುವುದಕ್ಕೆ ಸಾಧ್ಯವಾಗಿರುವುದಿಲ್ಲ. ಅವರಿಗೆ, ಶೇಕಡ 5 ರಷ್ಟು ರಿಯಾಯಿತಿ ಕೊಡುವುದು ಏನೇನು ಸಾಲುವುದಿಲ್ಲ. ಹಾಗಾಗಿ, ನಿಗದಿತ ಅವಧಿಯಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಿದರೆ ಶೇಕಡ 5 ರಷ್ಟು ತೆರಿಗೆ ವಿನಾಯಿತಿ ಕೊಡುವ ಬಗ್ಗೆ ಈಗಾಗಲೇ ನಿಯಮ ಇರುತ್ತದೆ. ಆದುದರಿಂದ, ಪ್ರಸ್ತುತ ವಿಧೇಯಕದಲ್ಲಿ ತಿದ್ದುಪಡಿ ಏತಕ್ಕೆ ತರಲಾಗಿರುತ್ತದೆ? ಅಲ್ಲದೇ, ಈ ರಿಯಾಯಿತಿ ಹೆಚ್ಚುವರಿಯಾಗಿ ನೀಡಲಾಗಿದೆಯೇ? ಜೊತೆಗೆ, ಮುಂದಿನ ದಿನಗಳಲ್ಲಿ ಈ ರಿಯಾಯಿತಿಯನ್ನು ವಸೂಲಿ ಮಾಡುವುದಿಲ್ಲವೇ ಮತ್ತು ರಿಯಾಯಿತಿಯನ್ನು ಇನ್ನು ಏನಾದರೂ ಮಾಡಿ ಹೆಚ್ಚು ಮಾಡುವುದಕ್ಕೆ ಅವಕಾಶ ಇದೆಯೇ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.) (ಪೌರಾಡಳಿತ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ತಿದ್ದುಪಡಿ ತಂದಿರುವ ಅಂಶ ಬಹಳ ಸ್ಪಷ್ಟವಾಗಿರುತ್ತದೆ. ಅದೇನೆಂದರೆ, "ಈಗಾಗಲೇ ಆಸ್ತಿ ತೆರಿಗೆಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ತಿಯಾಗಿ ಪಾವತಿಸದಿದ್ದಲ್ಲಿ ಶೇಕಡ 5 ರಷ್ಟು rebate ಅನ್ನು ಮುಂದಿನ ವರ್ಷದ ತೆರಿಗೆಯಲ್ಲಿ adjustment ಮಾಡಿಕೊಳ್ಳಬಹುದು" ಎಂದು ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ನಮಗೆಲ್ಲಾ ಗೊತ್ತಿರುವ ಹಾಗೆ, ಎಲ್ಲಾ ನಗರಸಭೆಗಳು ಸರಾಸರಿ ಶೇಕಡ 48 ರಿಂದ 50 ರಷ್ಟು ಆಸ್ತಿ ತೆರಿಗೆ ವಸೂಲಿ ಮಾಡುವುದಕ್ಕೆ ಸಾಧ್ಯವಾಗಿರುವುದಿಲ್ಲ. ಅದರಂತೆ, ಪಟ್ಟಣ ಪಂಚಾಯಿತಿಗಳು, ಪುರಸಭೆಗಳು ಮತ್ತು ನಗರಸಭೆಗಳಲ್ಲಿ ವಸೂಲಿ ಮಾಡುವುದಕ್ಕೆ ಸಹ ಸಾಧ್ಯವಾಗಿರುವುದಿಲ್ಲ. ಅಲ್ಲದೇ, ಕಾರ್ಪೋರೇಷನ್‌ನಲ್ಲಿಯೂ ಸಹ ಸರಾಸರಿ ತೆರಿಗೆ ಕಳೆದ ವರ್ಷಕ್ಕಿಂತಲೂ ಈ ವರ್ಷ ಬಹಳ ಕಡಿಮೆ ತೆರಿಗೆ ವಸೂಲಾಗಿರುತ್ತದೆ. ಆದುದರಿಂದ, ನಾವು ಇವೊತ್ತಿನ ದಿವಸ ಈ ವಿಧೇಯಕದಲ್ಲಿ ತಂದಿರುವಂತಹ ತಿದ್ದುಪಡಿ ಏನೆಂದರೆ, rebate ಕೊಡುವಂತಹ ಶೇಕಡ 5 ರಷ್ಟು ವಿನಾಯಿತಿಯನ್ನು ಏಪ್ರಿಲ್ ತಿಂಗಳೊಳಗೆ ಕಟ್ಟುವುದಕ್ಕೆ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದ ತೊಂದರೆಯಾಗಿರುವಂತಹವರಿಗೆ ಶೇಕಡ 5 ರಷ್ಟು ರಿಯಾಯಿತಿ ಮತ್ತು ಅದನ್ನು ಒಂದು ತಿಂಗಳ ಅವಧಿಗೆ ವಿಸ್ತರಿಸಿರುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸದರಿ ರಿಯಾಯಿತಿಯನ್ನು ಮುಂಬರುವ ವರ್ಷಗಳಲ್ಲಿ recovery ಮಾಡುವುದಿಲ್ಲವೇ?

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಮುಂದಿನ ವರ್ಷದ ಆಸ್ತಿ ತೆರಿಗೆಯಲ್ಲಿ ಹೊಂದಾಣಿಕೆ ಮಾಡುತ್ತೇವೆಂಬ ಬಗ್ಗೆ ಈಗಾಗಲೇ ಸ್ಪಷ್ಟೀಕರಣ ನೀಡಿರುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆದರೆ adjustment ಮಾಡುತ್ತೇವೆಂದು ಈ ವಿಧೇಯಕದಲ್ಲಿ ಹೇಳಲಾಗಿರುತ್ತದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾನ್ಯ ಸಚಿವರೇ ಹೇಳಿರುತ್ತಾರೆ. ಹಾಗಾಗಿ, ಕೋವಿಡ್-19 ಆಗಿರುವಂತಹ ಸಂದರ್ಭದಲ್ಲಿ "act of God" ಎಂದು ಇರುತ್ತದೆ. ಅದು ಏನೆಂದು ನಮಗೆ ಗೊತ್ತಿರುವುದಿಲ್ಲ. ಆದರೆ, ಈಗ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಹೇಳುತ್ತಿದ್ದಾರೆ. ಹಾಗಾಗಿ, ಅದರ ಬಗ್ಗೆ ತಾವೇ ನಮಗೆ ಹೇಳಬೇಕು. ಏಕೆಂದರೆ, ಇದರ ಬಗ್ಗೆ ತಮಗೆ ಚೆನ್ನಾಗಿ ಗೊತ್ತಿರುತ್ತದೆ. ಆದುದರಿಂದ, ಈ ಕೋವಿಡ್-19 ಆಗಿದ್ದಂತಹ ಸಂದರ್ಭದಲ್ಲಿ ಬಾಡಿಗೆದಾರರು ಯಾರು ಸಹ ಬಾಡಿಗೆ ಕೊಟ್ಟಿರುವುದಿಲ್ಲ. ಸುಮಾರು 9 ತಿಂಗಳು ಅವಧಿಯಲ್ಲಿ ಸುಮಾರು 2 ರಿಂದ 3 ಕೋಟಿ ಬಾಡಿಗೆ ತೆಗೆದುಕೊಳ್ಳುವಂತಹ ಮಾಲೀಕರಿಗೆ ಒಂದು ರೂಪಾಯಿ ಬಾಡಿಗೆ ಪಾವತಿ ಮಾಡಿರುವುದಿಲ್ಲ. ಅವರಿಗೆ ನೋಟಿಸ್ ಕೊಟ್ಟಿದ್ದರಿಂದ, ಅದರಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸುಮಾರು ಜನ ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ಈ ವಿಧೇಯಕದಲ್ಲಿ ತಿದ್ದುಪಡಿಯನ್ನು ಈ ವರ್ಷಕ್ಕೆ ಸೀಮಿತವಾಗಿ ತಂದಿರುತ್ತಾರೆ. ಹಾಗಾಗಿ, ಆ ಮಾಲೀಕರು ಸಹ ಆಸ್ತಿ ತೆರಿಗೆ ನೀಡಬೇಕೇ ಅಥವಾ ಅವರಿಗೆ ಯಾವುದಾದರೂ ರಿಯಾಯಿತಿ ನೀಡಲಾಗಿದೆಯೇ ಅಥವಾ ಅವರು ಸಹ ಆಸ್ತಿ ತೆರಿಗೆ ಕಟ್ಟಬೇಕಾಗಿದೆಯೇ? ಈ ಬಗ್ಗೆ ತಮಗೆ ಚೆನ್ನಾಗಿ ಗೊತ್ತಿರುತ್ತದೆ. ಏಕೆಂದರೆ, ವಾಣಿಜ್ಯ ಸಂಕೀರ್ಣಗಳ ಸುಮಾರು ಜನ ಮಾಲೀಕರಿಗೆ ನನಗೆ ಗೊತ್ತಿರುವ ಪ್ರಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಸಾಕಷ್ಟು ಜನ ಮಾಲೀಕರಿಗೆ 2-3 ಕೋಟಿ ಆಸ್ತಿ ತೆರಿಗೆ ಬಾಕಿ ಇದೆಯೆಂದು ಅದನ್ನು ಪಾವತಿ ಮಾಡಬೇಕೆಂದು ನೋಟಿಸ್ ನೀಡಿರುತ್ತಾರೆ. ಅವರು ಸಹ ಈ ವರ್ಷ ಆಸ್ತಿ ತೆರಿಗೆ ಪಾವತಿ ಮಾಡಬೇಕೇ ಅಥವಾ ಅವರಿಗೆ ಯಾವುದಾದರೂ ರಿಯಾಯಿತಿ ನೀಡಬೇಕಲ್ಲವೇ?

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಬಾಕಿ ಇರುವಂತಹ ಆಸ್ತಿ ತೆರಿಗೆಯನ್ನು ಇವತ್ತಲ್ಲ ನಾಳೆ ದಿವಸ ಪಾವತಿ ಮಾಡಲೇಬೇಕು. ಏಕೆಂದರೆ, ಬಾಕಿಯನ್ನು ಉಳಿಸಿಕೊಳ್ಳುವುದೇ ಆಗುವುದಿಲ್ಲ. ಆ ಬಾಕಿಯನ್ನು ಮುಂದಿನ ವರ್ಷದಲ್ಲಾದರೂ ಕಟ್ಟಲೇಬೇಕು.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಮಾಲೀಕರಿಗೆ ಆಸ್ತಿ ತೆರಿಗೆ ವಿನಾಯಿತಿ ನೀಡಬೇಕಲ್ಲವೇ? ಕೋವಿಡ್-19 ರಂತಹ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಅವರಿಗೆ ಬಾಡಿಗೆ ಬಂದಿರುವುದೇ ಇಲ್ಲ. ಹಾಗಾಗಿ, ಈ ರೀತಿಯ ಸಂದರ್ಭದಲ್ಲಿ ಆಸ್ತಿ ತೆರಿಗೆಯನ್ನು ಪಾವತಿ ಮಾಡಬಾರದೆಂಬ ಬಗ್ಗೆ "act of God" ಎಂಬ ಒಂದು Clause ಇದೆ. ಅದನ್ನು ನಾನು ಹೇಳುತ್ತಿರುವುದಲ್ಲ. ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕು.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕದಲ್ಲಿ ತಿದ್ದುಪಡಿ ಬಗ್ಗೆ ಮಾತನಾಡುವ ಪ್ರಾರಂಭದಲ್ಲಿ ಕೋವಿಡ್-19 ಎಂದು ಪ್ರಸ್ತಾಪ ಮಾಡಿರುತ್ತಾರೆ. 2020-21 ಎಂದು ಪ್ರಸ್ತಾಪ ಮಾಡಿದ್ದಾರೆ.

(...ಮುಂದುವರೆದಿದೆ)

**(207) 08.02.2021 12.00 ವೈಎಲ್-ಜಿಆರ್**

**ಶ್ರೀ ಪಿ.ಆರ್.ರಮೇಶ್ (ಮುಂದು)**

ಪ್ರಸ್ತಾಪ ಮಾಡಿದ ಮೇಲೆ ಕೋವಿಡ್-19 ನಿಂದಾಗಿ ಏಪ್ರಿಲ್ ಮಾಹೆಯೊಳಗೆ ಬಾಡಿಗೆ ಪಾವತಿಸಿದವರಿಗೆ ಶೇ.5 ರಷ್ಟು ರಿಯಾಯಿತಿ ನೀಡುತ್ತಾರೆ. ಏಪ್ರಿಲ್ ಮಾಹೆಯ ನಂತರ ಅಂದರೆ, ಏಪ್ರಿಲ್, ಮೇ, ಜೂನ್ ಮಾಹೆಯವರೆಗೂ ಬಾಡಿಗೆ ಪಾವತಿಸಿಲ್ಲವೆಂದರೆ, ಎಷ್ಟು ಬಾಡಿಗೆ ನಿಗದಿಪಡಿಸಲಾಗಿರುತ್ತದೆ, ಅಷ್ಟೇ ಬಾಡಿಗೆಯನ್ನು ಭರಿಸಬೇಕು. ಒಂದು ವೇಳೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೂನ್ ಮಾಹೆಯ ನಂತರ ಬಾಡಿಗೆ ಪಾವತಿಸಿಲ್ಲವೆಂದರೆ, ಪ್ರತಿ ತಿಂಗಳು ಶೇ.2 ರಷ್ಟು ಬಡ್ಡಿ ಪಾವತಿಸುವಂತೆ, ಈ ವಿಧೇಯಕವನ್ನು ತರಲಾಗಿದೆ. ಬಾಡಿಗೆದಾರರು ನಿಗದಿತ ಸಮಯದೊಳಗೆ ಬಾಡಿಗೆ ಪಾವತಿಸಲಿಲ್ಲವೆಂದರೆ, ಪ್ರತಿ ತಿಂಗಳು ಶೇ.2 ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಯಾವತ್ತೋ ಬಂದು ಆತ ಬಾಡಿಗೆ ಪಾವತಿಸುತ್ತಾನೆ ಎಂದರೆ, ಎಷ್ಟು ತಿಂಗಳು ಅಂದರೆ ಜುಲೈ 1ನೇ ತಾರೀಖಿನಿಂದ ಎಷ್ಟು ತಿಂಗಳು ವಿಳಂಬವಾಗಿ ಬಾಡಿಗೆ ಭರಿಸುತ್ತಾನೆ, ಅಲ್ಲಿಯವರೆಗೂ ಶೇ. 2 ರಷ್ಟು ಬಡ್ಡಿ ವಿಧಿಸಲಾಗಿದೆ. ಒಂದು ವೇಳೆ ಆತ 10 ವರ್ಷಗಳವರೆಗೂ ಬಾಡಿಗೆ ಪಾವತಿಸಲಿಲ್ಲವೆಂದರೂ ಪ್ರತಿ ತಿಂಗಳು ಶೇ.2 ರಷ್ಟು ಹೆಚ್ಚಳವಾಗುತ್ತಿರುತ್ತದೆ. ಬ್ಯಾಂಕ್‌ನಲ್ಲಿ ವಿಧಿಸುವ ಬಡ್ಡಿಗಿಂತ ಇದು ಜಾಸ್ತಿಯಾಗುತ್ತದೆ. ಪ್ರತಿ ತಿಂಗಳು ಶೇ.2 ರಷ್ಟು ಬಡ್ಡಿ ಎಂದರೆ, ಒಂದು ವರ್ಷಕ್ಕೆ ಶೇ.24 ರಷ್ಟು ವಾರ್ಷಿಕ ಬಡ್ಡಿಯಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಬಾಡಿಗೆ ಭರಿಸಲು ಸಾಧ್ಯವಾಗುತ್ತಿಲ್ಲ. ಜನರಿಗೆ ಅರ್ಧಕ್ಕೆ ಅರ್ಧ ಸಂಬಳ ನಿಂತು ಹೋಗಿದ್ದೆ. ಎಷ್ಟೋ ಭತ್ಯೆಗಳು ಬರುತ್ತಿಲ್ಲ. ಐ.ಟಿ., ಬಿ.ಟಿ., ಯಲ್ಲಿ ಕರ್ತವ್ಯ ನಿರ್ವಹಿಸುವಂಥ ಜನರು ಸಂಪೂರ್ಣವಾಗಿ ರಸ್ತೆಗೆ ಬಂದಿದ್ದಾರೆ. ಟ್ರಾನ್ಸ್‌ಪೋರ್ಟ್ ಸೆಕ್ಟಾರ್‌ನಲ್ಲಿರುವಂಥ ಜನರು ರಸ್ತೆಯಲ್ಲಿ ನಿಂತಿದ್ದಾರೆ. Unorganised sector ಸಂಪೂರ್ಣವಾಗಿ ರಸ್ತೆಗೆ ಇಳಿದಿದೆ. ನಮ್ಮ ಬೆಂಗಳೂರಿನಲ್ಲಿಯೇ 20 ಸಾವಿರ ಯೂನಿಟ್ಸ್ ಕೈಗಾರಿಕೆಗಳು ಮುಚ್ಚಿದ್ದು, ಅವರ್‍ಯಾರೂ ಸಹ ಇವತ್ತು ಬಾಡಿಗೆ ಪಾವತಿಸಲು ಸಾಧ್ಯವಾಗುತ್ತಿಲ್ಲ.

**ಹಂಗಾಮಿ ಸಭಾಪತಿಯವರು:-**ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಹಂಗಾಮಿ ಸಭಾಪತಿಯವರು:-**ಈಗಾಗಲೇ ಸ್ಪಷ್ಟವಾಗಿ ಎಲ್ಲರೂ ಮಾತನಾಡಿದ್ದು, ಮತ್ತೆ ಅದೇ ವಿಷಯ ಮರುಬಳಕೆಯಾಗುತ್ತಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ವಿಚಾರವು ಮರುಬಳಕೆ ಮಾಡುತ್ತಿಲ್ಲ. ಈ ವಿಚಾರವನ್ನು ಯಾರೂ ಸಹ ಮಾತನಾಡಿಲ್ಲ. ಪ್ರತಿ ತಿಂಗಳು ಶೇ.2 ರಷ್ಟು ಬಡ್ಡಿ ವಿಧಿಸಿರುವುದಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು ಉತ್ತರ ನೀಡಲಿ. ಒಂದು ತಿಂಗಳಿಗೆ ಮಾತ್ರ ಶೇ.5 ರಷ್ಟು ವಿನಾಯಿತಿ ನೀಡಲಾಗಿದೆ. ಅದೇ ರೀತಿ ಒಂದು ತಿಂಗಳಿಂದ ಎರಡನೇ ತಿಂಗಳಿಗೆ ಬಂದಾಗ ಸಹ ಯಾವುದೇ ತೆರಿಗೆ ವಿಧಿಸದೇ ಬಾಡಿಗೆ ಪಾವತಿಸಿ ಎಂದು ಹೇಳುತ್ತಾರೆ. ಆದರೆ, ಜೂನ್ ನಂತರ ಶೇ. 2 ರಷ್ಟು ಪ್ರತಿ ತಿಂಗಳು ಬಡ್ಡಿ ಹೆಚ್ಚಾಗುತ್ತಿರುತ್ತದೆ. ಈ ಹಿಂದೆ ಶೇ.5 ರಷ್ಟು ವಿನಾಯಿತಿ ನೀಡುವುದನ್ನು ಸುತ್ತೋಲೆ ಮೂಲಕ ಹೊರಡಿಸಲಾಗಿದೆ. ಆದರೆ, ಇವತ್ತು ಕಾಯ್ದೆ ಮಾಡಲಾಗಿದೆ. ಹಾಗಾದರೆ, ಕೋವಿಡ್-19 ಹೀಗೆಯೇ ಖಾಯಂ ಆಗಿ ಇರುತ್ತದೆ ಎಂಬುದು ಮಾನ್ಯ ಸಚಿವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನಿಸಿಕೆಯೇ? ಆ ರೀತಿ ಏನಾದರೂ ಭಾವಿಸಿ, ಈ ವಿಧೇಯಕವನ್ನು ಜಾರಿಗೆ ತಂದಿದ್ದರೆ ಯಾವ ರೀತಿ ಸರ್ಕಾರ ಆಡಳಿತ ನಡೆಸುತ್ತಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.) (ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಹಿಂದಿನಿಂದಲೂ ಇದೆ. ತಡವಾಗಿ ಬಾಡಿಗೆ ಪಾವತಿಸುವವರಿಗೆ ಕಾರ್ಪೋರೇಷನ್‌ಗಳಲ್ಲಿ ಮತ್ತು ಮುನಿಸಿಪಾಲಿಟಿಗಳಲ್ಲಿ,...

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಸಹ ಕಾಯ್ದೆ ಇರಲಿಲ್ಲ. ಸುತ್ತೋಲೆ ಮಾತ್ರ ಹೊರಡಿಸಲಾಗಿದೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಹೌದು, ಈ ಹಿಂದೆ ಸುತ್ತೋಲೆ ಹೊರಡಿಸಿರುವುದು ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಸಹ ಇದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಸಹ ಕಾಯ್ದೆ ಇರಲಿಲ್ಲ. ಸುತ್ತೋಲೆ ಮಾತ್ರ ಹೊರಡಿಸಲಾಗಿದೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಈ ಹಣಕಾಸು ವರ್ಷದಲ್ಲಿ ವಿಧೇಯಕ ಮಂಡಿಸುವ ಮೊದಲು, ಸಂಪೂರ್ಣವಾಗಿ ಆಸ್ತಿ ತೆರಿಗೆಯು ಸಾಕಷ್ಟು ಬಾರಿ ಸಿಕ್ಕಿರುವುದಿಲ್ಲ. ಬಾಡಿಗೆ ಪಾವತಿಸುವಲ್ಲಿ ಮುಂದಿನ ವರ್ಷ ಸಹ ತೆರಿಗೆ ಪಾವತಿಯಲ್ಲಿ ರಿಯಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪ್ರತಿ ತಿಂಗಳು ಬಾಡಿಗೆ ಪಾವತಿಸಲಿಲ್ಲವೆಂದರೆ, ಬಡ್ಡಿ ವಿಧಿಸುವಂತಹ ವಿಧೇಯಕವನ್ನು ಜಾರಿಗೆ ತರಲಾಗಿದೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಆಗಲಿ. ಈಗಾಗಲೇ ಗೌರವಾನ್ವಿತ ಸದಸ್ಯರು ಸಾಕಷ್ಟು ಚರ್ಚೆ ಮಾಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಧೇಯಕವನ್ನು ಜಾರಿಗೆ ತಂದಿರುವ ಕುರಿತು 2020-21ನೇ ಸಾಲಿನ ಹಣಕಾಸು ವರ್ಷದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಎಂದು ಮಾನ್ಯ ರಮೇಶ್‌ರವರು ಹೇಳಿದ್ದು, 'Act of God' ಎಂದು ಕೇಂದ್ರದ ಆರ್ಥಿಕ ಸಚಿವರು ಹೇಳುತ್ತಾರೆ. ಕೋವಿಡ್-19 ಸಾಂಕ್ರಾಮಿಕ ರೋಗವು ಹರಡುತ್ತಿರುವಂತಹ extraordinary

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂದರ್ಭದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆ, ಬಹಳಷ್ಟು ರಿಯಾಯಿತಿ ನೀಡಿದ್ದೇವೆ ಎಂದು ಆಡಳಿತ ಪಕ್ಷದವರೆಲ್ಲರೂ ಹೇಳಿದ್ದಾರೆ. ಅದೇ ರೀತಿ ಮಾನ್ಯ ಸಚಿವರು ಸಹ ಬಾಡಿಗೆ ಪಡೆದುಕೊಳ್ಳುವಂಥವರಾಗಿದ್ದಾರೆ. ಮಹಾದೇವಪುರ, ಸಿ.ವಿ.ರಾಮನ್‌ನಗರ, ಕೋರಮಂಗಲ ಕಡೆ ಹೋಗಿ ನೋಡಿದರೆ, ಅಲ್ಲಿ ಮನೆಗಳೆಲ್ಲಾ ಖಾಲಿಯಾಗಿವೆ. ಹಾಗಾಗಿ ಬಾಡಿಗೆ ಇಲ್ಲದಂಥವರು ಎಲ್ಲಿಂದ ತೆರಿಗೆಯನ್ನು ತಂದು ಕಟ್ಟುತ್ತಾರೆ? ಆದ್ದರಿಂದ ಮುಂದಿನ ವರ್ಷ ತೆರಿಗೆ ಪಾವತಿಸುವಲ್ಲಿ ಏನಾದರೂ ರಿಯಾಯಿತಿ ನೀಡಲೇಬೇಕಾಗುತ್ತದೆ. ಈಗಾಗಲೇ ಹಲವಾರು ಬ್ಯಾಂಕುಗಳಲ್ಲಿ N.P.A., ಮಾಡಿ, ಅವುಗಳೆಲ್ಲವನ್ನೂ ಸಂಪೂರ್ಣವಾಗಿ ಲಕ್ಷಾಂತರ ರೂಪಾಯಿ, ಕೋಟ್ಯಂತರ ರೂಪಾಯಿ write-off ಮಾಡಲಾಗಿದೆ. ಅದೇ ರೀತಿ ಈ ವಿಧೇಯಕವು ಪ್ರತಿ ವರ್ಷ ತೆರಿಗೆ ಪಾವತಿಸುವಂಥ ಜನರಿಗೆ ಸಂಬಂಧಿಸಿದ್ದು, ಮಾನ್ಯ ಸಚಿವರು ಪ್ರತಿಷ್ಠೆ ಪ್ರಶ್ನೆ ಮಾಡಿಕೊಳ್ಳದೇ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು, ಮತ್ತೊಮ್ಮೆ ಎಲ್ಲರೊಂದಿಗೆ ಸಮಾಲೋಚನೆ ಮಾಡಿ, ವಿಧೇಯಕವನ್ನು ಜಾರಿಗೆ ತರುವುದು ಉತ್ತಮ ಎಂದು ಹೇಳುವುದಕ್ಕೆ ಬಯಸುತ್ತೇನೆ. ದಯವಿಟ್ಟು ಪ್ರತಿಷ್ಠೆಗಾಗಿ ಈ ವಿಧೇಯಕವನ್ನು ಜಾರಿಗೆ ತರುವಂಥ ಕೆಲಸ ಮಾಡಿಕೊಳ್ಳಬಾರದು.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, 'Act of God' ಬಗ್ಗೆ ಮಾನ್ಯ ಸಚಿವರು ಈಗಿರುವ pandemic ಸಂದರ್ಭದಲ್ಲಿ ಆಗಿರುವುದನ್ನು ಕುರಿತು ದಯಮಾಡಿ ತಿಳಿಸಬೇಕು. ಯಾರು ಬಹುರಾಷ್ಟ್ರೀಯ ಕಂಪನಿಗಳಿಗೆ ಬಾಡಿಗೆಗೆ ಕೊಟ್ಟಿದ್ದಾರೆ, ಅವರೆಲ್ಲರೂ ಸಹ notice ನೀಡಿ, ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈಗ ತಂದಿರುವ ವಿಧೇಯಕವೇನಿದೆ, ಈ ವಿಧೇಯಕವೂ ಸಹ ಅದಕ್ಕೆ ಅನ್ವಯಿಸುತ್ತದೆ. ಹಾಗಾಗಿ ದಯವಿಟ್ಟು ಮಾನ್ಯ ಸಚಿವರು ಈ ವಿಚಾರ ಕುರಿತು ತಿಳಿಸಬೇಕು.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಅದಕ್ಕೆ ಏನೂ ಸಂಬಂಧಪಡುವುದಿಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಬಾಡಿಗೆ ನೀಡುವುದಿಲ್ಲವೆಂದರೆ, ಏತಕ್ಕೆ ಬಹುರಾಷ್ಟ್ರೀಯ ಕಂಪನಿಯವರು ತೆರಿಗೆ ಪಾವತಿಸುತ್ತಾರೆ?

**ಶ್ರೀ ಅರವಿಂದ ಲಿಂಬಾವಳಿ (ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಬಹಳ ಗೊಂದಲ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಈಗಾಗಲೇ ಯಾರು ತೆರಿಗೆ ಪಾವತಿಸಿರುತ್ತಾರೆ, ಅಂಥವರಿಗೆ ಶೇ.5 ರಷ್ಟು ರಿಯಾಯಿತಿ ಸಿಗಬೇಕಾಗಿತ್ತು, ಆದರೆ ಶೇ.5 ರಷ್ಟು ರಿಯಾಯಿತಿ ಸಿಕ್ಕಿರುವುದಿಲ್ಲ, ಆದರೂ ಅವರು ತೆರಿಗೆಯನ್ನು ಪಾವತಿಸಿರುತ್ತಾರೆ. ಹಾಗಾಗಿ ಯಾರು ಈಗಾಗಲೇ ತೆರಿಗೆ ಪಾವತಿಸಿರುತ್ತಾರೆ, ಅಂಥವರು ಮುಂದಿನ ವರ್ಷದಲ್ಲಿ ತೆರಿಗೆ ಪಾವತಿಸಿದಾಗ adjust ಆಗುತ್ತದೆ. ಒಂದು ತಿಂಗಳಿಗೆ ಮಾತ್ರ ರಿಯಾಯಿತಿ

ನೀಡುವುದಲ್ಲ, ಕರೋನಾ ಸಂದರ್ಭದಲ್ಲಿ ಎಲ್ಲಾ ತಿಂಗಳುಗಳಿಗೆ ರಿಯಾಯಿತಿ ಕೊಟ್ಟುಬಿಟ್ಟಿದ್ದಾರೆ. ಹಾಗಾಗಿ ಅಷ್ಟಕ್ಕೆ ಮಾತ್ರ ತಿದ್ದುಪಡಿ ತರಲಾಗಿದೆ. ಇದರಲ್ಲಿ ಬೇರೆ ಯಾವುದೇ confusion ಮಾಡಿಕೊಳ್ಳುವ ಅವಶ್ಯಕತೆ ಇಲ್ಲ.

**ಶ್ರೀ ಪಿ.ಆರ್.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಅರವಿಂದ ಲಿಂಬಾವಳಿಯವರು ಹೇಳಿದ ವಿಚಾರ ಸರಿ. ನಾವೂ ಸಹ ಅದನ್ನೇ ಹೇಳುತ್ತಿರುವುದು. ಈ ವಿಧೇಯಕದಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದಂತೆ ಒಂದು 'clause' ಅನ್ನೇ ಹಾಕಿದ್ದೀರಿ. ನಾನು ಹೇಳುತ್ತಿರುವುದೇನೆಂದರೆ, ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಕಳೆದ ವರ್ಷ ಯಾರೂ ಸಹ ಬಾಡಿಗೆಯನ್ನೇ ತೆಗೆದುಕೊಂಡಿಲ್ಲ. ಅಂಥವರು ಯಾವ ರೀತಿ ತೆರಿಗೆ ಪಾವತಿಸುತ್ತಾರೆ ಎಂಬುದನ್ನು ದಯಮಾಡಿ ತಿಳಿಸಬೇಕು.

**ಶ್ರೀ ಅರವಿಂದ ಲಿಂಬಾವಳಿ (ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಯಾರು ತೆರಿಗೆಯನ್ನು ಪಾವತಿಸಿರುತ್ತಾರೆ, ಅಂಥವರಿಗೆ ಮುಂದಿನ ವರ್ಷ ರಿಯಾಯಿತಿ ನೀಡಲಾಗುವುದು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ಕಡೆ not even ಶೇ.50 ರಷ್ಟು ಸಹ ತೆರಿಗೆ ಸಂಗ್ರಹಿಸಿಲ್ಲವೆಂದು ಹೇಳುತ್ತಾರೆ. ಈಗ ಎಲ್ಲರೂ ತೆರಿಗೆ ಪಾವತಿಸಿದ್ದಾರೆ ಎಂದು ಹೇಳುತ್ತಿದ್ದಾರೆ, ಯಾರೂ ತೆರಿಗೆ ಪಾವತಿಸಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಯಾರೂ ತೆರಿಗೆ ಪಾವತಿಸಿರುತ್ತಾರೆ, ಅಂಥವರಿಗೋಸ್ಕರ ಮುಂದಿನ ವರ್ಷದಲ್ಲಿ ಸರಿಪಡಿಸುವ ಸಲುವಾಗಿಯೇ ಶೇ.5 ರಷ್ಟು ರಿಯಾಯಿತಿ ನೀಡುತ್ತಿರುವುದು. ಈ ವಿಧೇಯಕದಲ್ಲಿ ತಂದಿರುವ ವಿಚಾರವೂ ಅಷ್ಟೇ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪ್ರತಿ ತಿಂಗಳು ಬಾಡಿಗೆ ಪಾವತಿಸಲಿಲ್ಲವೆಂದರೆ, ಶೇ.2 ರಷ್ಟು ಅಂದರೆ, ಜೂನ್ ಮಾಹೆಯಿಂದ ಬಡ್ಡಿ ವಿಧಿಸಲಾಗಿದೆ. ದಯವಿಟ್ಟು ನೋಡಿ. ವಿಧೇಯಕದಲ್ಲಿ ಏನೇನೋ ತಂದು ಉತ್ತರ ನೀಡಲಿಲ್ಲವೆಂದರೆ ಹೇಗೆ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾರು ತೆರಿಗೆಯನ್ನು ಪಾವತಿಸಿರುತ್ತಾರೆ, ಅಂಥವರಿಗೆ ಮುಂದಿನ ವರ್ಷ ರಿಯಾಯಿತಿ ನೀಡುತ್ತೇವೆ ಎಂದು ಹೇಳುತ್ತಿದ್ದಾರೆ,...

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪ್ರತಿ ತಿಂಗಳು ಅಂದರೆ ಜೂನ್ ಮಾಹೆಯಿಂದ ಶೇ.2 ರಷ್ಟು ಆತ ಬಾಡಿಗೆ ಪಾವತಿಸುವವರೆಗೂ ಬಡ್ಡಿ ಕಟ್ಟಬೇಕು. ಜನರ ಹತ್ತಿರ ಬಡ್ಡಿ ಪಾವತಿಸಲು ಹಣ ಎಲ್ಲಿದೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಹಾಗಾದರೆ, ತಾವು ಹೇಳುವುದು ನೋಡಿದರೆ ತೆರಿಗೆಯೇ ಸಂಗ್ರಹಿಸಬಾರದು.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ತೆರಿಗೆ ತೆಗೆದುಕೊಳ್ಳಲಿ. ತೆರಿಗೆ ತೆಗೆದುಕೊಳ್ಳುವುದು ಬೇಡ ಎಂದು ಹೇಳುವುದಿಲ್ಲ. 3 ತಿಂಗಳು ಮಾತ್ರ ಬಾಡಿಗೆ ಪಾವತಿಸಲು ಅವಕಾಶ ನೀಡಲಾಗುತ್ತದೆ. ಏಪ್ರಿಲ್ ಮಾಹೆಯಲ್ಲಿ ವಿನಾಯಿತಿ ನೀಡಲಾಗುತ್ತದೆ, ಉಳಿದ ಎರಡು ತಿಂಗಳು ಸಹ ಬಾಡಿಗೆ ಪಾವತಿಸುವವರೆಗೂ ಉಚಿತವಾಗಿ ಬಿಡಲಾಗುತ್ತದೆ. ಆತ ಯಾವಾಗ ಬೇಕಾದರೂ ಬಾಡಿಗೆ ಮೊತ್ತವನ್ನು ಆ ಮಾಹೆಯೊಳಗೆ ಭರಿಸಬಹುದು. ಆದರೆ, ಜೂನ್ ಮಾಹೆ ಕಳೆದ ಮೇಲೆ ಅಂದರೆ, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ವರೆಗೂ ಬಾಡಿಗೆ ಪಾವತಿಸಲಿಲ್ಲವೆಂದರೆ, ಪ್ರತಿ ತಿಂಗಳು ಶೇ.2 ರಷ್ಟು ಬಡ್ಡಿಯಂತೆ ಶೇ. 8 ರಷ್ಟು ಬಡ್ಡಿ ಸೇರಿಸಿ ಬಾಡಿಗೆ ಪಾವತಿಸುವುದು ಕಡ್ಡಾಯವಾಗಿ ಮಾಡಲಾಗಿದೆ. ದಯವಿಟ್ಟು ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ನೀಡಬೇಕು. ಆ ರೀತಿ ಏನಿಲ್ಲವೆಂದರೆ ಅದನ್ನು ಸದನದ ಮೂಲಕ ತಿಳಿಸಲಿ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ existing provision ಇದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಹಾಗಾದರೆ, ವಿಧೇಯಕದಲ್ಲಿ ಏತಕ್ಕೆ ತಿದ್ದುಪಡಿ ಮಾಡಲಾಗಿದೆ?

**ಶ್ರೀ ಅರವಿಂದ ಲಿಂಬಾವಳಿ:–** ಒಂದು ನಿಮಿಷ. ವಿಧೇಯಕವನ್ನು ಏತಕ್ಕೆ ತಿದ್ದುಪಡಿ ಮಾಡಲಾಗಿದೆ ಎಂದರೆ, ಈಗಾಗಲೇ ಯಾರು pandemic situation ತೆರಿಗೆಯನ್ನು ಪಾವತಿಸಿರುತ್ತಾರೆ, ಅಂಥವರಿಗೆ ಶೇ.5 ರಷ್ಟು ರಿಯಾಯಿತಿ ನೀಡಿರುವುದಿಲ್ಲ. ಹಾಗಾಗಿ, ಅಂಥವರು ಮುಂದಿನ ವರ್ಷ ತೆರಿಗೆ ಪಾವತಿಸುವಾಗ ಅವರಿಗೆ ಶೇ.5 ರಷ್ಟು ರಿಯಾಯಿತಿ ನೀಡಲಾಗುತ್ತಿದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಈಗಾಗಲೇ ತೆರಿಗೆ ಪಾವತಿಸಿದವರಿಗೆ ಏನು ಮಾಡುತ್ತಾರೆ?

**(ಗೊಂದಲ)**

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಒಂದು ತಿಂಗಳ ಕಾಲಾವಧಿ it is already existing.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮುಂದಿನ ವರ್ಷ ತೆರಿಗೆ ಪಾವತಿಸುವವರಿಗೆ ಏನು ಮಾಡಿದ್ದಾರೆ, ಪ್ರತಿ ತಿಂಗಳು ಏತಕ್ಕೆ ಶೇ.2 ರಷ್ಟು ಬಡ್ಡಿ ವಿಧಿಸುತ್ತಾರೆ?

**(ಗೊಂದಲ)**

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ನಾರಾಯಣಸ್ವಾಮಿಯವರೆ, ಮುಂದಿನ ವರ್ಷದಲ್ಲಿ adjustment ಮಾಡಿಕೊಳ್ಳಬಹುದು. ವಿಧೇಯಕ ಅಂಗೀಕರಿಸಿದ ಮೇಲೆ ಮತ್ತೆ ಕಟ್ಟಿಲ್ಲದಿರುವವರಿಗೆ ಒಂದು ತಿಂಗಳು ಅವಕಾಶ ಕಲ್ಪಿಸಿಕೊಟ್ಟಿದ್ದೇವೆ ಅಲ್ಲವೇ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾರು ಈಗಾಗಲೇ ತೆರಿಗೆ ಪಾವತಿಸಿದ್ದಾರೆ, ಅಂಥವರಿಗೆ ಮುಂದಿನ ವರ್ಷ ಶೇ.5 ರಷ್ಟು ರಿಯಾಯಿತಿ ಕೊಡುತ್ತೇವೆ ಎಂದು ಹೇಳುತ್ತಾರೆ. ಯಾರು ತೆರಿಗೆ ಪಾವತಿಸಿರುವುದಿಲ್ಲ,...

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಹೌದು ತೆರಿಗೆ ಪಾವತಿಸುವವರಿಗೆ ಮುಂದಿನ ವರ್ಷ ಶೇ.5 ರಷ್ಟು ರಿಯಾಯಿತಿ ಕೊಡುತ್ತೇವೆ. ಯಾರು ತೆರಿಗೆ ಪಾವತಿಸಿರುವುದಿಲ್ಲ ಅಂಥವರಿಗೆ ಒಂದು ತಿಂಗಳಿಗೆ extend ಮಾಡಲಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾರು ಬಾಡಿಗೆ ಪಾವತಿಸುವುದಿಲ್ಲ ಅಂಥವರಿಗೆ ಪ್ರತಿ ತಿಂಗಳು ಶೇ.2 ರಷ್ಟು ಬಡ್ಡಿ ಭರಿಸಿ, 5 ತಿಂಗಳಿಗೆ ಶೇ.10 ರಷ್ಟು ಬಡ್ಡಿ ವಿಧಿಸಲಾಗಿದೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಶೇ.2 ರಷ್ಟು ಜಾಸ್ತಿ ಅಲ್ಲ,...

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಇಲ್ಲವೆಂದರೆ, ಹೆಚ್ಚಿಗೆ ಬಾಡಿಗೆ ತೆಗೆದುಕೊಳ್ಳುವುದಿಲ್ಲ ಎಂದು ಮಾನ್ಯ ಸಚಿವರು ಹೇಳಲಿ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಯಾರು ತೆರಿಗೆ ಪಾವತಿಸಿರುವುದಿಲ್ಲ ಅಂಥವರಿಗೆ ಒಂದು ತಿಂಗಳು extend ಮಾಡಲಾಗಿದೆ ಅಷ್ಟೇ. ಯಾರು ತೆರಿಗೆ ಪಾವತಿಸಿರುತ್ತಾರೆ, ಅಂಥವರಿಗೆ ಮುಂದಿನ ವರ್ಷ ಶೇ.5 ರಷ್ಟು ರಿಯಾಯಿತಿ ಕೊಡುತ್ತೇವೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(208)08.2.2021 /12.10/ಎಸ್.ಕೆ-ಜಿ.ಆರ್.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಯಾರು ತೆರಿಗೆಯನ್ನು ಕಟ್ಟಿದ್ದಾರೆ. ಅವರಿಗೆ ತೆರಿಗೆ ಕಟ್ಟಬೇಕಾದರೆ, ರಿಯಾಯಿತಿಯನ್ನು ಕೊಟ್ಟಿರಲಿಲ್ಲ. ಮುಂದಿನ ವರ್ಷ ತೆರಿಗೆಯನ್ನು ಕಟ್ಟಬೇಕಾದರೆ, ಶೇಕಡ 5 ರಷ್ಟು ರಿಯಾಯಿತಿಯನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಶೇಕಡ 50 ರಷ್ಟು ಜನರು ತೆರಿಗೆಯನ್ನು ಕಟ್ಟಿಲ್ಲ. ಅವರು ಮುಂದಿನ ವರ್ಷ ತೆರಿಗೆಯನ್ನು ಕಟ್ಟುತ್ತಾರೆ. ಅವರು ತೆರಿಗೆಯನ್ನು ಕಟ್ಟಿದಾಗ, ಅವರಿಗೆ ಶೇಕಡ 5 ರಷ್ಟು ವಿನಾಯಿತಿಯನ್ನು ಕೊಡುತ್ತೀರೆಂಬುದರ ಬಗ್ಗೆ ಒಪ್ಪಿಕೊಳ್ಳುತ್ತೇವೆ. ಆದರೆ ಪ್ರತಿ ತಿಂಗಳು ಶೇಕಡ 2 ರಷ್ಟು ಅವರಿಗೆ ಜಾಸ್ತಿ ಬಡ್ಡಿಯನ್ನು ಹಾಕುತ್ತೀರಾ? ಅದನ್ನು ಕಡಿಮೆ ಮಾಡುತ್ತೀರಾ?

**ಶ್ರೀ ಅರವಿಂದ ಲಿಂಬಾವಳಿ (ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಅದು already Karnataka Municipalities Act ನಲ್ಲಿ ಇದೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಹೌದು ಮಾನ್ಯ ರಮೇಶ್‌ರವರಾಗಲೀ, ಇನ್ನೊಬ್ಬರಾಗಲೀ ಈ lockdown..

**ಶ್ರೀ ಅರವಿಂದ ಲಿಂಬಾವಳಿ:-** ಇದನ್ನು ನಾವು ಹೊಸದಾಗಿ ತಂದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಇಂತಹ lockdown situation ನಲ್ಲಿ ಬಾಡಿಗೆಯೇ collect ಆಗಿಲ್ಲ ಮತ್ತು ಬಾಡಿಗೆದಾರರು ಇಲ್ಲ. ಇಂತಹ ಸಮಯದಲ್ಲಿ ಪ್ರತಿ ತಿಂಗಳಿಗೆ ಶೇಕಡ 2 ರಷ್ಟು ಏಕೆ ಜಾಸ್ತಿ ಬಡ್ಡಿಯನ್ನು ಹಾಕುತ್ತೀರಾ?

**ಶ್ರೀ ಅರವಿಂದ ಲಿಂಬಾವಳಿ:-** ಈಗಾಗಲೇ ಅದು ಮುಂಚೆಯೇ ಕಾಯಿದೆಯಲ್ಲಿ ಇದೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಅದು ಕಾಯಿದೆಯಲ್ಲಿ ಇರುವುದು ನಮಗೆ ಗೊತ್ತಿದೆ, yes, it is there in the Act.

**ಶ್ರೀ ಅರವಿಂದ ಲಿಂಬಾವಳಿ:-** ಹೊಸ amendment ಅನ್ನು ಬೇಕಾದರೆ, suggest ಮಾಡಿ. ಅದನ್ನು withdraw ಮಾಡಿ ಎಂದು ಹೇಳಿದರೆ ತೊಂದರೆಯಿಲ್ಲ.?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ. ನಾರಾಯಣಸ್ವಾಮಿ:–**ಪ್ರತಿ ತಿಂಗಳು ಶೇಕಡ 2 ರಷ್ಟು ...

**ಶ್ರೀ ಅರವಿಂದ ಲಿಂಬಾವಳಿ:–** ತಮ್ಮ ಸರ್ಕಾರವಿದ್ದಾಗಲೂ, ಆ Act ನಲ್ಲಿ ಇದೆ.

**ಶ್ರೀ ಎಂ.ನಾರಾಯಣಸ್ವಾಮಿ:–**ಮಾನ್ಯ ಹರಿಪ್ರಸಾದ್‌ರವರು ಹೇಳಿದ್ದನ್ನು ಅರ್ಥ ಮಾಡಿಕೊಂಡುರುವಿರಾ? ಈ pandemic situation ನಲ್ಲಿ ಬಾಡಿಗೆದಾರರು ಈಗಾಗಲೇ ಮನೆಯನ್ನು ಖಾಲಿ ಮಾಡಿಕೊಂಡು ಹೋಗಿದ್ದಾರೆ. ಒಂದು ವೇಳೆ ಬಾಡಿಗೆದಾರರು ಇದ್ದರೂ, ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳ ಬದಲಾಗಿ, ಐದು ಸಾವಿರ ರೂಪಾಯಿಗಳ ಬಾಡಿಗೆ ಕೊಡುತ್ತಿದ್ದಾರೆ. ಆದರೆ ತೆರಿಗೆ ಮಾತ್ರ ಕಡಿಮೆಯಾಗಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:–** ಸರಿ. ಒಂದು ತಿಂಗಳ ಯಾರು ತೆರಿಗೆಯನ್ನು ಕಟ್ಟಿರುವುದಿಲ್ಲವೋ, ಅಂತಹವರಿಗೆ ಇನ್ನೊಂದು ತಿಂಗಳು ತೆರಿಗೆ ಕಟ್ಟುವುದಕ್ಕೆ extend ಮಾಡಿ, ಅವರಿಗೆ ಅವಕಾಶವನ್ನು ಕೊಡುತ್ತಿದ್ದೇವೆ.

**ಶ್ರೀ ಎಂ. ನಾರಾಯಣಸ್ವಾಮಿ:–**ಒಂದು ತಿಂಗಳು extend ಮಾಡುತ್ತೀರಾ no dobut.

**ಹಂಗಾಮಿ ಸಭಾಪತಿಯವರು:–**ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ ಬಿಡಿ. ಆನಂತರ ತಾವು ಮಾತನಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:–**ತಾವು ಪ್ರತಿ ತಿಂಗಳು ಜಾಸ್ತಿ ಮಾಡಿದರೆ, ತಾವು ಏನು ಕಡಿಮೆ ಮಾಡುತ್ತೀರಾ?

**ಹಂಗಾಮಿ ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಕೊಡುವುದಕ್ಕಿಂತ ಮೊದಲೇ ತಾವು ಪ್ರಶ್ನೆ ಮೇಲೆ ಪ್ರಶ್ನೆ ಹಾಕಿದರೆ ಹೇಗೆ?

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಚಿವರು ಹೇಳಿರುವುದು ಸರಿ. ಅಂತಹ ಸಂದರ್ಭದಲ್ಲಿ ಯಾರು ತೆರಿಗೆಯನ್ನು ಕಟ್ಟಿದ್ದಾರೆ ಮತ್ತು ಯಾರಿಗೆ ರಿಯಾಯಿತಿಯನ್ನು ಸಿಕ್ಕಿಲ್ಲ. ಅವರಿಗೆ ರಿಯಾಯಿತಿಯನ್ನು ಕೊಡುತ್ತೇವೆ ಎಂಬುದು ಹೇಳಿದ್ದು ನಿಜ. ಕಳೆದ ಬಾರಿ ತೆರಿಗೆ ಕಟ್ಟುವಂತಹ ಸಂದರ್ಭದಲ್ಲಿ ದಂಡವನ್ನು ಕಟ್ಟಿಸಿಕೊಂಡಿದ್ದಾರೆ. ಅವರು ಸುಮ್ಮನೆ ಏನು ಕಟ್ಟಿಸಿಕೊಂಡಿಲ್ಲ. ಆ ದಂಡವೇನಾದರೂ ವಾಪಸ್ಸು ಕೊಡುತ್ತೀರಾ? ಇಲ್ಲ. ಆದ್ದರಿಂದ, ಸಾಂಕ್ರಾಮಿಕ ರೋಗ ಬಂದಿರುವುದರಿಂದ, ಇದು extraordinary situation ನಲ್ಲಿ ಏನಾದರೂ ರಿಯಾಯಿತಿಯನ್ನು ಕೊಡಬೇಕಾಗುತ್ತದೆ. ಇದನ್ನು prestige ಆಗಿ ತೆಗೆದುಕೊಳ್ಳಬೇಡಿ. ಇದು ಪ್ರತಿಷ್ಠೆಯ ಪ್ರಶ್ನೆಯಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರವಿಂದ ಲಿಂಬಾವಳಿ:-** ಈಗಾಗಲೇ ಕೊಟ್ಟುಬಿಟ್ಟಿದ್ದೇವೆ. Pandemic ಪ್ರಾರಂಭವಾದಾಗಿನಿಂದ ಪ್ರತಿ ಸಾರಿ ಏನಾಗುತ್ತಿತ್ತು, ಒಂದು ತಿಂಗಳಿಗೆ ಆ ರೀತಿ ರಿಯಾಯಿತಿ ಸಿಗುತ್ತಿತ್ತು. ಈಗ pandemic ಆಗಿರುವುದರಿಂದ ಕಟ್ಟದೇ ಇರುವುದಕ್ಕೆ, ಅವರಿಗೆ ರಿಯಾಯಿತಿ ಸಿಕ್ಕಿಬಿಟ್ಟಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಕೆಲವರು ತೆರಿಗೆ ಕಟ್ಟುವಂತಹ ಸಂದರ್ಭದಲ್ಲಿ ದಂಡವನ್ನು ಕಟ್ಟುವಂತಹ ಸಂದರ್ಭದಲ್ಲಿ ತೆರಿಗೆ ಪೂರ್ತಿಯಾಗಿ ಕಟ್ಟಿದ್ದಾರೆ. ತಾವು ಹೇಳಿರುವಂತಹದ್ದು ಸರಿಯಿದೆ..

**ಶ್ರೀ ಅರವಿಂದ ಲಿಂಬಾವಳಿ:-** ಅದನ್ನು ಮುಂದಿನ ವರ್ಷ adjust ಮಾಡುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಆ penalty ಮೊತ್ತವನ್ನು adjust ಮಾಡುತ್ತೀರಾ?

**ಶ್ರೀ ಅರವಿಂದ ಲಿಂಬಾವಳಿ:-** ಅದು penalty ದು ಅಲ್ಲ. ಅವರು ಕಟ್ಟಿರುವ tax ಮೊತ್ತ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದು ಹಳೆಯದಲ್ಲ. ಸಾಂಕ್ರಾಮಿಕ ರೋಗ ಬಂದಿರುವ ಸಂದರ್ಭದಲ್ಲಿ ಕಟ್ಟಿರುವಂತಹ ದಂಡವನ್ನು ಕೂಡ ತಾವು ರಿಯಾಯಿತಿಗೆ ಕೊಡುತ್ತೀರೆಂಬುದು ಪ್ರಶ್ನೆಯಷ್ಟೆ.

**ಶ್ರೀ ಅರವಿಂದ ಲಿಂಬಾವಳಿ:-** ಅದು ದಂಡದ ಮೊತ್ತ ಆಗಿರುವುದರಿಂದ ಅದಕ್ಕೆ ರಿಯಾಯಿತಿ ಕೊಡುವುದಕ್ಕೆ ಬರುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದನ್ನು ಎಲ್ಲಿ ಕೊಡುತ್ತೀರಾ?

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾಪತಿಯವರೇ, it is a penalty.

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮೂರು ಜನ ಸಚಿವರಲ್ಲಿ confusion ಇದೆ.

**ಶ್ರೀ ಅರವಿಂದ ಲಿಂಬಾವಳಿ:-** ಇದರಲ್ಲಿ confusion ಇಲ್ಲ.

**ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಬಿಲ್‌ನಲ್ಲಿ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:-** ದಯವಿಟ್ಟು, ಈ ವಿಧೇಯಕವನ್ನು Select Committee ನಲ್ಲಿ ವಾಪಸ್ಸು ತೆಗೆದುಕೊಂಡು...

**ಶ್ರೀ ಅರವಿಂದ ಲಿಂಬಾವಳಿ:-** ನೀವು ಹೀಗೆ ಹೇಳಿ confusion ಮಾಡಬೇಡಿ.

**ಶ್ರೀ ಸಿ.ಎಂ.ಇಬ್ರಾಹಿಂ:-** ತಾವು ಮೂರು ಜನ ಸಚಿವರು ಕುಳಿತುಕೊಂಡು ಚರ್ಚೆ ಮಾಡಿ. ಇದಕ್ಕೆ ಸರಿಯಾದಂತಹ ಒಂದೇ ಉತ್ತರವನ್ನು ಕೊಡಿ.

**ಶ್ರೀ ಅರವಿಂದ ಲಿಂಬಾವಳಿ:-** ಒಂದೇ ಉತ್ತರ ಅವರು ಹೇಳುತ್ತಿರುವುದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಶೇಕಡ 2 ರಷ್ಟು ಹಿಂದಿನ ಕಾಯಿದೆಯಲ್ಲಿತ್ತು ಎಂದು ಹೇಳುತ್ತೀರಿ. ಆದರೂ ಹೊಸದಾಗಿ Act ನಲ್ಲಿ ತರುತ್ತಿದ್ದೀರಿ.

**(ಗೊಂದಲ)**

**ಶ್ರೀ ಅರವಿಂದ ಲಿಂಬಾವಳಿ:-** ಅದನ್ನು ನಮ್ಮ ಸರ್ಕಾರ ಮಾಡಿದ್ದಲ್ಲ. ತಮ್ಮ ಸರ್ಕಾರವೇ ಮಾಡಿದ್ದು. ಈ ಹಿಂದೆ ಇದ್ದಂತಹ ಸರ್ಕಾರ ಮಾಡಿದ್ದು. It is very simple. ಏನೆಂದರೆ, ಈಗಾಗಲೇ ಯಾರು ಕಟ್ಟಿದ್ದಾರೆ ಅವರಿಗೆ ಮುಂದಿನ ವರ್ಷ ಕಟ್ಟುವಾಗ, ಶೇಕಡ 5 ರಷ್ಟು ರಿಯಾಯಿತಿ ಸಿಗುತ್ತದೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಹಂಗಾಮಿ ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ಮಾನ್ಯ ಸಚಿವರು ಹೇಳಿದ್ದನ್ನು ಕೇಳಿ. ಆನಂತರ ಮಾತನಾಡಿ. ಮಾನ್ಯ ಸಚಿವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಅರವಿಂದ ಲಿಂಬಾವಳಿ:-** ಯಾರು ತೆರಿಗೆ ಕಟ್ಟವುದಕ್ಕೆ ಸಾಧ್ಯವಾಗಿಲ್ಲವೋ, ಅವರಿಗೆ ಒಂದು ತಿಂಗಳು ದಂಡ ಇರುವುದಿಲ್ಲ. ತೆರಿಗೆಯನ್ನು ಕಟ್ಟುವುದಕ್ಕೆ extend ಆಗುತ್ತದೆ. ಆ ವಿಧೇಯಕದಲ್ಲಿ ಎರಡು ಸರಳವಾದಂತಹ ತಿದ್ದುಪಡಿ ಇರುವುದು. ಇಲ್ಲಿ confusion ಮಾಡುವ ಪ್ರಶ್ನೆಯೇ ಬರುವುದಿಲ್ಲ. ಹಳೆ ಕಾಯಿದೆಯಲ್ಲಿ ಏನಿದೆಯೋ, ಅದರಲ್ಲಿ ನಾವು ಅವಕಾಶ ಕೊಡುತ್ತಿದ್ದೇವೆ. ಅವರು ತೆರಿಗೆಯನ್ನು ಕಟ್ಟುಬಿಟ್ಟಿದ್ದಾನೆ. ಅದಕ್ಕೆ ನಾವು ಶೇಕಡ 5 ರಷ್ಟು ಮುಂದಿನ ವರ್ಷ ಅವನು ಕಟ್ಟುವಂತಹ ಸಂದರ್ಭದಲ್ಲಿ concession ಕೊಡುತ್ತೇವೆ. ಎರಡನೇಯದು, ಇನ್ನಾರು ತೆರಿಗೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟುವುದಕ್ಕೆ ಸಾಧ್ಯವಿಲ್ಲವೋ, ಅವರಿಗೆ ತೆರಿಗೆಯನ್ನು ಕಟ್ಟುವುದಕ್ಕೆ ಒಂದು ತಿಂಗಳು extend ಮಾಡುತ್ತಿದ್ದೇವೆ. ಇದು ಸರಳವಾದಂತಹ ತಿದ್ದುಪಡಿ. ದಯವಿಟ್ಟು ಸಹಕಾರ ಮಾಡಿಕೊಟ್ಟು, ಇದನ್ನು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಡುತ್ತೇನೆ.

**ಹಂಗಾಮಿ ಸಭಾಪತಿಯವರು:–** ಶ್ರೀ ಎನ್.ರವಿಕುಮಾರ್‌ರವರೇ ಮಾತನಾಡಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಚಿವರಾದಂತಹ ಮಾನ್ಯ ಅರವಿಂದ ಲಿಂಬಾವಳಿಯವರು ... ಆದರೆ ಶೇಕಡ 2 ರಷ್ಟು ದಂಡ ಏನೆಂಬುದರ ಬಗ್ಗೆ ಹೇಳುತ್ತಿದ್ದಾರೆ, ಅದು ಹಳೆಯದು. ಈ ತಿದ್ದುಪಡಿಯಲ್ಲಿ ಹೊಸದೇನು ಇಲ್ಲ. ಈ ವಿಧೇಯಕದಲ್ಲಿ ಹೊಸ ತಿದ್ದುಪಡಿ ಇರುವಂತಹದ್ದು ಏನೆಂದರೆ, ಶೇಕಡ 5 ರಷ್ಟು ರಿಯಾಯಿತಿ ಕೊಡುವಂತಹದ್ದು ಮಾತ್ರ ಈ ವಿಧೇಯಕಕ್ಕೆ ಸಂಬಂಧಪಟ್ಟಿದ್ದು. ಹಳೆ ವಿಷಯಕ್ಕೆ ಸಂಬಂಧಪಟ್ಟಂತೆ ಶೇಕಡ 2 ರಷ್ಟು ದಂಡ ಏನಿದೆ, ಈಗಾಗಲೇ ಕಾಂಗ್ರೆಸ್ ಮತ್ತು ಜೆಡಿ(ಎಸ್) ಸರ್ಕಾರವಿದ್ದಂತಹ ಸಂದರ್ಭದಲ್ಲಿ ತಂದಿರುವಂತಹದ್ದು. ಹೊಸದಾಗಿ ತಿದ್ದುಪಡಿ ತಂದಿರುವುದು ಏನೆಂದರೆ, ಕೋವಿಡ್ ಸಂದರ್ಭದಲ್ಲಿ ಶೇಕಡ 5 ರಷ್ಟು ರಿಯಾಯಿತಿ ಕೊಡುವುದು ಮಾತ್ರ ಈ ವಿಧೇಯಕದಲ್ಲಿದೆ. ಹಾಗಾಗಿ, ಇದರಲ್ಲಿ confusion ಬೇಡ. ಈ ವಿಧೇಯಕದ ಮೂರನೆ ಪೇಜ್‌ನಲ್ಲಿದೆ. ಅದು ಕಳೆದ ವರ್ಷದ್ದು. ಮಾಹಿತಿಗೋಸ್ಕರವಾಗಿ ಈ ಸದನದ ಮಾನ್ಯ ಸದಸ್ಯರಿಗೆ ಈ ವಿಷಯವನ್ನು provide ಮಾಡಿದೆ. ಶೇಕಡ 5 ರಷ್ಟು ರಿಯಾಯಿತಿಯನ್ನು ಕೊಡುವಂತಹದ್ದಕ್ಕೆ ಮಾತ್ರ ತಿದ್ದುಪಡಿಯ ವಿಷಯ. ಹಾಗಾಗಿ, ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆಯಿಲ್ಲ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳಿದಂತಹ ಎಲ್ಲಾ ವಿಚಾರಗಳನ್ನು ಒಮ್ಮೆ ಬಾರಿ ಪರಿಶೀಲನೆ ಮಾಡಿ. ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುವಂತಹ ಕೆಲಸವನ್ನು ಮಾಡಿ. ಈಗ ವಿಧೇಯಕವನ್ನು ಪಾಸ್ ಮಾಡುವುದಕ್ಕೆ, ಒಂದು ಅವಕಾಶವನ್ನು ಕೊಡುವುದಕ್ಕೆ ಅವರ ಹತ್ತಿರ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಈಗ ಹಾಲೀ ತೆರಿಗೆಯನ್ನು ಕಟ್ಟಿರುವವರಿಗೆ ಮುಂದೆ ಕಟ್ಟುವಂತಹ ಸಂದರ್ಭದಲ್ಲಿ ಶೇಕಡ 5 ರಿಯಾಯಿತಿ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಾರೆ. ಈಗ ಯಾರೂ ತೆರಿಗೆಯನ್ನು ಕಟ್ಟಿಲ್ಲ. ಅವರಿಗೆ ಈ ವಿಧೇಯಕ ಬಂದು, ಒಂದು ತಿಂಗಳೊಳಗಡೆ ಕಟ್ಟಿದರೆ ಶೇಕಡ 5 ರಷ್ಟು ರಿಯಾಯಿತಿ ಕೊಡುತ್ತೇವೆ. ಇದು ಹಿಂದಿನಿಂದಲೂ ಈ ವಿಧೇಯಕದಲ್ಲಿ ಇದೆ. ಈ ರಿಯಾಯಿತಿಯನ್ನು ಜೆಡಿ(ಎಸ್) ಕಾಂಗ್ರೆಸ್ ಸರ್ಕಾರವಿದ್ದಾಗ ತಂದಿದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ದಯವಿಟ್ಟು, ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಈ ವರ್ಷಕ್ಕೆ ಸೀಮಿತವಾಗಿ ಈ ರಿಯಾಯಿತಿಯನ್ನು ಘೋಷಣೆ ಮಾಡುತ್ತಿದ್ದೀರಲ್ಲ. ಇದು ಒಪ್ಪುವಂತಹದ್ದೆ. ಬಹಳಷ್ಟು ಜನ ಬಡವರು ಆಸ್ತಿ–ತೆರಿಗೆಯನ್ನು ಕಟ್ಟದೇ ಇರುವಂತಹವರು. ಆದಾಯ ತೆರಿಗೆಯನ್ನು ಕಟ್ಟದೇ ಇರುವವರನ್ನು ಬಿಟ್ಟುಬಿಡಿ. ನಾನು ಅವರ ಬಗ್ಗೆ ಮಾತನಾಡುವುದಿಲ್ಲ. ಆದಾಯ ತೆರಿಗೆಯ ವ್ಯಾಪ್ತಿಯಿಂದ ಹೊರಗಡೆ ಇರುವಂತಹ ಬಡವರು ಆಸ್ತಿ–ತೆರಿಗೆಯನ್ನು ಕಟ್ಟುವಂತಹ ಬಹಳಷ್ಟು ಜನರು ಇವತ್ತು ತೊಂದರೆಯಲ್ಲಿದ್ದಾರೆ. ಅವರಿಗೆ ಶೇಕಡ 5 ರಷ್ಟು ರಿಯಾಯಿತಿಯನ್ನು ಘೋಷಣೆ ಮಾಡುತ್ತೇವೆ ಎನ್ನುತ್ತೀರಲ್ಲ. ಬೇರೆ ಎಲ್ಲದಕ್ಕೂ ಮಾತ್ರ ಬಾರೀ ಪ್ರಮಾಣದಲ್ಲಿ ಘೋಷಣೆ ಮಾಡಿದ್ದೇವೆ. ಸರ್ಕಾರ ಕೋವಿಡ್‌ಗೋಸ್ಕರ ಕೋಟಿಗಟ್ಟಲೆ ಖರ್ಚು ಮಾಡಿದೆ ಎಂದು ಹೇಳುತ್ತೀರಾ. ಈ ಆಸ್ತಿ–ತೆರಿಗೆ ಕಟ್ಟುವಂತಹ ಕಡು ಬಡವರು ಯಾರಿದ್ದಾರೆ ಅಂದರೆ ಕಟ್ಟುವುದಕ್ಕಾಗದೇ ಇರುವಂತಹವರು ಅವರಿಗೆ ಶೇಕಡ 5 ರಷ್ಟು ರಿಯಾಯಿತಿ ಎಂದು ಹೇಳುತ್ತೀರಲ್ಲ. ಇದು ಸರ್ಕಾರಕ್ಕೆ ಶೋಭೆ ತರುತ್ತದೆಯೇ? ಈ ಕಾಯಿದೆಯಲ್ಲಿ ಬಡವರ ಬಗ್ಗೆ ಏನಾದರೂ ಕಾಳಜಿ ಇದೆಯೇ? ದಯವಿಟ್ಟು, ಇದರ ಬಗ್ಗೆ ಪರಿಶೀಲಿಸಿ. ದಯವಿಟ್ಟು ಶೇಕಡ 50 ರಷ್ಟು ಘೋಷಣೆ ಮಾಡಿ. ಇದೊಂದು ವರ್ಷಕ್ಕೆ ಮಾತ್ರ ಸೀಮಿತ ಎಂದು ಹೇಳಿ. ಈ ಒಂದು ವರ್ಷದ ತೆರಿಗೆ ಕಟ್ಟುವುದಕ್ಕೆ ಮಾತ್ರ ಶೇಕಡ 50 ರಷ್ಟು ರಿಯಾಯಿತಿ ಎಂದು ಹೇಳಿ. ತಾವು ಆದಾಯ ತೆರಿಗೆಯನ್ನು ಕಟ್ಟುವಂತಹವರಿಗೆ ಕೊಡಬೇಡಿ. ಕಡು ಬಡವರು ಯಾರಿದ್ದಾರೆ? ಅವರಿಗೆ ಶೇಕಡ 50 ರಷ್ಟು ಈ ಒಂದು ವರ್ಷಕ್ಕೆ ಸೀಮಿತವಾಗಿ ಎಂದು ಘೋಷಣೆ ಮಾಡಿ. ದಯವಿಟ್ಟು, ತಾವು ಶೇಕಡ 5 ರಷ್ಟು ರಿಯಾಯಿತಿ ಕೊಡುವುದಕ್ಕೆ ಒಂದು ಲಕ್ಷಕ್ಕೆ ಐದು ಸಾವಿರ ರೂಪಾಯಿ. ಹತ್ತು ಲಕ್ಷಕ್ಕೆ ಐವತ್ತು ಸಾವಿರ ರೂಪಾಯಿ. ಇದು rebate? ಶೇಕಡ 5 ರಷ್ಟು ರಿಯಾಯಿತಿಯನ್ನು ಯಾರು ಕೇಳಿದರು? ದಯವಿಟ್ಟು, ಈ ತರಹ ಘೋಷಣೆ ಮಾಡಬೇಡಿ. ಇದರಿಂದ ಬಡ ಜನರಿಗೆ ಏನು ಉಪಯೋಗವಾಗುವುದಿಲ್ಲ. ದಯವಿಟ್ಟು, ಶೇಕಡ 50 ರಷ್ಟು ಆದರೂ ಕೂಡ ಈ ಅವಧಿಗೆ ರಿಯಾಯಿತಿನ್ನು ಘೋಷಣೆ ಮಾಡಿ.

**ಶ್ರೀ ಎನ್. ರವಿಕುಮಾರ್**:– ಮಾನ್ಯ ಸಭಾಪತಿಯವರೇ ಒಂದು ವಿಷಯವನ್ನು ಸ್ಪಷ್ಟ ಮಾಡುತ್ತೇನೆ. ಹತ್ತು ಲಕ್ಷ, ಇಪ್ಪತ್ತು ಲಕ್ಷ ರೂಪಾಯಿಗಳನ್ನು ಹೊಂದಿದವರು ಯಾರು ಬಡವರಿದ್ದಾರೆ? ಅವರು ಬಡವರಲ್ಲ. ಒಂದು ವಿಷಯವನ್ನು ಹೇಳುತ್ತಾನೆ. ಬಡವರಿಗೆ ಆಹಾರ ಕೊಡುವುದರಿಂದ ಹಿಡಿದು, ಅವರಿಗೆ ನರೇಗಾ ದಿನಗಳನ್ನು ಹೆಚ್ಚಿಗೆ ಮಾಡುವುದು ಮತ್ತು ಯಾರು ಬಡ ರೈತರಿದ್ದಾರೆ? ಅವರಿಗೆ ವಿಶೇಷ ಪ್ಯಾಕೇಜ್‌ನ್ನು ಘೋಷಣೆ ಮಾಡಿರುವುದು ಇಂತಹ ಹತ್ತು ಹಲವಾರು ಯೋಜನೆಗಳನ್ನು ಸರ್ಕಾರ ತಂದಿದೆ.

**ಶ್ರೀ ಯು.ಬಿ. ವೆಂಕಟೇಶ್** (ನಾಮ ನಿರ್ದೇಶನವನ್ನು ಹೊಂದಿದವರು):– ಎಲ್ಲಾ ಪ್ಯಾಕೇಜ್‌ಗಳು ವಿಫಲವಾಗಿವೆ. ನಿಮ್ಮ ಇಪ್ಪತ್ತು ಲಕ್ಷ ಕೋಟಿ ಪ್ಯಾಕೇಜ್‌ಗಳು ಫೇಲ್ ಆಗಿವೆ. ಸುಮ್ಮನೆ ಅದನ್ನೆಲ್ಲಾ ಏತಕ್ಕೆ ಹೇಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ರವಿಕುಮಾರ್:-** ಈ ವಿಷಯದಲ್ಲಿ ಬಹಳ ಸವಾಲಾಗಿ ಚರ್ಚೆ ಮಾಡುವಂತಹದ್ದು ... **(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಈಗ ಇಲ್ಲಿ ಚರ್ಚೆ ಮಾಡುತ್ತಿರುವುದು **(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಚಿವರೇ ಮಾತನಾಡಿ.

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:-** ನಿಮಗೆ ಕೈ ಮುಗಿಯುತ್ತೇನೆ. ಬಡವರು ಸಾಯುತ್ತಾರೆ. ದಯವಿಟ್ಟು, ಮಾನ್ಯ ಸಚಿವರೇ ತಮಗೆ ಪುಣ್ಯ ಬರುತ್ತದೆ. ತಿಂಗಳಿಗೆ ಐದಾರು ಸಾವಿರ ರೂಪಾಯಿಗಳ ಅದಾಯದಲ್ಲಿ ಜೀವನ ಮಾಡುವವರು ಸಾವಿರಾರು ಜನರಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಬಾಡಿಗೆ ಬರುವಂತಹವರು ಕಡಿಮೆ ಜನರಿದ್ದಾರೆ. ಬಡವರಿದ್ದಾರೆ, ಅವರಿಗೆ ತಾವು ಕನಿಕರ ತೋರಿಸಿ. ಆರು ತಿಂಗಳು ಬಿಡುತ್ತೇವೆಂದು ಹೇಳಿದರೆ, ತಮಗೇನೂ ಲುಕ್ಸಾನು ಆಗುವುದಿಲ್ಲ. ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಕೋಟ್ಯಂತರ ರೂಪಾಯಿಗಳಿಗೆ, ಮೂವತ್ತು-ನಲವತ್ತು ಸಾವಿರ ಕೋಟಿ ರೂಪಾಯಿಗಳ ತೆರಿಗೆಯನ್ನು ಬಿಡುತ್ತೀರಿ. ಈ ಬಡವರಿಗೆ ಏಕೆ ತೊಂದರೆ ಕೊಡುತ್ತೀದ್ದೀರಿ?

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಈಗ ಪ್ರತಿ ಐದು ವರ್ಷಕ್ಕೊಮ್ಮೆ ತೆರಿಗೆಯನ್ನು ಹೆಚ್ಚಳ ಮಾಡದಿದ್ದರೆ, ಕೇಂದ್ರ ಸರ್ಕಾರದಿಂದ ಬರುವಂತಹ matching grant ಲ್ಲಿಯೂ ಕೂಡ ನಮಗೆ ಕೊಡಲ್ಲ. ಹಾಗಾಗಿ ದಯವಿಟ್ಟು, ಇವತ್ತು ಕೇಂದ್ರ ಸರ್ಕಾರದಿಂದ ಏನೇನು ಅನುದಾನಗಳು ಬರುತ್ತಿದೆ. ಆ ಅನುದಾನಗಳೆಲ್ಲವೂ ಕೂಡ ನಿಂತು ಹೋಗುತ್ತದೆ. ಹಾಗಾಗಿ ತಂದಿರುವಂತಹ ಈ ವಿಧೇಯಕವನ್ನು ದಯವಿಟ್ಟು ಸದನ ಒಪ್ಪಿಗೆ ಕೊಡಬೇಕು. ಇದರಲ್ಲಿ ಅಭಿವೃದ್ಧಿ ಕೂಡ ಇದೆ. ನಾವು ಈ ತೆರಿಗೆಯನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಆ ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಅಭಿವೃದ್ಧಿಗಳಿಗೆ ಅದನ್ನು ವಿನಿಯೋಗ ಮಾಡಿಕೊಳ್ಳುವಂತಹದ್ದು. ಇದನ್ನು ಎಲ್ಲಿಗೆ ತೆಗೆದುಕೊಂಡು ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:-** ಮನೆಗೆ ತೆಗೆದುಕೊಂಡು ಹೋಗಿ ಎಂದು ಹೇಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಐದು ವರ್ಷಕ್ಕೆ ಎಂದು ಕಾಯಿದೆಯಲ್ಲಿ ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ಈಗ ಎಲ್ಲಿಂದ ತರುತ್ತೀರಿ. ಬಾಡಿಗೆ ಬಂದರೆ, ತೆರಿಗೆಯನ್ನು ಕಟ್ಟುತ್ತಾನೆ. ಬಾಡಿಗೆ ಬರದೇ ಹೋದರೆ, ಎಲ್ಲಿಂದ ತರುತ್ತಾನೆ?

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:–** ಈಗಾಗಲೇ tax collection ಆಗುತ್ತಿದೆ. ಇದು ಕಾಯಿದೆಯಲ್ಲಿ ಇದೆ. ನಾವು ಹೊಸದಾಗಿ ಏನೂ ತಂದಿಲ್ಲ.

**(ಗೊಂದಲ)**

(ಮುಂದು)

(209)08.02.2021/12.20/ಎಂ.ಎಂ–ಎಂ.ಡಿ

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಮೂಲಭೂತವಾಗಿ ಕೇಳಿರುವ ವಿವರಗಳಿಗೆ ವಿವರಣೆ ಕೊಟ್ಟಿಲ್ಲ. ಅವರು ಕೊಟ್ಟಿರುವ ವಿವರಣೆ ತಮಗೆ ತೃಪ್ತಿಕರವಾಗಿದೆಯೆಂದು . . .

**ಹಂಗಾಮಿ ಸಭಾಪತಿಯವರು:–** ಮಾನ್ಯ ಸಚಿವರೇ, ವಿವರಣೆ ನೀಡಿ.

**ಶ್ರೀ ಎನ್. ನಾಗರಾಜ್** [ಎಂ.ಟಿ.ಬಿ] **(ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಬಹಳಷ್ಟು ಮಾನ್ಯ ಗೌರವಾನ್ವಿತ ಸದಸ್ಯರು ಈ ಸಭೆಯಲ್ಲಿ ಬಹಳ ವಿಚಾರಗಳ ಮೇಲೆ ಚರ್ಚೆ ಮಾಡಿದ್ದಾರೆ. ವಿಧೇಯಕ ಜಾರಿಗೆ ಬಂದ ಒಂದು ತಿಂಗಳಲ್ಲಿ ಆಸ್ತಿ ತೆರಿಗೆಯನ್ನು ಕಟ್ಟಿದ್ದಲ್ಲಿ ಈ ವರ್ಷ ಅವರಿಗೆ ಪೆನಾಲ್ಟಿ ಇರುವುದಿಲ್ಲ. ಆದ್ದರಿಂದ ದಯಮಾಡಿ ಈ ವಿಧೇಯಕವನ್ನು ಅಂಗೀಕಾರ ಮಾಡಬೇಕಾಗಿ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ವಿಧೇಯಕಕ್ಕೆ ಒಪ್ಪಿಗೆ ಕೊಡಿ ಎಂದು ಕೇಳುತ್ತಿದ್ದೀರಲ್ಲಾ ಬಡವರಿಗೆ ಏನನ್ನು ಕೊಡುತ್ತಿದ್ದೀರಿ ಅದನ್ನು ಹೇಳಿ. ದಯವಿಟ್ಟು ಕೊಡಿ.

**ಶ್ರೀ ಎನ್. ನಾಗರಾಜ್** [ಎಂ.ಟಿ.ಬಿ] **(ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಇಲ್ಲಿ ಬಡವರು, ಸಾಹುಕಾರರು ಎನ್ನುವ ಪ್ರಶ್ನೆ ಇಲ್ಲ. ಕಟ್ಟಬೇಕಾಗಿರುವುದನ್ನು ಸರಿಯಾಗಿ ಕಟ್ಟಿದರೆ ತಾನೇ ಮುನಿಸಿಪಾಲಿಟಿ ಅಭಿವೃದ್ಧಿಯಾಗುವುದು. ಇಲ್ಲದಿದ್ದರೆ ಮುನಿಸಿಪಾಲಿಟಿ ಅಭಿವೃದ್ಧಿಯಾಗುವುದು ಹೇಗೆ? ಒಂದು ಕಡೆ ಅಭಿವೃದ್ಧಿಯಾಗಿಲ್ಲ ಎಂದು ಹೇಳುತ್ತೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಮೂರು ಜನ ಸಚಿವರು ಉತ್ತರ ಕೊಡುತ್ತಿದ್ದಾರೆ. ಇಷ್ಟೊಂದು confusion ಇದೆ

(ಗೊಂದಲ)

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

(ಗೊಂದಲ)

**(ಈ ಹಂತದಲ್ಲಿ ಸರ್ಕಾರದ ನಡವಳಿಕೆಯನ್ನು ಪ್ರತಿಭಟಿಸಿ ಮಾನ್ಯ ಸದಸ್ಯರುಗಳಾದ ಶ್ರೀ ಹೆಚ್.ಎಂ. ರಮೇಶ ಗೌಡ, ಶ್ರೀ ಎನ್. ಅಪ್ಪಾಜಿಗೌಡ, ಶ್ರೀ ಕೆ.ವಿ. ನಾರಾಯಣಸ್ವಾಮಿ ಮತ್ತು ಶ್ರೀ ಗೋವಿಂದರಾಜು ಇವರುಗಳನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಹಾಗೂ ಉಳಿದ ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಹಂಗಾಮಿ ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಎನ್. ನಾಗರಾಜು[ಎಂ.ಟಿ.ಬಿ] (ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಹಂಗಾಮಿ ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>

## ಆ) ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2021

<u>ಪರ್ಯಾಲೋಚನಾ ಪ್ರಸ್ತಾವ</u>

**ಶ್ರೀ ಎನ್. ನಾಗರಾಜ್ [ಎಂ.ಟಿ.ಬಿ] (ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಹಂಗಾಮಿ ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 5ರವರೆಗೆ**

**ಹಂಗಾಮಿ ಸಭಾಪತಿಯವರು:–** "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್. ನಾಗರಾಜು[ಎಂ.ಟಿ.ಬಿ] (ಪೌರಾಡಳಿತ ಮತ್ತು ಕಬ್ಬು ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಸದನದಿಂದ ಸಭಾತ್ಯಾಗ ಮಾಡಿದ್ದ ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಹಾಗೂ ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನಕ್ಕೆ ಆಗಮಿಸಿದರು)**

## ಇ) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2021

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಹಾನಗರಪಾಲಿಕೆಗಳಲ್ಲಿ ಆರ್ಥಿಕವಾಗಿ ಸದೃಢವಾಗಬೇಕಾದರೆ, ರಾಜ್ಯ ಸರ್ಕಾರದ ಅನುದಾನದ ಮೇಲೆ ಅವಲಂಬಿತವಾಗಬೇಕಾದರೆ ಕ್ರಮೇಣವಾಗಿ ಸದುದ್ದೇಶದಿಂದ ಸಾರ್ವಜನಿಕರಿಗೂ ಸಹ ಹೆಚ್ಚಿನ ಆರ್ಥಿಕ ಹೊರೆ ಆಗಬಾರದೆಂಬುದನ್ನು ಗಮನದಲ್ಲಿಟ್ಟುಕೊಂಡು ಮಾರುಕಟ್ಟೆ ಮಾರ್ಗಸೂಚಿಯ ಮೌಲ್ಯಗಳ ಆಧಾರದ ಮೇಲೆ ಆಸ್ತಿ ತೆರಿಗೆಯನ್ನು ವಿಧಿಸಲು ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದು ಮಂಡಿಸಿದ್ದೇನೆ, ಸದನವು ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಆರ್ಥಿಕ ಸಂಪನ್ಮೂಲದ ಅವಶ್ಯಕತೆ ಇದ್ದು ಕಟ್ಟಡಗಳಿಗಿಂತ ಹೆಚ್ಚು ಖಾಲಿ ಸ್ವತ್ತುಗಳು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಹೆಚ್ಚಾಗಿರುವುದರಿಂದ ಅವುಗಳನ್ನು ಸಹ ತೆರಿಗೆಯ ವ್ಯಾಪ್ತಿಯೊಳಗೆ ತರಲಾಗುತ್ತಿದೆ. ಅಲ್ಲಿನ ಆರ್ಥಿಕ ಪರಿಸ್ಥಿತಿಗಳನ್ನು ಕ್ರೋಢೀಕರಣ ಮಾಡಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ಕೊಡಬೇಕಾಗಿರುವುದರಿಂದ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವು ಈ ಕಾಲದಲ್ಲಿ ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯ. ಏಕೆಂದರೆ, ನಿಮ್ಮದು 'Double Engine' ಸರ್ಕಾರವಾಗಿದೆ. ಅಲ್ಲಿ ಕೊಟ್ಟರೆ ಇಲ್ಲಿ ಬರುತ್ತದೆಂದು ನೀವು ಹೇಳುತ್ತೀರಿ. ಆದರೆ pandemic ಬಂದು ಜನರು 09 ತಿಂಗಳುಗಳಿಂದ ಅಂಗಡಿಗಳನ್ನು ಬಾಗಿಲು ಹಾಕಿದ್ದರು. ಯಾರಿಗೂ ಏನೂ ಸಂಪಾದನೆ ಬಂದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಗಡಿ ಇಟ್ಟುಕೊಂಡಿರುವವರು ಮತ್ತು ಕಟ್ಟಡಗಳನ್ನು ಕಟ್ಟಿಕೊಂಡಿರುವವರೆಲ್ಲಾ ಮಣ್ಣು ತಿನ್ನುತ್ತಿದ್ದಾರೆ. ಇನ್ನೂ ಜಾಸ್ತಿ ಮಾಡಬೇಕು; first of all, ಈ ಕಾಯಿದೆಯನ್ನು ಏತಕ್ಕೆ ತರುತ್ತಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ. ಈ ಕಾಯಿದೆ ನಿಮಗೆ ಸಂಬಂಧವೇ ಇಲ್ಲ. ಪುರಸಭೆಗಳು, ನಗರಸಭೆಗಳು ಅಲ್ಲಿನ ವ್ಯವಹಾರಗಳನ್ನು ನೋಡಿಕೊಂಡು ಅವರ ಹಣಕಾಸಿನ ಸ್ಥಿತಿ ಪ್ರಕಾರ ಜಾಸ್ತಿ ಮಾಡಿಕೊಳ್ಳಬೇಕು. ಅವರ ಹಕ್ಕುಗಳನ್ನೆಲ್ಲಾ ನೀವೇಕೆ ಕಿತ್ತುಕೊಳ್ಳುತ್ತಿದ್ದೀರಿ? ಈ ಕಾಯಿದೆಯನ್ನು ಈ ವರ್ಷ ಹಿಂಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಬಹಳ ಅನ್ಯಾಯ. ಈ ವರ್ಷದಲ್ಲಿ ಯಾರೂ ಕಟ್ಟುವುದಕ್ಕೆ ಆಗುವುದಿಲ್ಲ. ಪ್ರತಿ ವರ್ಷ ಶೇ.3ರಷ್ಟು ಆಸ್ತಿ ತೆರಿಗೆ ಹೆಚ್ಚಳವಾಗುವುದು; pandemic ಬಂದಿರುವುದರಿಂದ ಒಂದೆರಡು ವರ್ಷ ವರ್ಷ ಬಿಟ್ಟು ಬಿಡಿ. ಪ್ರಪಂಚದಲ್ಲಿಯೇ ಬಿಡುತ್ತಿದ್ದಾರೆ. ಬೇರೆ ದೇಶಗಳಲ್ಲಿ ಬೇಕಾದಷ್ಟು ಜಾಸ್ತಿ ಕೊಡುತ್ತಾರೆ. ನೀವು ಏನೂ ಕೊಡದೇ, ಇರುವುದನ್ನೂ ಕಿತ್ತುಕೊಳ್ಳುವುದಕ್ಕೆ ಹೋಗುತ್ತಿದ್ದೀರಿ. ಇದರಿಂದ ಜನರು ಬಹಳ ಬೇಜಾರು ಬೀಳುತ್ತಾರೆ ಮತ್ತು ಬಹಳ ಬೈಯ್ದುಕೊಳ್ಳುತ್ತಾರೆ, ಈ ಸರ್ಕಾರಕ್ಕೆ ಕೆಟ್ಟ ಹೆಸರು ಬರಬೇಕೆಂದು ನೀವು ಇಂತಹ ಕಾಯಿದೆಯನ್ನು ತರುತ್ತಿದ್ದೀರಿ. ದಯಮಾಡಿ ಈ ವಿಧೇಯಕವನ್ನು ಹಿಂಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

(210)08-02-2021/ 12-30/ ಕೆಹೆಚ್-ಎಂಡಿ

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ನಗರಪಾಲಿಕೆಗಳ section 108 and 190 (A) ಈ ಎರಡು ಪ್ರಕರಣಗಳನ್ನು ತಿದ್ದುಪಡಿಯಾಗಿ ತರುತ್ತಿದ್ದಾರೆ. ಇದರ ಉದ್ದೇಶವೇನೆಂದರೆ, ಈ tax base ಅನ್ನು refine ಮಾಡುವುದಕ್ಕೆ ಮತ್ತು GDP (Gross Domestic Product) ಅನ್ನು ಹೆಚ್ಚಿಸುವುದಕ್ಕೆ ಈ ವಿಧೇಯಕವನ್ನು ತರುತ್ತಿದ್ದಾರೆ ಎಂದು ನಾನು ಅಂದುಕೊಳ್ಳುತ್ತೇನೆ. ಆದರೆ, ಇವರು enhance ಮಾಡುವುದಕ್ಕೆ ಹೋಗುತ್ತಿದ್ದಾರೆಯಲ್ಲವೇ, ಇದು Self-Assessment Scheme ನಲ್ಲಿ ಇರುತ್ತದೆಯೇ ಎಂಬುದು ಬಹಳ ಮುಖ್ಯವಾದ ಅಂಶವಾಗಿದೆ. ಎರಡನೆಯದು, ಇವತ್ತು ಈ ಒಂದು Karnataka Stamp (Amendment) Act ಕೆಳಗೆ ಇರುವಂತಹ guidelines ಮೇಲೆ ಆಸ್ತಿಯನ್ನು valuation ಮೇಲೆ ತೆಗೆದುಕೊಳ್ಳುತ್ತಿದ್ದಾರೆ. ಇದು ಯಾವ ರೀತಿ ಅನುಕೂಲವಾಗುತ್ತದೋ ಎಂಬುದು ನನಗೆ ಗೊತ್ತಿಲ್ಲ. ನಂತರ ಇದಕ್ಕೆ cap ಹಾಕಿದ್ದಾರೆಯೇ, ಇವರು ಈಗ ಬಹಳಷ್ಟು valuation ಅನ್ನು ತೆಗೆದುಕೊಂಡು ಬಂದಿದ್ದಾರೆ. ಆದರೆ, ಇದನ್ನು ಜನರು ಸ್ನೇಹಪರವಾಗಿ ತೆಗೆದುಕೊಳ್ಳಬೇಕು. ಹಿಂದೆ ನಾವು Self-Assessment Scheme ಎಂದು ತಂದಿದ್ದೇವೆ. ಇಡೀ ದೇಶದಲ್ಲಿ ಮೊದಲನೆಯ ಬಾರಿ ಬೆಂಗಳೂರಿನಲ್ಲಿಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿದ್ದು. ನಾವು ಆಗ Rental Value System ನಿಂದ Capital Value System ಗೆ ತಂದಿದ್ದೇವೆ. ಆದರೆ, ಇವತ್ತಿನ ದಿವಸ Rental Value System ಇಲ್ಲ. ಆದರೆ, ಇವರು Capital Value System ನಲ್ಲಿ you are prevailing on the Stamp Act. Karnataka Stamp Act ನಲ್ಲಿ ಇವರಿಗೆ ಪ್ರತಿ ವರ್ಷ ಏನು ಹೆಚ್ಚಿಗೆ ಮಾಡುತ್ತಾರೆ? ಇವರು ಆ valuation ಅನ್ನು ತೆಗೆದುಕೊಂಡು ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ನಗರ ಪಾಲಿಕೆಗೆ ವರಮಾನ ಜಾಸ್ತಿಯಾಗಬಹುದು. ಇದನ್ನು ಜನರು ಕೊಡುವುದಕ್ಕೆ ತಯಾರು ಇದ್ದಾರೆಯೇ, ಜನರು ಕೊಡುವಂತಹದ್ದಕ್ಕೆ ಅವರಿಗೆ ಸ್ನೇಹಭಾವಿಯಾದಂತಹ ಒಂದು ಒಪ್ಪಿಗೆ ಇದೆಯೇ, ಈ ತೆರಿಗೆಯ ಬಗ್ಗೆ ಅಲ್ಲಿ ಚರ್ಚೆಯಾಗಿದೆಯೇ, ಇವತ್ತಿನ ದಿವಸ ಕರ್ನಾಟಕದಲ್ಲಿ 11 ಪಾಲಿಕೆಗಳು ಇವೆ. ಈ 11 ಪಾಲಿಕೆಗಳಲ್ಲಿಯೂ ಜನರು ಈ ರೀತಿ ಒಂದು ರಚನೆಯನ್ನು ತರುತ್ತಿದ್ದೇವೆ ಎಂದು ಏನಾದರೂ ಚರ್ಚೆ ಮಾಡಿದ್ದಾರೆಯೇ, ಇದನ್ನು ಜನರು ಒಪ್ಪಿಕೊಳ್ಳುವಂತಹದ್ದು ಆಗಬೇಕು. ಹಾಗಾಗಿ, ಇದನ್ನು ಜನರು ಒಪ್ಪಿಕೊಂಡು, ಇದು ನಮಗೆ ಸರಿಯಾಗಿದೆ ಎಂದರೆ ಈ ಅಧಿಕಾರವನ್ನು ಇವರು ಪಾಲಿಕೆಯಲ್ಲಿರುವಂತಹ ಸಭೆಗೆ ಕೊಡಬೇಕು. ಇವತ್ತಿನ ದಿವಸ ಇವರು ಪೂರ್ಣವಾಗಿ ಕಾಯ್ದೆಯನ್ನು ಮಾಡಿಕೊಡುತ್ತಿದ್ದಾರೆ. ಆ ಕಾಯ್ದೆಯನ್ನು ಮಾಡಿ ಕೊಡುವುದರಿಂದ, ಇವರು ಪಾಲಿಕೆಗೆ ಇರುವಂತಹ ಅಧಿಕಾರವನ್ನು ಸಂಪೂರ್ಣವಾಗಿ ನಾಶ ಮಾಡುತ್ತಿದ್ದಾರೆ. ಇದನ್ನೇ ನಾನು ಮೊದಲನೆ ಬಾರಿ ಹೇಳಿದಾಗ ಹೇಳಿದ್ದು. ಇಲ್ಲಿ ಸಂವಿಧಾನಬದ್ಧವಾಗಿ ಯಾವ ಕೆಲಸವನ್ನು ಯಾರು ಮಾಡಬೇಕೆನ್ನುವುದನ್ನು Article 243 of the Constitution ನಲ್ಲಿ ಸ್ಪಷ್ಟವಾಗಿ ಇದೆ. ಇದರ ಬಗ್ಗೆ part 9(A) ನಲ್ಲಿ ತುಂಬಾ ಸ್ಪಷ್ಟವಾಗಿ ಇದೆ. ಅದರಲ್ಲಿ ತೆರಿಗೆಯ ರಚನೆ ಮಾಡುವುದು, ತೆರಿಗೆ ಹಾಕುವಂತಹದ್ದು, ತೆರಿಗೆಯನ್ನು ಹೆಚ್ಚಿಗೆ ಮಾಡುವಂತಹ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕು. ಅವರಿಗೆ ಈ ಅಧಿಕಾರವನ್ನು ಕೊಡುವಾಗ ಇದನ್ನು ಈ ರೀತಿಯಲ್ಲಿಯೇ ಮಾಡಿ, ಹೀಗೆ ಮಾಡಿ ಎಂದು ಕೊಡುತ್ತಿದ್ದಾರೆ. ಇವತ್ತಿನ ದಿವಸ ಇವರು Karnataka Stamp Act ಕೆಳಗೆ ಇರುವಂತಹ valuation ಅನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಜನರು ಒಪ್ಪಿಗೆ ಕೊಡುತ್ತಾರೆಯೇ ಎಂಬುದು ಬಹಳ ಮುಖ್ಯವಾದ ಅಂಶವಾಗಿದೆ. ಇವರು ಇದರ ಬಗ್ಗೆ exercise ಮಾಡಿದ್ದಾರೆಯೇ ಎನ್ನುವ ಬಗ್ಗೆ ದಯವಿಟ್ಟು ಉತ್ತರವನ್ನು ಕೊಡಲಿ. ನಂತರ ನಾನು ಮಾತನಾಡುತ್ತೇನೆ.

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ ತಿದ್ದುಪಡಿ ಕಾಯ್ದೆ ಪ್ರಕಾರ ಮೂರರಿಂದ ಐದು ವರ್ಷಕ್ಕೆ ಒಂದು ಬಾರಿ ತೆರಿಗೆಯನ್ನು ಹೆಚ್ಚಳ ಮಾಡುತ್ತಿದ್ದೇವೆ. ಇದನ್ನು ಹೊಸದಾಗಿ ಇವತ್ತು ಅಧಿಕಾರಕ್ಕೆ ಬಂದು ಮಾಡುತ್ತಿರುವಂತಹದ್ದು ಅಲ್ಲ. ಇದನ್ನು ಹಿಂದಿನ ಸರ್ಕಾರಗಳು ಮಾಡಿಕೊಂಡು ಬಂದಿದೆ. ಇದನ್ನು ನಾವು ಹೊಸದಾಗಿ ಮಾಡುವುದಾದರೆ, ಹೌದು, ನಾವು ಹೊಸದಾಗಿ ಮಾಡುತ್ತಿದ್ದೇವೆ ಎಂದು ಹೇಳಬಹುದಾಗಿತ್ತು. ಇದಕ್ಕಿಂತ ಮೊದಲು ಏನು ತಿದ್ದುಪಡಿ ಇತ್ತು ಎಂದರೆ, ಇಲ್ಲಿಯವರೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2005-06ರ ಮಾರುಕಟ್ಟೆಯ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಈಗ ಸರ್ಕಾರ ತಂದಿರುವ ತಿದ್ದುಪಡಿ ವಿಧೇಯಕದ ವಿವರವೇನೆಂದರೆ, ಮೊದಲನೆಯದು, ಇವತ್ತಿನ ದಿವಸ ಈ ತಿದ್ದುಪಡಿಯ ನಂತರ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ತೆರಿಗೆಗಳನ್ನು ನಾವು ವಿಧಿಸುತ್ತಿದ್ದೇವೆ. ಹಾಗಾಗಿ, ಇದಲ್ಲದೇ ಹಿಂದೆ ಇದ್ದಂತಹ 2005-06ರ ಮಾರುಕಟ್ಟೆ ಮಾರ್ಗಸೂಚಿ ಬೆಲೆ ಶೇಕಡಾ 50 ರಷ್ಟು ಪರಿಗಣಿಸಲಾಗುತ್ತಿತ್ತು. ಎರಡನೆಯದು, ಇವತ್ತಿನ ದಿವಸ ಈಗ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಶೇಕಡಾ 25 ರಷ್ಟು ಮಾತ್ರ ನಾವು ಪರಿಗಣಿಸುತ್ತಿದ್ದೇವೆ. ಇದಲ್ಲದೇ, ಮೂರನೆಯದು ಪ್ರತಿ 3 ವರ್ಷಕ್ಕೊಮ್ಮೆ ಆಸ್ತಿಯ ಮೂಲ ಬೆಲೆಯ ಕನಿಷ್ಠ ಶೇಕಡಾ 15ಕ್ಕೆ ಕಡಿಮೆ ಇಲ್ಲದಂತೆ ಹೆಚ್ಚಳ ಮಾಡಲಾಗುತ್ತಿತ್ತು. ಈಗ, ಮಾರುಕಟ್ಟೆಯ ಮಾರ್ಗಸೂಚಿ ಬೆಲೆಯ ಪರಿಷ್ಕರಣೆ ಮಾಡದಿರುವ ವರ್ಷದಲ್ಲಿ ಕನಿಷ್ಠ ಶೇಕಡಾ 3 ಕ್ಕಿಂತ ಕಡಿಮೆ ಇಲ್ಲದಂತೆ, ಗರಿಷ್ಠ ಶೇಕಡಾ 5 ಕ್ಕಿಂತ ಹೆಚ್ಚು ಇಲ್ಲದಂತೆ ನಾವು ಹೆಚ್ಚಳ ಮಾಡುತ್ತಿದ್ದೇವೆ. ನಾಲ್ಕನೆಯದು, ವಾಸದ ಕಟ್ಟಡ ಮೂಲ ಬೆಲೆ ಕನಿಷ್ಠ ಶೇಕಡಾ 0.3 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಠ ಶೇಕಡಾ 1.0 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಈಗ ವಾಸದ ಕಟ್ಟಡ ಮಾರುಕಟ್ಟೆಯ ಮೂಲ ಬೆಲೆಯ ಕನಿಷ್ಠ ಶೇಕಡಾ 0.2 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಠ ಶೇಕಡಾ 1.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ತೆರಿಗೆಯನ್ನು ವಿಧಿಸಲಾಗುತ್ತಿದೆ. ಖಾಲಿ ನಿವೇಶನದ ವಿಸ್ತೀರ್ಣಕ್ಕೆ ಅನುಗುಣವಾಗಿ ಮೂರು ರೀತಿಯ ತೆರಿಗೆಗಳನ್ನು ವಿಧಿಸುತ್ತಿದ್ದೇವೆ. ಅದರಲ್ಲಿ ಮೊದಲನೆಯದು ಒಂದು ಸಾವಿರ ಚದರ ಮೀಟರ್‌ಗಿಂತ ಹೆಚ್ಚಿಲ್ಲದ ಭೂಮಿಗೆ, ಎರಡನೆಯದು ಒಂದು ಸಾವಿರ ಚದರ ಮೀಟರ್‌ಗಿಂತ ಹೆಚ್ಚು ಆದರೆ ನಾಲ್ಕು ಸಾವಿರ ಚದರ ಮೀಟರ್‌ಗಿಂತ ಹೆಚ್ಚಿಲ್ಲದ ಅಳತೆಯ ಭೂಮಿಗೆ, ಮೂರನೆಯದು, ನಾಲ್ಕು ಸಾವಿರ ಚದರ ಮೀಟರ್‌ಗಿಂತ ಹೆಚ್ಚಿನ ಅಳತೆಯ ಭೂಮಿಗೆ ಎಂದು ಈ ಮೂರು ರೀತಿಯಲ್ಲಿ ತೆರಿಗೆಗಳನ್ನು ವಿಧಿಸುತ್ತಿದ್ದೇವೆ. ಖಾಲಿ ನಿವೇಶನ ಭೂಮಿ ಮೂಲ ಬೆಲೆಯ ರೀತಿಯಲ್ಲಿ ತೆರಿಗೆ ವಿಧಿಸಲು ಕನಿಷ್ಠ ಶೇಕಡಾ 0.2 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಠ ಶೇಕಡಾ 0.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ತೆರಿಗೆಯನ್ನು ನಿಗದಿಪಡಿಸಲಾಗುತ್ತಿದೆ. ಅದಲ್ಲದೆ, ಕಳೆದ ಬಾರಿ ಕಟ್ಟಡಕ್ಕೆ ಹೊಂದಿಕೊಂಡಿರುವಂತಹ ಖಾಲಿ ನಿವೇಶನಕ್ಕೆ ತೆರಿಗೆ ವಿನಾಯಿತಿ ಇತ್ತು. ಈಗ ಒಂದು ಸಾವಿರ ಚದರ ಅಡಿಗಳಿಗಿಂತ ಹೆಚ್ಚಿನ ಅಳತೆಯ ಕಟ್ಟಡಗಳ ಖಾಲಿ ನಿವೇಶನಗಳಿಗೆ ತೆರಿಗೆಯನ್ನು ವಿಧಿಸಲು ಅವಕಾಶ ಕಲ್ಪಿಸುತ್ತಿದ್ದೇವೆ. ಇದಲ್ಲದೇ, ಇದು Special Self-Assessment Scheme ಗೂ ಕೂಡ ಅನ್ವಯವಾಗುತ್ತದೆ. ಈ ಎಲ್ಲಾ ವಿವರಗಳನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಈ ವಿಧೇಯಕಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ) (ಪೌರಾಡಳಿತ ಹಾಗೂ ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, ಒಂದು ನಿಮಿಷ. ಇದರ ಬಗ್ಗೆ ನಾನು ಸ್ಪಷ್ಟೀಕರಣವನ್ನು ತೆಗೆದುಕೊಳ್ಳುತ್ತೇನೆ. ಇವತ್ತಿನ ದಿವಸ ಶೇಕಡಾ 25 ರಷ್ಟು . . .

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, 2005–06ರ ಗೈಡ್‌ಲೈನ್ಸ್ ಪ್ರಕಾರ ತೆಗೆದುಕೊಂಡರೆ, ಈಗ ಶೇಕಡಾ 50 ರಷ್ಟು ಇತ್ತು. ಚಾಲ್ತಿ ಮಾರುಕಟ್ಟೆ ಮಾರ್ಗಸೂಚಿಯ ಮೇರೆಗೆ ಶೇಕಡಾ 25 ರಷ್ಟು . . .

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇವರು guideline value ಮೇಲೆ ತೆಗೆದುಕೊಳ್ಳುತ್ತಾರೆ. Guideline value ಶೇಕಡಾ 50 ರಷ್ಟು ಮಾಡಿದಾಗ, ಒಂದು ನಿವೇಶನಕ್ಕೆ ಒಂದು ಚದರ ಅಡಿಗೆ 500 ರೂಪಾಯಿಗಳು ಇತ್ತು ಎಂದು ಅಂದುಕೊಂಡರೆ, ಇವತ್ತಿನ ದಿವಸ ಅದೇ ಜಾಗ 5000 ರೂಪಾಯಿಗಳು ಆಗಿದೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):–** ಮಾನ್ಯ ಪಿ.ಆರ್.ರಮೇಶ್‌ರವರೇ, . . .

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಒಂದು ನಿಮಿಷ. ಇದರ ಬಗ್ಗೆ ನಾನು ಹೇಳುತ್ತೇನೆ. ಒಂದು ಚದರ ಅಡಿಗೆ 500 ರೂಪಾಯಿಗಳು ಇದ್ದದ್ದು, ಈಗ 5000 ರೂಪಾಯಿಗಳು ಆಗಿದೆ. ಇವತ್ತಿನ ದಿವಸ ಇವರು ಶೇಕಡಾ 25 ರಷ್ಟು ಎಂದರೆ, 500 ರೂಪಾಯಿಗಿಂತ ಜಾಸ್ತಿಯಾಯಿತು. ಆ valuation ಅನ್ನು ತೆಗೆದುಕೊಂಡಾಗ 1200 ರಿಂದ 1250 ರೂಪಾಯಿಗಳಾಯಿತು. 5000 ರೂಪಾಯಿಗೆ ಶೇಕಡಾ 25 ರಷ್ಟು ಎಂದರೆ 1250 ರೂಪಾಯಿಗಳು ಆಗುತ್ತದೆ. ಇವರು ಶೇಕಡಾ 50 ರಷ್ಟು ನಿಗದಿ ಮಾಡಿದಾಗ guideline ನಿವೇಶನದ ದರ ಕೇವಲ 500 ರೂಪಾಯಿಗಳು ಇತ್ತು. ಹಾಗಾಗಿ, ಇವತ್ತಿನ ದಿವಸ ಇದನ್ನು ಮಾಡಿರುವುದನ್ನು ಸರಿದೂಗಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೂ ಕೂಡ ಇದು ಸರಿದೂಗುವುದಿಲ್ಲ. ಇನ್ನು ಹೆಚ್ಚಾಗುತ್ತದೆ. ಹಾಗಾಗಿ, ಇವತ್ತಿನ ದಿವಸ ಮಾನ್ಯ ಸಚಿವರು ಹೇಳಿದ್ದಾರೆಯಲ್ಲವೇ, ಇದಕ್ಕೆ cap ಹಾಕಿದ್ದಾರೆಯೇ, cap ಎಂದರೆ, ಇವರು ಯಾವ ಜನರು ಒಪ್ಪಿಕೊಳ್ಳುತ್ತಾರೆ, ಯಾವುದೋ ಒಂದು 100 ರೂಪಾಯಿಗಳನ್ನು ಕಟ್ಟುತ್ತಿರುತ್ತೇನೆ. ಈ 100 ರೂಪಾಯಿಗಳನ್ನು ಕಟ್ಟುತ್ತಿರುವಂತಹ ಸಮಯದಲ್ಲಿ ಅವನು ಲೆಕ್ಕಚಾರ ಮಾಡಿದರೆ ನನ್ನ ಕಂದಾಯ 10,000 ರೂಪಾಯಿಗಳಾಗುತ್ತದೆ. ಹಾಗಾಗಿ, 100 ರೂಪಾಯಿಗಳ ಕಂದಾಯ ಕಟ್ಟುತ್ತಿರುವವನು, ಅವನು cap ಹಾಕಿ, ಎರಡೂವರೆ ಪಟ್ಟು ಹಣವನ್ನು ಕಟ್ಟಬಹುದೆನ್ನುವ ಒಂದು ಕಾನೂನು ಅನ್ನು ಹಿಂದೆ ನಾವು ಮಾಡಿದ್ದೆವು. ಆ ಎರಡೂವರೆ ಪಟ್ಟು ಎಂದರೆ, 100 ರೂಪಾಯಿಗಳನ್ನು ಕಟ್ಟುತ್ತಿರುವವನು, 250 ರೂಪಾಯಿಗಳನ್ನು ಕಟ್ಟುತ್ತಾನೆ. ಅವನು ಕಾರ್ಪೊರೇಷನ್‌ನವರು ಮಾಡುವುದನ್ನು ಒಪ್ಪಲಿಲ್ಲವೆಂದರೆ ಅವನಿಗೆ ಒಂದು option ಅಷ್ಟೇ. ಅವನ ಕೈಗೆ SAS (Self-Assessment Scheme) ಎಂದು ತಾವು ಹೇಳಿದರಲ್ಲವೇ, SAS ನಲ್ಲಿ ಇಂತಹದ್ದನ್ನು ತರಬೇಕು. ಜನರು ಸ್ನೇಹಪರವಾಗಿ ಇರಬೇಕೆಂದು ನಾನು ಹೇಳಿದೆ. ಈ ವಿಧೇಯಕದಲ್ಲಿ ಜನರಿಗೆ ಸ್ನೇಹಪರವಾಗಿ ತರುವಂತಹ ಅಂಶಗಳು ಏನು ಕಾಣುತ್ತಿಲ್ಲ. ಇವರಿಗೆ ಮುಖ್ಯವಾದದ್ದು ಏನೆಂದರೆ, GDP. ಮತ್ತು property tax and valuation ನಿಂದ GDP

increase ಆಗಬೇಕು. Loans and income generate ಆಗಬೇಕೆಂಬ ಒಂದೇ ಒಂದು ಉದ್ದೇಶದಿಂದ ಜನರ ಮೇಲೆ ಚಪ್ಪಡಿಯನ್ನು ಎಳೆಯುತ್ತಿದ್ದಾರೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಇವರ ಕಾಲದಲ್ಲಿಯೂ ಕೂಡ ಇದನ್ನೇ ಮಾಡಿರುವಂತಹದ್ದು. ಏಕೆಂದರೆ, ಎಲ್ಲೋ ಒಂದು ಕಡೆ GDP ಅನ್ನು ಹೆಚ್ಚಳ ಮಾಡದೇ ಹೋದರೆ, ಕೇಂದ್ರ ಸರ್ಕಾರದಿಂದ ಬರುವಂತಹ ಅನುದಾನಗಳೆಲ್ಲವೂ ಕಡಿತವಾಗುತ್ತದೆ. ಹಾಗಾಗಿ, ಪ್ರತಿ 5 ವರ್ಷಕ್ಕೊಮ್ಮೆ ಇದನ್ನು ಮಾಡಲೇಬೇಕು. ಪ್ರತಿ 5 ವರ್ಷಕ್ಕೊಂದು ಬಾರಿ ಮಾಡಿದಾಗ ಮಾತ್ರ ಕೇಂದ್ರ ಸರ್ಕಾರದಿಂದ ಅನುದಾನಗಳೆಲ್ಲವೂ ಬರುತ್ತದೆ. ಹಾಗಾಗಿ, ಈ ವಿಧೇಯಕವನ್ನು ತಂದಿದ್ದೇವೆ. ಆದ್ದರಿಂದ, ಇದಕ್ಕೆ ಸದನ ಒಪ್ಪಿಗೆಯನ್ನು ಕೊಡಬೇಕು.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಒಂದು ನಿಮಿಷ ಕುಳಿತುಕೊಳ್ಳಿ. ಇವರು ಈ ವಿಧೇಯಕವನ್ನು ತರುವಂತಹ ಉದ್ದೇಶ ಮತ್ತು ಕಾರಣ ಏನೆಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನು ಸರಳೀಕರಣ ಮತ್ತು ಸುಧಾರಣೆ ಮಾಡಬೇಕೆಂದು ತಂದಿದ್ದಾರೆ. ಈಗಾಗಲೇ ಮೂರು ಅಥವಾ ಐದು ವರ್ಷಕ್ಕೊಮ್ಮೆ ಹೆಚ್ಚಿಗೆ ಮಾಡುವಂತಹ ಪ್ರಕ್ರಿಯೆ ಇದೆ. ಆದರೆ, ತಮ್ಮ ಈ ಪ್ರಾವಿಜನ್‌ನಲ್ಲಿ ನಮ್ಮ ಆತಂಕ ಏನಾಗಿದೆ ಎಂದರೆ, ಸೆಕ್ಷನ್ 109 (ಎ) ರ 2ನೇ ಅಂಶದಲ್ಲಿ ಪ್ರತಿ ಹಣಕಾಸು ವರ್ಷದಲ್ಲಿ "ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು". ಎಂದು ಇದೆ.

(ಮುಂದು)

**(211) 08.02.2021/ಎಸ್‌ಪಿಆರ್–ಎಕೆ/12:40**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)**

ನಂತರದ ಖಂಡಿಕೆಯಲ್ಲಿ, 'ನಗರಪಾಲಿಕೆಯು, ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಐದರಷ್ಟರ ಮಟ್ಟಿಗೆ ಅಂಥ ಸ್ವತ್ತು ತೆರಿಗೆಯನ್ನು ಹೆಚ್ಚಿಸಬಹುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳ ಹೆಚ್ಚಳವನ್ನು ಮಾಡಬಹುದು' ಎಂಬುದಾಗಿ ತಿಳಿಸಲಾಗಿದೆ. ಇದರರ್ಥ 3, 5 ವರ್ಷಗಳಿಗೊಮ್ಮೆ ತೆರಿಗೆಯನ್ನು ಪರಿಷ್ಕರಿಸಬಹುದು, ಅದನ್ನು ಬೇಡವೆಂದು ನಾವು ತಿಳಿಸುವುದಿಲ್ಲ ಹಾಗೂ ಅದನ್ನು ಸಹಿಸಿಕೊಳ್ಳಬಹುದು. ಆದರೆ ಪ್ರತಿ ವರ್ಷ ಸರ್ಕಾರವು ಶೇಕಡ 3 ರಿಂದ ಶೇಕಡಾ 5 ವರೆಗೆ ತೆರಿಗೆಯನ್ನು ಹೆಚ್ಚಿಸುವುದಾದರೆ, ಇದರರ್ಥ ಏನು?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ಅಂಶವು ವಿಧೇಯಕದಲ್ಲಿದೆ. ಇದರ ಬಗೆಗಿನ ಇರುವ ಎಲ್ಲಾ ಅಂಶಗಳನ್ನು ನಾನು ಓದಿ, ವಿವರಣೆಯನ್ನು ನೀಡಿದ್ದೇನೆ. ಹೀಗಾಗಿ ನಾವು ಇವತ್ತಿನ ದಿವಸ ಮಾರ್ಗಸೂಚಿಯ ಆಧಾರದ ಮೇಲೆ ಮಾಡುತ್ತಿದ್ದೇವೆ. ಕಳೆದ ಬಾರಿ ಅದು ಶೇಕಡಾ 50 ರಷ್ಟಿತ್ತು; ಹಾಲಿ ಅದನ್ನು ಶೇಕಡಾ 25 ರಷ್ಟಕ್ಕೆ ಇಳಿಸಲಾಗಿದೆ. ಹೀಗೆ ಮಾಡಿರುವುದರಿಂದ, . . .

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.) (ಪೌರಾಡಳಿತ ಹಾಗೂ ಕಬ್ಬು ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಶ್ರೀ ಪಿ.ಆರ್.ರಮೇಶ್‌ರವರು ಹೇಳಿರುವ ಅಂಶವು ಸರಿಯಿದೆ. ಈ ಹಿಂದೆ 2005 ನೇ ಸಾಲಿನಲ್ಲಿ ಒಂದು ಚದರಡಿಗೆ 500 ರೂಪಾಯಿಗಳು ಇದ್ದಿದ್ದು, ಇವತ್ತಿನ ದಿವಸ 5,000 ರೂಪಾಯಿಗಳಷ್ಟಾಗಿದೆ. ಹೀಗಾಗಿ ಸ್ವತ್ತಿನ ಮಾಲಿಕರು ವಾಣಿಜ್ಯ ಅಥವಾ ವಸತಿ ಮನೆಗಳನ್ನು ನಿರ್ಮಿಸಿದರೆ ಅವರಿಗೆ ಇವತ್ತಿನ ದಿನದ ಮಾರುಕಟೆಯ ದರದನ್ವಯ ಬಾಡಿಗೆಯು ಬರುತ್ತದೆ. ಇದರರ್ಥ ಅದರ ಮೌಲ್ಯವು ಜಾಸ್ತಿಯಾಯಿತು. ಇದ್ದರಲ್ಲಿ ಯಾವುದೇ ವಸತಿ, ಕೈಗಾರಿಕಾ ಅಥವಾ ವಾಣಿಜ್ಯದ ಉದ್ದೇಶಿತ ಕಟ್ಟಡಗಳನ್ನು ನಿರ್ಮಿಸುವುದರಿಂದಲೂ ಸಹ ಸ್ವತ್ತಿನ ಮಾಲೀಕರಿಗೆ ಬಾಡಿಗೆಯ ಮೊತ್ತವು ಹೆಚ್ಚಾಗುತ್ತದೆ. ಅಲ್ಲಿ ಎರಡು ವರ್ಷಗಳಿಗೊಮ್ಮೆ lock in period ಇರುತ್ತದೆ. ಎಲ್ಲರೂ ಸಹ ಅದನ್ನು ಹೆಚ್ಚುವರಿಯಾಗಿ ಮಾಡಲೇಬೇಕು. ಹೀಗಾಗಿ lock in period ನಲ್ಲಿ ವಸತಿ ಅಥವಾ ವಾಣಿಜ್ಯ ಯಾವುದೇ ಇರಲಿ, ಶೇಕಡಾ 15 ರಷ್ಟು ಏರಿಕೆಯನ್ನು ನಾವು ಮಾಡಲೇಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೊಂದು ಮಾಹಿತಿಯನ್ನು ನೀಡಲಿಚ್ಛಿಸುತ್ತೇನೆ. ಇತ್ತೀಚೆಗೆ ಬಹಳ ಕಟ್ಟಡಗಳು ಬಾಡಿಗೆದಾರರಿಲ್ಲದೇ ಖಾಲಿ ಬಿದ್ದಿವೆ; ಜನರು ಬಾಡಿಗೆಗೆ ಬರುತ್ತಿಲ್ಲ. ಸರ್ಕಾರವು ಈ ರೀತಿಯಾಗಿ ದರವನ್ನು ಹೆಚ್ಚಳ ಮಾಡುತ್ತಾ ಹೋದರೆ, ಕಟ್ಟಡಗಳು ಮತ್ತೂ ಖಾಲಿ ಬೀಳುತ್ತವೆ. ಸರ್ಕಾರವು ಪ್ರತಿ ವರ್ಷವೂ ದರವನ್ನು ಹೆಚ್ಚಿಸುತ್ತಾ ಹೋದರೆ, ನಾವು ಬಾಡಿಗೆದಾರರಿಗೆ ಪ್ರತಿವರ್ಷವೂ ಬಾಡಿಗೆಯನ್ನು ಹೆಚ್ಚಿಸಿ ಕೊಡು ಎಂದು ಕೇಳುವುದಕ್ಕಾಗುತ್ತದೆಯೇ? ಬಾಡಿಗೆದಾರನು ಮೊದಲು ಬಾಡಿಗೆಗೆ ಬರಬೇಕಲ್ಲವೇ? Enhancing it once in three or five years is tolerable. ಆದರೆ, ಸರ್ಕಾರವು ಪ್ರತಿ ವರ್ಷ ಎಂದು ತಿಳಿಸಿದೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಎಂದು ನಾವು ಮಾಡಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಪ್ರತಿ ವರ್ಷವೂ ತೆರಿಗೆಯನ್ನು ಹೆಚ್ಚಿಸುವುದಿಲ್ಲವೇ?

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಪ್ರತಿ ಮೂರು ವರ್ಷದಿಂದ ಐದು ವರ್ಷದೊಳಗಾಗಿ ಮಾತ್ರವೇ ನಾವು ತೆರಿಗೆಯನ್ನು ಹೆಚ್ಚಿಸುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಿದ್ದಲ್ಲಿ ಸರ್ಕಾರವು ಈ ಅಂಶವನ್ನು ವಿಧೇಯಕದಿಂದ ಕೈಬಿಡಲಿ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಮೂರು ವರ್ಷದಿಂದ ಐದು ವರ್ಷಕ್ಕೆ ನಾವು ತೆರಿಗೆಯನ್ನು ಹೆಚ್ಚಳ ಮಾಡುತ್ತಿದ್ದೇವೆ ಎಂದು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇವೆ. ಹೀಗಾಗಿ ದಯಮಾಡಿ ಪ್ರಸ್ತುತ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ನಾನು ಕೋರುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕದಲ್ಲಿ ತಿಳಿಸಿರುವಂತೆ, 109–ಎ ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು ಎನ್ನುವ ಖಂಡಿಕೆಯ 2ನೇ ಅಂಶದಲ್ಲಿ ‘ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು’ ಎಂಬುದಾಗಿ ನಮೂದಿಸಲಾಗಿದೆ. ಸಚಿವರು ತಿಳಿಸಿದಂತೆ, ಪ್ರತಿ ಮೂರು ವರ್ಷ ಮತ್ತು ಐದು ವರ್ಷಗಳಿಗೆ ಒಮ್ಮೆ ಎಂದು ಹೇಳುವುದಾದರೆ, ಈ ಅಂಶವನ್ನು ವಿಧೇಯಕದಿಂದ ತೆಗೆದುಬಿಡಲಿ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2021 ನ್ನು ಕೋವಿಡ್–19 ನಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಸದುದ್ದೇಶದಿಂದಲೇ ಸಚಿವರು ಮಂಡಿಸಿದ್ದಾರೆ. ಆದರೆ, ಇಲ್ಲಿರುವ ದೊಡ್ಡ ಸಮಸ್ಯೆ ಏನೆಂದರೆ, ಮೊದಲು ಸ್ವತ್ತಿನ ಮೌಲ್ಯವನ್ನು ಸಂಬಂಧಿತ ಉಪ ನೊಂದಣಾಧಿಕಾರಿಗಳು, ಜಿಲ್ಲಾ ನೊಂದಣಾಧಿಕಾರಿಗಳು, ಡೆವಲಪರ್‌ಗಳು ಮತ್ತು ಅಲ್ಲಿನ ಅಸೋಸಿಯೇಷನ್‌ರವರುಗಳು ಶಿಫಾರಸ್ಸು ಮಾಡುತ್ತಿದ್ದರು. ಆದರೆ, ಈಗ Central Valuation Committee ಇದೆ. ಇದಕ್ಕೆ ಕಂದಾಯ ಇಲಾಖೆಯ ಸಚಿವರು ಸಂಬಂಧಪಟ್ಟವರಾಗಿರುತ್ತಾರೆ. ಇವರುಗಳು ಯಾರೂ ಸಹ ಫೀಲ್ಡ್‌ಗೆ ಹೋಗುವುದಿಲ್ಲ. ಇದನ್ನು ನಾನು ಕಳೆದೆರೆಡು ಅಧಿವೇಶನಗಳಿಂದ ಕಂದಾಯ ಸಚಿವರ ಗಮನಕ್ಕೆ ತಂದಿದ್ದೇನೆ. ರೈತರೇ ಜಮೀನಿಗೆ ಒಂದು ಕೋಟಿ ರೂಪಾಯಿಗಳಷ್ಟು ಮೌಲ್ಯವನ್ನು ನೀಡುತ್ತಾರೆ; ಆದರೆ, ಸ್ಟ್ಯಾಂಪ್ ಡ್ಯೂಟಿಯವರು ಅದೇ ಜಮೀನಿಗೆ ಎರಡು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದಾರೆ. Karnataka Stamps Act ನ Guidance Value ಪ್ರಕಾರ ತೆರಿಗೆಯನ್ನು ಸಂಗ್ರಹಿಸುವುದಾಗಿ ಹೇಳಿದ್ದಾರೆ. ಪ್ರತಿ ವರ್ಷ ಸುಮಾರು ಶೇಕಡಾ 15 ರಿಂದ 40 ರಷ್ಟು ಸ್ಟ್ಯಾಂಪ್ ಡ್ಯೂಟಿಯನ್ನು ಹೆಚ್ಚಿಸುತ್ತಾರೆ. ನಗರಾಭಿವೃದ್ಧಿ ಸಚಿವರು ಮತ್ತು ಪೌರಾಡಳಿತ ಸಚಿವರು ಇಬ್ಬರೂ ಸಹ ಬಹಳ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಘಟಾನುಘಟಿಗಳಾಗಿದ್ದಾರೆ. ಇಬ್ಬರಿಗೂ ಸಹ ಕೋವಿಡ್–19 ಸಂಕಷ್ಟದಿಂದಾಗಿ, 'Work from Home' ಎನ್ನುವ ಪರಿಸ್ಥಿತಿ ತಿಳಿದಿದೆ. ಅವರಿಬ್ಬರೂ ಸಹ ಬಹಳ ದೊಡ್ಡ ಶ್ರೀಮಂತರಾಗಿದ್ದಾರೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಪ್ರತಿವರ್ಷ ಶೇಕಡಾ ಮೂರರಷ್ಟು ತೆರಿಗೆಯನ್ನು ಹೆಚ್ಚಿಸುತ್ತದೆ ಎಂದು ವಿರೋಧ ಪಕ್ಷದ ಸದಸ್ಯರು ಹೇಳುತ್ತಿದ್ದಾರೆ, ಆದರೆ ನಿರ್ಮಿಸಿರುವ ಕಟ್ಟಡಕ್ಕೆ ಶೇಕಡಾ ಮೂರರಷ್ಟು depreciation ಇರುತ್ತದೆ. ಹೀಗಾಗಿ ತೆರಿಗೆಯು ಹೆಚ್ಚಳವಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರವು ವಿಧೇಯಕವನ್ನು ಪ್ರಸ್ತಾಪಿಸಿದಾಗ, ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ ತೆರಿಗೆಯನ್ನು ಹೆಚ್ಚಿಸುವುದಾಗಿ ತಿಳಿಸಿದ್ದು, ಒಂದೇ ಒಂದು ನಿಮಿಷ . . .

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಸರ್ಕಾರವು 'ಅಳಿಯ ಅಲ್ಲ; ಮಗಳ ಗಂಡ' ಎನ್ನುವಂತೆ ಹೇಳಿದ್ದಾರೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ನಾವು ಶೇಕಡಾ ಮೂರರಷ್ಟು ಎಂದು ಹೇಳಿದ್ದೇವೆ ಹೊರತು ಮೂರು ವರ್ಷವೆಂದಲ್ಲ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ವಿಧೇಯಕದಲ್ಲಿ every financial year 3% ಹೆಚ್ಚಿಸುವುದಾಗಿ ಸರ್ಕಾರವು ತಿಳಿಸಿದೆ. ನಂತರದಲ್ಲಿ every financial year 5% ಹೆಚ್ಚಿಸುವುದು ಎಂಬುದಾಗಿಯೂ ಸಹ ಸರ್ಕಾರವು ಉಲ್ಲೇಖಿಸಿದೆ. ಈ ಅಂಶದ ಬಗ್ಗೆ ಸರ್ಕಾರಕ್ಕೆ ಗೊಂದಲವಿದೆ. ಸರ್ಕಾರವು ಮೊದಲು ವಿಧೇಯಕವನ್ನು ಪ್ರಸ್ತಾಪಿಸಿದಾಗ, every three years and every five years ಹೆಚ್ಚಿಸುವುದು ಎಂದು ತಿಳಿಸಿತ್ತು. ಆದರೆ ಈಗಿನ ವಿಧೇಯಕದಲ್ಲಿ 'every financial year' ಎಂಬುದಾಗಿ ಇದೆ. ಸರ್ಕಾರವೇ ಇದನ್ನು ಅರ್ಥ ಮಾಡಿಕೊಂಡಿಲ್ಲ. ಹೀಗಾಗಿ ಇದನ್ನು Joint Select Committee ಗೆ ವಹಿಸಿ; ಇದರ ಬಗ್ಗೆ ಚರ್ಚೆಯನ್ನು ಮಾಡಿ, ತೀರ್ಮಾನವನ್ನು ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರವು depreciation ನಿಂದಾಗಿ ತೆರಿಗೆಯು ಕಡಿಮೆಯಾಗುತ್ತದೆ ಎಂಬುದಾಗಿ ತಿಳಿಸಿದೆ. ಆದರೆ, ಸರ್ಕಾರವು valuation hike ಮಾಡುತ್ತದೆ. ಅಲ್ಲಿನ ಬೆಲೆ 100 ರೂಪಾಯಿಗಳಿರುತ್ತದೆ, ಆದರೆ ಸರ್ಕಾರವು ಅದನ್ನು 500 ರೂಪಾಯಿಗಳು ಎಂಬುದಾಗಿ ತಿಳಿಸುತ್ತದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಆ ಕಾರಣಕ್ಕಾಗಿ ಈ ಹಿಂದೆ ಇದ್ದ ಶೇಕಡಾ 50 ರಷ್ಟನ್ನು ಈಗ ಶೇಕಡಾ 25 ರಷ್ಟನ್ನಾಗಿ ಇಳಿಸಲಾಗಿದೆ. ಈ ಬಗ್ಗೆ ಕೂಲಂಕಷವಾದ ವಿವರಣೆಯನ್ನು ನೀಡಲಾಗಿದೆ. ಇದು ಪ್ರತಿವರ್ಷವೂ ನಡೆದುಕೊಂಡು ಬರುತ್ತಿದ್ದು, ನಾವು ಏನೂ ಹೊಸದಾಗಿ ಮಾಡಿಕೊಂಡು ಬಂದಿಲ್ಲ. ತೆರಿಗೆಯು ಹೆಚ್ಚಾದಲ್ಲಿ ಮಾತ್ರವೇ ಕೇಂದ್ರ ಸರ್ಕಾರದ ಅನುದಾನ ಮತ್ತು G.S.D.P (Gross State Domestic Product) ಯ ಶೇಕಡಾ 0.25 ರಷ್ಟು ಹೆಚ್ಚುವರಿ ಸಾಲ ಪಡೆವ ಮಿತಿ ದೊರೆಯುವುದಕ್ಕೆ ಸಾಧ್ಯವಾಗುತ್ತದೆ. ಹೀಗಾಗಿ ಸದನವು ಪ್ರಸ್ತುತ ವಿಧೇಯಕಕ್ಕೆ ಒಪ್ಪಿಗೆಯನ್ನು ನೀಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಪರಿಸ್ಥಿತಿ ತುಂಬಾ ಕಷ್ಟವಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಕೇಂದ್ರವನ್ನು ತೃಪ್ತಿಪಡಿಸುವುದಕ್ಕೋಸ್ಕರ ರಾಜ್ಯ ಸರ್ಕಾರವು ಎಷ್ಟು ಬೇಕಾದರೂ ತೆರಿಗೆಯನ್ನು ವಿಧಿಸಬಹುದೇ?

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ನಮಗೆ ಅನುದಾನಗಳು ಬರುವುದು ಬೇಡವೇ? **(ಗೊಂದಲ)** ಇವತ್ತಿನ ದಿವಸ ಕೇಂದ್ರದಿಂದ ಸಾವಿರಾರು ಕೋಟಿ ರೂಪಾಯಿಗಳಷ್ಟು ಅನುದಾನಗಳು ನಗರ ಪಾಲಿಕೆಗಳಿಗೆ ಬರುತ್ತಿದೆ. ಅವುಗಳೆಲ್ಲವನ್ನೂ ಬಿಟ್ಟು ಬಿಡುವುದಕ್ಕಾಗುತ್ತದೆಯೇ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ನಮಗೇನೂ ಭಿಕ್ಷೆಯನ್ನು ನೀಡುತ್ತಿಲ್ಲ. **(ಗೊಂದಲ)** ಸಚಿವರು 'ನಾವು ತೆರಿಗೆಯನ್ನು ಹೆಚ್ಚಳ ಮಾಡದಿದ್ದರೆ ಕೇಂದ್ರದಿಂದ ಅನುದಾನ ಬರುವುದಿಲ್ಲ' ಎಂಬ ಮಾತನ್ನು ಪದೇ ಪದೇಯಾಗಿ ಮೂರನೆಯ ಬಾರಿಗೆ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, G.D.P (Gross Domestic Product) ಇದ್ದರೆ ಮಾತ್ರ ಅನುದಾನಗಳು ಬರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಜಿ.ಡಿ.ಪಿ. ಇಲ್ಲದಿದ್ದರೂ ಸಹ ಕೇಂದ್ರದ ಅನುದಾನಗಳು ಬರುತ್ತವೆ. ಸರ್ಕಾರವು ಬಡವರಿಗೆ ಸಹಾಯವನ್ನು ಮಾಡುತ್ತಿಲ್ಲ. **(ಗೊಂದಲ)** ಸಂಗ್ರಹಿಸಿದ ಮೊತ್ತ, ತೆರಿಗೆ ಮತ್ತು G.S.T.(Goods and Services Tax) ನಮಗೆ ವಾಪಸ್ಸು ಬಂದಿವೆಯೇ? **(ಗೊಂದಲ)** ಸರ್ಕಾರವು ಸುಮ್ಮನೆ ಹೇಳುತ್ತದೆ.

**ಹಂಗಾಮಿ ಸಭಾಪತಿಯವರು:–** ಸಭಾನಾಯಕರೇ, ತಾವು ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಜಿ.ಎಸ್.ಟಿ.ಯನ್ನು ಪಾವತಿಸಿ, ನಮ್ಮ ಜನರನ್ನು ಏಕೆ ಗೋಳಾಡಿಸುತ್ತದೆ? ಈಗಾಗಲೇ ಸರ್ಕಾರವು ವಿಧಿಸಿರುವ ತೆರಿಗೆಯಿಂದಾಗಿ ನಮಗೆ ಕರೆಂಟ್ ಹೊಡೆಯುತ್ತದೆ. ದಯಮಾಡಿ ಸರ್ಕಾರವು ತಳಮಟ್ಟಕ್ಕೆ ಹೋಗಿ, ಅಲ್ಲಿನ ವಾಸ್ತವಾಂಶಗಳನ್ನು ತೆಗೆದುಕೊಳ್ಳಬೇಕು. ಸರ್ಕಾರದ ತೆರಿಗೆಯು ಬ್ರಹ್ಮಾಂಡದ ಮಟ್ಟಕ್ಕೆ ಹೋಗಿದೆ. ಸರ್ಕಾರವು ಯಾವ ಸುಖಕ್ಕಾಗಿ ಈ ರೀತಿಯ ಕಷ್ಟಗಳನ್ನು ಜನರಿಗೆ ಕೊಡುತ್ತದೆ?

**ಹಂಗಾಮಿ ಸಭಾಪತಿಯವರು:–** ಈಗ ಸಭಾನಾಯಕರು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಟಿ.ಶ್ರೀಕಂಠೇಗೌಡ ಮತ್ತು ಶ್ರೀ ಸಿ.ಎಂ.ಇಬ್ರಾಹಿಂರವರುಗಳು ಹೇಳುತ್ತಿರುವುದು ಎಲ್ಲವೂ ಸತ್ಯವಾಗಿವೆ. ಆದರೆ, ಅವರ ಪಕ್ಷಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ನಡೆಸಿವೆ. ಕಾಲಕಾಲಕ್ಕೆ ಇಂತಹ ವಿಧೇಯಕಗಳನ್ನು ಅನಿವಾರ್ಯವಾಗಿ ಸೀಮಿತಗೊಳಿಸಿ, ಸರ್ಕಾರವು ತರುತ್ತಿರುತ್ತದೆ. ಇಂತಹ ವಿಧೇಯಕಗಳನ್ನು ನಿಮ್ಮ ಸರ್ಕಾರಗಳೂ ಸಹ ತಂದಿವೆ. ದಯಮಾಡಿ, ಪ್ರಸ್ತುತ ವಿಧೇಯಕಕ್ಕೆ ಅನುಮತಿ ನೀಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಆಯಾ ಕಾಲಕ್ಕೆ ತಕ್ಕಂತೆ ಬರುವ ವಿಧೇಯಕಗಳು ಎಲ್ಲಿಯಾದರೂ ಕೊನೆಗೊಳ್ಳಬೇಕು. ಹಣವಿದ್ದರೆ ನೀಡಬಹುದು, ಆದರೆ, ಕೋವಿಡ್–19 ಪರಿಸ್ಥಿತಿಯಿಂದಾಗಿ ಹಣವಿಲ್ಲ. ಅದಕ್ಕಾಗಿ ಈ ವರ್ಷ ತೆರಿಗೆ ಹೆಚ್ಚಳವನ್ನು ಕೈಬಿಡಿ. ಮುಂದಿನ ವರ್ಷ ನೋಡೋಣವೆಂದು ಸರ್ಕಾರವು ಹೇಳಲಿ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮೂರು ವರ್ಷಕ್ಕೆ ತೆರಿಗೆ ಹೆಚ್ಚಳ ಎಂದು ಸರ್ಕಾರವು ತಿಳಿಸಿದೆ. ಶೇಕಡಾ ಮೂರರಷ್ಟು ... **(ಗೊಂದಲ)** ಶೇಕಡಾ 5 ರಷ್ಟು ಹೆಚ್ಚಳ ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:-** ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದು ತುಂಬಾ ಇದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪಾಲಿಕೆಯು ಶೇಕಡಾ 5 ರಷ್ಟು ತೆರಿಗೆ ಹೆಚ್ಚಳ ಮಾಡಬಹುದು. ಅಂದರೆ ಅದು ಅವರ ಅಧಿಕಾರಕ್ಕೆ ಬಿಟ್ಟ ವಿಚಾರವಾಗಿದೆ. ಆದರೆ ಸರ್ಕಾರವು ಒಂದು ವರ್ಷಕ್ಕೊಮ್ಮೆ ತೆರಿಗೆ ಹೆಚ್ಚಳ ಮಾಡಬೇಕೆಂದು ತಿಳಿಸಿದೆ. ಆದರೆ, ಈ ಹಿಂದೆ ಇದು ಮೂರು ಮತ್ತು ಐದು ವರ್ಷಗಳಿಗೆ ಎಂಬುದಾಗಿತ್ತು. ಇದರ ಬಗ್ಗೆ ನಾನು ಪೂರ್ತಿಯಾಗಿ ಹೇಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಶ್ರೀ ಪಿ.ಆರ್.ರಮೇಶ್‌ರವರು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇವತ್ತಿನ ದಿವಸ ತೆರಿಗೆಯನ್ನು ಸಂಗ್ರಹಿಸಿದೇ, ಸರ್ಕಾರವು ಯಾವ ರೀತಿಯಾಗಿ ಆಡಳಿತವನ್ನು ನಡೆಸುವುದಕ್ಕಾಗುತ್ತದೆ?

**(ಮುಂದು)**

(212)/8-2-2021/12-50/ಎಲ್ಎಂ/ಎಕೆ

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಪ್ರತಿ ವರ್ಷ ಯಾರು ಕೊಡುತ್ತಾರೆ. ಇದಕ್ಕೆ ನಾವು ಒಪ್ಪುವುದಿಲ್ಲ. 5 ವರ್ಷಗಳಿಗೆ ಒಮ್ಮೆ ಆಗಬೇಕು.

**ಹಂಗಾಮಿ ಸಭಾಪತಿಯವರು:-** ಬಿಲ್ ಪಾಸ್ ಮಾಡಬೇಕು. ಈಗಾಗಲೆ ಸಾಕಷ್ಟು ಚರ್ಚೆ ಆಗಿದೆ. ಇನ್ನು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವವರು ಬಹಳ ಸದಸ್ಯರು ಇದ್ದಾರೆ. ಆದ್ದರಿಂದ ಬಿಲ್ ಮೇಲಿನ ಚರ್ಚೆಯನ್ನು ಇಲ್ಲಿಗೆ ಸಾಕುಮಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು 'once in three to five years' ಎಂದು ಹೇಳುತ್ತಿದ್ದರು. ಈಗ ಸದನದಲ್ಲಿ ಮೂರು ವರ್ಷಕ್ಕೆ ಅಥವಾ ಐದು ವರ್ಷಕ್ಕೆ ಎಂದು ಹೇಳುತ್ತಿದ್ದಾರೆ. ವಿಧೇಯಕದಲ್ಲಿ clear cut ಆಗಿ ಪ್ರತಿ ಹಣಕಾಸು ವರ್ಷಕ್ಕೆ ಎಂದು ಹೇಳಿದ್ದಾರೆ. ಬಿಲ್ ತೆಗೆದು ನೋಡಿ. ಏಕೆ ಈ ರೀತಿ ಗೊಂದಲ ಉಂಟು ಮಾಡಬೇಕು? ಒಂದು ವಿಧೇಯಕಕ್ಕೆ ಮೂರು ಜನ ಸಚಿವರು ಉತ್ತರ ಕೊಡುತ್ತಾರೆ.

**ಹಂಗಾಮಿ ಸಭಾಪತಿಯವರು:-** ಈ ವಿಧೇಯಕಕ್ಕೆ ಸಂಬಂಧಪಟ್ಟಿರುವ ಇಲಾಖೆಯ ಸಚಿವರು ಉತ್ತರ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ವಿಧೇಯಕ್ಕೆ ಸರ್ಕಾರ ಉತ್ತರ ಕೊಡುತ್ತದೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಪ್ರತಿ ಹಣಕಾಸು ವರ್ಷಕ್ಕೆ 3% ರಷ್ಟು ಆಸ್ತಿ ತೆರಿಗೆಯನ್ನು ಹೆಚ್ಚಳ ಮಾಡತಕ್ಕದು ಎಂದು ಇದೆ. ಮೂರು ವರ್ಷ, ಐದು ವರ್ಷ ಎಂದು ಹೇಳುತ್ತಿದ್ದಾರೆ. ಹಾಗಿದ್ದರೆ ಇದನ್ನು ತೆಗೆದುಬಿಡಿ.

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಗಳೆ, ರಿಜಿಸ್ಟ್ರೇಷನ್ ವ್ಯಾಲ್ಯೂ ಕೆಲವು ಸಾರಿ ಏರಿಕೆಯಾಗುತ್ತದೆ ಕೆಲವು ಸಾರಿ ಕಡಿಮೆಯಾಗುತ್ತದೆ. ಮೂರು ವರ್ಷಕ್ಕೆ 15% ರಿಂದ 30% ಹೆಚ್ಚಳ ಮಾಡಬೇಕಾಗಿತ್ತು. ಆದರೆ ಈಗ ಪ್ರತಿ ವರ್ಷಕ್ಕೆ 3% ರಷ್ಟು ಹೆಚ್ಚಳ ಮಾಡುತ್ತಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಇಷ್ಟೊತ್ತು ಮೂರು ವರ್ಷದಿಂದ ಐದು ವರ್ಷಕ್ಕೆ ಹೆಚ್ಚಳ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಈಗ ಪ್ರತಿ ವರ್ಷ 3% ಆಸ್ತಿ ತೆರಿಗೆ ಹೆಚ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ತುಂಬಾ ಗೊಂದಲವಿದೆ. ಆದ್ದರಿಂದ ಈ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):–** ಇದರಿಂದ ಯಾವುದೆ ಹೊರೆಯಾಗುವುದಿಲ್ಲ. ದಯಮಾಡಿ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**Sri P.R. RAMESH:** Ordinance ಮಾಡಿಬಿಟ್ಟಿದ್ದಿರಾ, ದಬ್ಬಾಳಿಕೆ ಮಾಡುತ್ತಿದ್ದೀರಾ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ದಯಮಾಡಿ ಈ ಬಿಲ್‌ನ್ನು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ನೀವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಈ ತೆರಿಗೆ ನಿಗದಿಗೊಳಿಸುವ ವಿಚಾರದಲ್ಲಿ ಪ್ರತಿ ವರ್ಷ ಪರಿಷ್ಕರಣೆ ಮಾಡಬೇಕು ಎಂದು ವಿಧೇಯಕವನ್ನು ತಂದಿದ್ದಾರೆ. ಇದು ಮೂಲತಃ ಸರಿಯಾದುದಲ್ಲ. ಬಹಳ ವರ್ಷಗಳಿಂದ ಕನಿಷ್ಠ ಮೂರು ವರ್ಷಕ್ಕೆ ಒಮ್ಮೆ ಪರಿಷ್ಕರಣೆ ಮಾಡಬೇಕು ಎಂದು ಇದೆ. ಆದರೆ ಪ್ರತಿ ವರ್ಷ ಪರಿಷ್ಕರಣೆ ಮಾಡಬೇಕೆಂದು ವಿಧೇಯಕವನ್ನು ತಂದಿದ್ದೀರಿ. ಇದು ದೊಡ್ಡ ಭಾರ. ಈಗಾಗಲೆ ಮಾನ್ಯ ಸದಸ್ಯರೆಲ್ಲರೂ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಒಂದು ಸಲಹೆಯನ್ನು ಮಾಡುತ್ತೇನೆ. ಯಾವುದೆ ರಾಜ್ಯದಲ್ಲಿ, ಯಾವುದೆ ದೇಶದಲ್ಲಿ

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆರಿಗೆಯನ್ನು ಪರಿಷ್ಕರಣೆ ಮಾಡುವಂತಹ ಸಂದರ್ಭದಲ್ಲಿ ಆಸ್ತಿ ತೆರಿಗೆ ಇರಬಹುದು, ಯಾವುದೆ ತೆರಿಗೆ ಇರಬಹುದು ತೆರಿಗೆ ಪರಿಷ್ಕರಣೆ ಮಾಡುವಂತಹ ಸಂದರ್ಭದಲ್ಲಿ ಬಹಳ ಚಿಂತನೆಗೆ ಒಳಪಡಿಸಬೇಕು. ಬ್ರಿಟಿಷರ ಕಾಲದಲ್ಲಿರಬಹುದು, ಮೊಗಲರ ಕಾಲದಲ್ಲಿರಬಹುದು, ದೊರೆಗಳ ಕಾಲದಲ್ಲಿಯು ಕರ ನಿರ್ಧಾರ ಮಾಡುವ ಸಮಯದಲ್ಲಿ ಬಡವರ ದೊಡ್ಡ ಶೋಷಣೆಯಾಗಿರುವುದನ್ನು ನಾವು ನೋಡುತ್ತೇವೆ. ಇದರ ಬಗ್ಗೆ ಮಾನ್ಯ ಸಚಿವರು ಪರಿಪೂರ್ಣವಾಗಿ ಅರ್ಥ ಮಾಡಿಕೊಂಡಿರುವುದಿಲ್ಲ ಎಂದು ನಾನು ಭಾವಿಸುತ್ತೇನೆ. ದಯಮಾಡಿ ಮಂತ್ರಿಗಳು ನನ್ನ ಮಾತುಗಳಿಂದ ಬೇಸರ ಮಾಡಿಕೊಳ್ಳಬಾರದು. ಈ ವಿಧೇಯಕವನ್ನು ಆತುರವಾಗಿ ತಂದಿದ್ದೀರಿ. ಈ ಕೋವಿಡ್ ಸಂದರ್ಭದಲ್ಲಿ ದಯಮಾಡಿ ಇದನ್ನು ಮೂರು ವರ್ಷಕ್ಕೆ ಒಂದು ಸಾರಿ ಪರಿಷ್ಕರಣೆ ಮಾಡುವಂತಹ ಪದ್ಧತಿಯನ್ನು ತನ್ನಿ. ಈ ಸರ್ಕಾರದಲ್ಲಿ ತೆರಿಗೆಯನ್ನು ವಿಧಿಸುವಲ್ಲಿ ಯಾವುದೆ ಮಾನದಂಡವನ್ನು ಅನುಸರಿಸುತ್ತಿಲ್ಲ. ಈ ಬಿಜೆಪಿ ಸರ್ಕಾರ ದೇಶದ ಜನರ ಮೇಲೆ ಹೆಚ್ಚು-ಹೆಚ್ಚು ತೆರಿಗೆಯನ್ನು ವಿಧಿಸುತ್ತಿದೆ. ಇದು ವೈಜ್ಞಾನಿಕವಾದ ತೆರಿಗೆಯಲ್ಲ, ಅವೈಜ್ಞಾನಿಕವಾದ ತೆರಿಗೆ. ದಯಮಾಡಿ ಇಂತಹ ವಿಧೇಯಕವನ್ನು ತರುವಾಗ ಪೂರ್ಣಪ್ರಮಾಣದಲ್ಲಿ ವಿಚಾರ ಮಾಡಿ, ತಜ್ಞರ ಜೊತೆಯಲ್ಲಿ ಸಮಾಲೋಚನೆ ಮಾಡಿ ತೆರಿಗೆಯನ್ನು ಪರಿಷ್ಕರಣೆ ಮಾಡುವಂತಹ ಕೆಲಸವನ್ನು ದಯಮಾಡಿ ಮಾಡಿ.

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ಕಳೆದ ವರ್ಷದಲ್ಲಿ ಮೂರು ವರ್ಷಕ್ಕೆ ಒಂದು ಸಾರಿ ತೆರಿಗೆಯನ್ನು ಪರಿಷ್ಕರಣೆ ಮಾಡಲಾಗುತ್ತಿತ್ತು. ಆ ಸಂದರ್ಭದಲ್ಲಿ 15 ರಿಂದ 30% ತೆರಿಗೆಯನ್ನು ಹೆಚ್ಚಳ ಮಾಡಲಾಗುತ್ತಿತ್ತು. ಈಗ ನಾವು ಬರಿ ವರ್ಷಕ್ಕೆ 3% ಮಾಡುತ್ತಿದ್ದೇವೆ.

**ಶ್ರೀ ನಸೀರ್ ಅಹ್ಮದ್:-** ಮೂರು ವರ್ಷಕ್ಕೆ 3% ಮಾಡುತ್ತೀರಾ?

**ಶ್ರೀ ಬಿ.ಎ.ಬಸವರಾಜ:-** ಹಿಂದೆ ಮೂರು ವರ್ಷಕ್ಕೆ 15 ರಿಂದ 30% ತೆರಿಗೆ ಹೆಚ್ಚಳ ಮಾಡಲಾಗುತ್ತಿತ್ತು. ಆದರೆ ಈಗ ಒಂದು ವರ್ಷಕ್ಕೆ 3% ಮಾಡಲಾಗುತ್ತದೆ. ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ವಿಧೇಯಕವನ್ನು ವಿರೋಧಿಸಿ ನಾವು ಸಭಾತಾಗ್ಯ ಮಾಡುತ್ತೇವೆ.

**(ವಿಧೇಯಕವನ್ನು ವಿರೋಧಿಸಿ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಾ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 5 ರವರೆಗೆ**

**ಹಂಗಾಮಿ ಸಭಾಪತಿಯವರು:–** "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**06. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಆಯನೂರು ಮಂಜುನಾಥ್(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮೊನ್ನೆ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ನಾನು ಪ್ರಸ್ತಾಪ ಮಾಡಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ಈಗ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಪ್ರಾರಂಭ ಮಾಡಿದ್ದಾರೆ. ಈಗ ಭೋಜನ ವಿರಾಮವನ್ನು ಯಾವಾಗ ಕೊಡುತ್ತೀರಾ, ಎಷ್ಟು ಗಂಟೆಯವರೆಗೆ ಕುಳಿತುಕೊಳ್ಳಬೇಕು? ಒಂದು ಗಂಟೆಗೆ ಅಥವಾ ಎರಡು ಗಂಟೆಗೆ ಭೋಜನ ವಿರಾಮ ಎಂದು ತಾವು ನಿರ್ಧಿಷ್ಟವಾಗಿ ಹೇಳಬೇಕು.

**ಹಂಗಾಮಿ ಸಭಾಪತಿಯವರು:-** ಮಧ್ಯಾಹ್ನ ಎರಡು ಗಂಟೆವರೆಗೆ ಕುಳಿತುಕೊಳ್ಳೋಣ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ಆಗುವುದಿಲ್ಲ.

**ಹಂಗಾಮಿ ಸಭಾಪತಿಯವರು:-**ಎರಡು ಗಂಟೆಗೆ ಭೋಜನ ವಿರಾಮ ಕೊಡಲಾಗುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಗಳೆ, ಕಾಲಾವಕಾಶದ ಕೊರತೆಯಿಂದಾಗಿ ಇಂದು ಮಾತನಾಡಲು ಅವಕಾಶ ಕೊಡಲಾಗುತ್ತದೆ ಎಂದು ಪೀಠದಿಂದ ಹೇಳಿದರು. ಅದರ ಮುಂದುವರೆದ ಭಾಗವಾಗಿ ತಮ್ಮ ಮುಂದೆ ನಿಂತುಕೊಂಡಿದ್ದೇನೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಪ್ರಸ್ತಾಪ ಮಾಡುವಾಗ ಸಹಜವಾಗಿ ಒಂದು ಪ್ರಶ್ನೆ ನನ್ನ ಮನಸ್ಸಿನಲ್ಲಿ ಬರುತ್ತದೆ. ಅಜೆಂಡಾದಲ್ಲಿ "ರಾಜ್ಯಪಾಲರು ದಯಪಾಲಿಸಿದ ಭಾಷಣ" ಎಂದು ಇದೆ. ಆ ಪದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ವಲ್ಪ ......

**(ಈ ಹಂತದಲ್ಲಿ ವೈಸ್ ಛೇರ್ಮನ್ ಶ್ರೀ ಅಡಗೂರು ಹೆಚ್.ವಿಶ್ವನಾಥ್‌ರವರು ಸಭಾ ಪೀಠವನ್ನು ಅಲಂಕರಿಸಿದರು)**

(ಮುಂದು)

(213)08-02-2021(01-00)ಬಿಎಸ್‌ಡಿ-ಆರ್‌ಎನ್ **(ವೈಸ್ ಛೇರ್ಮನ್‌ರವರು ಪೀಠದಲ್ಲಿ ಉಪಸ್ಥಿತರಿದ್ದರು)**

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ಅಲ್ಲ, ಹಿಂದೆ ಅರಮನೆಯಲ್ಲಿ ಮಹಾರಾಜರು ಏನು ಮಾಡುತ್ತಿದ್ದಾರೆ ಎಂದು ಕೇಳಿದ ಸಂದರ್ಭದಲ್ಲಿ 'ಸ್ವಲ್ಪ ಕುಳಿತುಕೊಳ್ಳಿ, ಸವಾರಿ ನಿದ್ರೆ ಒಪ್ಪಿಸಿಕೊಳ್ಳುತ್ತಿದ್ದಾರೆ' ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದರು. ಆದರೆ ನಿದ್ರೆ ಮಾಡುತ್ತಿದ್ದಾರೆ ಎಂದು ಹೇಳದೇ 'ನಿದ್ರೆ ಒಪ್ಪಿಸಿಕೊಳ್ಳುತ್ತಿದ್ದಾರೆ' ಎಂದು ಹೇಳಿದರು. ಆ ರೀತಿ ಈ ಶಬ್ದ ಸಹ ಆಯಿತು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮನೆಯಲ್ಲಿ, ಅದರಲ್ಲಿಯೂ ಕರ್ನಾಟಕ ವಿಧಾನ ಪರಿಷತ್ತು ಎನ್ನುವ ಮೇಲ್ಮನೆಯಲ್ಲಿ ಆ ಪದ ಪ್ರಯೋಗ ಮಾಡುವಾಗ ಸ್ವಲ್ಪ ಸಂಕೋಚ ಎಂದು ನನಗನಿಸುತ್ತದೆ. ಇದು ಪ್ರಜಾತಂತ್ರ ವಿರೋಧಿಯಾದ ಪದ ಎಂದು ನಾನು ವ್ಯಕ್ತಿಗತವಾಗಿ ಭಾವಿಸುತ್ತೇನೆ. ಸ್ವಾತಂತ್ರ್ಯ ಬಂದು 70 ವರ್ಷಗಳಿಗೂ ಜಾಸ್ತಿಯಾಗಿ ಮೊನ್ನೆ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಿದ್ದೇವೆ. ಆದರೆ ಇನ್ನೂ ಎಲ್ಲೋ ಒಂದು ಕಡೆ ಮಾನಸಿಕ ದಾಸ್ಯದ ಪದ ಪ್ರಯೋಗ ಎಂದು ನಾನು ಭಾವಿಸುತ್ತೇನೆ. ಇದು ಮಾನಸಿಕ ದಾಸ್ಯದ ಪದ ಪ್ರಯೋಗ.

**(ಈ ಹಂತದಲ್ಲಿ ಶ್ರೀ ಸಿ.ಎಂ.ಇಬ್ರಾಹಿಂ ರವರು 'hundred percent' ಎಂದು ಹೇಳುತ್ತಾ ಮಾನ್ಯ ಆಯನೂರು ಮಂಜುನಾಥ್‌ರವರ ಮಾತನ್ನು ಮೇಜು ತಟ್ಟಿ ಸ್ವಾಗತಿಸಿದರು)**

ಸ್ವಾತಂತ್ರ್ಯವನ್ನು ಕೇವಲ ನಮ್ಮ ಚಟುವಟಿಕೆಗಳಿಗೆ ಮಾತ್ರವಲ್ಲದೇ ಸಂಪೂರ್ಣವಾಗಿ ನಮ್ಮ ಎಲ್ಲಾ ವ್ಯವಹಾರಗಳಿಗೆ, ಭಾವನೆಗಳಿಗೆ ಸೇರಿದಂತೆ ಎಲ್ಲದ್ದಕ್ಕೂ ಒಂದು ಚೌಕಟ್ಟಿನಲ್ಲಿ ಸ್ವಾತಂತ್ರ್ಯ ಇರಬೇಕು. ಹಾಗಿರುವಾಗ ಘನತೆವೆತ್ತ, ದಯಪಾಲಿಸಿದ ಭಾಷಣ, ಇವೆರಡು ಪದಗಳು ಸರಿಯಲ್ಲ. ನಮ್ಮ ರಾಜ್ಯಪಾಲರು ಸಂವಿಧಾನದ ಆಶಯ ಮತ್ತು ಕಾನೂನುಗಳ ಬಗ್ಗೆ ಕಾರ್ಯಾಂಗವು ವ್ಯವಹರಿಸುತ್ತಿದೆ ಎಂದು ನೋಡುವುದರಲ್ಲಿ ಪ್ರಮುಖರಾಗಿದ್ದಾರೆ. Head of the Executive. ಆದರೆ ಎರಡು ಸದನಗಳು ಸೇರಿದಾಗ ಏನೋ ಒಂದು ಪದ್ಧತಿ ನಡೆದುಕೊಂಡು ಬಂದಿದೆ, ರಾಜ್ಯಪಾಲರನ್ನು ಕರೆದುಕೊಂಡು ಬರೆದುಕೊಟ್ಟಿದ್ದನ್ನು ಓದಿಸುತ್ತಾರೆ, ಇವೆಲ್ಲವೂ mechanical ಆಗಿ ನಡೆಯುತ್ತಿದೆ. ಅವರು ಶಾಸಕಾಂಗವಲ್ಲ, ಕಾರ್ಯಾಂಗದ ಪ್ರಮುಖರು. ರಾಜ್ಯಪಾಲರಿಗೂ ಜನರಿಗೂ ಸಂಬಂಧವೇ ಇಲ್ಲ!. ಅವರು ಯಾವ ರಾಜ್ಯದ ಪ್ರಮುಖರಾಗಿರುತ್ತಾರೋ, ಸಂವಿಧಾನದ ಹೆಡ್ ಆಗಿರುತ್ತಾರೋ, ಅಲ್ಲಿನ ಜನಜೀವನದ ಪರಿಸ್ಥಿತಿಗಳು ಕೆಲವೊಮ್ಮೆ ಗೊತ್ತಿರುವುದಿಲ್ಲ. ಒಂದು ರೀತಿ ದಂತ ಗೋಪುರದಲ್ಲಿ ವಾಸ ಮಾಡುವ ವ್ಯವಸ್ಥೆ ಎಂದು ನಾನು ಭಾವಿಸುತ್ತೇನೆ. ನಮ್ಮ ರಾಜ್ಯಪಾಲರಿಗೂ ಸಾಮಾನ್ಯ ಜನರಿಗೂ ಯಾವ ಸಂಬಂಧ ಇದೆ? ಅವರಿಗೆ ಜನರ ಕಷ್ಟ-ಸುಖಗಳು ಗೊತ್ತಿವೆಯೇ ಅಥವಾ ಮೊನ್ನೆ ಬಂದ ಪ್ರವಾಹ, ಕೋವಿಡ್ ಬಗ್ಗೆ ಎಷ್ಟು idea ಇದೆ? ಮಾನ್ಯ ಸಚಿವರು ಅವರಿಗೆ ವರದಿ ಕೊಟ್ಟರೆ ಮಾತ್ರ ಮಾಹಿತಿ ಸಿಕ್ಕಿರುತ್ತದೆ. ಆ ರೀತಿ ಜನರ ಮಧ್ಯೆ ಇರುವ ದಂತದ ಗೋಡೆ ಆಗಿದೆ. Iron curtain ಕೂಡ ಇದೆ. ಸಾಮಾನ್ಯ ಜನರು ಅವರನ್ನು ಭೇಟಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಸ್ವಲ್ಪಮಟ್ಟಿಗೆ ಕರ್ನಾಟಕ ರಾಜ್ಯದಲ್ಲಿ ಜನಪರವಾಗಿ, ಜನರಿಗೆ ಬಾಗಿಲು ತೆರೆದ ಇತ್ತೀಚಿನ ರಾಜ್ಯಪಾಲರು ಎಂದರೆ ಶ್ರೀಮತಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಮಾದೇವಿಯವರು ಆಗಿದ್ದಾರೆ. ಹಿಂದೆ ಮಾನ್ಯ ಶೆಟ್ಟರವರೆಲ್ಲರೂ ಇದ್ದರು. ಶ್ರೀಮತಿ ರಮಾದೇವಿರವರು ಸಾರ್ವಜನಿಕರಿಗೆ ಭವನದ ಬಾಗಿಲನ್ನು ತೆರೆದು ಯಾರು ಬೇಕಾದರೂ ಅವರನ್ನು ನೋಡಬಹುದಾಗಿತ್ತು. ಅವರಿಗೆ ಜನರು ಅರ್ಜಿಯನ್ನು ಕೊಟ್ಟಾಗ, ಆ ಅರ್ಜಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಅಥವಾ ಇನ್ನೊಬ್ಬರಿಗೆ ಕಳುಹಿಸಿ, ಕ್ರಮ ತೆಗೆದುಕೊಳ್ಳುವ ಬಗ್ಗೆ ಹೇಳುತ್ತಿದ್ದರು. ಆ ರೀತಿ ಪಾತ್ರ ನಿರ್ವಹಿಸುವ ರಾಜ್ಯಪಾಲರು ಮಾಡುವುದು ಭಾಷಣವೇ ಹೊರತು, ನಮಗೆ ದಯಪಾಲಿಸುವ ಬಹಳ ದೊಡ್ಡ ದಯಾಪರ ಕೆಲಸ ಅಲ್ಲ. ಸಂವಿಧಾನದತ್ತವಾದ ಕಾರಣದಿಂದ, ಸಂವಿಧಾನದತ್ತ ಪರಂಪರೆಗನುಗುಣವಾಗಿ ಅಥವಾ ಶಾಸನ ಸಂಸತ್ತಿನ ಪರಂಪರೆಗನುಗುಣವಾಗಿ ಅವರು ಭಾಷಣ ಮಾಡುತ್ತಾರೆ. ಆದರೆ ಅದು ಸ್ವಯಿಚ್ಛೆಯಿಂದ ಅಲ್ಲ. ಆಡಳಿತ ನಡೆಸುವ ಸರ್ಕಾರದ ಮಂತ್ರಿಮಂಡಲವು ರಾಜ್ಯಪಾಲರು ಏನು ಹೇಳಬೇಕು ಎಂದು ನಿರ್ಧಾರ ಮಾಡಿ ಒಪ್ಪಿಗೆ ನೀಡುತ್ತದೆ. ಅದನ್ನು ರಾಜ್ಯಪಾಲರು ಓದುತ್ತಾರೆಯೇ ಹೊರತು ದಯಪಾಲಿಸುವುದಲ್ಲ! ಆದ್ದರಿಂದ ಮುಂದಿನ ಬಾರಿ ಆ ಪದವನ್ನು ತೆಗೆಯುವುದು ಒಳ್ಳೆಯದು ಎಂದು ನನಗನಿಸುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಅದ್ಭುತವಾಗಿ ಚರ್ಚೆಯನ್ನು ಪ್ರಾರಂಭಿಸಿ, ಪ್ರಸ್ತಾಪಿಸಬೇಕಾದ ವಿಷಯವನ್ನು ಬಹಳ ಮಾರ್ಮಿಕವಾಗಿ ಪ್ರಸ್ತಾಪಿಸುತ್ತಿದ್ದಾರೆ. ನಮ್ಮ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಒಂದು ವಿಚಾರವನ್ನು ಇದಕ್ಕೆ ಸೇರಿಸಬಯಸುತ್ತೇನೆ. ಇಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣ ಎನ್ನುವಂತೆ ನಮ್ಮ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಾಚರಣೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಯಾದ ಎಂ.ಎಲ್.ಎ., ಮತ್ತು ಎಂ.ಎಲ್.ಸಿ., ಕೈಕಟ್ಟಿಕೊಂಡು ಕುಳಿತಿರುತ್ತಾರೆ. ಆದರೆ ತಹಶೀಲ್ದಾರರು ಧ್ವಜಾರೋಹಣ ಮಾಡುತ್ತಾರೆ. ಇದರಲ್ಲಿ ಬ್ರಿಟಿಷ್ ಪಳೆಯುವಳಿಕೆ ಹೇಗೆ ಬಂದಿದೆ ಎಂಬುದನ್ನು ನೋಡಬಹುದು. ಅದೇರೀತಿ ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಚಿವರು ಇಲ್ಲದಿರುವಾಗ ಅಲ್ಲಿನ ಕೇಂದ್ರ ಸ್ಥಾನಿಕ ಶಾಸಕರು ಅಥವಾ ವಿಧಾನ ಪರಿಷತ್ತಿನ ಸದಸ್ಯರು ಕೈಕಟ್ಟಿಕೊಂಡು ಕುಳಿತಿದ್ದರೆ ಜಿಲ್ಲಾಧಿಕಾರಿ flag hoist ಮಾಡುತ್ತಾರೆ. ಇದರ ಜೊತೆಗೆ ಈ ವಿಷಯವೂ ಸೇರಲಿ, ಇದರ ಬಗ್ಗೆ ಬೇಕಾದರೆ ಸದನದಲ್ಲಿ ಒಂದು ನಿರ್ಣಯವನ್ನು ಮಾಡೋಣ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಸಾಂದರ್ಭಿಕವಾಗಿ ನನ್ನ ಭಾವನೆಗಳ ಜೊತೆ ಅವರ ಭಾವನೆಯನ್ನು ಜೋಡಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ 'ಸಂವಿಧಾನ ದಿವಸ' ಎಂದು ಆಚರಿಸುತ್ತಿದ್ದೇವೆ. ಸಂವಿಧಾನದಲ್ಲಿ ಪ್ರಜಾತಂತ್ರ ಎಂದು ಹೇಳುತ್ತೇವೆ. Democratic, Socialistic and Republic ಎಂದು ಹೇಳುತ್ತೇವೆ. ಇವೆಲ್ಲವೂ ಅದಕ್ಕನುಗುಣವಾಗಿ ನಡೆಯಬೇಕು. ಬ್ರಿಟಿಷ್ ಪದ್ಧತಿಯ ಪಳೆಯುಳಿಕೆಯ ಪ್ರತಿನಿಧಿಗಳಂತೆ, ಬ್ರಿಟಿಷ್ ಪದ್ಧತಿಯ ಪಳೆಯುಳಿಕೆಯ ಚಿಹ್ನೆಯಂತೆ ಇನ್ನೂ ನಡೆದುಕೊಂಡು ಬರುತ್ತಿರುವುದರ ಪರಿಣಾಮವೇ ಇದಾಗಿದೆ. ಆದರೆ ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ವಿಚಾರವನ್ನು ಬೇರೆಡೆ ಪ್ರಸ್ತಾಪ ಮಾಡಿದರೆ ಸೊಗಸು ಕಾಣುತ್ತದೋ, ಇಲ್ಲವೋ ಗೊತ್ತಿಲ್ಲ. ಆದರೆ ಅದಕ್ಕಿಂತ ಹೆಚ್ಚಾಗಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಪದ ಪ್ರಯೋಗ ಮಾಡುವುದು ಅಷ್ಟೊಂದು ಸಮಂಜಸವಲ್ಲ. ಏಕೆಂದರೆ ಸ್ವಾತಂತ್ರ್ಯ ಬರುವುದಕ್ಕಿಂತಲೂ ಮುಂಚಿನಿಂದಲೂ ಪ್ರಜಾಪ್ರತಿನಿಧಿ ಸಭೆ ಇತ್ತು. ಇದು ದೇಶದಲ್ಲಿ ಇರಲಿಲ್ಲ. ಆಗ ನಮ್ಮ ರಾಜ–ಮಹಾರಾಜರುಗಳೇ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದರು. ರಾಜರ ಆಳ್ವಿಕೆಯಲ್ಲಿ, ರಾಜರ ಅಧ್ಯಕ್ಷತೆಯಲ್ಲಿ ಇದ್ದಂತಹ ಆ ಸಭೆಗಳಲ್ಲಿ ಕೂಡ ಅವರು ಮಾಡಿದ ಭಾಷಣಕ್ಕೆ ದಯಪಾಲಿಸಿದ ಭಾಷಣ ಎಂಬ ಪದ ಪ್ರಯೋಗ ಆಗಲಿಲ್ಲ. ಸ್ವಾತಂತ್ರ್ಯ ಬರುವವರೆಗೂ ಸಭೆ ಇತ್ತು. ಆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಮಾಜದ ಎಲ್ಲಾ ಕ್ಷೇತ್ರಗಳ ಪ್ರತಿನಿಧಿಗಳಿದ್ದರು, ಶಿಕ್ಷಕರ ಕ್ಷೇತ್ರದ ಪ್ರತಿನಿಧಿಗಳಿದ್ದರು. ಈಗ ಪೀಠದಲ್ಲಿರುವ ಮಾನ್ಯ ವಿಶ್ವನಾಥ್‌ರವರು ಅಧಿಕಾರಿಗಳ ಇಬ್ಬರು ಪ್ರತಿನಿಧಿಗಳು ಇರುತ್ತಿದ್ದರು ಎಂದು ನೆನಪು ಮಾಡಿಕೊಟ್ಟರು. ಅಧಿಕಾರಿಗಳು ಆಡಳಿತದಲ್ಲಿ ಅವರಿಗೆ ಬರುವ ಕಷ್ಟ–ನಷ್ಟಗಳು, ಅವರಿಗೆ ಇರುವ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ಆವತ್ತು ಅವಕಾಶ ಮಾಡಿಕೊಟ್ಟಿದ್ದರು. ರಾಜರ ನೇತೃತ್ವದಲ್ಲಿ ನಡೆಯುವ ಸಭೆಗಳಲ್ಲಿ ಈ ಪದ ಪ್ರಯೋಗ ಆಗಲಿಲ್ಲ, ಈಗ ರಾಜ ವ್ಯವಸ್ಥೆಯನ್ನು ತೆಗೆದುಹಾಕಿದ್ದೇವೆ. ಆದರೆ ಇದ್ಯಾವುದು ಹೊಸ ಮಹಾರಾಜರನ್ನು ಕರೆದುಕೊಂಡು ದಯಪಾಲಿಸಿದ ಭಾಷಣ ಎಂಬ ಪದ ಪ್ರಯೋಗ ಮಾಡುವುದು ಎಷ್ಟು ಸರಿ? ಈಗ ರಾಜ–ಮಹಾರಾಜರ ವ್ಯವಸ್ಥೆ ಇಲ್ಲ. ಮಾನ್ಯ ಇಬ್ರಾಹಿಂ ರವರು 'ಒಪ್ಪಿಸಿಕೊಳ್ಳುತ್ತಾರೆ' ಎಂದು ಹೇಳಿದರು. 'ನಜರಿ' ಎಂದರೆ ಒಪ್ಪಿಸಿಕೊಳ್ಳುವುದು ಎಂದಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಇರುವ ಬಗ್ಗೆ ಗೊತ್ತಿಲ್ಲ. ಆದರೆ ಕೋರ್ಟುಗಳಲ್ಲಿ 'I beg to submit' ಎಂಬ ಪದವನ್ನು ಕೇಳುತ್ತೇವೆ. ಬಹುಶಃ ಬ್ರಿಟಿಷ್ ಪದದ ಪಳೆಯುಳಿಕೆ ಇರಬಹುದೇನೋ? 'My Lord, I beg to submit' ಎಂದು ಹೇಳುತ್ತಾರೆ. 70 ವರ್ಷಗಳು ಕಳೆದರೂ ಈ ಬ್ರಿಟಿಷ್ ಪಳೆಯುಳಿಕೆಗಳನ್ನು ನಾವು ತೆಗೆಯುವುದು ಯಾವಾಗ? ನಮ್ಮ ಹಕ್ಕುಗಳ ಚಲಾವಣೆಗೋಸ್ಕರ ಹೋರಾಟಗಳನ್ನು ಮಾಡುತ್ತಿದ್ದೇವೆ. ಆ ಹೋರಾಟಗಳನ್ನು ಮಾಡುವಾಗ ಈ ವ್ಯವಸ್ಥೆ ಕಡೆಯೂ ಹೋಗಬೇಕು. ಇದು ಸಂವಿಧಾನಕ್ಕೆ ಅಷ್ಟೊಂದು ಸೂಕ್ತವಾಗುವುದಿಲ್ಲವೆಂದು ಸಾಂದರ್ಭಿಕವಾಗಿ ಟೀಕೆಯಲ್ಲ, ಆದರೆ ಒಂದು ಜಿಜ್ಞಾಸೆಗೋಸ್ಕರ ಅಷ್ಟೇ. ಮಾನ್ಯ ಹರಿಪ್ರಸಾದ್, ಮಾನ್ಯ ವಿಶ್ವನಾಥ್, ಡಾ: ತೇಜಸ್ವಿನಿ ಗೌಡ ಹಾಗೂ ನಾನು ಸೇರಿದಂತೆ ಎಲ್ಲರೂ ಪಾರ್ಲಿಮೆಂಟ್‌ನಲ್ಲಿ ಇದ್ದೆವು. ಮೀಸಲಾತಿ ಬಗ್ಗೆ ಹಲವಾರು ಹೋರಾಟಗಳು ನಡೆಯುತ್ತಿವೆ. ಅದಕ್ಕೆ ಸಂವಿಧಾನದಲ್ಲಿ ಅವಕಾಶ ಇದೆ. ಸಮಾನತೆಯನ್ನು ಜಾರಿಗೆ ತರಬೇಕು. Socialistic society ನಿರ್ಮಾಣವಾಗಬೇಕು. ಸಂವಿಧಾನದಲ್ಲಿಯೇ ಮೀಸಲಾತಿ ಇದೆ. ಆ ಮೀಸಲಾತಿಯನ್ನು ಜಾರಿಗೆ ತರುವಾಗ, ಅದರ ತಿದ್ದುಪಡಿಗಳನ್ನು ಮಾಡುವಾಗ ಬಹಳ ಸೂಕ್ಷ್ಮತೆ ಇರಬೇಕು. ಸಮಾಜದ ಎಲ್ಲ ಪದರಗಳ ಸಂಪೂರ್ಣ ಅಧ್ಯಯನದ ಮಾಹಿತಿ ಇಟ್ಟುಕೊಂಡಿರಬೇಕು, ಅದು ಭಾವನಾತ್ಮಕವಲ್ಲ. Texture of the society, ಆ ಸಮಾಜದ ನೇಯ್ಗೆ–ಹೊಯ್ಗೆಗಳನ್ನು ಅರ್ಥಮಾಡಿಕೊಂಡು ಸದೃಢ ಮಾಡುವ ಪ್ರಯೋಗ ಅಂಬೇಡ್ಕರ್ ಕಾಲದಿಂದಲೂ ನಡೆದುಕೊಂಡು ಬಂದಿದೆ. ಹಾಗಾಗಿ ಹಲವಾರು ಹೋರಾಟಗಳು ನಡೆಯುತ್ತಿದ್ದು, ಅದರ ಬಗ್ಗೆ ನನ್ನದೇನೂ ಇಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(214)/08.02.2021/1.10/ಹೆಚ್‌ವಿಃಆರ್‌ಎನ್**

**ಶ್ರೀ ಆಯನೂರು ಮಂಜುನಾಥ್(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ನಾನು ಬೇಕು ಬೇಡಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಆ ಉದ್ದೇಶ ನನಗಿಲ್ಲ. ನನ್ನ ಉದ್ದೇಶವೇನೆಂದರೆ, ಇವತ್ತು ನಮ್ಮ ಪಕ್ಷದ ಸರ್ಕಾರ ಇರಬಹುದು ಹಿಂದೆ ಜೆ.ಡಿ.(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳ ಸರ್ಕಾರವಿರಬಹುದು, ನಿನ್ನೆ ಮಾತ್ರವಲ್ಲ ಹಿಂದೆಯೂ ಸಹ ಮೀಸಲಾತಿಯ ಬಗ್ಗೆ ಹೋರಾಟಗಳು ನಡೆಯುತ್ತಿದ್ದಾಗ, ಜನರು ತಮ್ಮ ಬೇಡಿಕೆಗಳನ್ನು ಸಲ್ಲಿಸುವುದು ಮತ್ತು ಅದಕ್ಕಾಗಿ ಹೋರಾಟ ನಡೆಸುವುದು ಶಾಸನಬದ್ಧ ಮತ್ತು ಸಂವಿಧಾನಬದ್ಧ ಹಕ್ಕಾಗಿದೆ. ಆ ಉದ್ದೇಶದ ಸಮೂಹ ಬಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಬೇಕೇ ಹೊರತು ಸರ್ಕಾರವೇ ಹೋರಾಟ ನಡೆಸಬಾರದು. ಸರ್ಕಾರದ ಮಂತ್ರಿಗಳೇ ಹೋರಾಟವನ್ನು ಪ್ರಾರಂಭ ಮಾಡಿದರೆ, ಜನಸಾಮಾನ್ಯರು ಯಾರಿಗೆ ಹೋಗಿ ಮನವಿಯನ್ನು ಸಲ್ಲಿಸುವುದು? ಇದು ಇವತ್ತು ಮಾತ್ರವಲ್ಲ, ಹಿಂದಿನ ಸರ್ಕಾರಗಳಲ್ಲಿಯೂ ನಡೆದಿದೆ. ಜಾತಿಯ ರಾಗದ್ವೇಷಗಳನ್ನು ಬಿಟ್ಟು ಕೆಲಸ ಮಾಡುತ್ತೇವೆಂದು ಮಂತ್ರಿಗಳು ಪ್ರಮಾಣ ವಚನವನ್ನು ಸ್ವೀಕಾರ ಮಾಡಿರುತ್ತಾರೆ. ಆದ್ದರಿಂದ ಹೋಗಿ ಮನವಿಯನ್ನು ಸ್ವೀಕರಿಸುವುದು ಸರಿಯಾದ ಕ್ರಮವಾಗಿದೆ. 'ಸರ್ಕಾರ ನಿಮ್ಮ ಪರವಾಗಿದೆ, ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ' ಎಂದು ಆ ಸಂದರ್ಭದಲ್ಲಿ ಮಂತ್ರಿಗಳು ಹೋಗಿ ಹೇಳಿಬರಲಿ. ಆದರೆ, ಅವರೇ ಹೋರಾಟದ ಹೆಜ್ಜೆಯನ್ನು ಇಡಬಾರದು. ನಿನ್ನೆಯೂ ಇಂತಹ ಘಟನೆ ನಡೆದಿದೆ, ಹಲವರು ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಇದು ಸಂವಿಧಾನ ವಿರೋಧಿ ಆಗುವುದಿಲ್ಲವೇ? ಇವೆಲ್ಲವೂ ನನ್ನ ತೀರ್ಮಾನಗಳು ಅಥವಾ ಅಭಿಪ್ರಾಯಗಳಲ್ಲ, ಇದು ನನ್ನ ಜಿಜ್ಞಾಸೆಯಾಗಿದೆ. ಆಗ ಸಂವಿಧಾನದ ಅಭಿರಕ್ಷಕರಾದ ರಾಜ್ಯಪಾಲರ ಪಾತ್ರ ಅಲ್ಲಿ ಪ್ರಾರಂಭವಾಗುತ್ತದೆ. ಅವರು ಆಗ ಎರಡು ಸದನಗಳನ್ನುದ್ದೇಶಿಸಿ ಮಾತನಾಡುವುದಕ್ಕೆ ಬರಬೇಕಾಗುತ್ತದೆ. ಈಗ ಏನು ಮಾತಾಗುತ್ತಿದೆ? ಸಂವಿಧಾನದ ಆಶಯಗಳನ್ನು ಮಾನ್ಯ ರಾಜ್ಯಪಾಲರು ಅಲ್ಲಿ ದಯಪಾಲಿಸಬೇಕೇ ಹೊರತು ನಮ್ಮ ಸಭೆಗಲ್ಲ, ಜನ ಪ್ರತಿನಿಧಿಗಳ ಸಭೆಗಲ್ಲ ದಯಪಾಲಿಸುವುದು. ಇದನ್ನು ಯಾರೂ ಟೀಕೆಯಾಗಿ ತೆಗೆದುಕೊಳ್ಳಬಾರದು. ನಾನು ಟೀಕೆಯಾಗಿ ಮಾತನಾಡುತ್ತಿಲ್ಲ ಅಥವಾ ಆ ಮೀಸಲಾತಿಗಳನ್ನು ಪ್ರಶ್ನೆ ಮಾಡುತ್ತಿಲ್ಲ. ಇದು ಮೇಲ್ಮನೆ ಕೇವಲ ತವಡು ಕುಟ್ಟುವಂತಹ ಕೆಲಸ ಮಾಡುವ ಜಾಗ ಅಲ್ಲ. ಸ್ವಾತಂತ್ರಪೂರ್ವದಲ್ಲಿ ಸ್ಥಾಪನೆಯಾದ ಈ ಸದನ, ಈ ದೇಶದ ಹೆಮ್ಮೆಯಾಗಿದೆ. ಇದರಲ್ಲಿ ನಾವು ಸದಸ್ಯರಾಗಿರುವುದು ನಮ್ಮ ಪೂರ್ವಜನ್ಮದ ಪುಣ್ಯವಾಗಿದೆ. ಸ್ವಾತಂತ್ರ್ಯ ಬರುವುದಕ್ಕೂ ಮುಂಚೆ ಹುಟ್ಟಿದ ಸದನದ ಸದಸ್ಯರಾಗಿದ್ದೇವೆ ನಾವು. ಅದರ ಆಶೋತ್ತರಗಳನ್ನು ನೆರವೇರಿಸುವುದು ನಮ್ಮ ಕರ್ತವ್ಯವಾಗಿದೆ. ಸ್ವಾತಂತ್ರ್ಯ ಬರುವುದಕ್ಕೂ ಮೊದಲು ಮಹಾರಾಜರು ಸ್ಥಾಪನೆ ಮಾಡಿದಂತಹ ಈ ಸದನ ಅವತ್ತಿನ ಸಾಮಾಜಿಕ ಕಳಕಳಿ ಏನಿತ್ತು ಎನ್ನುವುದನ್ನು ಅರ್ಥೈಸಿಕೊಳ್ಳುವುದಕ್ಕೆ ನಾವು ಹೊರಟಿದ್ದೇವೆ. ಅದನ್ನು ಮಾತ್ರ ಪ್ರಸ್ತಾಪಿಸುತ್ತಿದ್ದೇನೆ. 'ರಾಜ್ಯಪಾಲರು ದಯಪಾಲಿಸಿದ' ಎನ್ನುವ ಪದಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ ಮತ್ತು ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಂದುವರಿಸುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಆಡಳಿತ ವ್ಯವಸ್ಥೆಯಲ್ಲಿ ಬಹಳಷ್ಟು ಗೊಂದಲಗಳನ್ನು ನಾವು ನೋಡುತ್ತಿದ್ದೇವೆ. ನಾನು ಆಗ ಜನಪ್ರತಿನಿಧಿ ಆಗಿರಲಿಲ್ಲ. ಕಾರ್ಮಿಕ ಮುಖಂಡನಾಗಿದ್ದೆ. ಆ ಸರ್ಕಾರ ಈ ಸರ್ಕಾರ ಎನ್ನುವ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿಲ್ಲ. ಮೊದಲು ಆಡಳಿತ ವ್ಯವಸ್ಥೆ ಸ್ವಲ್ಪ ಬಿಗಿಯಾಗಿದೆಯೆಂದು ಅನಿಸುತ್ತಿತ್ತು. ಅಧಿಕಾರಿಗಳ ಮೇಲೆ ಎಲ್ಲಿಯೂ ಜವಾಬ್ದಾರಿ ಇಲ್ಲದೇ ಇರುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿ ಹೋಗಿದೆ. ಮೊದಲು ವಿಲೇಜ್ ಅಕೌಂಟೆಂಟ್ ನಮ್ಮ ಕೆಲಸ ಮಾಡದಿದ್ದರೆ ಜಿಲ್ಲಾಧಿಕಾರಿಗಳಿಗೆ ಅಥವಾ ಅಸಿಸ್ಟೆಂಟ್ ಕಮೀಶನರ್ ಅವರಿಗೆ ಹೇಳಿದ್ದರೆ ಸಾಕಾಗುತ್ತಿತ್ತು. ಅವರುಗಳು ಆತನನ್ನು ಬದಲಾವಣೆ ಮಾಡುವುದು ಅಥವಾ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದರು. ಈಗ ವಿಲೇಜ್ ಅಕೌಂಟೆಂಟ್ ಅನ್ನು ವರ್ಗಾವಣೆ ಮಾಡುವಂತಹ ಅಧಿಕಾರ ಡೆಪ್ಯುಟಿ ಕಮೀಶನರ್ ಅವರಿಗೇ ಇಲ್ಲ.

**ವೈಸ್ ಛೇರ್ಮನ್:–** ದಫೇದಾರ್, ಪೊಲೀಸ್ ಕಾನ್ಸ್‌ಟೇಬಲ್, ವಿಲೇಜ್ ಅಕೌಂಟೆಂಟ್ ಮತ್ತು ಸಹಕಾರ ಸಂಘಗಳ ಸೆಕ್ರೆಟರಿ ಇವರೆಲ್ಲರನ್ನು ಇವತ್ತು ವಿಧಾನಸಭೆ ಮತ್ತು ವಿಧಾನಸೌಧ ವರ್ಗಾವಣೆ ಮಾಡುತ್ತಿದೆ. ಅಧೀನ ಅಧಿಕಾರಿಗಳಿಗೆ ಯಾರಿಗೂ ಕೆಲಸವಿಲ್ಲದಂತಾಗಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಬರೀ ಭಾಷಣ ಮಾಡುವುದಾಗಬಾರದು. ಇಲ್ಲಿ ಹೇಳುವುದೊಂದು ಹೊರಗಡೆ ಮಾಡುವುದೇ ಬೇರೊಂದು, ಆ ರೀತಿ ಆಗಬಾರದು.

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ಕೆಲವೊಮ್ಮೆ ನಾವು ಬಂದಂತಹ ದಾರಿ ಸರಿ ಇದೆಯೇ ಇಲ್ಲವೋ ಎನ್ನುವ ಕಾರಣಕ್ಕಾಗಿ ಹಿಂದಕ್ಕೆ ತಿರುಗಿ ನೋಡಬೇಕಾಗುತ್ತದೆ. ಸಿಂಹಾವಲೋಕನ ಮಾಡಿಕೊಳ್ಳಬೇಕಾಗಿದೆ. ನಿರಾಸೆ ಆಗಿರುವುದು ಸತ್ಯ ಆದರೆ, ಇದನ್ನು ರಿಪೇರಿ ಮಾಡಬೇಕಾಗಿರುವ ಹೊಣೆಗಾರಿಕೆ ನಮ್ಮದೇ ಆಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಸರಿ ಮಾಡುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ನಾನು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಅನಿಸಿದ ಕೆಲಸಗಳನ್ನು ಕೆಲವೊಮ್ಮೆ ಮಾಡುವುದಕ್ಕೆ ಸಾಧ್ಯವಾಗದಿದ್ದರೆ, ನಮ್ಮ ಆಲೋಚನೆಗಳನ್ನು ಸಾಯಲು ಬಿಡಬಾರದು. ಕೆಲವೊಮ್ಮೆ ಅಸಹಾಯಕತೆಯಿಂದ ಸ್ತಬ್ದಗೊಂಡಿರಬಹುದು. ಆಂತರ್ಯದಲ್ಲಿ ಅದರ ಚಿಗುರು

ಮೊಳಕೆಯೊಡೆಯುತ್ತಲೇ ಇರಬೇಕು. ಯಾವತ್ತೋ ಒಂದು ದಿನ ಅದು ಮರವಾಗುತ್ತದೆ ಎನ್ನುವ ಆಶಾಭಾವನೆ ಇರಬೇಕಾಗುತ್ತದೆ. ನಿರಾಸೆಯಿಂದ ನಮ್ಮ ಆಸೆಗಳು ಸತ್ತು ಹೋದರೆ, ಆ ವ್ಯವಸ್ಥೆ ಪೂರ್ತಿ ಹಾಳಾಗಿ ಹೋಗುತ್ತದೆ. ಮೇಲ್ಮನೆಯಲ್ಲಿ ಇಂತಹ ವಿಚಾರಗಳ ಮೇಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲವಾದರೆ, ಬೇರೆಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿದೆ? ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವವರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಶಿಕ್ಷಕರ ಕ್ಷೇತ್ರದಿಂದ ಮತ್ತು ಪದವೀಧರರ ಕ್ಷೇತ್ರಗಳಿಂದ ಆಯ್ಕೆಯಾಗಿರುವವರು ಮತ್ತು ನಾಮ ನಿರ್ದೇಶನ ಹೊಂದಿರುವವರು ಹೀಗೆ ವಿವಿಧ ಕ್ಷೇತ್ರಗಳಿಂದ ಆಯ್ಕೆಗೊಂಡ ಪ್ರತಿನಿಧಿಗಳಾಗಿ ನಾವುಗಳು ಇಲ್ಲಿಗೆ ಬಂದಿದ್ದೇವೆ. ನಾವು ಇದನ್ನು ಸಂವೇದನಾಶೀಲತೆಯಿಂದ ಆಲೋಚನೆ ಮಾಡಬೇಕೆನ್ನುವುದು ನನ್ನ ಆಶಯವಾಗಿದೆ. ಆ ಆಶಯ ಬಿದ್ದು ಹೋಗಿದೆ. ಆದ್ದರಿಂದ ನಾವು ಪ್ರತಿಯೊಂದಕ್ಕೂ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಬರಬೇಕಾಗಿದೆ. ಒಬ್ಬ ದಫೇದಾರ್‌ನನ್ನು ಎಸ್.ಪಿ. ಏನೂ ಮಾಡುವುದಕ್ಕೆ ಆಗುವುದಿಲ್ಲ. ಒಬ್ಬ ವಿಲೇಜ್ ಅಕೌಂಟೆಂಟ್ ಅನ್ನು ಜಿಲ್ಲಾಧಿಕಾರಿಗಳು ಏನು ಮಾಡುವುದಕ್ಕೂ ಆಗುವುದಿಲ್ಲ. ಇವರುಗಳನ್ನು ವರ್ಗಾವಣೆ ಮಾಡಿದರೆ ಪುನರ್ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ. ನಾನು 1994-95ರಲ್ಲಿ ಸದನದ ಸದಸ್ಯನಾಗಿದ್ದೆ. ಆದರೆ, 1984-85ರಲ್ಲಿಯೇ ಈ ವ್ಯವಸ್ಥೆ ಕೆಟ್ಟು ಹೋಗಿತ್ತು ಎನ್ನುವುದು ನನ್ನ ಅನಿಸಿಕೆಯಾಗಿದೆ. ಸರಿ ಇಲ್ಲದೆಯೂ ಇರಬಹುದು. 1984-85ರ ಹಿಂದೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ವರ್ಗಾವಣೆಯಲ್ಲಿ ಶಾಸಕರು ಕೈ ಹಾಕುತ್ತಿರಲಿಲ್ಲ. ಎಸ್.ಪಿ. ಅವರಿಗೆ ಹೇಳಿದರೆ, ಅವರೇ ಬದಲಾಯಿಸುತ್ತಿದ್ದರು. ಅದೇ ರೀತಿಯಲ್ಲಿ ತಹಸೀಲ್ದಾರ್ ಅವರ ಮೇಲೆ ಜಿಲ್ಲಾಧಿಕಾರಿ ಕ್ರಮ ತೆಗೆದುಕೊಂಡು ಬಿಗಿ ಮಾಡಬಹುದಾಗಿತ್ತು. ಆದರೆ, ಈ ರಾಜ್ಯದಲ್ಲಿನ ಅವತ್ತಿನ ರಾಜಕೀಯ ಕಾರಣಕ್ಕೋಸ್ಕರ 1985ರಲ್ಲಿ 'ಎಲ್ಲವನ್ನು ಶಾಸಕರ ಶಿಫಾರಸ್ಸಿನ ಮೇರೆಗೆ' ಎನ್ನುವ ನಿಯಮವನ್ನು ತರಲಾಯಿತು. ಶಾಸಕ ಹೇಳಿದವನು ಸಬ್ ಇನ್ಸ್‌ಪೆಕ್ಟರ್ ಆಗುತ್ತಾನೆ. ಶಾಸಕ ಹೇಳಿದವನು ವಿಲೇಜ್ ಅಕೌಂಟೆಂಟ್ ಆಗುತ್ತಾನೆ ಮತ್ತು ಶಾಸಕ ಹೇಳಿದವನು ತಹಸೀಲ್ದಾರ್ ಆಗುತ್ತಾನೆ. ಶಾಸಕ ಹೇಳಿದವನು ಪಿ.ಡಿ.ಓ. ಆಗುತ್ತಾನೆ. ಹಾಗಾದರೆ, ಈ ರಾಜ್ಯದ ಕಾರ್ಯಾಂಗವನ್ನು ನಾವೇ ಎಷ್ಟೊಂದು ದುರ್ಬಲಗೊಳಿಸಿದ್ದೇವೆ. ಕೆಲಸ ಆಗದಿದ್ದರೆ ಬಂದು ಸದನದಲ್ಲಿ ಗಲಾಟೆ ಮಾಡುವವರು ನಾವೇ, ಒಂದು ರೀತಿಯಲ್ಲಿ ಶಾಸಕ ಕೇಂದ್ರೀಕೃತ ಅಥವಾ ಮಾಲೀಕತ್ವ ವ್ಯವಸ್ಥೆ ನಿರ್ಮಾಣವಾಗಿದೆ. ನಾವು ಹೇಳಿದರೆ ಮಾತ್ರ ತಹಸೀಲ್ದಾರ್ ಆಗಲೀ ಅಥವಾ ಸಬ್ ಇನ್ಸ್‌ಪೆಕ್ಟರ್ ಆಗಲೀ, ನಾನು ಹೇಳಿದರೆ ಮಾತ್ರ ನನ್ನ ಕ್ಷೇತ್ರಕ್ಕೆ ಬರಬೇಕು ಇಲ್ಲದಿದ್ದರೆ 'ಹೇಗೆ ಬಂದು ರಿಪೋರ್ಟ್ ಮಾಡಿಕೊಂಡೆ' ಎಂದು ಪ್ರಶ್ನೆ ಮಾಡಿರುವುದನ್ನು ನಾವು ಕೇಳಿದ್ದೇವೆ. ಎಸ್.ಪಿ. ಹತ್ತಿರ ರಿಪೋರ್ಟ್ ಮಾಡಿಕೊಂಡೆ ಎಂದರೆ, 'ನನಗೆ ಹೇಳದೇ ನನ್ನ ಕ್ಷೇತ್ರದೊಳಗೆ ನೀನು ಹೇಗೆ ಬಂದೆ' ಎಂದು ಕೇಳುತ್ತಾರೆ. ಇವತ್ತು ಭಾಷೆಯೇ ಬದಲಾಗಿದೆ. ನಾವು ತುಂಬಾ ಕೆಳಗೆ ಜಾರುತ್ತಿದ್ದೇವೆ. ಈ ರೀತಿ ಜಾರುವುದನ್ನು ಎಲ್ಲಾದರೂ ಒಂದು ಕಡೆ ನಿಲ್ಲಿಸಿಕೊಳ್ಳಬೇಕಾಗಿದೆ. ಜಾರುತ್ತಿರುವುದು ನಮಗೆ ಗೊತ್ತಾಗುತ್ತಿದೆ. ಬರೀ ಸಾಂಪ್ರದಾಯಿಕವಾಗಿರುವಂತಹ ಈ ರೀತಿಯ ಕೃತಜ್ಞತಾ ಭಾಷಣಗಳೊಂದಿಗೆ, ಸ್ವಾತಂತ್ರ್ಯ ಬಂದಂತಹ ಸಮಯದಲ್ಲಿ ನಾವು ಯಾವ ರೀತಿಯಲ್ಲಿ ಇರಬೇಕೆಂದು ನಮ್ಮ ಸಂವಿಧಾನದ ಆಶಯವಿತ್ತು ಅವೆಲ್ಲವೂ ಜಾರಿ ಹೋಗುತ್ತಿವೆ. ಬೇರೆ ಸಂದರ್ಭದಲ್ಲಿ ಈ ವಿಚಾರದ ಮೇಲೆ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಅಥವಾ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಮಾತ್ರ ಇಂತಹ ವಿಷಯಗಳ ಮೇಲೆ ನಾವು ಚರ್ಚೆ ಮಾಡಬಹುದೇ ವಿನಃ ಬೇರೆ ಯಾವ ನಿಯಮಗಳಡಿಯಲ್ಲಿಯೂ ನಾವು ಈ ವಿಷಯಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ.

**ವೈಸ್ ಛೇರ್ಮನ್:-** ನಮ್ಮ ನಮ್ಮ ಪಾರ್ಟಿ ಆಫೀಸ್‌ಗಳಲ್ಲೂ ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವಸ್ತುಸ್ಥಿತಿ ಆ ರೀತಿ ಇದೆ.

ಶ್ರೀ **ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ಶಾಸಕರಾಗಿ ಮತ್ತು ಸಂಸದರಾಗಿ ಬಂದವರ ಸಮಸ್ಯೆ ಏನೆಂದರೆ, ಒಂದು ಸಂದರ್ಭದಲ್ಲಿ 'ವಿಪ್'ನ ಅವಶ್ಯಕತೆ ಇರಬಹುದು. ಆದರೆ, ವಿಪ್‌ನಿಂದಾಗಿ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವೇ ಇಲ್ಲದಂತಾಗಿದೆ. ಸರಿತಪ್ಪುಗಳ ಬಗ್ಗೆ ಮಾತನಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾವುದಾದರೊಂದು ಮಸೂದೆ ಸದನದ ಮುಂದೆ ಬಂದಾಗ ವಿರೋಧ ಪಕ್ಷದಲ್ಲಿರುವವರು, ಅದರ ಪರವಾಗಿ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ, ನಾವು ವಿರೋಧವಾಗಿ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. 'ವಿಪ್'ನ ಹೆಸರಿನಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದೇವೆಯೋ ಎನ್ನುವ ಪ್ರಶ್ನೆ ಹಲವಾರು ಬಾರಿ ಬರುತ್ತದೆ.

(ಮುಂದುವರಿದಿದೆ)

(215) 08-02-2021/1.20/ಡಿಎಸ್-ವಿಕೆ

**ಶ್ರೀ ಆಯನೂರು ಮಂಜುನಾಥ್(ಮುಂದು)**

ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವೇ ಇಲ್ಲ. ಹಾಗಾಗಿ ಸ್ವಾತಂತ್ರ್ಯದ ಘನ ಉದ್ದೇಶ, ಸಂವಿಧಾನದ ಘನ ಉದ್ದೇಶ ಎಲ್ಲೋ ಒಂದು ಕಡೆ ತಾಳ-ಮೇಳ ತಪ್ಪಿ ಹೋಗಬಾರದಲ್ಲವೇ? ಅದಕ್ಕೋಸ್ಕರ ನನ್ನ ಅನಿಸಿಕೆಗಳನ್ನು ಸದನದ ಮುಂದೆ ಇಡುತ್ತಿದ್ದೇನೆ. ಇದಕ್ಕೆ ನಾವೆಲ್ಲರೂ ಹೊಣೆಗಾರರಾಗಿದ್ದೇವೆ. ಯಾರೋ ಒಬ್ಬರನ್ನು ಬೆಟ್ಟು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಸೂಕ್ಷ್ಮವಾಗಿ ಆಡಳಿತ ವ್ಯವಸ್ಥೆಯ ಬಗ್ಗೆ ನಾನು ಒಂದೆರಡು ಉದಾಹರಣೆಯನ್ನು ಹೇಳುತ್ತಿದ್ದೇನೆ. ಅದರ ಬಗ್ಗೆಯೇ ದೀರ್ಘವಾಗಿ ಮಾತನಾಡುವುದಕ್ಕೆ ಹೋಗಬಾರದು. ಇಂತಹ ಎಲ್ಲಾ ಸಂಗತಿಗಳು ಬಂದಾಗ ಕಾನೂನು ಮೀರಿದಾಗ ರಾಜ್ಯಪಾಲರ ಅವಶ್ಯಕತೆ ಇದೆ. ಇದರ ಮಧ್ಯೆ 2019ರ ಜೂನ್‌ನಲ್ಲಿ ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂತು. ಮಾನ್ಯ ಯಡಿಯೂರಪ್ಪನವರಿಗೆ ನಾಲ್ಕು ಬಾರಿ ಮುಖ್ಯಮಂತ್ರಿಯಾಗುವ ಯೋಗ ಇದೆ. ಆದರೆ, ಸುಖವಾಗಿರುವ ಯೋಗ ಅವರಿಗೆ ಬಹಳ ಕಡಿಮೆ ಇದೆ. ಎರಡು ಸಲ ಬಹಳ ಅಲ್ಪ ಕಾಲಾವಧಿಯಲ್ಲೇ ರಾಜೀನಾಮೆ ಕೊಡಬೇಕಾಯಿತು. ಮೊದಲನೇ ಬಾರಿಯೂ ಸಂಪೂರ್ಣ ಮಾಡುವುದಕ್ಕಾಗಲಿಲ್ಲ, ಈ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾರಿ ಮುಖ್ಯಮಂತ್ರಿಯಾದಾಗ ಅರ್ಧ ರಾಜ್ಯ ಪ್ರವಾಹ, ಅರ್ಧ ರಾಜ್ಯ ಬರಗಾಲ ಇತ್ತು. ಅವರೊಬ್ಬರೆ ಸಾಂದರ್ಭಿಕ ಓಡಾಟ, ಒಬ್ಬರೇ ಇಡೀ ರಾಜ್ಯವನ್ನು ಸುತ್ತಿಕೊಂಡು ಬಂದು ನಿಭಾಯಿಸಿದರು. ಬಿದ್ದಂತಹ ಮನೆಗಳಿಗೆ, ಪೂರ್ತಿ ನಾಶವಾದಂತಹ ಮನೆಗಳಿಗೆ ಐದು ಲಕ್ಷ ರೂಪಾಯಿಗಳಿಂದ ಹಿಡಿದು ಬೇರೆ ಬೇರೆ ಪರಿಹಾರಗಳನ್ನು ವಿತರಿಸಿ ಬಂದರು. ಶಕ್ತಿ ಮೀರಿ ಪ್ರವಾಹವನ್ನು, ಬರಗಾಲವನ್ನು ಒಟ್ಟೊಟ್ಟಿಗೆ ನಿಭಾಯಿಸಿಕೊಂಡು ಬಂದರು.

ದುರಾದೃಷ್ಟವಶಾತ್ ಪ್ರವಾಹ, ಬರಗಾಲ ಮುಗಿಯುತ್ತಿದ್ದಂತೆಯೇ ಫೆಬ್ರವರಿಗೆ ಇಡೀ ಜಗತ್ತು ಭಯಬೀಳುವಂತಹ ಕೊರೋನಾ ಕಾಯಿಲೆ. ಈ ಕಾಯಿಲೆಯ ಬಗ್ಗೆ ನಾವು ಕೇಳಿರಲಿಲ್ಲ. ಟಿ.ವಿ. ನೋಡುತ್ತಿದ್ದರೆ ಹೊರಗಡೆಯೇ ಹೋಗಬಾರದು ಎಂದು ಅನಿಸುತ್ತಿತ್ತು. ಟಿ.ವಿ.ಯಲ್ಲಿ ಪ್ರಸಾರವಾಗುತ್ತಿದ್ದಂತಹ ಬೇರೆ ಬೇರೆ ಸುದ್ದಿಗಳನ್ನು ನೋಡಿದರೆ ಇನ್ನು ನಾನು ಬದುಕುವುದಕ್ಕಾಗುವುದಿಲ್ಲ, ಕೊರೋನಾ ಬಂದು ಸಾಯುವ ಬದಲು ನಾನೇ ಆತ್ಮಹತ್ಯೆ ಮಾಡಿಕೊಂಡರೆ ಒಳ್ಳೆಯದು ಎಂದು ಅನಿಸುತಿತ್ತು. ಆ ರೀತಿಯ phobia ಒಂದು ರೀತಿಯ ಮಾನಸಿಕ ಒತ್ತಡ ಆಗುತಿತ್ತು. ಕೆಲವರು ಕೊರೋನಾ ಬಂದಿದೆ ಎಂದ ತಕ್ಷಣ ನನಗೇನೋ ಬರಬಾರದು ಬಂದಿದೆ ಎಂದು ಆತ್ಮಹತ್ಯೆ ಮಾಡಿಕೊಂಡವರು ಇದ್ದಾರೆ. ಏಕೆಂದರೆ, ಅದರ ಬಗ್ಗೆ ಔಷಧಿಗಳು ಇಲ್ಲ, ಸಂಶೋಧನೆ ಇಲ್ಲ, ಬದುಕಿಸುತ್ತಾರೆ ಎನ್ನುವ ವಿಶ್ವಾಸ ಇರಲಿಲ್ಲ. ಇಡೀ ಜನಜೀವನ ಸ್ತಬ್ಧವಾಗಿದೆ. ಆಡಳಿತ ಯಂತ್ರವೂ ಸ್ತಬ್ಧವಾಗಿದೆ. ಅಲ್ಲಿಂದ ಎಲ್ಲಿಗೂ ಹೋಗುವುದಕ್ಕೆ ಸಾಧ್ಯವಿಲ್ಲ. ಸಭೆಗಳನ್ನು ಮಾಡುವ ಹಾಗಿಲ್ಲ. ಹೊಸ ರೀತಿಯ ಆಡಳಿತ ವ್ಯವಸ್ಥೆಗೆ ನಾವು switch on ಆದೆವು. ಶಾಲಾ-ಕಾಲೇಜುಗಳಿಗೆ ಹೋಗುವ ಹಾಗಿಲ್ಲ, ಮನೆಯಲ್ಲೇ ಆನ್‌ಲೈನ್ ಕ್ಲಾಸ್‌ಗೆ ಬಂದೆವು. ಇಡೀ ವ್ಯವಸ್ಥೆಯನ್ನೇ ಬದಲಾಯಿಸುವ ಬಹಳ ದೊಡ್ಡ ಕಾಯಿಲೆ ಪ್ರಪಂಚಕ್ಕೂ ಬಂದಿತು, ನಮ್ಮ ದೇಶಕ್ಕೂ ಬಂದಿತು. ಮೊನ್ನೆ ನಾನು ಪ್ರಸ್ತಾಪ ಮಾಡಿದ್ದೆ, ಆಗ ಮಾನ್ಯ ಹರಿಪ್ರಸಾದ್‌ರವರು ಇದ್ದರು ಎಂದು ಕಾಣುತ್ತದೆ. ಮಾನ್ಯ ತಿಮ್ಮಾಪೂರರವರು ಅದನ್ನು ಗಮನಿಸಿ ಒಪ್ಪಿಕೊಂಡರು. ಕೊರೋನಾದಲ್ಲಿ ಶತಶತಮಾನಗಳ ಅಸ್ಪೃಶ್ಯತೆಯ ಗಾಢ ಅನುಭವ ಪಡೆಯುವುದಕ್ಕೆ ನಮಗೆ ಸಾಧ್ಯವಾಯಿತು. ಆ ಅಸ್ಪೃಶ್ಯತೆ ಹೇಗಿರುತ್ತದೆ ಎನ್ನುವ ಕಲ್ಪನೆ ನಮಗೆ ಸಿಕ್ಕಿತು. ನಾನು ಮನೆಯೊಳಗೆ ಇದ್ದರೂ ಕೂಡ ನನ್ನ ಹಂಡತಿ ಮಕ್ಕಳನ್ನು ಮುಟ್ಟುವ ಹಾಗಿಲ್ಲ. ನಾನು ಕುಡಿದಿರುವ ಲೋಟವನ್ನು ಬೇರೊಬ್ಬರು ಮುಟ್ಟುವ ಹಾಗಿಲ್ಲ, ನಾನು ಹಾಕುವ ಬಟ್ಟೆಯನ್ನು ಮುಟ್ಟುವುದಿಲ್ಲ, ನಾನು ಕೈತೊಳೆದ ಸೋಪ್‌ನ್ನು ಮುಟ್ಟುವುದಿಲ್ಲ. ನಾನು ಓಡಾದಿದ ಜಾಗದಲ್ಲಿ ಓಡಾಡುವುದಿಲ್ಲ, ಮನುಷ್ಯ ಸಂಬಂಧಗಳ ನಡುವೆ ದೊಡ್ಡ ಕಂದಕ ನಿರ್ಮಾಣವಾಯಿತು. ಯಾರಿಗಾದರೂ ಕೊರೋನಾ ಬಂದಿದೆ ಎಂದರೆ ಆ ಇಡೀ ಏರಿಯಾವನ್ನೇ ಲಾಕ್ ಮಾಡುತ್ತಿದ್ದರು. ಯಾರೂ ಅಲ್ಲಿಗೆ ಹೋಗುವ ಹಾಗಿಲ್ಲ. ಅವನು ಈ ಕಡೆ ಬರುವ ಹಾಗಿಲ್ಲ, ಪೊಲೀಸ್‌ನವರ ಕೈಯಲ್ಲಿ ಅವರನ್ನು ಒಳಗಡೆ ತಳ್ಳಬೇಕಾಗಿತ್ತು. ಆಸ್ಪತ್ರೆಗಳಲ್ಲಿ ಹೋದರೆ ಭಯ. ಅವರನ್ನು ಯಾರು ಮಾತನಾಡಿಸುವವರಿಲ್ಲ. ವಾಪಸ್ ಬದುಕಿ ಹೋಗುತ್ತೇನೆ ಎನ್ನುವುದು ಗೊತ್ತಿಲ್ಲ, ಅದರ ಜೊತೆಗೆ ಟಿ.ವಿ.ಯಲ್ಲಿ ಪ್ಲಾಸ್ಟಿಕ್‌ನಲ್ಲಿ ಸುತ್ತಿ ಪ್ರಾಣಿಗಳ ರೀತಿಯಲ್ಲಿ ಬಿಸಾಡುತ್ತಿದ್ದುದನ್ನು ನೋಡಿದಾಗ ಯಾರಿಗೂ ಭರವಸೆಯೇ ಬರುತ್ತಿರಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಸಂದರ್ಭದಲ್ಲಿ ನಾನು ಇದನ್ನು ಅಸ್ಪೃಶ್ಯತೆಗೆ ಏಕೆ ಹೋಲಿಸಿಕೊಂಡೆ ಎಂದರೆ, ಹಿಂದೊಮ್ಮೆ ಯಾರಾದರೂ ಈ ಕೇರಿಯಲ್ಲಿ ಓಡಾಡಿಬಿಟ್ಟರೆ ಕಸ ಹೊಡೆದುಕೊಂಡು ಹೋಗಬೇಕಾಗಿತ್ತು ಎಂದು ನಾವು ಕೇಳಿದ್ದೆವು. ಈಗ ಕೊರೋನಾದಿಂದ ಯಾರಾದರೂ ಹೋದರೆ ಅಥವಾ ಕೊರೋನಾದ ಶವವನ್ನು ತೆಗೆದುಕೊಂಡು ಹೋದರೆ ಹಿಂದುಗಡೆಯಿಂದ ಆ ವ್ಯಾನ್‌ಗೆ ಸ್ಯಾನಿಟೈಸರ್ ಸಿಂಪಡಿಸಿಕೊಂಡು ಹೋಗಬೇಕು. ಶವ ಸಂಸ್ಕಾರವಾದ ಮೇಲೆ ಮತ್ತೆ ಸಿಂಪಡಿಸಿಕೊಂಡು ಬರಬೇಕಾಗಿತ್ತು. ಪುಣ್ಯ ಜಲ ಚಿಮುಕಿಸಿದ ಹಾಗೆ, ಮಡಿ ಮಾಡಿದ ಹಾಗೆ ಮಾಡಬೇಕಾಗಿತ್ತು. ಶವ ಸಂಸ್ಕಾರಕ್ಕೆ ಬಂಧು–ಬಾಂಧವರು ಹೋಗುವ ಹಾಗಿಲ್ಲ. ಈ ತರಹದ ಅನುಭವವನ್ನು ದೇಶದಲ್ಲಿ ಎರಡು–ಮೂರು ತಿಂಗಳು ಲಾಕ್‌ಡೌನ್ ಪರಿಸ್ಥಿತಿ ಬಂದಾಗ ಬಹಳ ಗಾಢವಾಗಿ ಅನುಭವಿಸಿದ್ದೇವೆ. ಆಗ ಅನಿಸುತಿತ್ತು, ಒಂದೆರಡು ತಿಂಗಳು ಒಂಟಿಯಾಗಿ ಇರುವುದಕ್ಕೆ ಇಷ್ಟು ಕಷ್ಟವಾಗುತ್ತಿದೆ, ನಮ್ಮ ಪ್ರೀತಿ ಪಾತ್ರರಿಗೆ ಹೆಗಲ ಮೇಲೆ ಕೈ ಹಾಕಿ ಮಾತನಾಡಿಸುವ ಹಾಗಿಲ್ಲ, ನಮ್ಮ ಮಕ್ಕಳನ್ನು ಮುದ್ದಾಡುವ ಹಾಗಿಲ್ಲ, ಒಟ್ಟಿಗೆ ಕುಳಿತು ಊಟ ಮಾಡುವ ಹಾಗಿಲ್ಲ, ಒಟ್ಟಿಗೆ ಕುಳಿತು ಟಿ.ವಿ. ನೋಡುವ ಹಾಗಿಲ್ಲ, ಈ ರೀತಿಯ ಒಂದು ಆಧುನಿಕ ಅಸ್ಪೃಶ್ಯತೆ; ಅಸ್ಪೃಶ್ಯತೆ ಎಂದರೆ, ಮುಟ್ಟದಿರುವುದು. ಸ್ಪೃಶ್ಯತೆ–ಅಸ್ಪೃಶ್ಯತೆ ಎಂದರೆ ಮುಟ್ಟುವ ಮತ್ತು ಮುಟ್ಟದಿರುವ ಎಂಬುದು. ಈ ಪದದ ಅರ್ಥ ನಿಜವಾಗಿಯೂ ನನಗನಿಸಿದ್ದು, ಶತಶತಮಾನಗಳಿಂದ ಅವರು ಹೇಗೆ ಅನುಭವಿಸಿರಬಹುದು? ಶತಶತಮಾನಗಳಿಂದ ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕುತ್ತಿದ್ದರು. ಅವರು ಈ ಕೇರಿಯಲ್ಲಿ ಬರುವ ಹಾಗಿಲ್ಲ, ನಾವು ಆ ಕೇರಿಯೊಳಗೆ ಹೋಗುವ ಹಾಗಿಲ್ಲ. ಅವರು ಮಟ್ಟಿದ್ದನ್ನು ನಾವು ಮುಟ್ಟುವ ಹಾಗಿಲ್ಲ. ಒಬ್ಬ ಕೊರೋನಾ ರೋಗಿಗೆ ಏನೇನು ಅನ್ವಯವಾಗುತ್ತಿತ್ತೋ ಅವೆಲ್ಲಾ ಅವರಿಗೆ ಅನ್ವಯವಾಗಿದೆ. ಹಾಗಾದರೆ ಶತಶತಮಾನಗಳಿಂದ ಅದು ಕೊರೋನಾ ಪೀಡಿತ ಸಮೂಹವಾಗಿತ್ತೇ? ನಮ್ಮ ದೃಷ್ಟಿಯಲ್ಲಿ ಆ ಜನಾಂಗ ಕೊರೋನಾ ಪೀಡತವಾಗಿತ್ತೇ ಎಂಬುದು ನನಗೆ ವ್ಯಕ್ತಿಗತವಾಗಿ ಅನಿಸುವುದಕ್ಕೆ ಪ್ರಾರಂಭವಾಯಿತು. ಒಂದು ರೀತಿಯ ಗಾಢ ಅನುಭವದ ಜೊತೆಗೆ ಅಸ್ಪೃಶ್ಯತೆಯ ಸಂಕಟ ಏನಿರಬಹುದೆಂದು ಅರ್ಥ ಮಾಡಿಕೊಳ್ಳುವುದಕ್ಕೆ ಒಂದು ಸಣ್ಣ ಅವಕಾಶ ಸಿಕ್ಕಿತ್ತು ಎಂದು ನಾನು ಭಾವಿಸುತ್ತೇನೆ. ಈ ಭಯದ ಮಧ್ಯೆ ಖಂಡಿತವಾಗಿಯೂ ಆರೋಗ್ಯ ಕಾರ್ಯಕರ್ತರಿಗೆ ನಾವು ಋಣಿಗಳಾಗಿರಬೇಕು. ಅಲ್ಲಿರುವಂತಹ ವೈದ್ಯರುಗಳಿಗೆ, ನರ್ಸ್‌ಗಳಿಗೆ, ತಾಂತ್ರಿಕ ವರ್ಗದವರಿಗೆ, ಲ್ಯಾಬ್‌ನಲ್ಲಿ ಕೆಲಸ ಮಾಡುವವರಿಗೆ ನಾವು ಋಣಿಗಳಾಗಿರಬೇಕು. ನಮ್ಮ ಗಂಟಲಿನಿಂದ ತೆಗೆದುಕೊಂಡು ಹೋಗಿರುವ ದ್ರವವನ್ನು ಟೆಸ್ಟ್ ಮಾಡಬೇಕಾದರೆ ಕೊರೋನಾ ಸಾವನ್ನು ಎದುರಿಗೆ ಇಟ್ಟುಕೊಂಡು ಅವರು ಕೊರೋನಾ ಪಾಸಿಟಿವ್, ನೆಗಟಿವ್ ಎಂದು ಹೇಳಬೇಕು. ಅಂಗನವಾಡಿಯವರು, ಆಶಾ ಕಾರ್ಯಕರ್ತರು, ಪೌರ ಕಾರ್ಮಿಕರು, ಎಲ್ಲರೂ ಜೀವ ಭಯದ ಆತಂಕದ ಮಧ್ಯೆ ಕೆಲಸವನ್ನು ಮಾಡಿದರು.

ಆ ಆತಂಕದ ಮಧ್ಯೆ, ನಾನು ಮೊನ್ನೆ ಹೇಳಿದ ಹಾಗೆ ಅವರು ಯಾರ‍್ಯಾರು ಇದ್ದಾರೆಂದು ಸರ್ವೆ ಮಾಡಿಕೊಂಡು ಬನ್ನಿ ಎಂದು ಕೆಲವರಿಗೆ ಕಡ್ಡಾಯವಾಗಿ ಸರ್ಕಾರದ ಮಟ್ಟದಲ್ಲಿ ಕುಳಿತು ನಿರ್ಣಯವಾಗುತ್ತಿತ್ತು. ಸರ್ವೆಗೆ ಯಾರು

ಹೋಗಬೇಕು? ಯಾರೋ ಬಹಳ ದೊಡ್ಡ ದೊಡ್ಡ ವೈದ್ಯರುಗಳು ಹೋಗುತ್ತಿದ್ದರೆ, ಬಹಳ ದೊಡ್ಡ ಸರ್ಜನ್‌ಗಳು ಹೋಗುತ್ತಿದ್ದರೆ ಅಥವಾ ನನ್ನಂತಹ ಶಾಸಕರು ಹೋಗುತ್ತಿದ್ದರೆ? ಸಾಮಾನ್ಯವಾಗಿ ಹೋಗುತ್ತಿದ್ದವರು ಕೆಳ ಹಂತದ ಆರೋಗ್ಯ ಇಲಾಖೆಯ ಕಾರ್ಯಕರ್ತರು. NHM (National Health Mission) ನಲ್ಲಿರುವಂತಹ ನರ್ಸ್, ಸ್ಟಾಫ್, ತಾಂತ್ರಿಕ ವರ್ಗದವರಿಗೆ 12,000-13,000 ರೂಪಾಯಿ ಸಂಬಳ ಕೊಡುತ್ತಿದ್ದರು. ಅಂಗನವಾಡಿ, ಆಶಾ ಕಾರ್ಯಕರ್ತರಿಗೆ 5,000-6000 ರೂಪಾಯಿ ಸಂಬಳ ಕೊಡುತ್ತಿದ್ದರು. ಅವರೆಲ್ಲರೂ ಸಾವಿನ ಮನೆಯ ಬಾಗಿಲನ್ನು ತಟ್ಟಿ ವಿವರವನ್ನು ಬರೆದುಕೊಂಡು ಬರಬೇಕಾಗಿತ್ತು. ಅಂದರೆ, ಅವರ ಜೀವಗಳು ಎಷ್ಟೊಂದು ಸಸ್ತಾ ಆಗಿದ್ದವೆ; ಲಕ್ಷಗಟ್ಟಲೇ ಹಣವನ್ನು ತೆಗೆದುಕೊಂಡವರ್ಯಾರೂ ಕೊರೋನ ರೋಗಿಯ ಮೈ ಮುಟ್ಟಿ ಮಾತನಾಡಿಸಿಲ್ಲ. ಎಲ್ಲಾ ರೀತಿಯ ಸಂರಕ್ಷಣೆ ಹಾಕಿಕೊಂಡು ದೂರದಿಂದಲೇ ನೋಡಿ ವರದಿಗೆ ಸಹಿ ಹಾಕಿದ್ದಾರೆ. ಯಾರೂ ರೋಗಿಯ ಕೈ ಮುಟ್ಟಿ-ಮೈ ಮುಟ್ಟಿ ಚಿಕಿತ್ಸೆ ಕೊಟ್ಟಿರುವುದನ್ನು ನಾನು ಕಂಡಿಲ್ಲ. ಏಕೆಂದರೆ, ಆ ಸಂದರ್ಭದಲ್ಲಿ ನಾನು ಇದನ್ನು ನೋಡುವುದಕೋಸ್ಕರವೇ McGann Hospital ನ ಕೊರೋನಾ ವಾರ್ಡ್‌ಗೆ PPE (Personal Protective Equipment) kit ಹಾಕಿಕೊಂಡು ಹೋಗಿದ್ದೆ. ಅವರು ಯಾವ ರೀತಿ ಇದನ್ನೆಲ್ಲಾ ಹಾಕಿಕೊಂಡು ಚಿಕಿತ್ಸೆ ಕೊಡುತ್ತಿದ್ದಾರೆಂದು ನೋಡುವುದಕ್ಕೋಸ್ಕರವೇ ನಾನು ಅಲ್ಲಿಗೆ ಹೋಗಿದ್ದೆ. ಆ ತರಹ ಅತ್ಯಂತ ಕಡಿಮೆ ಸಂಬಳದಲ್ಲಿ ಕೆಲಸ ಮಾಡಿದವರ ಬಗ್ಗೆ ಈ ಸದನ ಋಣಿಯಾಗಿರಬೇಕು. ಅಂಥವರ ಸಂಬಳ ಸಾರಿಗೆಗಳಿಗೆ ನಾವು ಹೋರಾಟವನ್ನು ಮಾಡಬೇಕು.

ಎನ್.ಎಚ್.ಎಮ್. ನ ವರದಿಯನ್ನು ಕೊಟ್ಟಿದ್ದೇವೆ, ಐ.ಎ.ಎಸ್. ನಿವೃತ್ತ ಅಧಿಕಾರಿಯಾದ ಶ್ರೀ ಶ್ರೀನಿವಾಸ್ ಆಚಾರ್ಯರವರ ಅಧ್ಯಕ್ಷತೆಯಲ್ಲಿ ಆ ವರದಿಯನ್ನು ಕೊಟ್ಟಿದ್ದೇವೆ. ಅವರಿಗೆ ಸಂಬಳ ಹೆಚ್ಚು ಮಾಡುವುದಕ್ಕೆ ಆರ್ಥಿಕ ಇಲಾಖೆ ಅನುಮತಿ ಕೊಡುವುದಿಲ್ಲ. ಜನರು ಸತ್ತು ಹೋಗಿದ್ದರೆ ಏನು ಮಾಡಬೇಕಾಗಿತ್ತು? ಈ ಸಮಾಜವನ್ನು ಕಾಪಾಡುವುದಕ್ಕೆ ಆರ್ಥಿಕ ಇಲಾಖೆಯವರು ಬರಲಿಲ್ಲ, ಎನ್.ಎಚ್.ಎಮ್., ನ ಕಾರ್ಯಕರ್ತರು ಜೀವವನ್ನು ಕಾಪಾಡುವುದಕ್ಕೆ ಬಂದಿದ್ದರು. ಕೆಲವೊಮ್ಮೆ mechanical ಆಗಿ ಆಡಳಿತವನ್ನು ನಡೆಸುವುದಕ್ಕಾಗುವುದಿಲ್ಲ. ಕಾನೂನುಗಳ ಮಧ್ಯೆ ಮಾನವೀಯತೆಯ ನದಿಯನ್ನು ಹರಿಬಿಡಬೇಕು. ಅವರಿಗೆ ರೆಗ್ಯುಲರ್ ಆಗಿರುವಂತಹ ನರ್ಸ್ ಇದ್ದರೆ 30,000 ಸಂಬಳ. ಆದರೆ ಎನ್.ಎಚ್.ಎಮ್. ನಲ್ಲಿ ಬಂದರೆ 12,000 ಸಂಬಳ. ಅವರನ್ನು ಖಾಯಂ ಮಾಡುವುದು ಬೇಡ, ಅವರ ಬದುಕಿಗಾದರೂ ಬೆಲೆ ಕೊಡಬೇಕಲ್ಲವೇ? ಇಲ್ಲಿ ಕುಳಿತು ಕಾನೂನು ಹೇಳುವಂತಹ ಅಧಿಕಾರಿಗಳಿಗೆ ಅಥವಾ ಇನ್ಯಾರಿಗಾದರೂ ಆಗಲಿ ಮನುಷ್ಯತ್ವದ ಸೆಲೆ ಇರಬೇಕು, ಅದರ ನೆಲೆಯೂ ಇರಬೇಕು. ಅದು ಇಲ್ಲದೆ ಕೇವಲ ತಮ್ಮ ಬುದ್ಧಿವಂತಿಕೆಯಿಂದ ಆಳ್ವಿಕೆಯನ್ನು ಮಾಡಿದರೆ ಸಾಲದು. ದೇಶ ಕಟ್ಟುವಾಗ, ಸಮಾಜ ಕಟ್ಟುವಾಗ ಬರೀ ಮೆದುಳಿನಿಂದ ಆಳ್ವಿಕೆ ಮಾಡಿದರೆ ಸಾಲದು. ಆ ಬುದ್ಧಿವಂತಿಕೆಯ ಜೊತೆಗೆ ಹೃದಯವಂತಿಕೆಯನ್ನು ಇಟ್ಟುಕೊಂಡರೆ ಮಾತ್ರ ಅಂಥವರು ಯಶಸ್ವಿ ಆಡಳಿತವನ್ನು ಕೊಡಬಲ್ಲರು. ಹೃದಯ ಹೀನರಾಗಿ ಬುದ್ಧಿವಂತಿಕೆಯಿಂದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಳ ಕೊಡದ ಹಾಗೆ ಅದನ್ನೆಲ್ಲಾ ಕಡಿತ ಮಾಡುವುದು ಹೇಗೆ ಎಂದು ಯೋಚನೆ ಮಾಡಿದರೆ ಅದಕ್ಕೆ ಜನಪರ ಸರ್ಕಾರದ ಅಗತ್ಯ ಇದೆಯೇ; ಪ್ರಜಾತಂತ್ರ ವ್ಯವಸ್ಥೆಯ ಅಗತ್ಯ ಇದೆಯೇ? ಎಲ್ಲದಕ್ಕೂ ಆರ್ಥಿಕ ಇಲಾಖೆಯವರು ಆಕ್ಷೇಪಣೆ ಮಾಡುತ್ತಾರೆಂದು ಹೇಳುತ್ತಾರೆ. ಇವರು ಕಾಯುವುದಕ್ಕೋಸ್ಕರ ಇದ್ದಾರೆ. ಆದರೆ ಕಾಯುವವರ ಮಧ್ಯೆ ಕೂಡ ಇವರು ಬರೀ ಸುಂಕದವರಾಗುವುದು ಬೇಡ.

(ಮುಂದು)

(216)8-2-2021/1-30/ಬಿಕೆಪಿ-ವಿಕೆ

**ಶ್ರೀ ಆಯನೂರು ಮಂಜುನಾಥ್(ಮುಂದು)**

ಕಷ್ಟ ಸುಖ ಹೇಳಿದರೆ ಸ್ವಲ್ಪ ಸ್ಪಂದಿಸುವಂತಹ ವ್ಯಕ್ತಿಗಳು ತಾವಾಗಬೇಕು. ಇವರೆಲ್ಲರಿಗೂ ಸಂಬಳ ಎಷ್ಟು? ಸತ್ತವರಿಗೆ ರೂ. 30 ಲಕ್ಷಗಳನ್ನು ಕೊಡುತ್ತೀರಿ ಎಂದು ಆಯಿತು. ಅದು ಎಲ್ಲರಿಗೂ ಸಿಗುತ್ತದಾ? ಅದನ್ನು ಮಾಡಿಸಬೇಕಾದರೆ frontline warriors ಎಂದು ಹೇಳುತ್ತೀರಿ. ಏನೇನೋ ಹೊಸ ಹೊಸ ಪ್ರಯೋಗಗಳು ಶುರುವಾಯಿತು. ನಾನು ಅಭಿನಂದಿಸುತ್ತೇನೆ. ಧನ್ಯವಾದಗಳನ್ನೂ ಸಹಿತ ಹೇಳುತ್ತೇನೆ. ಸತ್ತು ಹೋದಂತಹ ಬಡವರಿಗೆ ನೀವು ರೂ.30 ಲಕ್ಷಗಳನ್ನು ನೀವು ಕೊಡುವುದಾದರೆ ಅವರು ನಂಬಿದಂತಹ ಸಮೂಹಕ್ಕೆ ಒಂದು ಆಶ್ರಯವಾಯಿತು. ಆದರೆ, ಬದುಕಿರುವಾಗ ಕೊಡಬೇಕಾದಂತಹದ್ದನ್ನು ಸತ್ತ ಮೇಲೆ ಕೊಟ್ಟ ಹಾಗೆ ಆಯಿತಲ್ಲಾ? ಬದುಕುವುದಕ್ಕೋಸ್ಕರ ಕೂಡ ಹೇಳುವುದಾದರೆ ಆ NHM (National Health Mission) ನ ಕಾರ್ಯಕರ್ತರ ಸಮಿತಿಯ ವರದಿ ಸರ್ಕಾರದ ಮುಂದೆ ಇದೆ. ಮಾನ್ಯ ಸುಧಾಕರ್‌ರವರು ಆಗಲಿ, ಸಚಿವರಾಗಲಿ, ನಮ್ಮ ಸಚಿವ ಮಂಡಲದ ಸಚಿವರು ಇಲ್ಲಿ ಕುಳಿತಿದ್ದಾರೆ. ಕೇವಲ ರೂ. 2-3 ಸಾವಿರಗಳ ಸಂಬಳ ಜಾಸ್ತಿ ಮಾಡುವುದಕ್ಕೋಸ್ಕರವಾಗಿ recommendation ಬಂದಿದೆ, ಬಹಳ ಬಂದಿಲ್ಲ. ಅದನ್ನು ಕೂಡಲೇ clear ಮಾಡಬೇಕಲ್ಲವೇ? ಆ ರೀತಿಯಲ್ಲಿ ಜೀವನವನ್ನು ಪಣಕ್ಕೆ ಇಟ್ಟು ಸಾವಿನ ಮನೆ ಬಾಗಿಲು ತಟ್ಟಿ ಆ patient ನ ಮೂಗಿನೊಳಗೆ ಕಡ್ಡಿ ಇಡುವುದೂ ಒಂದೇ, ಯಮನ ಬಾಯಿಯೊಳಗೆ ಕಡ್ಡಿ ಇಡುವುದೂ ಒಂದೇ. ಆ ರೀತಿ ಮಾಡಿ ಬಂದವರ ಬಗ್ಗೆ ನಾವು ಅತ್ಯಂತ ಋಣಿಯಾಗಿ ಆಡಳಿತ ವ್ಯವಸ್ಥೆಯಲ್ಲಿರಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಅವರಿಗೆ ಕಾರಣ ಕೊಡಬೇಕು. ಆ NHM ನಿಂದ ಬಂದಿರತಕ್ಕಂತಹವರ ವರದಿಯನ್ನು ಯಥಾವತ್ತಾಗಿ ಸರ್ಕಾರ ಕೂಡಲೇ ಜಾರಿ ಮಾಡಬೇಕು, ಅದರಲ್ಲಿ ಯಾವುದೇ ಮೀನಾಮೇಷ ಮಾಡಬಾರದು, ಬುದ್ಧಿವಂತಿಕೆ ಮಾಡಬಾರದು. ಬಾಕಿಯ ಅನ್ಯ ಖರ್ಚುವೆಚ್ಚಗಳಿಗೆ ಬೇಕಾದರೆ ನಿಯಂತ್ರಣವನ್ನು ಹೇರಲಿ. ನಮಗೋಸ್ಕರ 32,000 NHM ನ ಕಾರ್ಯಕರ್ತರಿದ್ದಾರೆ. ನಾನು ಇದೇ ಸಂದರ್ಭದಲ್ಲಿ ಸರ್ಕಾರವನ್ನು ಗೌರವಿಸುತ್ತೇನೆ. ಏಕೆಂದರೆ, ಈ ರೀತಿಯಾದರೆ as a Government Official ಯಾರ ವೇತನವನ್ನೂ ಸಹಿತ ಕಡಿತ ಮಾಡಲಿಲ್ಲ. ಸುಮಾರು ರೂ. 63,000-64,000 ಕೋಟಿಗಳು ಸರ್ಕಾರಕ್ಕೆ ಬರಬೇಕಾದಂತಹ ಆದಾಯ ಬರಲೇ ಇಲ್ಲ. ಸರ್ಕಾರ ಹಣಕಾಸಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿತ್ತು. ಶಾಸಕರೆಲ್ಲರದ್ದನ್ನೂ ಕೂಡ ವೇತನ ಕಡಿತ ಮಾಡುವುದಕ್ಕೆ ನಾವೆಲ್ಲರೂ ಸಾಕ್ಷಿಯಾಗಿ ಒಪ್ಪಿಕೊಂಡಿದ್ದೆವು. ಶೇಕಡಾ 30%ಅನ್ನು ಒಪ್ಪಿಕೊಂಡಿದ್ದೆವು.

**ವೈಸ್ ಛೇರ್ಮನ್:-** ನಮಗೆ 30% ಆಯಿತು. ಆದರೆ, ಅಧಿಕಾರಿ/ನೌಕರರುಗಳಿಗೆ ಆಗಲಿಲ್ಲ.

**ಶ್ರೀ ಆಯನೂರು ಮಂಜುನಾಥ್:** ಅಧಿಕಾರಿಗಳಿಗೆ ಆಗಲಿಲ್ಲ, ಸರ್ಕಾರಿ ನೌಕರರುಗಳಿಗೆ ಆಗಲಿಲ್ಲ. ನೌಕರರಾದರೂ ಕೂಡ ಒಂದು ಹಂತದಲ್ಲಿ ಬಿಟ್ಟರೆ ಒಂದು ಹಂತಕ್ಕೆ ಓಕೆ. ಈ ಯಂತ್ರವನ್ನು ಕೆಳಹಂತದಲ್ಲಿ ನಡೆಸಬೇಕು. ಅಧಿಕಾರಿಗಳಿಗೆ ಏಕೆ ಆಗಲಿಲ್ಲವೆಂಬುದು ನನಗೆ ಗೊತ್ತಾಗಲಿಲ್ಲ. ಆಗ ಮಾನ್ಯ ರಾಜ್ಯಪಾಲರು ಕಾರ್ಯಾಂಗದ ಪ್ರಮುಖರಾಗಿ ಹೇಳಬೇಕಾಗುತ್ತದೆ, ನಿಮ್ಮ ಕಡಿತವನ್ನು ನೀವು ಸ್ವಇಚ್ಛೆಯಿಂದ ಕಡಿಮೆ ಮಾಡಿಕೊಳ್ಳಿ ಎಂದು ಹೇಳಬೇಕಾಗುತ್ತದೆ, ಅವರು ತಮ್ಮ ಔದಾರ್ಯತೆಯನ್ನು ಅಲ್ಲಿ ದಯಪಾಲಿಸಬೇಕು. ಮಾನ್ಯ ರಾಜ್ಯಪಾಲರು ಅವತ್ತಿನ ದಿವಸ ಭಾಷಣವನ್ನು ದಯಪಾಲಿಸಬೇಕಾಗಿರಲಿಲ್ಲ, ಕಾರ್ಯಾಂಗದ ಪ್ರಮುಖನಾಗಿ ನಾನು ನಿಮಗೆ ಆದೇಶ ಮಾಡುತ್ತಿದ್ದೇನೆ. ಜನಪ್ರತಿನಿಧಿಗಳು ಅವರ ವೇತನವನ್ನು ಕಡಿತಗೊಳಿಸಿಕೊಂಡಿದ್ದಾರೆ, ಹಾಗಾಗಿ, ಅವರಿಗಿಂತ ನೀವು ಹಿಂದೆ ಬೀಳಬೇಡಿ. ನಿಮಗೆ ಸಂಬಳ ಒಂದು ಲಕ್ಷ, ಎರಡು ಲಕ್ಷಗಳು, ಮೂರು ಲಕ್ಷಗಳು, ಟಿ.ಎ., ಡಿ.ಎ., ಬಂಗಲೆ ಎಲ್ಲಾ ಕೂಡ ಇದೆ. ನೀವೂ ಸಹ ಈ ಸಮಾಜಕ್ಕೆ ಸ್ಪಂದಿಸಬೇಕು. ನಿಮ್ಮ ಸಂಬಳವನ್ನು ಕನಿಷ್ಠ ಅವರ ಲೆವೆಲ್‌ಗೆ ಕಟ್ ಮಾಡಿಸಿಕೊಳ್ಳಬೇಕು ಎಂದು ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ದಯಪಾಲಿಸಬೇಕಾಗಿತ್ತು ಅಲ್ಲವೇ? ಮಾನ್ಯ ರಾಜ್ಯಪಾಲರು ಏಕೆ ದಯಪಾಲಿಸಲಿಲ್ಲ? ಇಲ್ಲಿಯೇ ಅದರ ಅಗತ್ಯತೆ ಇರುವುದು. ಸದನಕ್ಕೆ ಭಾಷಣವನ್ನು ದಯಪಾಲಿಸಿದ ರೀತಿ ಸಮಾಜಕ್ಕೆ ಸ್ಪಂದಿಸುವ ಆಲೋಚನೆಗಳನ್ನೂ ಕೂಡ ದಯಪಾಲಿಸಬೇಕು, ಅದು ಆಗಲೇ ಇಲ್ಲ, ಒಬ್ಬ ನೌಕರರ ಪರವಾಗಿ ಹೋರಾಟ ಮಾಡುವವನಾಗಿ ನಾನು ಸರ್ಕಾರಕ್ಕೆ ಧನ್ಯವಾದವನ್ನು ಹೇಳುತ್ತೇನೆ, ಆ ನೌಕರರ ವೇತನವನ್ನು ಎಲ್ಲಿಯೂ ಸಹಿತ ಕಡಿತಗೊಳಿಸದೇ ಕೊಟ್ಟಿತು, ರೂ.64,000 ಕ್ಕಿಂತ ಆದಾಯ ಕಡಿತವಿದ್ದರೂ ಸಹಿತ ಕೊಟ್ಟಿತು. ಇದೇ ಸದನದಲ್ಲಿ ರೂ.33,000 ಕೋಟಿಗಳ ಸಾಲ ತೆಗೆದುಕೊಳ್ಳುವುದಕ್ಕೆ ಸದನ ಅನುಮತಿ ಕೊಟ್ಟಿತು, ಸಾಲ ತೆಗೆದುಕೊಂಡು ಸರ್ಕಾರವನ್ನು ನಡೆಸಿತು, ಎಲ್ಲಿಯೂ ಕೂಡ ವಿಫಲತೆ ಬರಲಿಲ್ಲ. ಆ ಸಂದರ್ಭದಲ್ಲಿ ವೇತನಕ್ಕಾಗಿ ನಾವೂ ಕೂಡ ಹೋರಾಟ ಮಾಡಿದ್ದೇವೆ. ಅಲ್ಲಿ ಒಬ್ಬ ಹೋರಾಟಗಾರನಾಗಿ ಮಾನ್ಯ ಯಡಿಯೂರಪ್ಪನವರನ್ನು ಮೆಚ್ಚಿಕೊಳ್ಳುತ್ತೇನೆ, ಅವರು ಹೇಳಿದ ಸಂದರ್ಭದಲ್ಲಿ ಸ್ಪಂದಿಸಿದರು. ಒಬ್ಬ ವ್ಯಕ್ತಿಯಾಗಿ ಸಮರ್ಥರಾಗಿರುವ ಅವರನ್ನು ನಾನು ಗೌರವಿಸುತ್ತೇನೆ. ಏಕೆಂದರೆ, ಸಾಮಾನ್ಯ ಪುರಸಭಾ ಸದಸ್ಯನಾಗಿ ಹೋರಾಟ ಮಾಡಿಕೊಂಡು ಹೋರಾಟದ ಹಾದಿಯಲ್ಲಿ ಮುಖ್ಯಮಂತ್ರಿಗಳಾದಂತಹವರು, ಯಾರದೋ ಕೃಪೆಯಿಂದ ಮುಖ್ಯಮಂತ್ರಿಗಳಾದವರಲ್ಲ ಅವರು. ಹಾಗಾಗಿ ನನಗೆ ಅವರ ಬಗ್ಗೆ ಗೌರವವಿದೆ. ಆ ರೀತಿ ಜನರ ಮಧ್ಯೆ ಬೆಳೆದಂತಹವರು ಅಧಿಕಾರಕ್ಕೆ ಬರಲಿ, ತಪ್ಪೋ ಒಪ್ಪೋ ಏನಾದರೂ ಆಗಿರಲಿ, ಜನರು ಹೇಳಿದಾಗ ಅಂತಹವರು ಸ್ವಲ್ಪ ತಿದ್ದಿಕೊಳ್ಳುತ್ತಾರೆ. ನೇರವಾಗಿ ಆಕಾಶದಿಂದ ಇಳಿದರೆ ಆಗುವುದೇ ಇಲ್ಲ. ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರಿಗೆ ಸಂಬಳ ಬಂದಿಲ್ಲವೆಂದು ಪ್ರಸ್ತಾಪ ಮಾಡಿದ್ದರು, ಇದೇ ಸದನಕ್ಕೆ ಬಂದರು, 5 ತಿಂಗಳುಗಳ ಸಂಬಳವನ್ನು ಅಂದರೆ ನಾವೆಲ್ಲರೂ ಸೇರಿ ಎಲ್ಲಾ ಪಕ್ಷದ ಸದಸ್ಯರೂ ಸದನಕ್ಕೆ ಹೋದೆವು, ಒಪ್ಪಿಕೊಂಡರು, ಐದು ತಿಂಗಳುಗಳ ಸಂಬಳವನ್ನು ಕೊಟ್ಟರು.

**ವೈಸ್ ಛೇರ್ಮನ್:-** ನೀವು ಬಾವಿಗೆ ಬಂದಮೇಲೆ ಒಪ್ಪಿಕೊಳ್ಳಬೇಕು.

**ಶ್ರೀ ಆಯನೂರು ಮಂಜುನಾಥ್:** ಬಾವಿಗೆ ಬಂದೆವು. ಆ ಸಂದರ್ಭದಲ್ಲಿ ಎಲ್ಲರೂ ಬಂದರು. ಮಾನ್ಯ ಮುಖ್ಯಮಂತ್ರಿಗಳು ಆ ಸದನದಿಂದ ಇಲ್ಲಿಗೇ ವಾಪಸ್ಸು ಬಂದರು.

**ಶ್ರೀ ಯು.ಬಿ.ವೆಂಕಟೇಶ್: –** ನೀವು ಬಾವಿಗೆ ಬಂದಿದ್ದೀರಿ ಎಂದು ಅವರಿಗೆ ಒಪ್ಪಿಗೆ ಆಯಿತು.

**ಶ್ರೀ ಆಯನೂರು ಮಂಜುನಾಥ್:** ತಾವು ಬಾವಿಯಿಂದ ಸ್ವಲ್ಪ ಮೇಲೆ ಬರಬೇಕಲ್ಲವೇ? ತಾವು ಕೂಪಮಂಡೂಕ ಆಗಬಾರದು. ನಾನು ಆಗಾಗ ಬಾವಿಗೆ ಬರುತ್ತೇನೆ. ತಾವು ವಿರೋಧ ಪಕ್ಷದವರಾಗಿ ಬಾವಿಯಲ್ಲಿಯೇ ಇರಬಾರದು, ತಾವು ಬಾವಿಯಿಂದ ಆಗಾಗ ಹೊರಗೆ ಬನ್ನಿ, ಮತ್ತೆ ಒಳಗಡೆಗೆ ಹೋಗುವಿರಂತೆ. ನಾನು ಅದೇ ಸಂದರ್ಭದಲ್ಲಿ ಅಂದರೆ ಮುಂದಿನ ವಾಕ್ಯವನ್ನು ತಾವು ಕೇಳಿ. ಇಂತಹ ಸಂದರ್ಭದಲ್ಲಿ ಪಕ್ಷದ ರಾಜಕಾರಣಕ್ಕಿಂತ ಅನಿಸಿದ್ದನ್ನು ಹೇಳುವುದಕ್ಕೆ ಬಯಸುತ್ತೇನೆ. ಅನಿವಾರ್ಯತೆ ನನಗೂ ಇದೆ, ನಿಮಗೂ ಇದೆ. ಪಕ್ಷದ ಪರವಾಗಿ ನಾವು ಮಾತನಾಡಲೇಬೇಕಾಗುತ್ತದೆ, ಅಷ್ಟೇ ಇರುವುದು ಇಲ್ಲ. ಗೋಹತ್ಯೆ ಮಸೂದೆ ಬರುತ್ತಿದೆ. ನೀವು ವಿರೋಧಿಸಬಹುದು, ತಾತ್ವಿಕವಾಗಿ ನಾನು ಅದನ್ನು ಬೆಂಬಲಿಸುತ್ತೇನೆ. ಅದು ಪಾಸ್ ಆಗಬೇಕೆಂದೂ ಸಹಿತ ಬಯಸುತ್ತೇನೆ, ಅದರಲ್ಲಿ ಅನುಮಾನವೇ ಇಲ್ಲ. ಆದರೆ, ಅದೇ ಸಂದರ್ಭದಲ್ಲಿ ಮಾನ್ಯ ಸಭಾಪತಿಗಳೇ, ನನ್ನ ಮನಸ್ಸಿನೊಳಗೆ ಇನ್ನೊಂದು ಪ್ರಶ್ನೆ ಇರುತ್ತದೆ. ನಮ್ಮ ಈ ಹಿಂದೂ ಸಮಾಜದಲ್ಲಿ ಗೋವುಗಳನ್ನು ಪೂಜಿಸುತ್ತೇವೆ, ಎಲ್ಲವನ್ನೂ ಮಾಡುತ್ತೇವೆ, ಅದನ್ನು ರಕ್ಷಣೆ ಮಾಡಬೇಕು. ಅದರ ಬಗ್ಗೆ ಈ ವ್ಯಾಖ್ಯಾನವನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. At the same time, 'ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರ:' ಎಂದು ಹೇಳಿರುವಂತಹ ಸಮಾಜ ನಮ್ಮದು. ಆ ಶಿಕ್ಷಕರ ಸಮಸ್ಯೆಗಳನ್ನೂ ಕೂಡ ಬಗೆಹರಿಸಬೇಕು. ಕಾಲೇಜುಗಳಲ್ಲಿ 14,447 ಏನು ಅತಿಥಿ ಉಪನ್ಯಾಸಕರಿದ್ದಾರೆ, ಯಾರು ಆ ಪದವನ್ನು ಕಂಡುಹಿಡಿದಂತಹ ಪುಣ್ಯಾತ್ಮ? ಡಾಕ್ಟರೇಟ್, NET, SLET ಆದವರಿಗೆ ರೂ.13,000 ಸಂಬಳವನ್ನು ಕೊಡುತ್ತಿದ್ದೇವೆ. 'ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರ:' ಇದು ಇಷ್ಟೇ ತೆಗೆದುಕೊಳ್ಳಿ. ಅವರ ಕೈಕೆಳಗೆ ಓದಿದ ಮೇಷ್ಟ್ರು ಜಾಸ್ತಿ ರೂ.30,000-40,000/-ಗಳನ್ನು ತೆಗೆದುಕೊಂಡಿದ್ದಾನೆ. ಹೈಸ್ಕೂಲ್‌ಗಳಲ್ಲಿ ಸುಮಾರು 20,000 ಅಥಿತಿ ಶಿಕ್ಷಕರಿದ್ದಾರೆ, ಪಿ.ಯು. ಕಾಲೇಜುಗಳಲ್ಲಿ ಸುಮಾರು 3,000 ಜನರಿದ್ದಾರೆ. ನನ್ನ ಉದ್ದೇಶವಿಷ್ಟೆ. ಗೋವುಗಳ ಜೊತೆಗೆ ಈ

ಗುರುಗಳನ್ನೂ ರಕ್ಷಣೆ ಮಾಡಿಕೊಳ್ಳಬೇಕು. ಅದಕ್ಕೆಲ್ಲಾ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕು. ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ. ಕೊರೊನಾ ಜೊತೆಗೆ ಕಷ್ಟವಿರಬಹುದು ನಿಜ. ಆದರೆ, ತಕ್ಕಮಟ್ಟಿಗಾದರೂ ಬಗೆಹರಿಸಬೇಕಲ್ಲವೇ? ಹಾಗಾಗಿ ಗೋವಿನ ಬಗ್ಗೆ ಹೇಗೆ ನನಗೆ ಗೌರವ, ಶ್ರದ್ಧೆ, ಪೂಜ್ಯ ಭಾವನೆಯಿದೆಯೋ, ನನಗೆ ಪಾಠ ಕಲಿಸಿದಂತಹ ಗುರುಗಳ ಬಗ್ಗೆಯೂ ಸಹಿತ ಹಾಗೆಯೇ ಗೌರವವಿದೆ. ಅವರನ್ನೂ ಕೂಡ ನಾವು ಸಂರಕ್ಷಿಸಬೇಕು.

**ವೈಸ್ ಛೇರ್ಮನ್:-** ಮಾನ್ಯ ಬಸವರಾಜ್ ಹೊರಟ್ಟಿಯವರು ಬಹಳ ಖುಷಿಯಾಗಿದ್ದಾರೆ. ಸಂಕನೂರುರವರು ಖುಷಿಯಾಗಿಲ್ಲ, ಏಕೆಂದರೆ, ಅವರೆಲ್ಲರೂ ವೋಟರ್ಸ್ ಆಗಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಆ ರೀತಿ ನನಗೆ ಭಾವನೆಗಳೆಲ್ಲಾ ಒಂದೊಂದಕ್ಕೇ ಸೀಮಿತವಾಗಬಾರದು ಎನ್ನುವ ಕಾರಣಕ್ಕಾಗಿ ನಾನು ಪ್ರಸ್ತಾವನೆ ಮಾಡುತ್ತೇನೆ. ಆ ರೀತಿ ಮಾಡಬೇಕು. ಅದರ ಜೊತೆಗೆ ಹಣಕಾಸಿನ ತೊಂದರೆಯಿದ್ದರೂ ಸಹಿತ ರಸ್ತೆ ಕಾಮಗಾರಿಗಳು ನಡೆದವು, ಕುಡಿಯುವ ನೀರಿನ ಯೋಜನೆಗಳು ನಡೆದವು, ಬಡವರಿಗೆ ಸಾಮಾಜಿಕ ಭದ್ರತೆಯ ಕೆಲಸಗಳು ನಡೆದವು, ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರದಲ್ಲಿ ಯಾವುದಕ್ಕೂ ಕೊರತೆಯಾಗಲಿಲ್ಲ. ಯಾವುದೂ ನಿಂತು ಹೋಗಲಿಲ್ಲ. ಹಣದ ಕೊರತೆಯಾಗಿದ್ದು, ಸ್ವಲ್ಪ ಏರುಪೇರುಗಳಾಗಿರಬಹುದು. ಆದರೆ, ಮುಂಚೆ ಹೇಗಿತ್ತೋ ಅದನ್ನೇ ನಡೆಸಿಕೊಂಡು ಹೋಗುವಂತಹ ಎಲ್ಲಾ ವಿಶೇಷ ಪ್ರಯತ್ನಗಳನ್ನು, ಸಾಂದರ್ಭಿಕ ವಿಶೇಷ ಅನುದಾನಗಳನ್ನು ಮಾಡಿದಂತಹ ಒಂದು ಸಮರ್ಥ ಸರ್ಕಾರವಿದು. ಹೆಚ್ಚಿನ ಬಜೆಟ್‌ಅನ್ನು ಕೇವಲ ವೈದ್ಯಕೀಯ ಕ್ಷೇತ್ರಕ್ಕೇ ಕೊಡಬೇಕಾಯಿತು. ಆದರೂ ಕೂಡ ಬಡವರಿಗೆ ಕೊಡುವ ದವಸ-ಧಾನ್ಯಗಳನ್ನು ಕಡಿಮೆ ಮಾಡಲಿಲ್ಲ. ಕೂಲಿಕಾರ್ಮಿಕರನ್ನು ಕಾಪಾಡುವುದಕ್ಕೆ ಪ್ರಾಶಸ್ತ್ಯ ಕೊಟ್ಟಂತಹ ಏಕಮಾತ್ರ ರಾಜ್ಯ ಉತ್ತರ ಪ್ರದೇಶದಲ್ಲಿ, ಬೇರೆ ಕಡೆಯಲ್ಲಿ ಇರಲಿ, ಬೇರೆ ಬೇರೆ ರಾಜ್ಯಗಳಲ್ಲಿ ಇಷ್ಟರಮಟ್ಟಿಗೆ ಆಗಲಿಲ್ಲ. ಇಲ್ಲಿ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ, ಕೂಲಿಕಾರ್ಮಿಕರಿಗೆ ರೂ.5-6 ಸಾವಿರಗಳನ್ನು ಅಂದರೆ ಎಲ್ಲಾ ರೀತಿಯ ಅಸಂಘಟಿತ ಕಾರ್ಮಿಕರಿಗೆ ಕೊಟ್ಟರು. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿರತಕ್ಕಂತಹ ಹಣವನ್ನು ನ್ಯಾಯಾಂಗದ ಆದೇಶವೇನೇ ಇದ್ದರೂ ಕೂಡ ಈ ಬಡವರ ಪರವಾಗಿ ಹಂಚಿದರು. ಮಡಿವಾಳರಿಗೆ, ದರ್ಜಿಗಳಿಂದ ಹಿಡಿದು, ಕೂಲಿಕಾರ್ಮಿಕರಿಂದ ಹಿಡಿದು, ಕ್ಷೌರಿಕರಿಂದ ವೃತ್ತಿಯಿಂದ ಹಿಡಿದು ಎಲ್ಲರಿಗೂ ಅಂದರೆ ಎಲ್ಲಾ ವೃತ್ತಿಯವರಿಗೆ ಅವರ ರಕ್ಷಣೆ ಮಾಡುವಂತಹ ಪ್ರಯತ್ನ ನಡೆಯಿತ್ತಲ್ಲಾ, ಬಡ ಕೂಲಿಕಾರ ವರ್ಗದವರಿಗೆ ಖಂಡಿತವಾಗಿ ಈ ಸರ್ಕಾರ ಶಹಭಾಷ್‌ಗಿರಿಯನ್ನು ಕೊಡಬೇಕು. ಈ ಸರ್ಕಾರ ವಲಸೆ ಬಂದ ಕಾರ್ಮಿಕರ ರಕ್ಷಣೆ ಮಾಡಿತು. ಬೇರೆ ರಾಜ್ಯಗಳಿಗೆ ವಾಪಸ್ಸು ಕಳುಹಿಸುವುದಕ್ಕೆ ಹೋದಾಗ ರೈಲ್ವೆ ಸ್ಟೇಷನ್‌ಗಳಲ್ಲಿ ಗಲಾಟೆ, ಲಾಠಿ ಚಾರ್ಜ್ ಆಯಿತು, ಇಲ್ಲಿ ಕಳುಹಿಸಿಕೊಡುವ ಪ್ರಯತ್ನದಲ್ಲಿ ವ್ಯತ್ಯಾಸವಾದಾಗ ನಮ್ಮ ಕಾಂಗ್ರೆಸ್ ನಾಯಕರುಗಳು ಕೂಡ ಬಸ್ ಸ್ಟ್ಯಾಂಡ್‌ಗೆ ಹೋಗಿ ನಿಂತಿದ್ದರು, ನಾವು ಕೊಟ್ಟು ಕಳುಹಿಸಿಕೊಡುತ್ತೇವೆ ಎಂದರು. ಇದು ಕರ್ನಾಟಕ ರಾಜ್ಯದ ಸಂಸ್ಕೃತಿ. ಅವರುಗಳ ಮನೆಗಳಿಗೆ ಸರ್ಕಾರ ಬಸ್‌ಗಳಲ್ಲಿ, ರೈಲುಗಳಲ್ಲಿ ಕಳುಹಿಸಿಕೊಟ್ಟಿತು, ರಕ್ಷಣೆ ಮಾಡಿತು. ಇದರಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇವಲ ಕರ್ನಾಟಕದ ರಾಜಕೀಯ ಸಂಸ್ಕಾರ ಮಾತ್ರವಲ್ಲ, ಇಲ್ಲಿರತಕ್ಕಂತಹ ಜನರ ನಡವಳಿಕೆಯನ್ನೂ ಸಹಿತ ತೋರಿಸುತ್ತದೆ.

**(ಮುಂದು)**

**(217) 08.02.2021 01.40 ಎಸ್‌ವಿ- ಬಿಎನ್‌ಎಸ್**

**ಶ್ರೀ ಆಯನೂರು ಮಂಜುನಾಥ್ (ಮುಂದು)**

ಇಲ್ಲಿ ಎಲ್ಲಾ ರೀತಿಯ ಅಸಂಘಟಿತ ಕಾರ್ಮಿಕರಿಗೆ, ಕೂಲಿ ಕಾರ್ಮಿಕರಿಗೆ ರೂ. 5000-6000/-ಗಳನ್ನು ನೀಡಲಾಯಿತು. ನ್ಯಾಯಾಲಯದ ಆದೇಶವು ಏನೇ ಇದ್ದರೂ ಸಹ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿದ್ದಂತಹ ಹಣವನ್ನು ಬಡವರ ಪರವಾಗಿ ಹಂಚಿದರು. ಮಡಿವಾಳರು, ದರ್ಜಿಗಳು, ಕ್ಷೌರಿಕರು ಈ ರೀತಿ ಎಲ್ಲಾ ವೃತ್ತಿಯವರನ್ನು ರಕ್ಷಣೆ ಮಾಡುವ ಪ್ರಯತ್ನವಾಯಿತು. ಕೂಲಿಕಾರ ವರ್ಗದವರನ್ನು ರಕ್ಷಣೆ ಮಾಡಿದುದಕ್ಕಾಗಿ ನಾವು ಖಂಡಿತವಾಗಿ ಈ ಸರ್ಕಾರಕ್ಕೆ ಶಹಭಾಷ್‌ಗಿರಿಯನ್ನು ಕೊಡಬೇಕು. ವಲಸೆ ಬಂದ ಕಾರ್ಮಿಕರನ್ನೂ ಸರ್ಕಾರ ರಕ್ಷಣೆ ಮಾಡಿತು. ಇತರ ರಾಜ್ಯಗಳಲ್ಲಿ ವಲಸೆ ಕಾರ್ಮಿಕರನ್ನು ವಾಪಸ್ ಕಳುಹಿಸಬೇಕಾದ ಸಂದರ್ಭದಲ್ಲಿ ಗಲಾಟೆಗಳಾಗಿ ಲಾಠಿ ಛಾರ್ಜ್ ಮಾಡಲಾಯಿತು. ಕಳುಹಿಸಿಕೊಡುವ ಪ್ರಯತ್ನಗಳಲ್ಲಿ ಸ್ವಲ್ಪ ವ್ಯತ್ಯಾಸವಾದಾಗ ಪ್ರಯಾಣದರವನ್ನು ಕಟ್ಟಿ ನಿಮ್ಮನ್ನು ಕಳುಹಿಸುತ್ತೇವೆಂದು ಕಾಂಗ್ರೆಸ್ ನಾಯಕರು ಬಸ್ ನಿಲ್ದಾಣಕ್ಕೆ ಹೋಗಿ ನಿಂತರು. ಇದು ಕರ್ನಾಟಕ ರಾಜ್ಯದ ಸಂಸ್ಕೃತಿ. ವಲಸೆ ಕಾರ್ಮಿಕರನ್ನು ಅವರವರ ಊರುಗಳಿಗೆ ಸರ್ಕಾರ ಬಸ್ ಮತ್ತು ರೈಲುಗಳಲ್ಲಿ ಕಳುಹಿಸಿಕೊಡುವ ಮೂಲಕ ಕಾರ್ಮಿಕರ ರಕ್ಷಣೆಯನ್ನು ಮಾಡಿತು. ಇದರಲ್ಲಿ ಕೇವಲ ಕರ್ನಾಟಕದ ರಾಜಕೀಯದ ಸಂಸ್ಕಾರ ಮಾತ್ರವಲ್ಲ, ಇಲ್ಲಿನ ಜನರ ನಡವಳಿಕೆಯನ್ನು ಕೂಡ ತೋರಿಸುತ್ತದೆ. ಈ ರೀತಿ ಉದ್ಯೋಗಗಳನ್ನರಸಿ ವಲಸೆ ಬಂದಿದ್ದವರನ್ನು ಕೂಡ ನಾವು ಬಿಟ್ಟುಕೊಡಲಿಲ್ಲ.

ನಮ್ಮ ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್ ಅವರು ಇಲ್ಲಿ ಬಂದಿಲ್ಲ. ಟ್ಯಾಕ್ಸಿ ಚಾಲಕರ ಕಲ್ಯಾಣ ಮಂಡಳಿಯನ್ನು ಮಾಡುವ ಆಲೋಚನೆಯನ್ನು ಮಾನ್ಯ ಸಚಿವರು ಹೊಂದಿದ್ದು, ಇದರ ಪ್ರಸ್ತಾವವನ್ನು ನಾನು ನೋಡಿದೆ. ಇದು ಬಹಳ ಒಳ್ಳೆಯ ಆಲೋಚನೆ. ನಮ್ಮಂತಹ ಶಕ್ತಿ ಇರುವವರು ವಾಹನವನ್ನು ಖರೀದಿ ಮಾಡುವಾಗ ಶೇ.1 ಅಥವಾ 2 ರಷ್ಟು ಸೆಸ್ ಅನ್ನು ಹೆಚ್ಚಿಗೆ ನೀಡಿದರೆ, ಅದು ಕಲ್ಯಾಣ ಮಂಡಳಿಗೆ ಬರುತ್ತದೆ. ಅದರಿಂದ ಅನಾಥವಾಗಿ ರಸ್ತೆಯಲ್ಲಿ ಮೃತ ಪಡುವ ಟ್ಯಾಕ್ಸಿ ಚಾಲಕರನ್ನು ರಕ್ಷಣೆ ಮಾಡಲು ಸಾಧ್ಯವಾಗುತ್ತದೆ. ಆ ಮಂಡಳಿ ಆಗಲೇಬೇಕು. ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಒಂದೊಂದು ಕಟ್ಟಡದ ಪರವಾನಗಿಯನ್ನು ಪಡೆಯುವ ಸಂದರ್ಭದಲ್ಲಿ ಶೇ.1 ರಷ್ಟು ಸೆಸ್ ಅನ್ನು ಕಾರ್ಮಿಕರ ಕಲ್ಯಾಣ ನಿಧಿಗೆ ನೀಡಲಾಗುತ್ತದೆಯೋ ಆ ರೀತಿ ಈ ಮಂಡಳಿಗೂ ಸೇರುತ್ತದೆ. ಐಷಾರಾಮಿ ಜೀವನವನ್ನು ನಡೆಸುವವರಿಂದ ಸ್ವಲ್ಪ ಹಣವನ್ನು ತೆಗೆದುಕೊಂಡರೆ ಖಂಡಿತವಾಗಿಯೂ ಬಡವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಪಾಡಬಹುದು. ನರೇಗಾದಲ್ಲಿ ಬರುವ ನೂರಾರು ಕೋಟಿ ಹಣದಲ್ಲಿ ಒಂದಿಷ್ಟು ಸೆಸ್ ಅನ್ನು ಸಂಗ್ರಹಿಸಿದರೆ ಅಲ್ಲಿರುವ ಕೂಲಿ ಕಾರ್ಮಿಕರನ್ನು ರಕ್ಷಣೆ ಮಾಡಬಹುದು. ಆ ರೀತಿಯಾಗಿ ಪ್ರತಿಯೊಂದು ಕಾರ್ಮಿಕ ವರ್ಗದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುವ ಪ್ರಯತ್ನವು ದೇಶದ ಯಾವುದೇ ರಾಜ್ಯಗಳಲ್ಲಿ ಆಗಿರುವುದಿಲ್ಲ. ಅಷ್ಟರ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿ ಆಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆಶೋತ್ತರಗಳನ್ನು ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರತಿಬಿಂಬಿಸಿದ್ದಾರೆ. ಅವರ ಭಾಷಣದಲ್ಲಿ ಎಲ್ಲಾ ಅಂಶಗಳನ್ನು ತೆಗೆದುಕೊಂಡು ಬಂದಿದ್ದಾರೆ. ಕಾರ್ಮಿಕರಿಗೆ food kits ಅನ್ನು ವಿತರಿಸಲಾಯಿತು. ಕೆಲವೊಮ್ಮೆ ಪಾಲಿಕೆ ಮಟ್ಟದಲ್ಲಿಯೂ ಸಹ ಕಾರ್ಮಿಕ ಇಲಾಖೆಯಿಂದಲೇ ಹಣವನ್ನು ನೀಡಲಾಯಿತು. Construction Workers' Welfare Board ನಿಂದ ಹಣವನ್ನು ಕೊಟ್ಟರು. ಎಲ್ಲಾ ಕಡೆಯಲ್ಲಿಯೂ food kit ಗಳನ್ನು ವಿತರಿಸಲಾಯಿತು. ಯಾರಿಗೆ ಕೊಡಲಿಲ್ಲ ಎನ್ನುವ ಪ್ರಶ್ನೆಯೇ ಉದ್ಭವವಾಗಲಿಲ್ಲ.

ಹೀಗೆ ಕರ್ನಾಟಕ ರಾಜ್ಯದಲ್ಲಿ ಇಡೀ ಸಮಾಜವನ್ನು ಸನ್ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಕೋವಿಡ್ ಅವಧಿಯಲ್ಲಿ ಪರಿಣಾಮಕಾರಿಯಾಗಿ, ಯಶಸ್ವಿಯಾಗಿ ನೂತನ ಆಲೋಚನೆಗಳ ಪ್ರಯೋಗಗಳ ಮೂಲಕ ಯಶಸ್ವಿ ಸರ್ಕಾರವಾಗಿ ಆಡಳಿತವನ್ನು ಕೊಟ್ಟಿದೆ. ಅದರ ಜೊತೆಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಂತಹ ಯಾವುದೇ ಯೋಜನೆಗಳು ನಿಂತಿರುವುದಿಲ್ಲ. ಪರಿಶಿಷ್ಟ ಜನಾಂಗದವರ, ಹಿಂದುಳಿದ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಲ್ಲಿ ಕೊರತೆಯಾಗಲಿಲ್ಲ. ಹಲವು ರಾಜಕೀಯ ಒತ್ತಡಗಳಿಂದಾಗಿ, ರಾಜಕೀಯ ಏರುಪೇರುಗಳಿಂದಾಗಿ ಸಣ್ಣಪುಟ್ಟ ದೋಷಗಳಾಗಿರಬಹುದು. ದೋಷವಿಲ್ಲದೆ ನಡೆಸಿದಂತಹ ಒಂದೇ ಒಂದು ಸರ್ಕಾರವನ್ನು ನಾನು ಇಲ್ಲಿಯವರೆವಿಗೂ ನೋಡಿರುವುದಿಲ್ಲ. ನಾವು ಮತ್ತೊಬ್ಬರ ಕಡೆಗೆ ಬೆಟ್ಟು ಮಾಡಿ ತೋರಿಸುವಾಗ ನಾನೇನು ಹಿಂದೆ ಹೀಗೆ ಮಾಡಿರುವುದಿಲ್ಲ ಎಂದು ಹೇಳುವವನಾಗಿರಬೇಕು. ಹಿಂದೆ ನನಗೆ ಸಿಕ್ಕಿದ ಅಧಿಕಾರಾವಧಿಯೊಳಗೆ ಹೀಗಿತ್ತು. ನಾನು ತಪ್ಪೇ ಮಾಡಿಲ್ಲ ಎಂದು ಹೇಳುವಂತಿರಬೇಕು. ಟೀಕೆ ಮಾಡುವುದನ್ನೇ ನಾವು ...

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಆಯನೂರು ಮಂಜುನಾಥ್ ಅವರೇ, ತಮಗೆ ಯಾಕೋ ಸರ್ಕಾರದ ಬಗ್ಗೆ ಅನುಮಾನವಿರುವಂತಿದೆ.

**ಶ್ರೀ ಆಯನೂರು ಮಂಜುನಾಥ್:-** ಸರ್ಕಾರದ ಬಗ್ಗೆ ಅಲ್ಲ, ಮಾನ್ಯ ತಿಮ್ಮಾಪೂರ ಅವರ ಬಗ್ಗೆ ನನಗೆ ಸಂದೇಹವಿದೆ. ಸರ್ಕಾರವನ್ನು defend ಮಾಡಿಕೊಳ್ಳುವುದು ನನ್ನ ಕರ್ತವ್ಯ. ತಾವು ಇದ್ದಾಗ ತಮ್ಮ ಕರ್ತವ್ಯವೇನೋ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನು ಮಾಡಲಿಲ್ಲ. ಈಗ ನಮ್ಮನ್ನು ಟೀಕೆ ಮಾಡುತ್ತಿದ್ದೀರಿ. You do it. We welcome it. ಮಾನ್ಯ ತಿಮ್ಮಾಪೂರ ಅವರೇ, ನಾವು ಅದನ್ನು ಸ್ವಾಗತ ಮಾಡುತ್ತೇವೆ. ತಾವು handle ಮಾಡಿದ ಇಲಾಖೆಯ ಬಗ್ಗೆ threadbare ಚರ್ಚೆ ಮಾಡಬಹುದು. ಆದರೆ ಬೇಡ, ನಾವು ಈಗ ಹಾಗೆ ಹೋಗುವುದಿಲ್ಲ. ಅದಕ್ಕೆ ಬೇರೆಯ ಸಂದರ್ಭವನ್ನು ಉಪಯೋಗಿಸಿಕೊಳ್ಳೋಣ. ನೀವು ಮಧ್ಯೆ ಮಧ್ಯೆ ಚೆಂಡನ್ನು ನಮ್ಮೆಡೆಗೆ ಎಸೆದರೆ ನಾವು ಬ್ಯಾಟಿಂಗ್ ಮಾಡಲು ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಸುಮ್ಮನೆ ಹೋಗುತ್ತಿರುತ್ತೇವೆ.

ಆ ರೀತಿ ಎಲ್ಲಾ ಹಂತದಲ್ಲಿಯೂ ಮಾಡಿದ್ದೇವೆ. ಗ್ರಾಮೀಣಾಭಿವೃದ್ಧಿಯಲ್ಲಿ ಕೊರತೆಯಾಗಲಿಲ್ಲ. ರೈತರಿಗೆ ನೀಡಬೇಕಾದಂತಹ ಎಲ್ಲಾ ಸವಲತ್ತುಗಳನ್ನು ನೀಡಲಾಯಿತು. ಹೀಗೆ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ಮಾಡಿರುವ, ಸರ್ಕಾರದ ಆಲೋಚನೆಗಳನ್ನು, ಸರ್ಕಾರ ಮುಂದೆ ಹೋಗಬಯಸಿರುವ ದಿಕ್ಕನ್ನು ಮಾತ್ರ ಸೂಚ್ಯವಾಗಿ ಸೂಚಿಸಿದ್ದಾರೆ. ಸಂಪೂರ್ಣವಾಗಿ ಸರ್ಕಾರದ ಆಲೋಚನೆಗಳು, ಅದರ ಸಕ್ಷಮತೆ ಬರಲಿರುವ ಆಯವ್ಯಯದಲ್ಲಿ ಖಂಡಿತವಾಗಿಯೂ ತಿಳಿಯುತ್ತದೆ. ರಾಜ್ಯಪಾಲರ ಭಾಷಣ ಒಂದು ರೀತಿಯ ದಿಕ್ಸೂಚಿ ಭಾಷಣವಾಗಿದೆ.

ಆ ದಿಕ್ಸೂಚಿ ಭಾಷಣಕ್ಕೆ ಸನ್ಮಾನ್ಯ ರಾಜ್ಯಪಾಲರನ್ನು ಗೌರವ ಪೂರ್ವಕವಾಗಿ ವಂದಿಸುತ್ತಾ, ಮಂಡಿಸಲಾಗಿರುವ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯಕ್ಕೆ ಸದನವು ಅನುಮೋದನೆಯನ್ನು ನೀಡಬೇಕೆಂದು ಕೋರಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್ ಅವರು ನಾಲ್ಕೂ ಸದನಗಳನ್ನು ನೋಡಿದವರಾಗಿದ್ದು, ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಒಂದು ಪದಪ್ರಯೋಗ ಮಾಡಿದ್ದು, ಅವರಿಗೆ ಇಚ್ಛೆಯಿಲ್ಲವೆಂದರೆ ಅದನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು. ಪ್ರಜಾಪ್ರಭುತ್ವದಲ್ಲಿ ಸದಸ್ಯರು ಸದನದ ಬಾವಿಗೆ ಬರುವುದು ಅವರ ಹಕ್ಕು. ವಿರೋಧ ಪಕ್ಷದವರು ಬಂದಾಗ ಕೂಪ ಮಂಡೂಕಗಳಂತಿರದೆ, ಅದರಿಂದ ಮೇಲೆ ಬನ್ನಿ ಎಂದು ಹೇಳುವುದನ್ನು ದಯಮಾಡಿ ಕಡತದಿಂದ ತೆಗೆಸಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ಆ ಪದವು ಕೇವಲ ಹಾಸ್ಯಭರಿತವಾದ ಒಂದು comment ಆಗಿತ್ತೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ. ನಾನು ಅವರಿಗೆ ಕೂಪಮಂಡೂಕವಾಗಬೇಡಿ, ಬನ್ನಿ ಎಂದು ಹೇಳಿದೆನು. ಅದರ ಭಾವಾರ್ಥವೇನೇ ಇರಲಿ, ಅಕಸ್ಮಾತ್ ಅದರಿಂದ ತಪ್ಪಾಗುತ್ತದೆ ಎನ್ನುವುದಾದರೆ ಆ ಪದವನ್ನು ಹಿಂದಕ್ಕೆ ತೆಗೆದುಕೊಳ್ಳುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:-** ಸಾಂದರ್ಭಿಕವಾಗಿ ಹೊಮ್ಮಿದ ಮಾತುಗಳು... ಈಗ ಮಾತನಾಡಲು ಜೆಡಿ(ಎಸ್) ನಿಂದ ಆರು ಜನರ ಹೆಸರುಗಳ ಪ್ರಸ್ತಾವನೆ ಬಂದಿದೆ. ಕಾಂಗ್ರೆಸ್‌ನಿಂದ ಹತ್ತು ಜನರ ಹೆಸರುಗಳ ಪ್ರಸ್ತಾವನೆ ಬಂದಿದೆ. ಭೋಜನ ವಿರಾಮದ ನಂತರ ಮುಂದುವರೆಸಲಾಗುವುದು. ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3:00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 48 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 03 ಗಂಟೆಗೆ ಸೇರಲು ನಿಶ್ಚಯಿಸಿತು)**

(218) 08.02.2021 3.30 ವೈಎಲ್-ಎಂಡಿ

**(ಮಧ್ಯಾಹ್ನ 1 ಗಂಟೆ 48 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಹಂಗಾಮಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ಪ್ರಸ್ತಾವನೆಗೆ ನಾನು ಅನುಮೋದನೆ ಸಲ್ಲಿಸುತ್ತಾ, ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಇಲ್ಲಿಯವರೆಗೂ ನಮ್ಮ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಆಯನೂರ ಮಂಜುನಾಥ್‌ರವರು ರಾಜಕೀಯ ವ್ಯವಸ್ಥೆ ಬಗ್ಗೆ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಹಲವಾರು ವಿಷಯಗಳನ್ನು ಅವರದೇ ಆದ್ದಂತಹ ಶೈಲಿಯಲ್ಲಿ ಪ್ರಸ್ತಾಪಿಸಿ, ನಮ್ಮೆಲ್ಲರಿಗೂ ಚಿಂತನೆ ಮಾಡುವುದಕ್ಕೆ ಹಚ್ಚಿದಾರೆ ಎಂದು ಹೇಳುತ್ತಾ, ನಾನು ರಾಜ್ಯಪಾಲರ ಭಾಷಣದಲ್ಲಿರುವಂಥ ಅಂಶಗಳಿಗೆ ಸೀಮಿತವಾಗಿ ನನ್ನ ಅಭಿಪ್ರಾಯವನ್ನು ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(219)08.02.2021/3.40/ಎಸ್‌ಕೆ–ಎಂ.ಡಿ.

## 7. ಪ್ರಕಟಣೆ

**ವಿಷಯ:– ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರು ಅನಾರೋಗ್ಯದ ಕಾರಣದಿಂದ ಸದನಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲವೆನ್ನುವ ಬಗ್ಗೆ.**

– – – –

**ಹಂಗಾಮಿ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರು ಪ್ರಸ್ತುತ ಜ್ವರದಿಂದ ಬಳಲುತ್ತಿದ್ದು, ಅವರು ಬಾಗಲಕೋಟೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಹಾಗಾಗಿ ಅವರು ದಿನಾಂಕ 08.02.2021 ಮತ್ತು 09.02.2021 ರವರೆಗೆ ನಡೆಯುತ್ತಿರುವಂತಹ ಅಧಿವೇಶನಕ್ಕೆ ಬರಲು ಸಾಧ್ಯವಾಗುತ್ತಿಲ್ಲವೆಂದು ಹೇಳಿ ಸಭಾಪತಿಯವರ ಅವಗಾಹನೆಗೆ ತರಲು ತಿಳಿಸಿದ್ದು, ಇದನ್ನು ಮಾನ್ಯ ಸದಸ್ಯರೆಲ್ಲರ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ.

## 8. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

**ಶ್ರೀ ಎಸ್.ವ್ಹಿ ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರು ಭಾರತ ಸಂವಿಧಾನದ ಅನುಚ್ಛೇದ 175 ಮತ್ತು 176 (1) ರಡಿಯಲ್ಲಿ ಎರಡು ಬಾರಿ ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣವನ್ನು ಮಾಡುತ್ತಾರೆ. ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆ ಆದ ನಂತರ ನಡೆಯುವ ಮೊದಲನೆ ಅಧಿವೇಶನದೊಳಗೆ, ಎರಡನೆಯದಾಗಿ ಪ್ರತಿ ವರ್ಷ ಆರಂಭವಾಗತಕ್ಕಂತಹ ಮೊದಲನೇ ಅಧಿವೇಶನದೊಳಗೆ ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಈ ದಿಸೆಯಲ್ಲಿ ರಾಜ್ಯಪಾಲರು 2021ನೇ ಸಾಲಿನ ಹೊಸ ವರ್ಷ ಮೊದಲನೇ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಮಾತನಾಡಿ, ರಾಜ್ಯದಲ್ಲಿರುವ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿರುವ ಭಾರತೀಯ ಜನತಾ ಪಾರ್ಟಿ ಸರ್ಕಾರ. ಕಳೆದ ವರ್ಷ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಳೆದ ವರ್ಷ ಬೇರೆ ಬೇರೆ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ನೀರಾವರಿ, ವಾಣಿಜ್ಯ, ಶಿಕ್ಷಣ, ವಿಜ್ಞಾನ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗಳು ಹಾಗೂ ಏನೇನು ಯೋಜನೆಗಳ ಕಾರ್ಯಕ್ರಮಗಳ ಕುರಿತು ಮಾತನಾಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದನ್ನು ನಾವು ಕೇಳಿದ್ದೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಕೋವಿಡ್ ಅವಧಿಯಲ್ಲಿ ಅತ್ಯಂತ ಸಂಕಷ್ಟದಲ್ಲಿರುವಂತಹ ಕಡು ಬಡವರು ಅಂದರೆ ವಿಶೇಷವಾಗಿ ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಆಟೋ ಚಾಲಕರು, ಮಡಿವಾಳರು, ನೇಕಾರರು, ಕ್ಷೌರಿಕರು, ಚಮ್ಮಾರರು ಹೀಗೆ ಅನೇಕ ಬಡವರು ಬದುಕಲು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆರವಾಗುವುದಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿದ್ದಾರೆ. ಇದರ ಜೊತೆಗೆ ವಿಶೇಷವಾಗಿ 37 ವಿದೇಶಗಳಲ್ಲಿದ್ದ 6780 ಪ್ರವಾಸಿಗರು ಸಿಕ್ಕಿಹಾಕಿಕೊಂಡಿದ್ದರು. ಅವರನ್ನು ನಮ್ಮ ದೇಶಕ್ಕೆ ಕರೆತರುವುದರಲ್ಲಿ ರಾಜ್ಯ ಸರ್ಕಾರ ಮಾಡಿದಂತಹ ಒಂದು ನೆರವಿನ ಪ್ರಯತ್ನವಾಗಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇದನ್ನು ಬಹಳಷ್ಟು ಶ್ಲಾಘಿಸಿದ್ದಾರೆ. ಇದರ ಜೊತೆಗೆ ಬಹಳ ಮುಖ್ಯವಾಗಿ COVID-19 ನಿಯಂತ್ರಣ ಮಾಡುವಲ್ಲಿ ಇಡೀ ದೇಶದೊಳಗೆ ಅತ್ಯಂತ ಹೆಚ್ಚಿನ ಸಂಖ್ಯೆಯೊಳಗೆ COVID-19 test ಮಾಡಿ ಸುಮಾರು 1.36 ಲಕ್ಷ ಕೋವಿಡ್ ರೋಗಿಗಳೇನಿದ್ದರು, ಅವರೆಲ್ಲರಿಗೂ ಉಚಿತವಾಗಿ ಚಿಕಿತ್ಸೆ ನೀಡಿ, ಗುಣಮುಖವಾಗುವಂತೆ ಮಾಡಿದ್ದಾರೆ. ಅದರ ಜೊತೆಗೆ ಇತ್ತೀಚೆಗೆ ಎರಡು ಹೊಸ ಲಸಿಕೆಗಳನ್ನು ಕಂಡುಹಿಡಿದರು. ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಜನವರಿ 16 ರಂದು COVID-19 ಲಸಿಕೆ ಹಾಕುವ ಅಭಿಯಾನವನ್ನು ಪ್ರಾರಂಭ ಮಾಡಿದರು. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇವೆಲ್ಲವನ್ನು ಶ್ಲಾಘಿಸಿದ್ದಾರೆ. ಈ Covid ಸಂದರ್ಭದೊಳಗೆ ಮತ್ತು ಅದನ್ನು ನಿಯಂತ್ರಣ ಮಾಡುವಲ್ಲಿ ಕೇಂದ್ರ ಸರ್ಕಾರ ನೀಡಿದ ನೆರವನ್ನು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರೆಲ್ಲರೂ ನೆನಪಿಸಿಕೊಳ್ಳಬೇಕಾಗುತ್ತದೆ. ನಾವು ಕೇಂದ್ರ ಸರ್ಕಾರವನ್ನು ಅಭಿನಂದಿಸಬೇಕೆಂದು ಹೇಳಬಯಸುತ್ತೇನೆ. ವಿಶೇಷವಾಗಿ ನರೇಂದ್ರ ಮೋದಿಜೀಯವರು ಪ್ರಧಾನ ಮಂತ್ರಿಗಳ ಗರೀಬ್ ಕಲ್ಯಾಣ ಯೋಜನೆ ಅಡಿಯಲ್ಲಿ ದೇಶದಲ್ಲಿರುವಂತಹ ಯಾವುದೇ ಒಬ್ಬ ವ್ಯಕ್ತಿಯೂ ಹಸಿವಿನಿಂದ ಸಾಯಬಾರದು ಎನ್ನುವ ವಿಚಾರದೊಳಗೆ ರೂ. 1 ಲಕ್ಷ 70 ಸಾವಿರ ಕೋಟಿಗಳನ್ನು ಈ ಯೋಜನೆಗೆ ಬಿಡುಗಡೆ ಮಾಡಿದ್ದಾರೆ. ಬಡವರಿಗೆ ಆಹಾರ ಧಾನ್ಯ, ಗ್ಯಾಸ್ ಸಿಲಿಂಡರ್‌ಗಳನ್ನು ಪೂರೆಸಲಾಗಿದೆ. ಒಟ್ಟಾರೆಯಾಗಿ ಅವರ ಬದುಕಿಗೆ ತೊಂದರೆಯಾಗಬಾರದೆಂದು ತಿಳಿದುಕೊಂಡು ಈ ದೊಡ್ಡ ಮೊತ್ತವನ್ನು ಬಿಡುಗಡೆ ಮಾಡಿದ್ದಾರೆ. ತದನಂತರ ಇವತ್ತು ಏನೊಂದು ಆರ್ಥಿಕ ಸ್ಥಿತಿಯೂ ಸರಿ ಇರಲಾರದಂತಹ ಹಿನ್ನೆಲೆಯೊಳಗೆ ದೇಶದ ಅಭಿವೃದ್ಧಿ ಕುಂಠಿತವಾಗಬಾರದೆಂಬ ವಿಚಾರದೊಳಗೆ 'ಆತ್ಮನಿರ್ಭರ ಭಾರತ' ಯೋಜನೆ ಅಡಿಯೊಳಗೆ ಸುಮಾರು 20 ಲಕ್ಷ ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿರುವುದನ್ನು ನಾವೆಲ್ಲರೂ ಈ ಸಂದರ್ಭದೊಳಗೆ ನೆನಪಿಸಿಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. ಅದೇ ರೀತಿ ಈ ರಾಜ್ಯ ಸರ್ಕಾರದ ಮುಖ್ಯಮಂತ್ರಿಯಾಗಿರುವಂತಹ ಮಾನ್ಯ ಯಡಿಯೂರಪ್ಪನವರು ಶ್ರಮಿಕರಿಗಾಗಿ 1610 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಒಟ್ಟಾರೆ, ಈ COVID-19 ನಿಯಂತ್ರಣ ಮಾಡುವಲ್ಲಿ ಇಡೀ ದೇಶದೊಳಗೆ ನಮ್ಮ ಕರ್ನಾಟಕ ರಾಜ್ಯ ಪ್ರಥಮ ಸ್ಥಾನದಲ್ಲಿದೆ ಎಂಬ ಮಾತನ್ನು ಹೇಳುತ್ತೇನೆ. ಈ COVID-19 ನಿಯಂತ್ರಣ ಮಾಡುವ ಸಂದರ್ಭದೊಳಗೆ ಆರೋಗ್ಯ, ಶಿಕ್ಷಣ, ಕಂದಾಯ, ಇಲಾಖೆ ಇರಬಹುದು. ಇದರ ಜೊತೆಗೆ 36 ಇಲಾಖೆಗಳ ಸಚಿವರು ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿ ವರ್ಗದವರು ಬಹಳಷ್ಟು ವಿಶೇಷವಾದಂತಹ ಶ್ರಮವನ್ನು ವಹಿಸಿ, ಇದನ್ನು ನಿಯಂತ್ರಣ ಮಾಡುವುದಕ್ಕೆ ಅವರೆಲ್ಲರೂ ಕಾರಣಕರ್ತರಾಗಿದ್ದಾರೆ. ಇದರ ಜೊತೆಗೆ ಸಾರ್ವಜನಿಕ ವಲಯದಲ್ಲಿರುವಂತಹ ಎಲ್ಲಾ ಸಂಘ–ಸಂಸ್ಥೆಯವರು ಕೂಡ ಕೋವಿಡ್ ನಿಯಂತ್ರಣಕ್ಕಾಗಿ ಮಾಡಿದಂತಹ ಮಾನವೀಯತೆ ಸಹಕಾರವನ್ನು ಈ ಸಂದರ್ಭದಲ್ಲಿ ಮಾನ್ಯ ವಿರೋಧ

ಪಕ್ಷದ ಸದಸ್ಯರು ಹಾಗೂ ನಾವೆಲ್ಲರೂ ಕೂಡ ಬಹಳ ಪ್ರಮುಖವಾಗಿ ನೆನಪಿಸಿಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ ಮತ್ತು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುವುದಕ್ಕೆ ನಾನು ಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿರುವಂತಹ ಮಾನ್ಯ ಯಡಿಯೂರಪ್ಪನವರ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿ ವಿಶೇಷವಾದಂತಹ ಸಾಧನೆ ಮಾಡಿ, ದೇಶದಲ್ಲಿಯೇ ಪ್ರಥಮ ಸ್ಥಾನ ಪಡೆದಿರುವುದನ್ನು ನಾನು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ. ಪ್ರಮುಖವಾಗಿ ನವೀಕರಿಸಬಹುದಾದ ಇಂಧನ ವಲಯದೊಳಗೆ, ಇಡೀ ರಾಷ್ಟ್ರದಲ್ಲಿಯೇ ಮೊದಲನೇ ಸ್ಥಾನದಲ್ಲಿದ್ದೇವೆ. ಬೇಳೆ ಕಾಳು ಉತ್ಪಾದನೆ ಮಾಡುವಲ್ಲಿ, ಇಡೀ ದೇಶದೊಳಗೆ ಮೊದಲನೇ ಸ್ಥಾನದಲ್ಲಿದ್ದೇವೆ. 'Aerospace Policy' ಅನ್ನು ನಾವು ಇಡೀ ದೇಶದೊಳಗೆ ಪ್ರಥಮವಾಗಿ ಜಾರಿಗೆ ತಂದಿದ್ದೇವೆ. ಅದೇ ರೀತಿ ನಾವಿನ್ಯತೆಯ ಸೂಚ್ಯಾಂಕದಲ್ಲಿ ಕರ್ನಾಟಕ ಇವತ್ತು ಮೊದಲನೇ ಸ್ಥಾನದಲ್ಲಿದೆ. ಇದರ ಜೊತೆಗೆ ಬಹಳ ಮಹತ್ವವಾಗಿ ಪ್ರಸ್ತಾಪ ಮಾಡುವುದೇನೆಂದರೆ, ಇಡೀ ದೇಶದೊಳಗೆ "ಹಸಿರು ಸೂಚ್ಯಾಂಕ ಸಾಧನ ಕಿಟ್" ನ್ನು ಅಭಿವೃದ್ಧಿಪಡಿಸಿ, ಇವತ್ತು 'ರಾಷ್ಟ್ರೀಯ ಹಸಿರು ಪಡೆ' ಕಾರ್ಯಕ್ರಮ ಯಶಸ್ವಿಯಾಗುವುದಕ್ಕೆ, ಅದನ್ನು ಅನುಷ್ಠಾನ ಮಾಡುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಅದಕ್ಕೆ 'ಶ್ಲಾಘನಾ ಪ್ರಮಾಣ ಪತ್ರ'ವನ್ನು ಪಡೆದುಕೊಂಡಿದ್ದೇವೆಂಬ ಮಾತನ್ನು ಹೇಳುತ್ತೇನೆ. ರಸ್ತೆ ಸಾರಿಗೆ ನಿಗಮವು ತೀರಾ ಹಾಳಾದ ಬಸ್ಸುಗಳು ಅಂದರೆ, ಯಾವುದೇ ರೀತಿಯ ಉಪಯೋಗಕ್ಕೆ ಬಾರದ ಬಸ್ಸುಗಳನ್ನು 'ಸ್ತ್ರೀ ಶೌಚಾಲಯ' ವನ್ನಾಗಿ ಪರಿವರ್ತನೆ ಮಾಡಿ, ಈ ವಿಷಯಕ್ಕೂ ಕೂಡ ಪ್ರಶಂಸೆ ಪತ್ರಗಳನ್ನು ಪಡೆದುಕೊಂಡಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿರುವಂತಹ ಮಾನ್ಯ ಯಡಿಯೂರಪ್ಪನವರ ಸರ್ಕಾರವು ಕೆಲವೊಂದು ಇಲಾಖೆಯೊಳಗೆ ಏನೇನು ಕೆಲವು ನ್ಯೂನತೆಗಳಿದ್ದವು, ಆ ನ್ಯೂನತೆಗಳನ್ನು ಸರಿಪಡಿಸಿ ಇವತ್ತು ಜನಗಳಿಗೆ ಉಪಯುಕ್ತವಾದಂತಹ ಹೊಸ ನೀತಿಗಳನ್ನು ಕಳೆದ ವರ್ಷ ಜಾರಿಗೆ ತಂದಿದೆ. ಅದರಲ್ಲಿ ಪ್ರಮುಖವಾಗಿ, ನಾನು ಪ್ರಸ್ತಾಪ ಮಾಡುವುದೇನೆಂದರೆ, ಇವತ್ತು ಯುವ ಪದವೀಧರರು ಹೊಸ ಉದ್ಯೋಗಗಳನ್ನು ಪ್ರಾರಂಭ ಮಾಡುವುದಕ್ಕೆ ಏನು ಕೆಲವು ಅಡೆತಡೆಗಳಿದ್ದವು, ಆ ಅಡೆತಡೆಗಳನ್ನು ನಿವಾರಣೆ ಮಾಡಿ ಹೊಸ ಕೈಗಾರಿಕಾ ನೀತಿ 2020-25 ನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಪ್ರಮುಖವಾಗಿ ಗ್ರಾಮಾಂತರ ಪ್ರದೇಶದಲ್ಲಿರುವಂತಹ ಬಡವರಿಗೆ ಮನೆ ಕಟ್ಟುವುದಕ್ಕೆ ಮರಳಿನ ಸಮಸ್ಯೆ ಬಹಳ ಇತ್ತು. ಹಾಗಾಗಿ ಅದನ್ನು ನಿವಾರಣೆ ಮಾಡುವುದಕ್ಕೆ, 'ಹೊಸ ಮರಳು ನೀತಿ-2020' ನ್ನು ಕೂಡ ಕಳೆದ ವರ್ಷ ಜಾರಿಗೆ ತಂದಿದ್ದಾರೆ. ಪ್ರವಾಸೋದ್ಯಮವನ್ನು ಬೆಳೆಸುವುದಕ್ಕೆ ಖಾಸಗಿಯವರು ಬಂಡವಾಳ ಹಾಕುವ ರೀತಿಯೊಳಗೆ 'ಹೊಸ ಪ್ರವಾಸೋದ್ಯಮ ನೀತಿ 2020-25 ನ್ನು ಕೂಡ ಜಾರಿಗೆ ತಂದಿದ್ದಾರೆ. ಅದರ ಜೊತೆಗೆ ಹೊಸ ಮಾಹಿತಿ ತಂತ್ರಜ್ಞಾನ ನೀತಿ 2020-25 ನ್ನು ಕಳೆದ ವರ್ಷದಿಂದ ಜಾರಿಗೆ ತಂದಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರವು ಕಳೆದ ವರ್ಷ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಅದರಲ್ಲಿ ಕೆಲವೊಂದು ಯೋಜನೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ. ನಮಗೆ ಸ್ವಾತಂತ್ರ್ಯ ಸಿಕ್ಕಿ ಸುಮಾರು 74 ವರ್ಷಗಳಾಯಿತು. ಈ 74 ವರ್ಷಗಳ ಅವಧಿಯಲ್ಲಿ ನಮ್ಮ ರಾಜ್ಯದ ಸುಮಾರು 14,320 ಮನೆಗಳಿಗೆ ವಿದ್ಯುಚ್ಛಕ್ತಿ ಸಂಪರ್ಕವನ್ನು ಕೊಡುವುದಕ್ಕೆ ಆಗಿರಲಿಲ್ಲ. ಆ ಒಂದು ಹಿನ್ನೆಲೆಯೊಳಗೆ 'ಪಂಡಿತ ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ' ಅಡಿಯಲ್ಲಿ ಅವರೆಲ್ಲರ ಮನೆಯೊಳಗೆ ವಿದ್ಯುಚ್ಛಕ್ತಿಯನ್ನು ಕೊಡುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ ಎನ್ನುವ ಮಾತನ್ನು ಹೇಳುತ್ತೇನೆ. ಎಸ್‌ಸಿ/ಎಸ್‌ಟಿ ರೈತರುಗಳ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಕೊಡುವಂತಹ ಕಾರ್ಯಕ್ರಮಕ್ಕಾಗಿ ಸುಮಾರು 11,250 ಕೋಟಿ ರೂಪಾಯಿಗಳನ್ನು ಇವತ್ತು ಸರ್ಕಾರ ವೆಚ್ಚ ಮಾಡಿದೆ.

(ಮುಂದು)

(220)08.02.2021/03.50/ಎಂ.ಎಂ-ಎ.ಕೆ

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು)**

ಅದೇ ರೀತಿ 'ಸ್ವಚ್ಛ ಭಾರತ' ಅಭಿಯಾನ ಯೋಜನೆ ಅಡಿಯಲ್ಲಿ ಸುಮಾರು 03 ಲಕ್ಷದ 15 ಸಾವಿರ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ. ಅದರ ಜೊತೆಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಾಲೋನಿಗಳಿಗೆ 1035 ಕಿ.ಮೀ ಕಾಂಕ್ರೀಟ್ ರಸ್ತೆಯನ್ನು ನಮ್ಮ ಸರ್ಕಾರ ನಿರ್ಮಾಣ ಮಾಡಿದೆ. ಬಹಳ ಮುಖ್ಯವಾಗಿ ಭೂ ಒಡೆತನ ಯೋಜನೆಯಡಿಯೊಳಗೆ ಸುಮಾರು 3061 ಎಕರೆ ಭೂಮಿಯನ್ನು ಖರೀದಿ ಮಾಡಿ ಎಸ್.ಸಿ., ಎಸ್.ಟಿ., ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ. ಒಟ್ಟಾರೆ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಎಸ್.ಸಿ., ಸಮಾಜದವರಿಗೆ ಒಟ್ಟು 17,863 ಕೋಟಿ ರೂಪಾಯಿಗಳ ಅನುದಾನವನ್ನು ಹಾಗೂ ಎಸ್.ಟಿ., ಸಮಾಜದ ಅಭಿವೃದ್ಧಿಗಾಗಿ 7,754 ಕೋಟಿ ರೂಪಾಯಿಗಳನ್ನು ನೀಡಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಹೊಸ ಹೊಸ ಯೋಜನೆಗಳನ್ನು ನಮ್ಮ ಸರ್ಕಾರ ಇವತ್ತು ಶ್ರೀ ಸುರೇಶ್ ಕುಮಾರ್‌ರವರು ಜಾರಿಗೆ ತಂದಿದ್ದಾರೆ ಮತ್ತು ಉನ್ನತ ಶಿಕ್ಷಣ ಸಚಿವರಾದ ಶ್ರೀ ಅಶ್ವಥ್ ನಾರಾಯಣ್‌ರವರು ಕೂಡ ಹೊಸ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎನ್ನುವುದನ್ನು ಹೇಳಬಯಸುತ್ತೇನೆ. ವಿಶೇಷವಾಗಿ ಪ್ರೈಮರಿ, ಸೆಕೆಂಡರಿ ಮತ್ತು ಪಿ.ಯು., ಹಂತದೊಳಗೆ ಶಿಕ್ಷಣ ಸಚಿವರು ಶಿಕ್ಷಕರು ಮತ್ತು ಪೋಷಕರ ಸಹಾಯವಾಣಿಯನ್ನು ಪ್ರಾರಂಭ ಮಾಡಿದರು. ವಿಶೇಷವಾಗಿ ಕೋವಿಡ್ ಸಂದರ್ಭದಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಜೊತೆಗೆ ಮಾತನಾಡಬೇಕಾಗಿತ್ತು. ಏಕೆಂದರೆ ಬೋಧನೆ ಇರುತ್ತಿರಲಿಲ್ಲ, ತರಗತಿಗಳು ಪ್ರಾರಂಭವಾಗಿರಲಿಲ್ಲ. ಹಾಗಾಗಿ ಏನಾದರೂ ಸಮಸ್ಯೆಗಳಿದ್ದರೆ ಶಿಕ್ಷಕರ ಜೊತೆಗೆ ಮಾತನಾಡಬೇಕೆನ್ನುವ ವಿಚಾರದೊಳಗೆ ಶಿಕ್ಷಕರು ಮತ್ತು ಪೋಷಕರ ಸಹಾಯವಾಣಿಯನ್ನು ಪ್ರಾರಂಭ ಮಾಡಿದರು. ಬಹಳ ಮುಖ್ಯವಾಗಿ ಇನ್ನೊಂದು ಯೋಜನೆ ಪ್ರಾರಂಭವಾಗಿದ್ದು ಎಂದರೆ 'ಶಿಕ್ಷಕ ಮಿತ್ರ' ಮತ್ತು 'ಮಕ್ಕಳ ವಾಣಿ' ಯು-

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟ್ಯೂಬ್ ವಾಹಿನಿಯನ್ನು ಪ್ರಾರಂಭ ಮಾಡಿದರು. ಯು-ಟ್ಯೂಬ್ ವಾಹಿನಿಯ ಮೂಲಕ ಪಠ್ಯಕ್ರಮಗಳನ್ನು ಮಕ್ಕಳಿಗೆ ಬೋಧಿಸಬೇಕಾಗಿತ್ತು. ಅದನ್ನು ಬೋಧಿಸುವಂತಹ ಕೆಲಸ ಯು-ಟ್ಯೂಬ್ ವಾಹಿನಿಯಿಂದ ಆಗಿದೆ ಎನ್ನುವ ಮಾತನ್ನು ಹೇಳುತ್ತಾ ಜೊತೆಗೆ ಮೂರನೆಯದಾಗಿ, ಅವರು ಮಾಡಿದ ಕೆಲಸವೇನೆಂದರೆ, 'ನನ್ನ ಶಾಲೆ ನನ್ನ ಕೊಡುಗೆ' ಇದು ಬಹಳ ಮಹತ್ವದ್ದು. ಒಟ್ಟಾರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವುದಕ್ಕೆ ಹಲವಾರು ಯೋಜನೆಗಳನ್ನು ಶಿಕ್ಷಣ ಇಲಾಖೆಯೊಳಗೆ ಪ್ರಾರಂಭ ಮಾಡಿದೆ. ಇದು ಇಡೀ ರಾಷ್ಟ್ರದ ಗಮನಸೆಳೆದಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಟ್ಟಾರೆ ರಾಜ್ಯಪಾಲರು ಕಳೆದ ವರ್ಷ ನಮ್ಮ ಸರ್ಕಾರ ಏನೇನು ಜನಪರ ಕಾರ್ಯಕ್ರಮಗಳನ್ನು ಮಾಡಿದೆ ಆ ಎಲ್ಲಾ ಜನಪರ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡು ಅವರು ನಮ್ಮ ಸರ್ಕಾರದ ಬೆನ್ನು ತಟ್ಟುವ ಕೆಲಸವನ್ನು ಮಾಡಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೊನೆಯದಾಗಿ ನಾನು ಹೇಳುವುದಿಷ್ಟೇ. ಆಡಳಿತ ಪಕ್ಷದವರು ಏನೇ ಕೆಲಸ ಮಾಡಲಿ, ಎಷ್ಟೇ ಕೆಲಸ ಮಾಡಲಿ ವಿರೋಧಪಕ್ಷದವರು ಟೀಕೆ ಟಿಪ್ಪಣಿಗಳನ್ನು ಮಾಡುವುದು ಸಹಜ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಇದ್ದೇ ಇರುತ್ತದೆ. ಆದರೆ ಇಲ್ಲಿರುವಂತಹ ಎಲ್ಲಾ ವಿರೋಧಪಕ್ಷದ ನಾಯಕರಿಗೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಕಳೆದ ವರ್ಷ ನಮ್ಮ ಮುಖ್ಯಮಂತ್ರಿಯವರಾದಂತಹ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಏನೇ ಜನಪರ ಕಾರ್ಯಕ್ರಮಗಳನ್ನು ಮಾಡಿದರೂ ಆ ಎಲ್ಲಾ ಕಾರ್ಯಕ್ರಮಗಳನ್ನು ಸುಮಾರು 6.5 ಕೋಟಿ ಜನರು ಮೆಚ್ಚಿಕೊಂಡು ಮಾನ್ಯ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರಕ್ಕೆ ಶೇ.80ರಷ್ಟು ಅಂಕಗಳನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದಕ್ಕೆ ಸಾಕ್ಷಿ ಏನೆಂದರೆ, ಇತ್ತೀಚೆಗೆ ನಡೆದಂತಹ ಚುನಾವಣೆಗಳು. 17 ಎಂ.ಎಲ್.ಎ. ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯಲ್ಲಿ ನಾವು 15 ಕ್ಷೇತ್ರಗಳಲ್ಲಿ ಗೆದ್ದಿದ್ದೇವೆ. 4 ಎಂ.ಎಲ್.ಸಿ. ಚುನಾವಣೆ ನಡೆದು ನಾಲ್ಕು ಕಡೆಗಳಲ್ಲೂ ಬಿ.ಜೆ.ಪಿ ಅಭ್ಯರ್ಥಿಗಳು ಗೆದ್ದಿದ್ದಾರೆ. ಅದಾದ ನಂತರ ಗ್ರಾಮ ಪಂಚಾಯಿತಿ ಚುನಾವಣೆ ನಡೆಯಿತು. ಆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಕೂಡ ನಾವು ಹೆಚ್ಚಿನ ಸ್ಥಾನಗಳನ್ನು ಪಡೆದುಕೊಂಡಿರುವುದಕ್ಕೆ ಇದು ಸಾಕ್ಷಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗಾಗಿ ವಿರೋಧ ಪಕ್ಷದ ನಾಯಕರು ಏನೇ ಟೀಕೆ ಟಿಪ್ಪಣಿಗಳನ್ನು ಮಾಡಿದರೂ ಕೂಡ ಜನರು ಬುದ್ಧಿವಂತರಿದ್ದಾರೆ, ಅವರು ಸರಿಯಾಗಿ ಅರ್ಥೈಸಿಕೊಂಡಿದ್ದಾರೆಂದು ಹೇಳುತ್ತಾ, ಕೊನೆಯದಾಗಿ ನಾನು ಹೇಳುವುದು ಇಷ್ಟೇ. ನಮ್ಮ ಬೆನ್ನು ನಮಗೆ ಕಾಣುವುದಿಲ್ಲ. ಹೀಗಾಗಿ ವಿರೋಧ ಪಕ್ಷದ ಸದಸ್ಯರಿಂದ ಏನು constructive ವಿಚಾರಗಳನ್ನು, ಐಡಿಯಾಗಳನ್ನು ಕೊಡುತ್ತಾರೆ ನಮ್ಮ ಸರ್ಕಾರ ಖಂಡಿತವಾಗಿ ಅವನ್ನೆಲ್ಲವನ್ನೂ ಸ್ವೀಕಾರ ಮಾಡುತ್ತದೆಂದು ಹೇಳುತ್ತಾ ಕೊನೆಯದಾಗಿ ನಾನು ಪದವೀಧರ ಕ್ಷೇತ್ರದಿಂದ ಆಯ್ಕೆಯಾದ ಎಂ.ಎಲ್.ಸಿ ಆಗಿರುವುದರಿಂದ ಇಲ್ಲಿ ಒಂದು ವಿಚಾರವನ್ನು ವ್ಯಕ್ತಪಡಿಸಬಯಸುತ್ತೇನೆ. ನಮ್ಮ ರಾಜ್ಯದೊಳಗೆ ನಿರುದ್ಯೋಗ ಸಮಸ್ಯೆ ವರ್ಷದಿಂದ ವರ್ಷಕ್ಕೆ ಬೃಹತ್ತಾಗಿ ಬೆಳೆಯುತ್ತಿದೆ. ಈ ಸಂದರ್ಭದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಶಿಕ್ಷಣ ಇಲಾಖೆಯೊಂದೇ ಅಲ್ಲ ನಮ್ಮ ರಾಜ್ಯದಲ್ಲಿ 36 ಇಲಾಖೆಗಳಿವೆ. ಆ 36 ಇಲಾಖೆಯೊಳಗೆ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಹುದ್ದೆಗಳು ನಿವೃತ್ತಿಯಿಂದ ಮತ್ತು ನಿಧನದಿಂದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಖಾಲಿಯಾದ ಹುದ್ದೆಗಳಿವೆ. ಏಕೆಂದರೆ ಕೋವಿಡ್‌ನಿಂದಾಗಿ ಆರ್ಥಿಕ ಸ್ಥಿತಿ ಬಹಳ ಕೆಟ್ಟು ಹೋಗಿದೆ. ಆ ದಿಸೆಯೊಳಗೆ ಮುಂಬರುವ ದಿನಮಾನದೊಳಗೆ ನಮ್ಮ ರಾಜ್ಯ ಸರ್ಕಾರ ಖಂಡಿತವಾಗಿ ಮುಂಬರುವ ದಿನಮಾನಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ; ಏಕೆಂದರೆ, ವಯೋಮಿತಿ ಮೀರುತ್ತಿದೆ. ಆ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಮುಂಬರುವ ದಿನಮಾನದೊಳಗೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಿವತ್ತು economic ban ಹೇರಿದ್ದಾರೆ ಅದನ್ನು ಹಿಂದಕ್ಕೆ ತೆಗೆದುಕೊಂಡು ನಮ್ಮ ರಾಜ್ಯದಲ್ಲಿ ನೇಮಕಾತಿ ಮಾಡುವಂತಹ ಪ್ರಕ್ರಿಯೆಯನ್ನು ಮಾಡಿಯೇ ಮಾಡುತ್ತದೆ ಎಂಬ ವಿಶ್ವಾಸದ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತಿನ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಮಾಡುವಂತಹ ಸಂದರ್ಭದಲ್ಲಿ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಎಲ್ಲರಿಗೂ ವಂದಿಸಿ ನನ್ನ ಮಾತುಗಳಿಗೆ ವಿರಾಮವಿಡುತ್ತೇನೆ.

**ಹಂಗಾಮಿ ಸಭಾಪತಿಯವರು:-** ಈಗ ಶ್ರೀ ಯು.ಬಿ.ವೆಂಕಟೇಶ್‌ರವರು ಮಾತನಾಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆಳಮನೆ ಇಲ್ಲ. ಮೇಲ್ಮನೆ ನಡೆಯುತ್ತಿದೆ. ಅಧಿಕಾರಿಗಳು ಕನಿಷ್ಟ ಆರ್ಥಿಕ ಇಲಾಖೆ, ಪಿ.ಡಬ್ಲ್ಯು.ಡಿ., ಸಮಾಜಕಲ್ಯಾಣ ಇಲಾಖೆಯವರು ಒಂದೊಂದು ಇಲಾಖೆಯಿಂದ ಒಬ್ಬೊಬ್ಬ ಅಧಿಕಾರಿ ಬಂದು ಇಲ್ಲಿ ಕುಳಿತುಕೊಳ್ಳುವುದಕ್ಕೆ ಏನು ತಾಪತ್ರಯವಿದೆ? ಎಂದರೆ, ಈ ಮನೆಗೆ ಎಷ್ಟು ಗೌರವ ಇದೆ ಎನ್ನುವುದು ತಿಳಿಯುತ್ತದೆ. ಆದ್ದರಿಂದ ತಾವು ಕಠಿಣವಾದ ಆದೇಶ ಕೊಡಬೇಕು. ಕೆಳಮನೆಯಲ್ಲಿ ಅಧಿವೇಶನ ಇಲ್ಲ. ಇಲ್ಲಿ ಬಂದು ಒಂದರ್ಧ ಗಂಟೆ, ಒಂದು ಗಂಟೆ ಕುಳಿತರೆ, ಸುಮ್ಮನೆ ಕುಳಿತು ನಿದ್ದೆ ಮಾಡಿದ ಹಾಗೆ ಮಾಡಿದರೂ ಏನು? ಕೇಳಿಸದೇ ಇದ್ದರೂ ಮಾಸ್ಕ್ ಅನ್ನು ಹಾಕಿಕೊಂಡರೆ ಸಾಕು. ಮಲಗಿದ್ದರೂ ಗೊತ್ತಾಗುವುದಿಲ್ಲ, ಕೂತರೂ ಗೊತ್ತಾಗುವುದಿಲ್ಲ. At least ಒಂದು ತಾಸಾದರೂ ಕುಳಿತುಕೊಳ್ಳುವ ವ್ಯವಸ್ಥೆಯನ್ನು ಮಾಡಿಸಬೇಕೆಂದು ತಮ್ಮ ಮೂಲಕ ಸಭಾನಾಯಕರನ್ನು ಒತ್ತಾಯಿಸುತ್ತೇನೆ.

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ವಿರೋಧ ಪಕ್ಷದವರು ಇಲ್ಲಿ ಯಾರೂ ಸಂಬಂಧಪಟ್ಟ ಅಧಿಕಾರಿಗಳು ಇಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಂದು ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳ ಪಟ್ಟಿಯನ್ನು ನೋಡಿ ಕೂಡಲೇ ಕರೆಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಅವರೂ ಕಷ್ಟ ಪಡಲಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ ಸರ್ಕಾರದ ವೈಚಾರಿಕತೆ ಆಧಾರದ ಮೇಲೆ ಆಯಾ ವರ್ಷದ ಆದ್ಯತೆ ಮತ್ತು ಸಾಧ್ಯತೆಗಳ ಮುನ್ನೋಟದ ಪ್ರಸ್ತಾಪವಿರುತ್ತದೆ. ಆದರೆ ಈ ಬಾರಿಯ ರಾಜ್ಯಪಾಲರ ಭಾಷಣದಲ್ಲಿ ವೈಚಾರಿಕತೆಯೂ ಇಲ್ಲ, ಮುನ್ನೋಟವೂ ಇಲ್ಲ. ಇದೊಂದು ರೀತಿಯಲ್ಲಿ ಒಣ ಗಣೇಶನ ಭಾಷಣವಾಗಿದೆ. ಇಷ್ಟೊಂದು ಕಳಪೆ ದರ್ಜೆಯ ಭಾಷಣವನ್ನು ರಾಜ್ಯಪಾಲರ ಕೈನಲ್ಲಿ ಮಾಡಿಸಿರುವುದಕ್ಕೆ ಸರ್ಕಾರ ಜನರ ಕ್ಷಮೆ ಕೇಳಬೇಕು, ಕೇಳುವುದೇ ಉಚಿತ. ರಾಜ್ಯಪಾಲರ ಭಾಷಣದಲ್ಲಿ ಕಳೆದ ವರ್ಷ ಮಾಡಿದಂತಹ ಕೆಲಸಗಳನ್ನೆಲ್ಲಾ ಪ್ರಿಂಟ್ ಮಾಡಿ ಕೊಡುವ ಬದಲು ನೀವು ಕ್ಯಾಬಿನೆಟ್ ಸಭೆಯಲ್ಲಿಯೇ ಅದನ್ನು ನಿರ್ಧಾರ ಮಾಡಿ ಇಂತಿಂತಹ ಕೆಲಸ ಮಾಡಿದ್ದೇವೆಂದು ಎಲ್ಲಾ ಸದಸ್ಯರುಗಳಿಗೂ ಕೊಟ್ಟಿದ್ದರೆ ಅದೇ ಸಾಕಾಗಿತ್ತು. ಇದಕ್ಕೆಲ್ಲಾ ಸುಲಭವಾಗಿ ಹೇಳುವುದೇನೆಂದರೆ, ಈ ಸರ್ಕಾರ 'ಬಂಡವಾಳವಿಲ್ಲದ ಬಡಾಯಿ' ಎಂಬುದು. ಯಾವ ಸಾಧನೆಯೂ ಇಲ್ಲದಾಗ ವೇದನೆಯೇ ಸಾಧನೆಯೆಂದು ಹಸಿರುತೋರಣವನ್ನು ಕಟ್ಟಿ ಜನರನ್ನು ಯಾಮಾರಿಸುವುದು ಬಹುಶಃ ಈ ಸರ್ಕಾರದ ಕುಟಿಲ ನೀತಿ. ಸುಮಾರು 19 ತಿಂಗಳುಗಳ ಹಿಂದೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗ ಒಂದು ವರ್ಗದ ಜನ ಈ ಭಾಗ್ಯದ ಬಾಗಿಲೇ ತೆರೆಯಿತು ಎಂದು ನಂಬಿದ್ದರು. ದಿನಗಳು ಉರುಳಿದಂತೆ ಭಾಗ್ಯದ ಬಾಗಿಲಿನ ಕನಸು ಇನ್ನಷ್ಟು ಹೆಚ್ಚಾಗಲು ರಾಜಕೀಯ ಬೆಳವಣಿಗೆಗಳು ಕಾರಣವಾಗಿವೆ. ಆದರೆ ಆಗಿದ್ದೇನು? ಅಂದುಕೊಂಡಿದ್ದೇ ಒಂದು, ಒದಗಿ ಬಂದದ್ದೇ ಇನ್ನೊಂದು. ಈಗಲೂ ಗೊತ್ತಾಗುತ್ತಿಲ್ಲ. ಏಕೆಂದರೆ, ಈ ಸರ್ಕಾರ ಬಂದ ತಕ್ಷಣ ಕಂಡೂ ಕೇಳರಿಯದಂತಹ ಪ್ರವಾಹ ಬಂತು. ಅದು ಮುಂಬೈ ಕರ್ನಾಟಕ, ಮಲೆನಾಡು ಕಡೆ ಆಗಿರಬಹುದು, ಕೊಡಗು ಕಡೆ ಆಗಿರಬಹುದು. ಇದನ್ನೆಲ್ಲಾ ತೀರಿಸುವುದಕ್ಕೆ ಮುಖ್ಯಮಂತ್ರಿಯವರು ವಿರೋಧ ಪಕ್ಷದವರು ಹೇಳಿದ ಹಾಗೆ ತಿರುಗಾಡಿ ಮಾಡಿದರು, ಒಂದು ಸ್ವಲ್ಪ ಹಣವನ್ನೂ ಕೊಟ್ಟರು. ಆದರೆ ಕೇಂದ್ರಸರ್ಕಾರದಿಂದ ಏನು ಬರಬೇಕಾಗಿತ್ತು ಅದು ಬರಲೇ ಇಲ್ಲ. ಬಂದಿದ್ದು ಎಷ್ಟು ಎಂದರೆ ಅದು ಲೆಕ್ಕಕ್ಕೇ ಇಲ್ಲದಷ್ಟು. ನಾವು 33 ಸಾವಿರ ಕೋಟಿ ರೂಪಾಯಿಗಳನ್ನು ಕೇಳಿದರೆ ಅವರು 1,000 ಕೋಟಿ ರೂಪಾಯಿಗಳನ್ನು ಕೊಟ್ಟರು. ಪ್ರಧಾನಮಂತ್ರಿಯವರು ನಮ್ಮ ರಾಜ್ಯದ ಜನರ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ. ಇದನ್ನು ನೋಡುವುದಕ್ಕೆ ಶ್ರೀ ಅಮಿತ್ ಶಾ ರವರು ಮತ್ತು ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಬಂದರು, ಹೋದರು. ಆದರೆ ಏನೂ ಬಿಡುಗಡೆ ಮಾಡಲಿಲ್ಲ. ಕಡೆಗೆ ಮುಖ್ಯಮಂತ್ರಿಯವರ ಸ್ಥಿತಿ ಎಲ್ಲಿಗೆ ಬಂತು ಎಂದರೆ, 'ಸಿದ್ಧಗಂಗಾ ಮಠ'ಕ್ಕೆ ಪ್ರಧಾನಮಂತ್ರಿಯವರು ಬಂದಾಗ ಅವರು ಈ ರಾಜ್ಯಕ್ಕೆ ಏನಾದರೂ ಸಹಾಯ ಮಾಡಿ ಎಂದು public meeting ನಲ್ಲಿ ಕೇಳಬೇಕಾಯಿತು. ಇಂತಹ ಸ್ಥಿತಿ ಮುಖ್ಯಮಂತ್ರಿಯವರಿಗೆ ಬರಬಾರದು, ಈ ರಾಜ್ಯಕ್ಕೆ ಬರಬಾರದು ಎಂಬುದು ನಮ್ಮ ಅನಿಸಿಕೆ. ಈಗ ತೆವಳುತ್ತಾ, ಕುಂಟುತ್ತಾ ಸಾಗುತ್ತಿರುವ ಈ ಸರ್ಕಾರಕ್ಕೆ ಊರುಗೋಲಾಗಿರುವುದು 'ಕೊರೋನಾ'. ಏನೇ ಕೇಳಲಿ ಕೊರೋನಾ. ನಮ್ಮ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜ್ಯದ ಬಜೆಟ್ ಸುಮಾರು 02 ಲಕ್ಷದ 34 ಸಾವಿರ ಕೋಟಿ ರೂಪಾಯಿಗಳು ಇದೆ. ಕೊರೋನಾಗೆ ಎಷ್ಟು ಖರ್ಚು ಮಾಡಿದ್ದಾರೆ ಎಂದು ಕೇಳಿದರೆ ಇವತ್ತಿನವರೆಗೂ ಒಬ್ಬರೂ ಸರಿಯಾದ ಅಂಕಿ ಅಂಶಗಳನ್ನು ಹೇಳುವುದಿಲ್ಲ. ಅದರಲ್ಲಿ ಎಷ್ಟು ಅವ್ಯವಹಾರವಾಗಿದೆಯೆಂದು ನಾವು ಹತ್ತಾರು ಸಲ ಕೇಳಿದ್ದೇವೆ, ಒಬ್ಬರೂ ಶ್ವೇತಪತ್ರವನ್ನು ಬಿಡುಗಡೆ ಮಾಡುವುದಿಲ್ಲ. ನಿಜವಾದ ಅರ್ಥದಲ್ಲಿ ಇದು ಜನರ ವೈರಿ. ಕೊರೋನಾ ಬಂದದ್ದು ಇವರಿಗೆ ಒಂದು ವರ ಆಗಿ ಬಿಟ್ಟಿದೆ. ಎಲ್ಲದರಲ್ಲೂ ತಮ್ಮ ಅನುಕೂಲಗಳನ್ನು ನೋಡಿಕೊಳ್ಳುವ ಈ ಸರ್ಕಾರದಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಮಂತ್ರಿಗಳವರೆಗೂ ಒಂದು ತಾಳ ಮೇಳವೇ ಇಲ್ಲ. ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿಗೆ ಸ್ಥಳಾಂತರಗೊಳಿಸುವುದೇ ಈ ಸರ್ಕಾರದ ಒಂದು ಪವಾಡ.

(ಮುಂದು)

(221) 08-02-2021/ 04-00/ ಕೆಹೆಚ್-ಎಕೆ

**ಶ್ರೀ ಯು.ಬಿ.ವೆಂಕಟೇಶ್ (ಮುಂದು)**

ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳಿಗೆ ದ್ರೋಹ ಮಾಡಿ ಬಿಜೆಪಿ ಸರ್ಕಾರ ರಚಿಸಲು ಅನುಕೂಲ ಮಾಡಿಕೊಟ್ಟಂತಹ ಶಾಸಕರು ನ್ಯಾಯಾಲಯ, ಕಛೇರಿಗಳನ್ನು ಅಲೆದು ಕೊನೆಗೂ ಚುನಾಯಿತರಾದರು. ಚುನಾಯಿತರಾದ ಮೇಲೆ ಮಂತ್ರಿಗಳಾಗಬೇಕಾದರೆ ತಿಂಗಳುಗಟ್ಟಲೆ ಕಾಯಬೇಕಾಯಿತು. ಆದಾದ ನಂತರ ಖಾತೆಗಳಿಗೆ ಕಾಯಬೇಕಾಯಿತು. ನಂತರ ಖಾತೆಗಳ ಬದಲಾವಣೆಗೆ ಕಾಯಬೇಕಾಯಿತು. 4-5 ದಿವಸಗಳಲ್ಲಿ 4-5 ಬಾರಿ ಖಾತೆಗಳನ್ನು ಬದಲಾವಣೆ ಮಾಡುವಂತಹ ವ್ಯವಸ್ಥೆ ಯಾವುದೇ ಚರಿತ್ರೆಯಲ್ಲಿಯೂ ಇಲ್ಲ. ಆದರೆ ಈ ರೀತಿಯ ವ್ಯವಸ್ಥೆ ಈ ಸರ್ಕಾರಕ್ಕೆ ಬಂದೊದಗಿದೆ. ಇದೊಂದು ದುರ್ದೈವ. ಯಾವುದೇ ಕೆಲಸವನ್ನು ಕೇಳಲಿ, ಈ ಸರ್ಕಾರದಲ್ಲಿ ದುಡ್ಡಿಲ್ಲ. ಕರೋನಾ ಎಂದು ಹೇಳುತ್ತಾರೆ. ಗುತ್ತಿಗೆದಾರರಿಗೆ ದುಡ್ಡು ಕೊಟ್ಟಿಲ್ಲ. ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲ. ಆದರೆ, ಈ ಗಂಜಿ ಕೇಂದ್ರಗಳು ಇರುವಂತಹ ಎಲ್ಲಾ ಕಾರ್ಪೋರೇಷನ್‌ಗಳಿಗೂ ಛೇರ್‌ಮನ್ಸ್ ಮತ್ತು ಮೆಂಬರ್ಸ್ ಅನ್ನು ಅತಿ ವೇಗವಾಗಿ ಮಾಡುತ್ತಾರೆ. ನಂತರ ಈ ರೀತಿ ಛೇರ್‌ಮನ್ಸ್ ಮತ್ತು ಮೆಂಬರ್ಸ್ ಮಾಡಿದವರೆಲ್ಲರಿಗೂ cabinet rank ಕೊಡುತ್ತಾರೆ. ಈ ರೀತಿ ಎಲ್ಲಿಯಾದರೂ ಕೇಳಿದ್ದೇವೆಯೇ? ಯಾರೋ ಇಬ್ಬರಿಗೆ ಕೊಡಬೇಕು ಸರಿ. ನಾನು ಕೂಡ ಕಿಯೋನಿಕ್ಸ್ ಛೇರ್‌ಮನ್ ಆಗಿದ್ದೆ. ನನಗೂ ಕೂಡ cabinet rank ಕೊಟ್ಟಿದ್ದರು. ನಾನು ಯಾವ ಸಚಿವರ ಹತ್ತಿರ ಕೆಲಸಕ್ಕೆ ಹೋಗುತ್ತೇನೆಯೋ, ಅವರು ಕೂಡ cabinet rank ಕೊಡುತ್ತಾರೆ. ನಮ್ಮ ಅಧಿಕಾರಿಗಳು ಏನು ಮಾಡುತ್ತಾರೆ? ಅವರಿಗೆ ಯಾವ ರೀತಿಯ ಪರಿಸ್ಥಿತಿ ಬರುತ್ತದೆ ಎಂದರೆ, ಸಚಿವರಿಗೂ ಒಂದೇ ರೀತಿಯ ಗ್ರೇಡ್, ಛೇರ್‌ಮನ್‌ಗೂ ಒಂದೇ ರೀತಿಯ ಗ್ರೇಡ್. ಇದು ಈ ಸರ್ಕಾರಕ್ಕೆ ಒಂದು ದಿಕ್ಸೂಚಿ ಇಲ್ಲ ಎಂದು ತೋರಿಸುತ್ತದೆ. ಒಂದು ಸಂಪುಟ ದರ್ಜೆ ಕೊಡಬೇಕೆಂದರೆ ಅದಕ್ಕೊಂದು ಶಿಷ್ಟಾಚಾರ ಇರುತ್ತದೆ. ಅದನ್ನೆಲ್ಲಾ ಗಾಳಿಗೆ ತೂರಿ ಅವರಿಗೆ ಇಷ್ಟ ಬಂದವರಿಗೆ ಮತ್ತು ಅವರಿಗೆ ಬೇಕಾದವರಿಗೆ ಮಾಡುತ್ತಾರೆ. ಈಗ ಒಂದು ಉದಾಹರಣೆಯನ್ನು ಹೇಳಬೇಕೆಂದರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಛೇರ್‌ಮನ್ ಮಾಡಿದ್ದಾರೆ. ಅಲ್ಲಿ ಯಾವುದೇ ಮೆಂಬರ್ಸ್ ಇಲ್ಲ. ಅವರು ಏನೇ ಇದ್ದರೂ ಕೂಡ ಸರ್ಕಾರಕ್ಕೆ ತೆಗೆದುಕೊಂಡು ಬರಬೇಕು. ಯಾವುದೇ ಕೆಲಸವನ್ನು ಮಾಡಿದರೂ ಕೂಡ ಅದನ್ನು ಪೂರ್ತಿಯಾಗಿ ಮಾಡುವುದಿಲ್ಲ. ಅವರು ಯಾರಿಗೆ ಬೇಕೋ ಅವರಿಗೆ ಮಾಡುವುದು, ಒಂದು ಕಾರು ಕೊಟ್ಟು, ಛೇರ್‌ಮನ್ ಮಾಡಿ, ಅವನಿಗೆ ಒಂದು cabinet rank ಕೊಡುವುದನ್ನು ಮಾಡುತ್ತಾರೆ. ನನಗೆ ಗೊತ್ತಿರುವ ಹಾಗೆ ಇದಕ್ಕೆ ಅಲ್ಲೊಂದು ಕಮಿಟಿಯೇ ಇರುವುದಿಲ್ಲ. ಅಲ್ಲಿ ಕಮಿಟಿ ಇದ್ದರೆ 1500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಏನಾದರೂ ಮಾಡಬಹುದು. ಅದನ್ನು ಬಿಟ್ಟು ಅವರಿಗೆ ಏನು ಕೆಲಸವಾಗಬೇಕಾದರೂ ಅವರು ಸರ್ಕಾರಕ್ಕೆ ಬರಬೇಕು. ಈ ಸರ್ಕಾರ ಬಂದ ಮೇಲೆ ನಾಲ್ಕು ಅಧಿವೇಶನಗಳನ್ನು ಎದುರಿಸಿದೆ. ಮೊದಲನೆಯ ಅಧಿವೇಶನ ಯಾವುದೂ ಸುಸೂತ್ರವಾಗಿ ನಡೆಯಲಿಲ್ಲ. ಮೊದಲನೆಯ ಅಧಿವೇಶನದಲ್ಲಿ ಇವರು ಅಧಿಕಾರವನ್ನು ತೆಗೆದುಕೊಂಡಿದ್ದು ಮುಗಿಯಿತು. ಎರಡನೆಯ ಅಧಿವೇಶನ ಬರುವಷ್ಟರ ಹೊತ್ತಿಗೆ ಮುಂಗಡ ಪತ್ರ ಬಂದಿತು. ಅಷ್ಟರಲ್ಲಿ ದಿವಸಗಳನ್ನು ಈ ಕರೋನ ತೆಗೆದುಕೊಂಡಿತು. ಮೂರನೆಯ ಚಳಿಗಾಲದ ಅಧಿವೇಶನ 'ಆಟಕ್ಕುಂಟು, ಲೆಕ್ಕಕ್ಕಿಲ್ಲ' ಎನ್ನುವಂತಾಯಿತು. ಈಗ ನಡೆಯುತ್ತಿರುವ ಅಧಿವೇಶನ ಐದು ದಿನಗಳ ಕಾಲ ಇತ್ತು. ಕಾರಣಾಂತರಗಳಿಂದ ಎರಡು-ಮೂರು ದಿನ ಮುಂದುವರೆಸಿದ್ದಾರೆ. ನಾವು ಇಲ್ಲಿಗೆ ಬಂದು ಎರಡು ವರ್ಷಗಳಾಯಿತು. ಒಳ್ಳೆಯ constructive ಆಗಿ ನಾವು ತಿಳಿದುಕೊಳ್ಳುವಂತಹದ್ದು, ಕಲಿತುಕೊಳ್ಳುವಂತಹದ್ದು ಯಾವುದೂ ಆಗುತ್ತಿಲ್ಲ. ಇದೊಂದು ನಮಗೆ ವೇದನೆಯಾಗಿದೆ. ಹಿರಿಯ ಸದಸ್ಯರು ಇಲ್ಲಿ ಬಂದು ಕುಳಿತುಕೊಂಡು ವಿವರಣೆ ಕೊಡಬೇಕು. ಹೊಸ ಹುಡುಗರು ಬರುತ್ತಾರೆ, ಅವರು ಯಾವ ರೀತಿ ನಡೆದುಕೊಳ್ಳಬೇಕು. ಯಾವ ರೀತಿ ಇರಬೇಕು, ಏನು ಮಾತನಾಡಬೇಕೆನ್ನುವ ಬಗ್ಗೆ ಎಲ್ಲಾ ಹಿರಿಯ ಸದಸ್ಯರಿಗೆ ತಾವು ಹೇಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ಅಧಿವೇಶನ ಇನ್ನು ಎರಡು-ಮೂರು ದಿನಗಳಲ್ಲಿ ಮುಗಿದು ಹೋಗುತ್ತದೆ. ಈ ಸದನದಲ್ಲಿ ಭಾವನಾತ್ಮಕ ವಿಷಯಗಳನ್ನು ಮಂಡಿಸಿ, ಜನರನ್ನು ದಾರಿ ತಪ್ಪಿಸುವುದೇ ಈ ಸರ್ಕಾರದ ಉದ್ದೇಶವಾಗಿದೆ. ಈ ಅಧಿವೇಶನಗಳ ಚರಿತ್ರೆಯೇ ಹೀಗಿದ್ದರೆ, ಮುಂದೆ ಬರುವಂತಹ ಅಧಿವೇಶನ ಯಾವ ರೀತಿ ಇರುತ್ತದೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರಿಗೆ ನಾನು ಇಷ್ಟೇ ವಿಚಾರವನ್ನು ಹೇಳುತ್ತೇನೆ. ಈಗ 17 ತಿಂಗಳುಗಳ ಅಂಕಿ ಕಳೆದು ಹೋಯಿತು. ರಾಜ್ಯದ ಜನರ ಪರವಾಗಿ ಈಗ ಬರುವಂತಹ ದಿನಗಳಲ್ಲಿ ತಮ್ಮ ಮಂತ್ರಿಗಳು ಮತ್ತು ಅಧಿಕಾರಿಗಳ ಕಿವಿ ಹಿಂಡಿ ಜನಪರ ಕಾರ್ಯ ಮಾಡುವುದಕ್ಕೆ ತೊಡಗಿಸಿ. ಈಗ ನಡೆದುಹೋಗಿರುವುದನ್ನು ಬಿಟ್ಟು, ಈಗ ಬರುವಂತಹ ದಿನಗಳಲ್ಲಿ ಜನಹಿತವಾದಂತಹ ಕಾರ್ಯಕ್ರಮವನ್ನು ಮಾಡಿ, ಆ ರೀತಿ ಮಾಡುವುದಕ್ಕೆ ಆಗುವುದಿಲ್ಲವೇ, ಇದರ ಬಗ್ಗೆ ತಮ್ಮವರೇ 'ಅಪ್ಪಾ, ನಿಮಗೆ ವಯಸ್ಸಾಗಿದೆ, ಬಿಟ್ಟು ಬಿಡು' ಎಂದು ಹೇಳುತ್ತಾರೆ. ಈ ರೀತಿ ನಮ್ಮ ಪಕ್ಷದವರು ಹೇಳುವುದಿಲ್ಲ. ತಮ್ಮ ಪಕ್ಷದವರೇ ಹೇಳುತ್ತಾರೆ. ಅವರನ್ನು ಬಿಟ್ಟುಬಿಡಿ. ಇವರನ್ನು ಬಿಟ್ಟುಬಿಡಿ. ತಮಗೆ ವಯಸ್ಸಾಯಿತು ಎಂದು ಹೇಳುತ್ತಾರೆ. ಹಾಗೇನಾದರೂ ಇದ್ದರೆ, ಇದನ್ನು ಸಮರ್ಥರಿಗೆ ಕೊಡಿ. ಇಲ್ಲದಿದ್ದರೆ ಅಲ್ಲಮನ ವಚನದಂತೆ "ಕೊಟ್ಟ ಕುದುರೆಯನೇರಿ, ಜನ ಬಯಸಿದಂತೆ ಆಳಿ, ವೀರನೂ, ಧೀರನೂ ಆಗಿ ಸರ್ಕಾರವನ್ನು ಮುನ್ನಡೆಸಿ". ಸರ್ಕಾರವನ್ನು ನಡೆಸುವುದಕ್ಕೆ

ಆಗಲಿಲ್ಲವೆಂದಾಗ ಮುಂಬರುವ ಚುನಾವಣೆಯಲ್ಲಿ ತಾವು ಕಲಿಯದೇ ಹೋದ ಪಾಠವನ್ನು ಜನ ಕಲಿಸುತ್ತಾರೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಹೇಳಬೇಕೆಂದರೆ, ತಮ್ಮ ಪಕ್ಷದವರೇ ಒಂದು ದಿನ 'C.D.' ಎಂದು ಹೇಳುತ್ತಾರೆ. ಒಂದು ದಿನ 'blackmail' ಎಂದು ಹೇಳುತ್ತಾರೆ. ಒಂದು ದಿನ 'corruption' ಎಂದು ಹೇಳುತ್ತಾರೆ. ಆ ರೀತಿ ನಾವು ಯಾರು ಹೇಳಲಿಲ್ಲ.

ಕೆ.ಪಿ.ಎಸ್.ಸಿ., ಇಲ್ಲಿಂದ ಎಷ್ಟು ದೂರ ಇದೆ. ಜೋರಾಗಿ ಕೂಗಿದರೆ ಅಲ್ಲಿಂದ ಯಾರಾದರೂ ಓಡಿ ಬರುತ್ತಾರೆ. 1143 ಹುದ್ದೆಗಳಿಗೆ ಅರ್ಜಿಗಳನ್ನು ಕರೆಯುತ್ತಾರೆ. ಈ ರಾಜ್ಯದ ಮೂರು ಮುಕ್ಕಾಲು ಲಕ್ಷ ಜನರು ಈ ಹುದ್ದೆಗಳಿಗೆ ಅರ್ಜಿಯನ್ನು ಹಾಕುತ್ತಾರೆ. ನಂತರ ಪರೀಕ್ಷೆ ದಿನವನ್ನು ಮುಂದೂಡುತ್ತಾರೆ. 10 ಲಕ್ಷ ರೂಪಾಯಿಗಳಿಗೆ ಪ್ರಶ್ನೆ ಪತ್ರಿಕೆಗಳು ಸಿಗುತ್ತವೆ. ಇವರು ಯಾರೋ ಒಬ್ಬ Clerk ಅನ್ನು ಅಮಾನತ್ತು ಮಾಡುತ್ತಿದ್ದಾರೆ. ಇವರು ಛೇರ್‌ಮನ್‌ಗಳನ್ನು ಮತ್ತು ಮೆಂಬರ್‌ಗಳನ್ನು ಕರೆದು ಅವರ ಜೊತೆ ಏಕೆ ಮಾತನಾಡುತ್ತಿಲ್ಲ? ಹಾಗಾದರೆ, ಸರ್ಕಾರ ತಮ್ಮಲ್ಲವೇ, ಸರ್ಕಾರಕ್ಕಿಂತ ಅವರು ಮೇಲೆ ಇದ್ದಾರೆಯೇ, ಅವರು ಒಂದು ಬಾರಿ ಅಧ್ಯಕ್ಷರು ಆಗಿಬಿಟ್ಟರೇ, ಅವರು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂದು ಏನಾದರೂ ಇದೆಯೇ?

ಅದೇ ರೀತಿ ಐ.ಪಿ.ಎಸ್., ಅಧಿಕಾರಿಗಳು ನಿರ್ಭಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ 600 ರಿಂದ 700 ಕೋಟಿ ರೂಪಾಯಿಗಳನ್ನು ಟೆಂಡರ್ ಮೂಲಕ ಖರ್ಚು ಮಾಡಬೇಕಾಗಿದೆ. ಅದನ್ನು ಖರ್ಚು ಮಾಡುವುದನ್ನು ಬಿಟ್ಟು, ಟ್ರಿಣ್ ಟ್ರಿಣ್ ಎನ್ನುವುದು, ಹಾಡುಗಳನ್ನು ಹಾಡುವುದು ಮಾಡುತ್ತಾರೆ. ಐ.ಪಿ.ಎಸ್., ಅಧಿಕಾರಿಗಳು Press Conference ಅನ್ನು ಮಾಡುತ್ತಾರೆ. ಸರ್ಕಾರ ಇದೆಯೇ ಅಥವಾ ಸತ್ತಿದೆಯೇ, ಅವರಿಗೆ ಒಂದು ನಿಯಮ ಇದೆ. ಅಧಿಕಾರಿಗಳು ಏನಾದರೂ Press Conference ಅನ್ನು ಮಾಡಬೇಕಾದರೆ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕು. ಇವರು ಏನೂ ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲ. ಈ ಇಬ್ಬರು ಅಧಿಕಾರಿಗಳನ್ನು ಸರ್ಕಾರದವರು ವರ್ಗಾವಣೆ ಮಾಡುತ್ತಾರೆ, ನಾವು ಅವರನ್ನು ಮುಗಿಸಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಇದರ ನಿಜಾಂಶ ಏನು ಎಂಬುದನ್ನು ಹೇಳಿ. ಇದರಲ್ಲಿ ಬೆಂಕಿ ಇಲ್ಲದೇ ಹೊಗೆ ಬರುತ್ತದೆಯೇ, ಈ ಸರ್ಕಾರಕ್ಕೆ ಈ ಪ್ರಕರಣದಲ್ಲಿ ಏನು ನಡೆದಿದೆ ಎಂದು ಹೇಳುವುದಕ್ಕೆ ಏನು? ಇದರ ಬಗ್ಗೆ ಒಂದು ದಿನವೂ ಸಭೆಯನ್ನು ಕರೆಯಲಿಲ್ಲ.

ಈಗ ಆಸ್ತಿ ತೆರಿಗೆಯನ್ನು ಜಾಸ್ತಿ ಮಾಡುತ್ತಿದ್ದಾರೆ. ಬಾಡಿಗೆ ದುಡ್ಡು ಬರದೇ ಜನರೆಲ್ಲಾ ಸತ್ತು ಹೋಗುತ್ತಿದ್ದಾರೆ. ತಮಗೆ 67 ಸಾವಿರ ಕಡಿಮೆ ಬಂದಿದೆ ಎಂದರೆ, ಇದನ್ನು ಒಂದು ವರ್ಷ ಬಿಟ್ಟು ಮಾಡಿದರೆ ತಮ್ಮ ಗಂಟು ಹೋಗುವಂತಹದ್ದು ಏನು ಆಗುತ್ತಿತ್ತು? ಇವರು 30 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದ್ದಾರೆ. ಅದೇ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿ ಅವರು ಕೂಡ ಸಾಲಗಳನ್ನು ಮಾಡಿ ಬದುಕುತ್ತಿದ್ದಾರೆ. ಇದನ್ನು ಇನ್ನು ಒಂದು ವರ್ಷ ಮುಂದಕ್ಕೆ ಹಾಕಿದರೆ ಏನು ಆಗುತ್ತಿತ್ತು? ಯಾವುದಾದರೂ ಚುನಾವಣೆಗೆ ಹೋದರೆ ಮುಖ್ಯಮಂತ್ರಿಗಳು "ವೋಟ್ ಹಾಕಿ, ಮಾನ್ಯ ಸದಸ್ಯರಾದ ಮುನಿರತ್ನರವರಿಗೆ ಎಂ.ಎಲ್.ಎ., ಗಾಗಿ ಅಲ್ಲ, ಮಂತ್ರಿಗಾಗಿ ಮತ ಹಾಕಿ" ಎಂದರು. ಎಲ್ಲಿ ಸ್ವಾಮಿ, ಮಂತ್ರಿ ಮಾಡಿದ್ದಾರೆ? ಮಾನ್ಯ ಸದಸ್ಯರಾದ ಅಡಗೂರ್ ಹೆಚ್.ವಿಶ್ವನಾಥ್‌ರವರು ಮಂತ್ರಿ ಪದವಿಗಾಗಿ ಚುನಾವಣೆಗೆ ನಿಂತರು. ಇವರ ಗತಿ ಹೇಗಾಗಿದೆ ಎಂದರೆ, ಪಾಪ, ಒಂದು ಪಕ್ಷದ ರಾಜ್ಯಾಧ್ಯಕ್ಷರಾಗಿದಂತಹವರು, ಅವರನ್ನು ಕರೆದುಕೊಂಡು ಹೋಗಿ ಒಂದು ಕಡೆ ಚುನಾವಣೆಗೆ ನಿಲ್ಲಿಸುತ್ತಾರೆ. ತಮ್ಮ ಪಕ್ಷದವರೇ ಅವರನ್ನು ಸೋಲಿಸುತ್ತಾರೆ. ಗೆದ್ದ ಮೇಲೆ ಅವರನ್ನು ನಾಮಿನೇಟ್ ಮಾಡಬೇಕಾದರೆ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಮಾಡುವುದಿಲ್ಲ. ಅವರನ್ನು ಕರೆದುಕೊಂಡು ಬಂದು ನಾಮಿನೇಟ್ ಮಾಡುತ್ತಾರೆ ಏಕೆ? ಇದರ ಬಗ್ಗೆ ಸುಪ್ರಿಂ ಕೋರ್ಟ್‌ನಲ್ಲಿ Ramesh Kumar case ನಲ್ಲಿ ಆದೇಶ ಇದೆ. ಅದೇನೆಂದರೆ, 'A Member who is nominated cannot be made a Minister according to..." ಅದು ಅವರವರ ಜಗಳ. ಮಾನ್ಯ ರಮೇಶ್ ಕುಮಾರ್ ಪ್ರಕರಣದಲ್ಲಿ ಎಂ.ಎಲ್.ಎ., ಗಳದ್ದು ಜಗಳ. ಆದರೆ, ಇವತ್ತಿನ ದಿವಸ ಮಾನ್ಯ ಸದಸ್ಯರಾದ ಅಡಗೂರ್ ಹೆಚ್.ವಿಶ್ವನಾಥ್‌ರವರ ಗತಿ ಏನಾಗಿದೆ? ಶೇಕ್ಸ್‌ಪಿಯರ್‌ನ Hamlet ಕಥೆಯಲ್ಲಿನ ಒಂದು ಸನ್ನಿವೇಶವನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. 'ದೊಡ್ಡ ರಣರಂಗದಲ್ಲಿ ಮಗ ಯುದ್ಧ ಮಾಡುತ್ತಿದ್ದಾನೆ, ಅವರ ಅಪ್ಪನನ್ನು ಯಾರೋ ಸಾಯಿಸಿದ್ದಾರೆ ಎಂದು ಸುದ್ದಿ ಹೋಗುತ್ತದೆ, ಅವನು ಯುದ್ಧರಂಗವನ್ನು ಬಿಟ್ಟು ಓಡಿ ಬರುತ್ತಾನೆ. ನಮ್ಮಪ್ಪನನ್ನು ಯಾರು ಸಾಯಿಸಿದ್ದಾನೋ, ಅವನನ್ನು ಸಾಯಿಸಬೇಕೆಂದು ಬರುತ್ತಾನೆ. ಅವನು ಬಂದರೆ ಅವನ ಎದುರಿಗೆ ದೊಡ್ಡ ಮೆರವಣಿಗೆ ಬರುತ್ತಿದೆ. ಏನು ಎಂದು ನೋಡಿದರೆ, ಯಾರು ಸಾಯಿಸಿದ್ದಾನೋ, ಅವನು ಅವರ ಅಮ್ಮನನ್ನು ಮದುವೆಯಾಗಿ ಮೆರವಣಿಗೆಯಲ್ಲಿ ಬರುತ್ತಿದ್ದಾನೆ". ಇವತ್ತು ಮಾನ್ಯ ಸದಸ್ಯರಾದ ಅಡಗೂರ್ ಹೆಚ್.ವಿಶ್ವನಾಥ್‌ರವರ ಪರಿಸ್ಥಿತಿ ಆ ರೀತಿಯಾಗಿದೆ. ಆದ್ದರಿಂದ, ಈ ಸರ್ಕಾರ ಆಯನೂರು ಮಂಜುನಾಥ್‌ರವರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಚೆನ್ನಾಗಿ ಮಂಡಿಸಿದ್ದಾರೆ. ಅವರು ಅರ್ಧ ನಿಜವನ್ನು ಹೇಳಿದ್ದಾರೆ. ಅರ್ಧ ಸರ್ಕಾರದವರು ಏನು ಮಾಡಬೇಕೆಂದು ಸಹ ಹೇಳಿದ್ದಾರೆ. ಆದರೆ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಪೂರ್ತಿ ಮಾನ್ಯ ಪ್ರಧಾನ ಮಂತ್ರಿಯಾದ ನರೇಂದ್ರ ಮೋದಿಯವರು ಏನು ಹೇಳುತ್ತಾರೋ, ಅದನ್ನು ಮಾತ್ರ ಹೇಳುತ್ತಾರೆ. ಬೇರೆ ಏನು ಹೇಳುವುದಿಲ್ಲ. ಆದ್ದರಿಂದ, ಸರ್ಕಾರ ಮಾಡುತ್ತಿರುವ ರೀತಿ ಸರಿಯಿಲ್ಲ. ನಡೆಸುತ್ತಿರುವಂತಹ ರೀತಿ ಸರಿಯಿಲ್ಲ. ಅದರಿಂದ ಪ್ರತಿ ವರ್ಷ ಮಾನ್ಯ ರಾಜ್ಯಪಾಲರ ಕೈಯಲ್ಲಿ ಇಂತಹ ಸುಳ್ಳುಗಳನ್ನು ಹೇಳಿಸಿ, ತಾವು ಅವರ ಘನತೆಗೆ ಕುಂದು ತರಬಾರದೆಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ॥ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುತ್ತಾ, ಅವರು ಹೇಳಿರುವಂತಹ ಹೆಚ್ಚಿನ ಅಂಶಕ್ಕೆ ನನ್ನ

ಬೆಂಬಲವನ್ನು ಸೂಚಿಸುತ್ತಾ, ನಾನು ಕೆಲವೊಂದು ವಿಚಾರಗಳನ್ನು 5 ನಿಮಿಷಗಳಲ್ಲಿ ಮಂಡಿಸಲು ಇಷ್ಟಪಡುತ್ತೇನೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ ಎಂದರೆ, ಸರ್ಕಾರದ ಹಿಂದಿನ ದಿನಗಳಲ್ಲಿ ಆಗಿರುವಂತಹ ಸಾಧನೆಗಳು ಮತ್ತು ಮುಂದೆ ಕೈಗೊಳ್ಳಬೇಕಾದಂತಹ ಕಾರ್ಯಕ್ರಮಗಳ ಒಂದು ಸೂಚನೆಯಾಗಿ ಎರಡರ ಮಧ್ಯೆ ಒಂದು ಕೊಂಡಿಯಾಗಿರುವಂತಹ ಭಾಷಣವನ್ನು ರಾಜ್ಯಪಾಲರು ಮಾಡುತ್ತಾರೆ. ಕೋವಿಡ್ ಇರುವಂತಹ ಸಂದರ್ಭದಲ್ಲಿ ಯಾವ ದಿನಗಳನ್ನು ನಾವು ಎದುರಿಸಿದ್ದೇವೆ. ಮುಂದೆ ಬರುವಂತಹ ಸವಾಲುಗಳು ನಮ್ಮ ಎದುರು ಯಾವುದು ಇದೆ ಎಂಬುದನ್ನು ನಾವು ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ನಾನು ಸಹ ಕೋವಿಡ್ ಸೆಂಟರ್‌ನಲ್ಲಿ ಒಂದು ವಾರ ಇದ್ದೆ. ನಾನು ಅಲ್ಲಿದ್ದಂತಹ ಸಂದರ್ಭದಲ್ಲಿ ನಮ್ಮ ಸಂಸದರಾದ ಸುರೇಶ್ ಅಂಗಡಿಯವರು ಮತ್ತು ವಿಧಾನ ಸಭೆಯ ಸದಸ್ಯರಾದ ಬಿ.ನಾರಾಯಣ್ ರವರು ಕೋವಿಡ್ ಕಾರಣಕ್ಕಾಗಿ ತೀರಿಕೊಂಡಿರುವುದನ್ನು ನಾನು ಟಿ.ವಿ.ಯಲ್ಲಿ ನೋಡುತ್ತಿದ್ದೆ. ಅಂತಹ ಭೀಕರ ದಿನಗಳನ್ನು ಕಳೆದಂತಹ ಈ ರಾಜ್ಯವು ಯಾವ ರೀತಿ ಚೇತರಿಸಿಕೊಳ್ಳುತ್ತಿದೆ. ನಾನು ಇಲ್ಲಿಗೆ ಬರುವುದಕ್ಕಿಂತ ಮೊದಲು ವಿಶ್ವವಿದ್ಯಾನಿಲಯದ department ನಲ್ಲಿ ಎರಡು ಅಧ್ಯಯನಗಳನ್ನು ಕೈಗೊಂಡಿದ್ದೇನೆ. ಒಂದು migrant labour ಗಳನ್ನು ಕುರಿತಾಗಿ, ಇನ್ನೊಂದು ಸಫಾಯಿ ಕರ್ಮಚಾರಿಗಳನ್ನು ಕುರಿತಾಗಿ ಈ ಎರಡು ಅಧ್ಯಯನಗಳನ್ನು ಕೈಗೊಂಡಿದ್ದೇನೆ. ಅದರಲ್ಲಿ ಒಂದು ಶಬ್ದವನ್ನು ಉಪಯೋಗ ಮಾಡಿದ್ದೇನೆ. ಆ ಶಬ್ದ ಏನೆಂದರೆ, 'Man is dying alone' ಎನ್ನುವಂತಹ ಒಂದು ಶಬ್ದವನ್ನು ಉಪಯೋಗ ಮಾಡಿದ್ದೇನೆ. ಆ ರೀತಿ ಎಂದರೆ, ಅಪಘಾತಗಳನ್ನು ಬಿಟ್ಟು, ಸಾಮಾನ್ಯವಾಗಿ ವ್ಯಕ್ತಿಯು ಸಾಯಬೇಕಾದರೆ ಅವರ ಸುತ್ತಮುತ್ತಲೂ ಕುಟುಂಬದವರು, ಹಿರಿಯರು, ಕಿರಿಯರು ಇರುತ್ತಾರೆ. ಆದರೆ ಕೋವಿಡ್ ಕಾರಣಕ್ಕಾಗಿ ಒಬ್ಬ ವ್ಯಕ್ತಿಯು ಆಸ್ಪತ್ರೆಯಲ್ಲಿ ಅಡ್ಮಿಟ್ ಆದಾಗ ಅವನ ಹತ್ತಿರ ಯಾರು ಹೋಗುತ್ತಿರಲಿಲ್ಲ. ಅವನ ಹತ್ತಿರ ಹೋಗುವ ಸಂದರ್ಭವೇ ಬರುತ್ತಿರಲಿಲ್ಲ. ಅವನು ಸಾಯಬೇಕಾದರೂ ಸಹ ಅವನೊಬ್ಬನೇ ಸಾಯುತ್ತಿದ್ದ. ಅದಕ್ಕಾಗಿ 'Man is dying alone' ಎಂದು ಹೇಳುತ್ತೇವೆ. ಈ ಒಂದು ಶವ ಸಂಸ್ಕಾರವನ್ನು ಮಾಡಬೇಕಾದರೂ ಸಹ ಯಾರು ಇಲ್ಲದೇ ಇರುವಂತಹ ದಿನಗಳನ್ನು ನಾವು ಇಲ್ಲಿ ಕಂಡಿದ್ದೇವೆ. ಇಂತಹ ಸಂದರ್ಭದಲ್ಲಿ ರಾಜ್ಯವು ಯಾವ ರೀತಿಯಾದಂತಹ ದಿನಗಳನ್ನು ಎದುರಿಸಿದೆ. ವೈದ್ಯಕೀಯವಾಗಿ ಹಲವಾರು ಸವಾಲುಗಳು ಬಂದವು. ಆಗ ಕೋವಿಡ್ ಅನ್ನು ನಿಯಂತ್ರಿಸಬೇಕಾಗಿತ್ತು. ಖಾಸಗಿ ಆಸ್ಪತ್ರೆಗಳ ಮೊನಪೊಲಿಸಬೇಕಾಗಿತ್ತು. ಅದಕ್ಕೆ ಬೇಕಾದಂತಹ ಪೂರಕ ವಸ್ತುಗಳಾಗಿರಬಹುದು, ಪೂರಕ ಸಿಬ್ಬಂದಿಗಳಾಗಿರಬಹುದು, ಪೂರಕ ಔಷಧಿಗಳನ್ನು ಪೂರೈಕೆ ಮಾಡಬೇಕಾಗಿತ್ತು.

(ಮುಂದು)

**(222) 08/02/2021/ಎಸ್‌ಪಿಆರ್/ಆರ್‌ಎನ್/4:10**

**ಡಾ॥ತಳವಾರ್ ಸಾಬಣ್ಣ(ಮುಂದು)**

ಇಂತಹ ಎಲ್ಲಾ ಸವಾಲುಗಳನ್ನು ರಾಜ್ಯ ಸರ್ಕಾರವು ಯಶಸ್ವಿಯಾಗಿ ಕೈಗೊಂಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಇದು ಹೆಚ್ಚು ಕಡಿಮೆ ಮುಚ್ಚಲ್ಪಟ್ಟಂತಹ ಸ್ಥಿತಿ ನಮ್ಮ ರಾಜ್ಯ ಹಾಗೂ ಇಡೀ ರಾಷ್ಟ್ರದಲ್ಲಿತ್ತು. ಆದರೂ ಸಹ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಣ ಮಂತ್ರಿಗಳು ಅವರದೇ ಆದ ಧೈರ್ಯ, ರೂಪು–ರೇಶೆ ಮತ್ತು ತಂತ್ರಗಾರಿಕೆಗಳ ಮುಖಾಂತರ ಶಿಕ್ಷಣವು ಯಾವುದೇ ರೀತಿಯಾಗಿ ನಶಿಸದಂತೆ, ಇವತ್ತಿನ ದಿವಸ ಯಶಸ್ವಿಯಾಗಿ ಒಂದು ಹಾದಿಗೆ ತಂದು ನಿಲ್ಲಿಸಿದ್ದಾರೆ. ನಂತರದಲ್ಲಿಯೂ ಸಹ ಶಿಕ್ಷಣವು ಯಶಸ್ವಿಯಾಗಿ ಮುಂದುವರೆಯುತ್ತಿದೆ.

ಕೃಷಿ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಅರ್ಥಶಾಸ್ತ್ರದಲ್ಲಿ ನಾವು ಹಲವಾರು ಏರುಪೇರುಗಳನ್ನು ಕಾಣುತ್ತೇವೆ. ಯಾವುದೇ ಒಂದು ರಾಷ್ಟ್ರದ ಅರ್ಥ ವ್ಯವಸ್ಥೆಯನ್ನು ನಾವು ತೆಗೆದುಕೊಂಡಾಗ ಅದು ಸ್ಥಗಿತವಾದ ಅರ್ಥವ್ಯವಸ್ಥೆಯನ್ನು ನಾವು ಕಾಣುವುದಿಲ್ಲ. 1936 ನೇ ಇಸ್ವಿಯಲ್ಲಿ Great Depression ನ್ನು ಕಾಣುತ್ತೇವೆ. ಆಗ ಅಮೇರಿಕ ದೇಶವು ತತ್ತರಿಸಿ ಹೋಗಿಬಿಟ್ಟಿತ್ತು ಹಾಗೂ ಅದರ ಪರಿಣಾಮವು ಬೇರೆ ರಾಷ್ಟ್ರಗಳ ಮೇಲೆಯೂ ಸಹ ಆಗಿತ್ತು. 2008 ನೇ ಇಸವಿಯಲ್ಲಿಯೂ ಸಹ ಆದ ದುಷ್ಪರಿಣಾಮವನ್ನು ನಾವು ಕಾಣುತ್ತೇವೆ; ಅದಕ್ಕೆ Global Melting ಎಂದು ಕರೆಯುತ್ತೇವೆ. ಅದರ ನಂತರದಲ್ಲಿ ಕೋವಿಡ್–19 ಕಾಯಿಲೆಯ ಕಾರಣದಿಂದಾಗಿ ಅತ್ಯಂತ ಭೀಕರವಾದ ಆರ್ಥಿಕ ದುರ್ವ್ಯವಸ್ಥೆಯನ್ನು ನಾವು ಕಂಡಿದ್ದೇವೆ. ಇವತ್ತಿನ ದಿವಸ ಅಮೇರಿಕ ಅಥವಾ ಯೂರೋಪಿನ ಯಾವುದೇ ರಾಷ್ಟ್ರಗಳಾಗಿರಬಹುದು ಅವುಗಳೆಲ್ಲವೂ ಸಹ ಇನ್ನೂ ಮೇಲಕ್ಕೆ ಏಳಲು ಆಗಿಲ್ಲ. ಆದರೆ, ಅದೃಷ್ಟವಶಾತ್ ನಮ್ಮ ರಾಷ್ಟ್ರದ ಅರ್ಥ ವ್ಯವಸ್ಥೆಯು ಅಷ್ಟು ಪ್ರಮಾಣದಲ್ಲಿ ಕುಗ್ಗಿಲ್ಲವೆಂದು ನಾವು ಹೇಳಬಹುದು. ಇದಕ್ಕೆ ಮೂಲ ಕಾರಣ ನಮ್ಮಲ್ಲಿರುವ ಆರ್ಥಿಕ ಮತ್ತು ಕಾನೂನು ವ್ಯವಸ್ಥೆಗಳು; ಅದಕ್ಕಿಂತಲೂ ಹೆಚ್ಚಾಗಿ ಇಲ್ಲಿನ ಕೃಷಿ ಕ್ಷೇತ್ರದ ಕಾರಣದಿಂದಾಗಿ ನಾವು ಇವತ್ತಿನವರೆಗೂ ಬಹಳ ಸಬಲರಾಗಿದ್ದೇವೆ ಎಂದು ಹೇಳಬಹುದು. ಆರ್ಥಿಕ ವ್ಯವಸ್ಥೆಯು ಕುಗ್ಗಿದರೂ ಸಹ ಅದು ಚೇತರಿಕೆಯನ್ನು ಕಾಣುತ್ತಿದೆ. ಇದು ಇಲ್ಲಿನ ಒಂದು ವಿಶೇಷತೆಯಾಗಿ ಕಾಣುತ್ತೇವೆ. ಕೋವಿಡ್–19 ಸಂದರ್ಭದಲ್ಲಿ ವಲಸೆ ಕಾರ್ಮಿಕರು ಯಾವ ರೀತಿಯಾಗಿ ತೊಂದರೆಗೊಳಗಾದರು ಎನ್ನುವುದು ತಮಗೆಲ್ಲರಿಗೂ ತಿಳಿದಿದೆ. ಈ ವಿಚಾರದಲ್ಲಿ ನಾನು ವರದಿಯೊಂದನ್ನು ಸಿದ್ಧಪಡಿಸಿದ್ದು, ಅದು ಈಗ ಪ್ರಕಟಗೊಂಡಿದೆ. ಆ ವರದಿಯಲ್ಲಿ, ನಮ್ಮ ರಾಜ್ಯದ ಎಲ್ಲಾ ವಲಸೆ ಕಾರ್ಮಿಕರು ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಅಂದರೆ ಹೈದರಾಬಾದ್–ಕರ್ನಾಟಕ ಮತ್ತು ವಿಜಯಪುರ ಭಾಗಗಳವರು ವಾಪಸ್ಸು ಹೋಗಿದ್ದನ್ನು ಕಾಣುತ್ತೇವೆ. ಅವರುಗಳು ಕೃಷಿಯಲ್ಲಿ ಉದ್ಯೋಗವಿಲ್ಲದ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕಾಗಿ ಬೆಂಗಳೂರು, ಮುಂಬೈ, ಪುಣೆ ಮತ್ತು ಹೈದರಾಬಾದ್ ನಗರಗಳಿಗೆ ಹೋಗಿದ್ದರು. ಕೋವಿಡ್–19 ಕಾಯಿಲೆಯ ಕಾರಣಕ್ಕಾಗಿ ಅವರುಗಳೆಲ್ಲರೂ ತಮ್ಮ ಸ್ವಂತ ಊರುಗಳಿಗೆ ಮರಳುತ್ತಾರೆ. ಆಗ ಅವರಿಗೆ ಆಸರೆ ಕೊಟ್ಟಿದ್ದು ಕೃಷಿ ಕ್ಷೇತ್ರವೆಂದು ನಾವು ಹೇಳುತ್ತೇವೆ. ಏಕೆಂದರೆ, ಕೃಷಿ ಕ್ಷೇತ್ರದಲ್ಲಿ ಅವರುಗಳು ಪ್ರಸ್ತುತ ಕೆಲಸ ನಿರ್ವಹಿಸುತ್ತಿದ್ದಾರೆ. ಈ ರೀತಿಯಾಗಿ ಕೃಷಿ ಕ್ಷೇತ್ರವು ನಮಗೆ ತುಂಬಾ ಸಹಾಯಕವಾಗಿದೆ ಎಂದು ನಾವು ಹೇಳಬಹುದು. ಇದು ನಮ್ಮ ಅರ್ಥ ವ್ಯವಸ್ಥೆಯ ಗುಣಲಕ್ಷಣ ಅಥವಾ positive remark ಎಂದು ಹೇಳಬಹುದು.

ಮುಂದುವರೆದು, ಗ್ರಾಮೀಣಾಭಿವೃದ್ಧಿ ವಿಚಾರವಾಗಿ ಹೇಳುವುದಾದರೆ, ಅಲ್ಲಿನ ಕೆಲವೊಂದು ಅಭಿವೃದ್ಧಿ ಚಟುವಟಿಕೆಗಳು ಕುಂಠಿತವಾಗಿರಬಹುದು; ಇಲ್ಲವೆಂದು ಹೇಳುವುದಿಲ್ಲ. ಆದರೂ ಸಹ 'ಆತ್ಮ ನಿರ್ಭರ' ಎಂಬ ವಿಶೇಷತೆಯಿಂದ ಕೂಡಿರುವ ಏರಿಕೆಯಿಂದಾಗಿ, ನಮ್ಮ ಗ್ರಾಮೀಣ ಪ್ರದೇಶ ಮತ್ತು ಅಲ್ಲಿನ ಕರಕುಶಲ ಕಾರ್ಮಿಕರು, ಗುಡಿ ಕೈಗಾರಿಕೆಗಳು ಮತ್ತು ಅಲ್ಲಿನ ಗ್ರಾಮೀಣ ಅರ್ಥವ್ಯವಸ್ಥೆ ಇವತ್ತಿನ ದಿವಸ ಪುನರುತ್ಥಾನವಾಗುತ್ತದೆ ಎಂದು ನಾವಿಲ್ಲಿ ಹೇಳಬಹುದು. ಅಂದರೆ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ನಾವು ಯಾವ ರೀತಿಯಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಿದೆ ಎಂಬುದನ್ನು ಇಡೀ ಪ್ರಪಂಚಕ್ಕೆ ತೋರಿಸಲು ನಾವಿಂದು ಹೊರಟಿದ್ದೇವೆ. ಅದರಲ್ಲಿ ನಮ್ಮ ರಾಜ್ಯವೂ ಸಹ ಒಂದು ಎಂದು ನಾವು ಹೇಳಬಹುದು.

ತಮಗೆಲ್ಲರಿಗೂ ತಿಳಿದಿರುವಂತೆ ಮತ್ತು ನಮ್ಮ ಹಿರಿಯ ಸಹೋದ್ಯೋಗಿಗಳು ಉಲ್ಲೇಖಿಸಿದಂತೆ, ಹಿಂದುಳಿದ ರಾಜ್ಯಗಳಾದ ನಮ್ಮ ನೆರೆಯ ಕೇರಳ, ಮಹಾರಾಷ್ಟ್ರ ರಾಜ್ಯಗಳಲ್ಲಿ ಸರ್ಕಾರಿ ನೌಕರರಿಗೆ ಸಂಬಳವನ್ನು ಕಡಿತಗೊಳಿಸಲಾಗಿತ್ತು. ಆಗ ನಾನೂ ಸಹ ಸರ್ಕಾರಿ ನೌಕರನಾಗಿ ಕರ್ತವ್ಯ ನಿರ್ವಹಿಸಿದ್ದೇನು. ಆದರೆ ಆ ಸಂದರ್ಭದಲ್ಲಿ ನಾವು ಸಂಪೂರ್ಣ ಸಂಬಳವನ್ನು ಪಡೆದುಕೊಂಡಿದ್ದೇವೆ. ಇದು ನಮ್ಮ ರಾಜ್ಯ ಸರ್ಕಾರದ ಸಾಧನೆ ಎಂದು ನಾವಿಲ್ಲಿ ಹೇಳಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರ್ಕಾರವು ಸಂಬಳವನ್ನು ಕಡಿತಗೊಳಿಸಿಲ್ಲವೆಂದು ಹೇಳಿದ್ದಾರೆ. ಆದರೆ ನಾವುಗಳೆಲ್ಲರೂ ಸಹ ನಮ್ಮ ಸಂಬಳವನ್ನು ಕಡಿತಗೊಳಿಸಿ, ಹಣ ನೀಡಿದ್ದೇವೆ. ಆದರೆ, ಸರ್ಕಾರಿ ನೌಕರರದ್ದಾಗಿಲ್ಲ.

**ಡಾ॥ತಳವಾರ್ ಸಾಬಣ್ಣ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ನಾನು ಸರ್ಕಾರಿ ನೌಕರನಾಗಿದ್ದೆ. ಮುಂದುವರೆದು, ನಮ್ಮ ರಾಜ್ಯದಲ್ಲಿ ಮುಂದೇನಾಗಬೇಕಾಗಿದೆ ಎನ್ನುವುದು ಬಹಳ ಮುಖ್ಯವಾಗಿದೆ. ಒಬ್ಬ ಅರ್ಥಶಾಸ್ತ್ರದ ಅಧ್ಯಾಪಕನಾಗಿ, ಸಂಶೋಧಕನಾಗಿ ನಾನು ನಮ್ಮ ರಾಜ್ಯದಲ್ಲಿನ ಅಸಮತೋಲನ ವಿಚಾರವಾಗಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದ್ದು, ಅಸಮತೋಲ ಹೋಗಬೇಕು. 2000 ನೇ ಇಸವಿಯಲ್ಲಿ ಡಾ॥ ನಂಜುಂಡಪ್ಪರವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿರುವ ವರದಿಯ ಪ್ರಕಾರ, ಇಲ್ಲಿಯವರೆಗೆ ಅಧಿಕಾರಕ್ಕೆ ಬಂದ ಯಾವುದೇ ಸರ್ಕಾರಗಳಾಗಿರಬಹುದು 2021 ನೇ ಸಾಲಿನವರೆಗೆ ಇರುವ Regional Imbalance ಎಂದು ಕರೆಯಲ್ಪಡುವ ಅಸಮಾನತೆಯು ಇವತ್ತಿನವರೆಗೂ ಹಾಗೆ ಇದೆ. ಮಾನಸಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ನಮ್ಮ ರಾಜ್ಯಗಳು ಒಂದಾಗಿಲ್ಲ. ಹೀಗಾಗಿ ಹೆಚ್ಚಿನ ಆದ್ಯತೆಯನ್ನು ನೀಡಬೇಕಾದ ಕ್ಷೇತ್ರ ಇದಾಗಿದೆ. ಅದರಲ್ಲೂ ಬಹು ಮುಖ್ಯವಾಗಿ ಹೈದರಾಬಾದ್ ಕರ್ನಾಟಕಕ್ಕೆ ಕೊಡಬೇಕಾಗಿದೆ. ನಾವುಗಳೆಲ್ಲರೂ ಆ ಭಾಗದ ಬಗ್ಗೆ ಮಾತನಾಡಿ, ಅದು ಪ್ರಗತಿಯನ್ನು ಸಾಧಿಸಬೇಕೆಂದು ಹೇಳುತ್ತೇವೆ. ಆದರೆ, ಆ ಪ್ರದೇಶಗಳಿಗೆ ಹೋಗಿ ನೋಡಿದಾಗ, ಅಲ್ಲಿನ ಪರಿಸ್ಥಿತಿಯು ಬಹಳ ಕೆಟ್ಟ ಹಾಗೂ ಚಿಂತಾಜನಕವಾಗಿದೆ. ಆ ಭಾಗಕ್ಕೆ ಭಾರತದ ಸಂವಿಧಾನದ ಅನುಚ್ಛೇದ 371(ಜೆ) ಪ್ರಕಾರ ಮೀಸಲಾತಿಯು ದೊರೆತಿದ್ದು, ಅದು ರಾಜ್ಯಕ್ಕೆ ಬಂದ ಬಹಳ ದೊಡ್ಡ ಕೊಡುಗೆಯಾಗಿದೆ. ಆದರೂ ಸಹ ಇದನ್ನು ಪರಿಣಾಮಕಾರಿಯಾಗಿ ಅಳವಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿನ ಹೆಚ್ಚಿನ ವಿಶ್ವವಿದ್ಯಾಲಯ ಮತ್ತು ವಿಭಾಗಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಇವುಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಬೇಕೆಂದು ಸರ್ಕಾರವು ಆದೇಶ ನೀಡುತ್ತದೆ ಆದರೆ, ಹಣಕಾಸಿನ ಕೊರತೆಯಿಂದಾಗಿ ಸರ್ಕಾರವೇ ಅದನ್ನು ತಡೆಗಟ್ಟುತ್ತದೆ. ಈ ವಿಚಾರದ ಬಗ್ಗೆ ಯೋಚನೆ ಮಾಡಬೇಕೆಂದು ನಾವು ಹೇಳುತ್ತೇನೆ.

ಉನ್ನತ ಶಿಕ್ಷಣದ ವಿಚಾರದ ಬಗ್ಗೆ ಹೇಳುವುದಾದರೆ, ನಾನು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ, ಉನ್ನತ ಶಿಕ್ಷಣದಲ್ಲಿ ಶೇಕಡಾ 50 ರಷ್ಟು ದಾಖಲಾತಿಯಾಗಬೇಕೆಂಬ ಯೋಚನೆ ಮಾಡಲಾಗುತ್ತಿದೆ. ಆದರೆ, ಹಾಲಿ ಇರುವ ಸ್ಥಿತಿಯ ಬಗ್ಗೆಯೂ ಸಹ ನಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ, ಇವತ್ತಿನ ದಿವಸ ವಿಶ್ವವಿದ್ಯಾಲಯಗಳ ಹಾಗೂ ಅಲ್ಲಿನ ಶಿಕ್ಷಕರ ಸ್ಥಿತಿ ಏನಾಗಿದೆ? ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಯಾವ ರೀತಿಯಾದ ಸವಲತ್ತುಗಳನ್ನು ನೀಡಲಾಗುತ್ತಿದೆ? ಮುಂದುವರೆದು ಯಾವ ಕೌಶಲ್ಯಪೂರಿತವಾದ ಪಠ್ಯಕ್ರಮವನ್ನು ನಾವು ಸಿದ್ಧಪಡಿಸಿದ್ದೇವೆ ಎಂಬುದರ ಬಗ್ಗೆ ನಾವು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಯಾವಾಗ ಬುನಾದಿಯೇ ಸರಿಯಾಗಿಲ್ಲವೆಂದಾದರೆ, ಒಳ್ಳೆಯ ಕಟ್ಟಡವನ್ನು ನಿರ್ಮಿಸುವುದು ಹೇಗೆ? ಹೀಗಾಗಿ ಉನ್ನತ ಶಿಕ್ಷಣವನ್ನು ಅಷ್ಟೇ ಗಂಭೀರವಾಗಿ ತೆಗೆದುಕೊಳ್ಳಬೇಕು. ಇಲ್ಲಿ ನಾವೊಂದು ಸಾಧನೆಯನ್ನು ಕಾಣುತ್ತೇವೆ. ಅದೇನೆಂದರೆ, ಖಾಸಗಿ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸುವ ಪೋಷಕರು ಮತ್ತು ಅಂತಹ ವಿದ್ಯಾರ್ಥಿಗಳು ಇವತ್ತಿನ ದಿವಸ ಸರ್ಕಾರಿ ಶಾಲೆಗೆ ಹೆಚ್ಚಿನ ಒಲವನ್ನು ತೋರಿಸುತ್ತಿದ್ದಾರೆ. ಇದು ಅಲ್ಲಿನ ಸುಧಾರಣೆಯಾಗುತ್ತಿದೆ ಎಂದರ್ಥವಾಗಿದೆ. ಅದೇ ರೀತಿಯಾಗಿ ನಾವು ಉನ್ನತ ಶಿಕ್ಷಣದಲ್ಲಿಯೂ ಸಹ ತೋರಿಸಬೇಕೆಂದು ನಾನು ಇಲ್ಲಿ ಹೇಳುತ್ತೇನೆ. ಹೀಗಾಗಿ ಡಾ॥ ನಂಜುಂಡಪ್ಪರವರ ವರದಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಇವತ್ತಿನವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಇವುಗಳು ಕೇವಲ ಹೇಳಿಕೆಗಳಾಗಿದ್ದು, 'ವೋಟ್ ಬ್ಯಾಂಕ್'ಗಳಾಗಿ ಪರಿವರ್ತನೆಗೊಳಿಸಿದ್ದೇವೆ ಅಥವಾ ಆ ರೀತಿಯಾಗಿ ಅವುಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅವರ ಬಗ್ಗೆ ನಾವು ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ಇಲ್ಲಿ ಅಧಿಕಾರದಲ್ಲಿರುವ ಅಥವಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿರೋಧ ಪಕ್ಷದಲ್ಲಿರುವ ಪಕ್ಷಗಳಾಗಿರಬಹುದು; ಎಲ್ಲರೂ ಒಗ್ಗೂಡಿ ಎಲ್ಲರ ಬಗ್ಗೆಯೂ ಸಹ ಯೋಚನೆ ಮಾಡಿ, ನಮ್ಮ ರಾಜ್ಯದ ಆರ್ಥಿಕ, ಸಾಮಾಜಿಕ ಸ್ಥಿತಿಗಳೆಲ್ಲವೂ ಸಮಾನತೆಯಿಂದ ಕೂಡಿರಬೇಕು. ಎಲ್ಲರೂ ಒಳ್ಳೆಯ ಮತ್ತು ಉತ್ತಮ ಗುಣಮಟ್ಟದ ಜೀವನವನ್ನು ನಡೆಸುವಂತಾಗಬೇಕು. ಇದಕ್ಕೆ ಅವಶ್ಯಕವಾದ ಕೌಶಲ್ಯ ಪೂರಿತವಾದ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಬೇಕೆಂದು ಹೇಳುತ್ತಾ, ಮಾತನಾಡಲು ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕಳೆದ ತಿಂಗಳ 28 ನೇ ತಾರೀಖಿನ ರಾಜ್ಯಪಾಲರ ವಿಧಾನ ಮಂಡಲದ ಜಂಟಿ ಅಧಿವೇಶನದ ಭಾಷಣದ 25 ಪುಟಗಳ ಹೊತ್ತಿಗೆಯು ನನ್ನೊಂದಿಗೆ ಇದೆ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸಿದ ಶ್ರೀ ಆಯನೂರು ಮಂಜುನಾಥ್‌ರವರು ಪ್ರಸ್ತಾಪಿಸಿದಂತೆ, ಈ ಜಗತ್ತನ್ನು ಮತ್ತು ನಮ್ಮನ್ನು ಬಹುಪಾಲುವಾಗಿ ಭಾದಿಸಿದ ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯ ಬಗ್ಗೆ ವಿಸ್ತೃತವಾದ ಚರ್ಚೆಯು ಈ ರಾಜ್ಯಪಾಲರ ಭಾಷಣದಲ್ಲಿದೆ. ಇಡೀ ಜಗತ್ತು ಆ ಕಾಯಿಲೆಯಿಂದ ತತ್ತರಿಸುವ ಹೊತ್ತಿನಲ್ಲಿ ಇಡೀ ಜಗತ್ತಿನಿಂದ ಅದನ್ನು ಹಿಮ್ಮೆಟ್ಟಿಸುವ ದೊಡ್ಡ ಪ್ರಯತ್ನಗಳಾದವು. ಅದು ನಮ್ಮ ದೇಶ ಮತ್ತು ರಾಜ್ಯದಲ್ಲಿಯೂ ಸಹ ಆದವು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ದೊಡ್ಡ ಸುಧಾರಣೆಯು ಆಗಿದ್ದು, ಇಂದು ಅವುಗಳ ಗುಣಮಟ್ಟವು ವಿಸ್ತಾರವಾಗಿದೆ; ಅಲ್ಲಿನ ಸವಲತ್ತುಗಳ ಹೆಚ್ಚಳವಾಗಿದೆ. ವೆಂಟಿಲೇಟರ್‌ಗಳ ಸಮಸ್ಯೆಗಳ ಬಗ್ಗೆ ಪ್ರತಿನಿತ್ಯವೂ ಬರುತ್ತಿದ್ದ ದೂರವಾಣಿ ಕರೆಗಳು ಇಂದು ನಿಂತಿವೆ. ಹೀಗಾಗಿ ಎಲ್ಲಿಯೋ ಒಂದು ಕಡೆ ಕೋವಿಡ್–19 ಎಂಬ ಸಾಂಕ್ರಾಮಿಕ ಕಾಯಿಲೆಯನ್ನು ಹತೋಟಿ ಮಾಡುವ ಹೊತ್ತಿನಲ್ಲಿ ಆಸ್ಪತ್ರೆಗಳ ಸುಧಾರಣೆಗಳು ದೊಡ್ಡ ಪ್ರಮಾಣದಲ್ಲಾಗಿವೆ ಎನ್ನುವ ಅಂಶ ಮತ್ತು ವಿಚಾರವನ್ನು ನಾನು ಒಪ್ಪುತ್ತೇನೆ.

**(ಮುಂದು)**

(223)/8–2–2021/4–20/ಎಲ್‌ಎಂ/ಆರ್‌ಎನ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)**

ವ್ಯತ್ಯಾಸಗಳು ಆಗಿವೆ. ಕಾರ್ಮಿಕರಿಗೆ ಫುಡ್ ಕಿಟ್ ಸೇರಿ ಎಲ್ಲ ಪರಿಹಾರಗಳನ್ನು ಕೊಡಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ ಯಾಕೋ ಏನೋ ಶಿಕ್ಷಣ ಇಲಾಖೆಯ ಶಿಕ್ಷಕರು ಸರ್ಕಾರದ ಕಣ್ಣಿಗೆ ಕಾಣಲಿಲ್ಲವೆ? ವಕೀಲರು ಇಲ್ಲದಿದ್ದರೆ ನ್ಯಾಯ ಸಿಗುವುದಿಲ್ಲ, ವೈದ್ಯರು ಇಲ್ಲದಿದ್ದರೆ ಆರೋಗ್ಯ ಸಿಗುವುದಿಲ್ಲ, ಇಂಜಿನೀಯರ್‌ಗಳು ಇಲ್ಲ ಎಂದರೆ ಕಟ್ಟಡ ಕಟ್ಟಲು ಆಗುವುದಿಲ್ಲ, ಪೊಲೀಸ್‌ನವರು ಇಲ್ಲದಿದ್ದರೆ ರಕ್ಷಣೆ ಸಿಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಶಿಕ್ಷಕರೇ ಇಲ್ಲ ಎಂದರೆ ಇವರ್‍ಯಾರು ಇರಲು ಸಾಧ್ಯವಿಲ್ಲ; ಶಿಕ್ಷಕರು ಇಲ್ಲ ಎಂದರೆ ಇಡೀ ವ್ಯವಸ್ಥೆಯೇ ಇಲ್ಲ. ಇಂತಹ ಶಿಕ್ಷಕರು ಅಕ್ಷರಶಃ ಬೀದಿಗೆ ಬಿದ್ದರು. ಕೋವಿಡ್ ಸಂದರ್ಭದಲ್ಲಿ ಶಿಕ್ಷಕರು ನರೇಗಾ ಯೋಜನೆಯಲ್ಲಿ ಕೂಲಿ ಮಾಡಲು ಹೋದರು, ತರಕಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರುವ ಕೆಲಸವನ್ನು ಮಾಡಿದರು. ಅನುದಾನರಹಿತ ಶಾಲಾ ಶಿಕ್ಷಕರ ಪರಿಸ್ಥಿತಿ ಹೇಳಲು ಆಗದ ಹಾಗೆ ಆಯಿತು. ಶಿಕ್ಷಕರಿಗೆ ಫುಡ್ ಕಿಟ್ ಕೊಡಿ, ಪರಿಹಾರ ಕೊಡಿ ಎಂದು ನಾನು ಒಂದಲ್ಲ; ನಾಲ್ಕು ಬಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಆದರೆ ಈವರೆಗೂ ಪರಿಹಾರ ಸಿಕ್ಕಿರುವುದಿಲ್ಲ. ಇಂತಹ ಲೋಪಗಳ ನಡುವೆ ಕೋವಿಡ್ ನಿರ್ವಹಣೆ ನಾವೆಲ್ಲರೂ ಸಮಾಧಾನಪಟ್ಟುಕೊಳ್ಳುವ ರೀತಿಯಲ್ಲಿ ಆಗಿದೆ. ಈ ರಾಜ್ಯದಲ್ಲಿ ಕೋವಿಡ್ ಹತೋಟಿಗೆ ಬಂದಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಯಾವಾಗಲೂ ನನ್ನನ್ನು ಬಾಧಿಸುವಂತಹ ಸಂಗತಿ ಎಂದರೆ ರೈತರ ವಿಚಾರ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ರೈತರ ಬಗ್ಗೆ ಅಪಾರವಾದ ಕಾಳಜಿ ಇದೆ. ಆಗಾಗ ರೈತರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದನ್ನು ನಾವು ಕೇಳಿದ್ದೇವೆ. ರೈತರಿಗಾಗಿಯೇ ಪ್ರತ್ಯೇಕ ಬಜೆಟ್ ಮಂಡನೆ ಮಾಡಿರುವುದನ್ನು ನಾವು ನೋಡಿದ್ದೇವೆ. ಮಾನ್ಯ ಎಚ್.ಡಿ.ಕುಮಾರಸ್ವಾಮಿಯವರು ಎರಡನೆ ಬಾರಿ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಬಗ್ಗೆ ಕೊಟ್ಟಿರುವಂತಹ ಮಾತಿನಂತೆ 25,000 ಕೋಟಿ ರೂ.ಗಳನ್ನು ಸಾಲ ಮನ್ನಾಕ್ಕಾಗಿ ಬಜೆಟ್‌ನಲ್ಲಿ ಕೊಡುವ ಮೂಲಕ ಐತಿಹಾಸಿಕ ನಿರ್ಣಯವನ್ನು ಮಾಡಿದರು. ಆ ಹಣ ಏನು ಆಗಿದೆ? ಆ 25,000 ಕೋಟಿ ರೂ.ಗಳು ರೈತರಿಗೆ ಇದುವರೆಗೆ ಏಕೆ ತಲುಪಲಿಲ್ಲ. ಸಹಕಾರ ಬ್ಯಾಂಕ್‌ಗಳಲ್ಲಿ ವಾಣಿಜ್ಯ ಬ್ಯಾಂಕ್‌ನಲ್ಲಿ ಸಾಲ ಇರುವ ರೈತರು ಇನ್ನೂ ಕಾತರಿಸುತ್ತಿದ್ದಾರೆ. ಇಲ್ಲಿಯವರೆಗೆ ಸಹಕಾರ ಬ್ಯಾಂಕ್‌ಗಳಿಗೆ ಕೊಟ್ಟಿರುವುದು 7,767 ಕೋಟಿ ರೂಪಾಯಿಗಳು, ಮತ್ತು ವಾಣಿಜ್ಯ ಬ್ಯಾಂಕ್‌ಗಳಿಗೆ ಕೊಟ್ಟಿರುವುದು 7,535 ಕೋಟಿ ರೂಪಾಯಿಗಳು. ಒಟ್ಟು 17,235 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು ಬಹಳ ಜನ ರೈತರು ಕಾಯುತ್ತಿದ್ದಾರೆ. ಸಾವಿರಗಟ್ಟಲೆ ರೈತರು ಇವತ್ತಿನವರೆಗೆ ಕಾಯುತ್ತಿದ್ದಾರೆ. 18,08,000 ರೈತ ಕುಟುಂಬಗಳು ಸಾಲ ಮನ್ನಾದ ಲಾಭ ಪಡೆಯಬೇಕಾದವರು. ಅದರಲ್ಲಿ ಸರ್ಕಾರ 16,01,000 ರೈತ ಕುಟುಂಬಗಳನ್ನು ಗುರುತಿಸಿದೆ. ಉಳಿದಿದ್ದು ಇನ್ನು ಪರಿಶೀಲನೆ ಆಗಬೇಕು ಎಂದು ಹೇಳಿದ್ದಾರೆ. ಪರಿಶೀಲನೆಯಾದವರು ಸಹಕಾರಿ ಬ್ಯಾಂಕ್‌ನಲ್ಲಿ, ವಾಣಿಜ್ಯ ಬ್ಯಾಂಕ್‌ನಲ್ಲಿ ಬಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಲೆಕ್ಕಾಚಾರದ ಪ್ರಕಾರ ಅವರಿಗೆ ಸಲ್ಲಬೇಕಾದ ಹಣ, ಸಹಕಾರಿ ಬ್ಯಾಂಕ್‌ನಲ್ಲಿ 84,000 ರೈತರು 790 ಕೋಟಿ ರೂ.ಗಳ ನಿರೀಕ್ಷೆಯಲ್ಲಿದ್ದಾರೆ. ವಾಣಿಜ್ಯ ಬ್ಯಾಂಕ್‌ಗಳಲ್ಲಿ 1,25,000 ರೈತರು 65 ಕೋಟಿ ರೂಪಾಯಿಗಳಿಗಾಗಿ ಕಾಯುತ್ತಿದ್ದಾರೆ. ಪ್ರಸ್ತುತ ಒಟ್ಟು 550 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲೇ ಬೇಕಾದ ಪರಿಸ್ಥಿತಿ ಇದೆ. ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದಾರೆ. ಇನ್ನು ಕೊಡಬೇಕಾದವರ ಸಂಖ್ಯೆ ಜಾಸ್ತಿ ಇದೆ. ಪರಿಶೀಲನೆಯಾಗದವರ ಸಂಖ್ಯೆ ಜಾಸ್ತಿ ಇದೆ. ಆದರೆ ಈಗಾಗಲೇ ನಿರೀಕ್ಷೆಯಲ್ಲಿರುವವರ ಸಂಖ್ಯೆ ಇಷ್ಟು ಇದೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಪರವಾಗಿ ರೈತರ ಬಗ್ಗೆ ಮಾತನಾಡಿದ್ದಾರೆ. ಆದರೆ ರೈತರಿಗೆ ತಲುಪಿಸಬೇಕಾದ ವಿಚಾರಗಳ ಬಗ್ಗೆ, ಇನ್ನು 10 ಕೋಟಿ ರೂ.ಗಳು ಸಂದಾಯವಾಗಬೇಕಾಗಿರುವ ಬಗ್ಗೆ ಪ್ರಸ್ತಾಪವಾಗಿರುವುದಿಲ್ಲ ಎನ್ನುವ ನೋವು ನನಗೆ ಇದೆ. ಮುಂಬರುವ ಬಜೆಟ್‌ನಲ್ಲಿ ರೈತರ ಎಲ್ಲಾ ಸಾಲ ಮನ್ನಾ ವಿಚಾರಕ್ಕೆ ಇತಿಶ್ರೀ ಹಾಡುತ್ತಾರೆ ಅಂದುಕೊಂಡಿದ್ದೇನೆ. ಕೋವಿಡ್ ಸಮಯದಲ್ಲಿ ಬಹಳ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನ ಡಿಜಿಣ ತೆಗೆದುಕೊಂಡರು, ಬಹಳ ಜನ ಮಲಗಿದರು. ಆದರೆ ಮಲಗದೆ ಇರುವಂತವರು ಎಂದರೆ ರೈತರು ಮಾತ್ರ. ಎಲ್ಲರಿಗೂ ಅನ್ನ ಹಾಕಲು ಸಾದಾ ಕಾಲ ಹೊಲ-ಗದ್ದೆಗಳಲ್ಲಿ ನಿಂತು ದುಡಿದರು. ನಮಗೆಲ್ಲ ಏನು ಬೇಕು ಅದೆಲ್ಲವನ್ನು ಬೆಳದು ಕೊಟ್ಟವನು ರೈತ, ಅವನನ್ನು ನಾವು ಮರೆಯಬಾರದು. ಮರೆಯದೆ ಇರುವಂತಹ ಕೆಲಸವನ್ನು ಸರ್ಕಾರ ಬಜೆಟ್‌ನಲ್ಲಿ ತರುತ್ತದೆ ಎಂದು ಅಂದುಕೊಳ್ಳುತ್ತೇನೆ. ಇನ್ನು ಅನೇಕ ಮಹತ್ವದ ವಿಚಾರಗಳನ್ನು ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಲಿಲ್ಲ ಎಂದು ನನಗೆ ನೋವಾಗುತ್ತದೆ.

ಇವತ್ತಿಗೂ ಹತ್ತಾರು ನದಿ ವಿವಾದಗಳ ಸಮಸ್ಯೆಗಳು ಇವೆ. ಕಾವೇರಿ, ಕೃಷ್ಣಾ. ಮಹದಾಯಿ, ಎತ್ತಿನಹೊಳೆ ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಇದೆ. ಕೋವಿಡ್ ಮುಗಿಯುತ್ತಾ ಬಂತು. ನಮ್ಮ ಶಿಕ್ಷಣ ಸಚಿವರು ಹೇಳಿದ ಹಾಗೆ ಕೋವಿಡ್ ಈಗ ನೆಗಡಿಗೆ ಬಂದು ನಿಂತಿದೆ. ಇನ್ನು ಆತಂಕಪಡುವಂತಹ ಸಂದರ್ಭವಿಲ್ಲ. ಆ ದಿನಗಳು ದೂರವಾಗಿದೆ. ಆದರೆ ಮುಂದಿನ ಇಡೀ ವರ್ಷದಲ್ಲಿ ಸರ್ಕಾರ ಏನು ಮಾಡುತ್ತದೆ ಎನ್ನುವ ಚಿತ್ರಣ ಬೇಕಾಗುತ್ತದೆ. ಸರ್ಕಾರದ ಕನಸುಗಳು ಏನು ಎನ್ನುವುದನ್ನು ಹೇಳಬೇಕಾಗುತ್ತದೆ. ಖುಷ್ಕಿ ಜಮೀನನ್ನು ನೀರಾವರಿ ಮಾಡಬೇಕು ಎನ್ನುವ ದೊಡ್ಡ ಸವಾಲಿನ ವಿಚಾರ ಇದೆ. ಈ ಎಲ್ಲಾ ವಿಚಾರಗಳಲ್ಲಿ ನೆರೆ ರಾಜ್ಯದವರು ಸದಾ ನಮ್ಮ ಜೊತೆಯಲ್ಲಿ ಜಗಳವಾಡುತ್ತಿದ್ದಾರೆ. ಅವರು ನಿರಂತರವಾಗಿ ಕಾನೂನುಗಳನ್ನು ಹೇಳುತ್ತ ನ್ಯಾಯಾಂಗದ ಕದ ತಟ್ಟುವಂತಹ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಕಾವೇರಿ ನದಿ ವಿಚಾರ ನೂರಾರು ವರ್ಷಗಳಿಂದ ತಮಿಳುನಾಡು ಮತ್ತು ಕರ್ನಾಟಕದವರ ನಡುವಿನ ಸಮಸ್ಯೆಯಾಗಿದೆ. ಅದು ಹಾಗೂ-ಹೀಗೂ ತೀರ್ಮಾನಕ್ಕೆ ಬಂದಿದೆ. ವಲ್ಲದ ಮನಸ್ಸಿನಿಂದ ನಾವು ಸುಮ್ಮನಿದ್ದೇವೆ. ನಮ್ಮ ಮತ್ತು ತಮಿಳುನಾಡಿನವರ ಮಧ್ಯೆ ದೊಡ್ಡ ಅಂತರವೇನೂ ಇಲ್ಲ. 20-25 ಟಿಎಂಸಿ ನೀರಿನ ವಿಚಾರ ಮಾತ್ರವಿದೆ. ಕಳೆದ ವರ್ಷ ಸಮೃದ್ಧವಾದ ಮಳೆಯಾಗಿ, ನೀರು ಹರಿದು ನೂರಾರು ಟಿಎಂಸಿ ನೀರು ಸಮುದ್ರ ಸೇರಿ ಹೋಗಿದೆ. ತಮಿಳುನಾಡಿನವರು ಹಿಡಿದಿಟ್ಟುಕೊಳ್ಳಲು ಆಗಲಿಲ್ಲ, ನಾವು ಹಿಡಿದಿಟ್ಟುಕೊಳ್ಳಲು ಆಗಲಿಲ್ಲ. ಅದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ದೃಷ್ಟಿಯಲ್ಲಿ ನ್ಯಾಯಾಧಿಕರಣವು ಹೇಳಿದೆ, ಸುಪ್ರೀಮ್ ಕೋರ್ಟ್ ಹೇಳಿದೆ. ಹಲವು ಹಿರಿಯರೂ ಸಹ ಸಲಹೆ ಕೊಟ್ಟಿದ್ದಾರೆ. ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶವನ್ನು ಕೊಟ್ಟಿದ್ದಾರೆ. ಮೇಕೆದಾಟು ಯೋಜನೆಯಿಂದ 60 ರಿಂದ 70 ಟಿಎಂಸಿ ನೀರನ್ನು balancing reservoir ನಲ್ಲಿ ಹಿಡಿದಿಟ್ಟುಕೊಳ್ಳಲು ಸಾಧ್ಯವಿದೆ. ಇದರ ಜೊತೆಗೆ 400 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಲು ಸಾಧ್ಯವಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ನೂರಾರು ಕಿ.ಮೀ ದೂರದಿಂದ ಬೆಂಗಳೂರಿಗೆ ಕಾವೇರಿ ನೀರು ಹರಿದು ಬರುತ್ತಿದೆ. ಇಡೀ ಜಗತ್ತಿನಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರ ಎಂದರೆ ಅದು ಬೆಂಗಳೂರು. ನ್ಯೂಯಾರ್ಕ್ ಅಥವಾ ಬೇರೆ ಯಾವುದೇ ನಗರಗಳು ಬೆಂಗಳೂರು ಸಮಕ್ಕೆ ಬರುವುದಿಲ್ಲ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗಬಾರದು. ಹೀಗಾಗಿ ಕುಡಿಯುವ ನೀರಿಗಾಗಿ, ವಿದ್ಯುತ್ ಉತ್ಪಾದನೆಗಾಗಿ ಅನಗತ್ಯವಾಗಿ ಸಮುದ್ರವನ್ನು ಸೇರುವ 70 ಟಿಎಂಸಿ ನೀರನ್ನು ಹಿಡಿದಿಟ್ಟುಕೊಳ್ಳಬೇಕಾಗಿದೆ. ಬಹಳ ಆಶ್ಚರ್ಯವೇನೆಂದರೆ ಅದು ಕರ್ನಾಟಕದ ಗಡಿ ಭಾಗದಲ್ಲಿದೆ. ನೀರನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಪಸ್ ತರಲು ಆಗುವುದಿಲ್ಲ. ಏನು ಹಿಡಿದಿಟ್ಟುಕೊಂಡರೂ ಅವರು ಕೇಳಿದಾಗ ನೀರು ಬಿಡುಗಡೆ ಮಾಡಬೇಕು. ನಮ್ಮಲ್ಲಿರುವ ಕೃಷ್ಣರಾಜಸಾಗರ, ಹೇಮಾವತಿ, ಕಬಿನಿಯಲ್ಲಿ ಹಿಡಿದು ಇಟ್ಟುಕೊಂಡಿರುವ ನೀರನ್ನು ಬಿಟ್ಟು ಜನರಿಂದ, ರೈತರಿಂದ ಬೈಯಿಸಿಕೊಳ್ಳುವುದು ಮತ್ತು ನಮ್ಮ ಬೆಳೆ ಕಡೆಯ ಹಂತದಲ್ಲಿ ಒಣಗುವಂತಹ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಆದರೆ ಈ balancing reservoir 'ಮೇಕೆದಾಟು ಯೋಜನೆ' ಆಗುವುದಾದರೆ ನಮ್ಮ ಸಮಸ್ಯೆಗಳಿಗೆ ಖಂಡಿತವಾಗಿ ಪರಿಹಾರ ಸಿಗುತ್ತದೆ. ವಿದ್ಯುತ್ತ ಸಿಗುತ್ತದೆ, ಕುಡಿಯುವ ನೀರು ಸಿಗುತ್ತದೆ ಮತ್ತು ತಮಿಳುನಾಡಿಗೆ ಕೊಡಬೇಕಾದ ನೀರಿನ ವಿಚಾರದಲ್ಲಿನ ಸಮಸ್ಯೆಯನ್ನು ಬಹಳ ಸರಾಗವಾಗಿ ಇತ್ಯರ್ಥ ಮಾಡಲು ಸಾಧ್ಯವಿದೆ. ಈ ಯೋಜನೆಗೆ ತಗಲುವ ವೆಚ್ಚ ಕೇವಲ 9000 ಕೋಟಿ ರೂ.ಗಳು. ಹೊಸದಾಗಿ ಮುಖ್ಯಮಂತ್ರಿಗಳು ಬಂದಿದ್ದಾರೆ; ಅವರು ಈ ವಿಚಾರವನ್ನು ರಾಜ್ಯಪಾಲರ ಮುಖಾಂತರ ಪ್ರಸ್ತಾಪವನ್ನು ಮಾಡಿಸಿ, ಈ ಯೋಜನೆಯ Detailed Project Report ಗೆ ಕೇಂದ್ರದಿಂದ ಅನುಮೋದನೆ ಸಿಕ್ಕಿದೆ, ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳುತ್ತಾರೆ ಅಂದುಕೊಂಡಿದ್ದೆ. ಆದರೆ ರಾಜ್ಯಪಾಲರು ಅದರ ಬಗ್ಗೆ ಹೇಳಲಿಲ್ಲ, ಯೋಜನೆಯ ಬಗ್ಗೆ ಚಕಾರವನ್ನೂ ಎತ್ತಲಿಲ್ಲ. ಕೇಂದ್ರದಿಂದ ಅನುಮತಿಯನ್ನು ಪಡೆದುಕೊಳ್ಳಲು ಸಾಧ್ಯವಿದೆ. ಏಕೆಂದರೆ ನೂರಾರು ಟಿಎಂಸಿ ನೀರು ಸಮುದ್ರ ಸೇರುತ್ತದೆ ಎನ್ನುವ ದಾಖಲೆಗಳನ್ನು ತೆಗೆದುಕೊಂಡು ಹೋಗಿ ಕೇಂದ್ರ ಜಲಸಂಪನ್ಮೂಲ ಸಚಿವರ ಮುಂದೆ ಕುಳಿತರೆ ಯಾರು ಬೇಡ ಅನ್ನುವುದಿಲ್ಲ. ತಮಿಳುನಾಡಿನವರಿಗೂ ಇದರಿಂದ ಸಹಾಯವಾಗುತ್ತದೆ ಎನ್ನುವುದಾದರೆ ಅವರೂ ಕೂಡಾ ಇದನ್ನು ಸ್ವಾಗತ ಮಾಡುತ್ತಾರೆ. ಆದರೆ ಕಳೆದ ಒಂದುವರೆ ಎರಡು ವರ್ಷಗಳಿಂದ ಅದರ ಪ್ರಸ್ತಾಪ ನಿಂತುಹೋಗಿದೆ. ಕಾವೇರಿ ಜಲಾನಯನದ ವಿಚಾರ ಸುಮಾರು 10 ರಿಂದ 12 ಜಿಲ್ಲೆಗಳ ಜನರಿಗೆ ತೀವ್ರವಾಗಿ ಕಾಡುತ್ತಿದೆ. ಇವತ್ತು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದೆ. ಇದು ಆಗಲೇ ಬೇಕಾದ ಯೋಜನೆ. ಏಕೆ ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಆಗಲಿಲ್ಲ? ಮುಂದಿನ ವರ್ಷ ಈ ಯೋಜನೆಯನ್ನು ತೆಗೆದುಕೊಳ್ಳುತ್ತೇವೆ ಎನ್ನುವ ನಿರ್ಣಯವಾಗಲಿಲ್ಲ ಎನ್ನುವಂತಹ ನೋವು ನನಗೂ ಮತ್ತು ಈ ಭಾಗದ ಎಲ್ಲ ರೈತರ ನೋವಾಗಿದೆ.

ಉತ್ತರ ಕರ್ನಾಟಕದ ಕೃಷ್ಣಾ ನದಿ ವಿಚಾರ ತೆಗೆದುಕೊಂಡರೆ, ಇದು ಕೂಡಾ ಕಾವೇರಿ ವಿವಾದ ರೀತಿಯಲ್ಲಿಯೇ ಅನೇಕ ವರ್ಷಗಳಿಂದ ಸುಪ್ರೀಮ್ ಕೋರ್ಟ್‌ಗೆ, ನ್ಯಾಯಾಧಿಕರಣಕ್ಕೆ ಹೋಗಿ ಬಂದಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶಗಳೊಂದಿಗೆ ನಮ್ಮ ಹೋರಾಟ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ನ್ಯಾಯಾಧಿಕರಣದಲ್ಲಿ ತೀರ್ಮಾನವಾಗಿ 7 ವರ್ಷಗಳಾಗಿ 8ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ನ್ಯಾಯಾಧಿಕರಣ ಕರ್ನಾಟಕಕ್ಕೆ 911 ಟಿಎಂಸಿ, ಮಹಾರಾಷ್ಟ್ರಕ್ಕೆ 666 ಟಿಎಂಸಿ, ಆಂಧ್ರಪ್ರದೇಶ 1005 ಟಿಎಂಸಿ ನೀರನ್ನು ಹಂಚಿಕೆ ಮಾಡಿ ತನ್ನ ತೀರ್ಪನ್ನು ಸ್ಪಷ್ಟವಾಗಿ ಕೊಟ್ಟಿದೆ. 7 ವರ್ಷಗಳಿಂದ ಆಣೆಕಟ್ಟನ್ನು ಎತ್ತರಿಸುವಂತಹ ಕೆಲಸವನ್ನು ನಾವು ಏಕೊ ಮಾಡಲೇ ಇಲ್ಲ. ಅದೇನು ದೊಡ್ಡ ಸಾಹಸದ ಕೆಲಸವಲ್ಲ, 519 ರಿಂದ 524 ಮೀಟರ್‌ವರೆಗೆ ಎತ್ತರಕ್ಕೆ ಏರಿಸುವಂತಹ ಕೆಲಸ ಅಷ್ಟೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(224)08–02–2021(04–30)ಬಿಎಸ್‌ಡಿ–ವಿಕೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು)**

ಅದರಿಂದ 100 TMC ನೀರು ನಮಗೆ ಸಿಗುತ್ತದೆ. ಇದರಿಂದ 22 ಗ್ರಾಮಗಳು ಮುಳುಗಡೆಯಾಗುವುದು ನಿಜವಾದರೂ ಲಕ್ಷಾಂತರ ಎಕರೆ ಜಮೀನಿಗೆ ನೀರುಣಿಸುವ ಕೆಲಸ ಆಗುತ್ತದೆ. ಈಗಾಗಲೇ ಆಂಧ್ರ ಪ್ರದೇಶ ಮತ್ತು ತೆಲಂಗಾಣದವರು ಈ ಹಂಚಿಕೆ ಸರಿಯಿಲ್ಲ, Supreme Court ಗೆ ಹೋಗುತ್ತೇವೆ ಎಂದು ಖ್ಯಾತೆ ತೆಗೆದಿದ್ದಾರೆ. ಶ್ರೀ ಜಗಮೋಹನ್‌ರಾವ್ ರವರು ಹಾಗೂ ಶ್ರೀ ಚಂದ್ರಶೇಖರ್ ರಾವ್ ರವರು ನ್ಯಾಯಸಮ್ಮತ ಅಲ್ಲ ಎಂದು ಹೇಳುತ್ತಾರೆ. ನಾವು ತೂಕಡಿಸುತ್ತಾ ಕುಳಿತರೆ ಅವರು ಇನ್ನೇನು ಮಾಡುತ್ತಾರೆ? ಏಳೆಂಟು ವರ್ಷಗಳಿಂದ ಎತ್ತರಿಸುವ ಕೆಲಸ ಮಾಡಲಿಲ್ಲ, ಯಾವುದ್ಯಾವುದಕ್ಕೋ ಸಾಲ ಮಾಡುತ್ತಾರೆ. ಆದರೆ ನೀರಾವರಿ ಯೋಜನೆಗಳಿಗೆ ಸಾಲವನ್ನು ಏಕೆ ಮಾಡಬಾರದು? ಈ ಯೋಜನೆಯನ್ನು ಏಕೆ ಪೂರ್ಣ ಮಾಡಬಾರದು? ನಾವು ಹಾಗೆ ಸುಮ್ಮನೆ ಕುಳಿತರೆ ಅವರು ಮತ್ತೆ claim ಮಾಡುತ್ತಾರೆ, ಮತ್ತೆ ಮರುಪರಿಶೀಲನೆಗಾಗಿ Supreme Court ಗೆ ಹೋಗುತ್ತಾರೆ. ಮತ್ತೆ ನ್ಯಾಯಾಧಿಕರಣ ಬೇಕೆಂದು ತೀಟೆ, ಜಗಳ ತೆಗೆಯುತ್ತಾರೆ. ಈ ಸಂಬಂಧ ಎಲ್ಲಿಗೆ ಹೋಗಿ ನಿಲ್ಲುತ್ತದೆ? ಆಲಮಟ್ಟಿ Dam ಅನ್ನು ಉಳಿಸಿಕೊಳ್ಳುವ ಮತ್ತು Dam ನ ಎತ್ತರವನ್ನು ಹೆಚ್ಚು ಮಾಡುವ ದಿಸೆಯಲ್ಲಿ ಹಣ ಇಲ್ಲ ಎಂದು ಹೇಳಬಾರದು. ಮಾನ್ಯ ಉಮೇಶ್ ಕತ್ತಿಯವರು ಸದನದಲ್ಲಿ ಇದ್ದಾರೆ. ಇದನ್ನು ಬಹಳ ಸುಲಭವಾಗಿ ಮಾಡಿಬಿಡಬಹುದು, 524 meter ಬದಲಿಗೆ 522 meter ಮಾಡೋಣ. 522 meter ಮಾಡಿದರೆ ರೂ.8 ಸಾವಿರ ಕೋಟಿ ಮಾತ್ರ ಸಾಕು. ಅದರಿಂದ ಹೆಚ್ಚು ವೆಚ್ಚ ಬೀಳದೇ ಪೂರ್ಣ ಪ್ರಯೋಜನ ಪಡೆಯಬಹುದು. ಈಗಾಗಲೇ ಜಲಾವೃತಗೊಂಡು ಭೂಮಿ ಮುಳುಗಡೆಯಾಗಿ, ಭೂಮಿ ಕಳೆದುಕೊಂಡ ಜನರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಆಗಿಲ್ಲ. ಈ ಸಂದರ್ಭದಲ್ಲಿ ಕಾವೇರಿಯ ಮೇಕೆದಾಟು ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ, ಉತ್ತರ ಕರ್ನಾಟಕದ ಆಲಮಟ್ಟಿ Dam ನ ಎತ್ತರದ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ.

ಇನ್ನು ಮೂರನೆಯ ವಿಷಯವನ್ನು ಬಹಳ ಭಾರವಾದ ಹೃದಯದಿಂದ ಪ್ರಸ್ತಾಪ ಮಾಡಬೇಕಾಗಿದೆ. ಮಹದಾಯಿ ಕಳಸಾ ಬಂಡೂರಿಯ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ತಮಗೆಲ್ಲರಿಗೂ ಗೊತ್ತಿರುವಂತೆ ಅಲ್ಲಿಯ ಜನರು ಹೋರಾಟಕ್ಕೆ ಕುಳಿತು 3 ವರ್ಷಗಳು ಸಂದಿವೆ. ಕಳೆದ 3 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದಾರೆ. ಇದು ಬೆಳಗಾವಿ, ಧಾರವಾಡ, ಬಾಗಲಕೋಟೆ ಸೇರಿದಂತೆ ನಾಲ್ಕು ಜಿಲ್ಲೆಗಳ ಸುಮಾರು 15 ತಾಲ್ಲೂಕುಗಳ ಕುಡಿಯುವ ನೀರಿನ ವಿಚಾರವಾಗಿದೆ. ಕುಡಿಯುವ ನೀರಿನ ವಿಚಾರದಲ್ಲಿ ಅವರ ಐತಿಹಾಸಿಕ ಹೋರಾಟವನ್ನು ಕಂಡಿದ್ದೇವೆ. ಅವರ ಹೋರಾಟ ದೇಶದ ಪ್ರಧಾನ ಮಂತ್ರಿಗಳು, ಶ್ರೀ ಅಮಿತ್ ಷಾ ರವರುಗಳಿಗೂ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಲುಪಿ, ನಮಗೆಲ್ಲರಿಗೂ ಅದರ ಬಿಸಿ ಮುಟ್ಟಿದೆ. ಅವರು ಎಲ್ಲಾ ಮಜಲುಗಳಲ್ಲಿಯೂ ಹೋರಾಟ ಮಾಡಿದರು. ಆ ಹೋರಾಟದಲ್ಲಿ 12 ಜನ ರೈತರು ಸತ್ತರೂ ಇನ್ನೂ ಹೋರಾಟ ನಿಂತಿಲ್ಲ. ಮಹದಾಯಿ ನದಿ ಕರ್ನಾಟಕದಲ್ಲಿ ಹುಟ್ಟಿ ಸುಮಾರು 35 ಏಟ ಕರ್ನಾಟಕದಲ್ಲಿ ಹರಿಯುತ್ತದೆ. ನಂತರ ಗೋವಾಕ್ಕೆ ಹೋಗುತ್ತದೆ, ಅದು ಚಿಂತೆಯಿಲ್ಲ. ಆದರೆ ಆ ನೀರನ್ನು ಗೋವಾದವರು ಬಳಸಿಕೊಳ್ಳುತ್ತಿದ್ದಾರೆಯೇ? ಅದು ಇಲ್ಲ, ಆ ನೀರು ಅಲ್ಲಿಯೂ ಸಮುದ್ರಕ್ಕೆ ಸೇರುತ್ತದೆ. ಕಳಸಾ ಬಂಡೂರಿ ಯೋಜನೆಗಾಗಿ ನಾವು ಸಾಕಷ್ಟು ತಿರುವು ಯೋಜನೆಗಳ ಕಾಮಗಾರಿಯನ್ನು ಮುಕ್ತಾಯ ಮಾಡಲಾಗಿದೆ. ಸಂಪುಟ ಸಭೆಯು ಆಡಳಿತಾತ್ಮಕ ಒಪ್ಪಿಗೆಯನ್ನು ನೀಡಿ, ಅದರ ಶಂಕು ಸ್ಥಾಪನೆಯನ್ನು ಮಾನ್ಯ ಕುಮಾರಸ್ವಾಮಿ ಮತ್ತು ಶ್ರೀ ಯಡಿಯೂರಪ್ಪನವರ ಸರ್ಕಾರ ಮಾಡಿತು. ಆದರೆ ಈಗ ಏಕೆ ಅದರ ಪ್ರಸ್ತಾಪ ಇಲ್ಲ? ರೂ. 858 ಕೋಟಿಗಳ ಯೋಜನೆ ಬಗ್ಗೆ ಒಂದು ಚಕಾರ ಇಲ್ಲ, ಮಾತೇ ಇಲ್ಲ, ಪ್ರಸ್ತಾಪವೂ ಇಲ್ಲ. ಹೀಗಾದರೆ ಕೊಟ್ಟ ಮಾತುಗಳು ಏನಾಯಿತು? ಹಿಂದೆ ಯಾವ್ಯಾವ ರೈತರಿಗೆ ಮಾತು ಕೊಟ್ಟು ಬಂದಿದ್ದರು?

ರೈತರು ಇನ್ನೂ ಧರಣಿ ಸ್ಥಳದಲ್ಲಿಯೇ ಇದ್ದು ಹೋರಾಟ ನಿಂತಿಲ್ಲ. ಇದಕ್ಕೆ ಮೂರು ವರ್ಷಗಳ ಇತಿಹಾಸ ಇದೆ, ಈಗಲೂ ಹೋರಾಟ ನಿಂತಿಲ್ಲ. ಕುಡಿಯುವ ನೀರಿಗಾಗಿ, that agitation is going on. ದೇಶದ ಕಾನೂನು ಕುಡಿಯುವ ನೀರಿಗೆ ಅಡ್ಡಿಯಿಲ್ಲ ಎಂದು ಹೇಳುತ್ತದೆ. ನ್ಯಾಯಾಧೀಕರಣದ ಮಧ್ಯಂತರ ತೀರ್ಪಿನಲ್ಲಿ 13.5 TMC ನೀರನ್ನು ಕುಡಿಯುವುದಕ್ಕೆ ಬಳಸಿಕೊಳ್ಳುವುದಕ್ಕೆ ಅಡ್ಡಿಯಿಲ್ಲ ಎಂದು ಹೇಳಿದೆ. ಆದರೆ ಇವತ್ತು ಗೋವಾದ ಮುಖ್ಯಮಂತ್ರಿಗಳು ಹೇಳುವ ಹೇಳಿಕೆಯನ್ನು ಗಮನಿಸಿದ್ದಾರೆಯೇ? ಅವರು ಅದು ಸಾಧ್ಯವಿಲ್ಲದ್ದು ಎಂದು ಹೇಳಿ ಮತ್ತೆ Supreme Court ಗೆ ಅರ್ಜಿ ಹಾಕಿದ್ದಾರೆ. ಅದಕ್ಕೆ stay ಸಿಕ್ಕಿಲ್ಲ. ತೀರ್ಮಾನ ನಮ್ಮ ಪರ ಇದ್ದು, ಕೇಂದ್ರ ಸರ್ಕಾರವು ಆಡಳಿತಾತ್ಮಕ ಒಪ್ಪಿಗೆಯನ್ನು ನೀಡಿದ್ದರೂ ಅನುಷ್ಠಾನ ಮಾಡಲು ಮೀನ-ಮೇಷ ಏಕೆ? ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಮೀನ-ಮೇಷ ಏಕೆ? ಇನ್ನು ಎಷ್ಟು ವರ್ಷಗಳು ಬೇಕು? ಇದು 2-3 ದಶಕಗಳ ಹೋರಾಟವಾಗಿದ್ದು, 3 ವರ್ಷಗಳ ಕಾಲ ರೈತರು ಧರಣಿಯಲ್ಲಿ ಕುಳಿತಿದ್ದಾರೆ. ಅವರು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಪಾದಯಾತ್ರೆ ಬಂದಾಗ ಅದರ ಕಾವು ಮುಟ್ಟಬೇಕಲ್ಲವೇ? ಆ ಜನರ ನೀರಿನ ಹಾಹಾಕಾರವನ್ನು ನೀಗಿಸಬೇಕಲ್ಲವೇ? ಆ ಸವಾಲನ್ನು ಸ್ವೀಕಾರ ಮಾಡಬೇಕಲ್ಲವೇ? ಅದನ್ನು ಏಕೆ ಮಾಡಲಿಲ್ಲ? ಏಕೆ ಪ್ರಸ್ತಾಪವಾಗುತ್ತಿಲ್ಲ. ಕಾವೇರಿಯ ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆಯ ಆಲಮಟ್ಟಿಯನ್ನು ಎತ್ತರಿಸುವುದು ಮುಖ್ಯವಾಗಿರುವಂತೆ ಕಳಸಾ ಬಂಡೂರಿಯ ಮಹದಾಯಿ ಯೋಜನೆಯೂ ಅಷ್ಟೇ ಮುಖ್ಯವಾಗಿದೆ.

ಇನ್ನು ಎತ್ತಿನಹೊಳೆ ಯೋಜನೆಯ ಬಗ್ಗೆ ಅವರೇ ಪ್ರಸ್ತಾಪ ಮಾಡುತ್ತಿದ್ದು, 29 ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯಾಗಿದೆ. ಇದು ಸಹಸ್ರಾರು ಕೋಟಿಗಳ ಯೋಜನೆಯಾಗಿದ್ದು, ಇವುಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು para ದಲ್ಲಿಯಾದರೂ ಪ್ರಸ್ತಾಪ ಬೇಡವೇ? ಏನಾಗಿದೆ, ಏನು ಮಾಡುತ್ತಾರೆ, ಎಲ್ಲಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಯಿತು, ಯಾವಾಗ ಜಾರಿಗೆ ತರಲಾಗುವುದು ಎಂಬುದು ಬೇಡವೇ? ಇಂತಹ ಜ್ವಲಂತ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ರಾಜ್ಯಪಾಲರ ಭಾಷಣದ ಮಾತುಗಳು ಎಲ್ಲಿ ರುಚಿಸುತ್ತವೆ? ನಮಗೆ ಎಲ್ಲಿ ಇಷ್ಟವಾಗುತ್ತದೆ? ಇದು ನಾಗರಿಕ ಸರ್ಕಾರದ ಜವಾಬ್ದಾರಿ ಆಗಬೇಕು. ಅದ್ವಿತೀಯ ಜವಾಬ್ದಾರಿ ಆಗಬೇಕು. ರೈತರಿಗೆ ಅವರೇನು ಕೊಡುವುದು ಬೇಡ, ಅವರ ಹೊಲಕ್ಕೆ ನೀರು ಕೊಡಲಿ. ಅವರ ಹೊಲಕ್ಕೆ ವಿದ್ಯುಚ್ಛಕ್ತಿ ಕೊಡಲಿ. ಅವರು ದುಡಿಯುತ್ತಾರೆ, ಅವರು ಬೆಳೆಯುತ್ತಾರೆ, ಅವರು ಯಾರ ಕಡೆಗೂ ಬರುವುದಿಲ್ಲ. ನೀರು ಕೊಡಲು ಮತ್ತು ನೀರು ಉಣಿಸಲು ಸರ್ಕಾರಕ್ಕೆ ಮೀನ-ಮೇಷ ಏಕೆ? ಇದು ಆದ್ಯತೆಯ ಮೇಲೆ ಮಾಡುವ ಕೆಲಸವಾಗಿದೆ. ಅದರ ಒಂದು ಮಾತು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಆಗಲಿಲ್ಲವೆಂದಾಗ ಸರ್ಕಾರದ ಮುಂದೆ ಸವಾಲುಗಳು ಇಲ್ಲವೇ? ಆ ಯೋಜನೆಗಳು ಇಲ್ಲವೇ? ಅದರ ಬಗ್ಗೆ ಚಿಂತನೆಗಳು ಇಲ್ಲವೇ ಎಂದು ಇಡೀ ನಾಡಿನ ರೈತರನ್ನು ಕಾಡುತ್ತಿರುವ ವಿಚಾರವಾಗಿದೆ. ಇಡೀ ನಾಡಿನ ರೈತರನ್ನು ಅತ್ಯಂತ ಗಂಭೀರವಾಗಿ ಕಾಡುತ್ತಿರುವ ವಿಚಾರವಾಗಿದೆ. ಈ ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಸುವುದಕ್ಕೆ ಸಾಧ್ಯವಾಗಲಿಲ್ಲ, ಇರಲಿ ತೊಂದರೆಯಿಲ್ಲ, ಆದರೆ ಮುಂದಿನ ತಿಂಗಳು Budget Session ನಲ್ಲಾದರೂ ಪ್ರಸ್ತಾಪವಾಗಬೇಕು. ಈ ನಾಲ್ಕೈದು ಯೋಜನೆಗಳಿಗೆ ಏನೇನು ಮಾಡುತ್ತಾರೆ, ಎಲ್ಲಿಯವರೆಗೆ ನಿಲ್ಲುತ್ತಾರೆ ಎಂಬುದು ಆಗಬೇಕಾಗಿದೆ.

ಇನ್ನು ನಮ್ಮಲ್ಲಿ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಗಂಗಾಕಲ್ಯಾಣ ಎಂಬ ಯೋಜನೆ ಇದೆ. ನೀರಾವರಿ ಯೋಜನೆಗಳ ಬಗ್ಗೆ ಒಂದು ಚೂರು ಪ್ರಸ್ತಾಪವಾಗಲಿಲ್ಲ ಎಂದು ತೀವ್ರವಾಗಿ ನನ್ನನ್ನು ಕಾಡುತ್ತಿದೆ. ಗಂಗಾ ಕಲ್ಯಾಣ ಯೋಜನೆ ಅತ್ಯಂತ ಅದ್ಭುತವಾದ ಯೋಜನೆಯಾಗಿದ್ದು, 2ರಿಂದ 5 ಎಕರೆ ಇರುವ ರೈತರಿಗೆ ನೀರನ್ನು ಕೊಡುವ ಒಂದು ದೊಡ್ಡ ಯೋಜನೆಯಾಗಿದೆ. ಇದು ಎಷ್ಟು ವಿಚಿತ್ರವಾಗಿ ಆಗಿದೆ ಎಂದರೆ ಈ ಯೋಜನೆಯಲ್ಲಿ borewell ಹಾಕುವವನೇ ಒಬ್ಬನಾದರೆ, electricity connection ಕೊಡುವವನೇ ಇನ್ನೊಬ್ಬ, TC ತಂದು ಹಾಕುವವನೇ ಮತ್ತೊಬ್ಬ ಇರುತ್ತಾನೆ. ಅವನ ತೀಟೆಗೆ borewell ಹಾಕಿ ಹೋದರೆ 2-3 ವರ್ಷ ಆ ಕಡೆ ಬರುವುದಿಲ್ಲ. ಅಷ್ಟರಲ್ಲಿ borewell ಬತ್ತಿ ಹೋಗಿರುತ್ತದೆ. ಪುನಃ re-drilling ಮಾಡಿಸುವುದಕ್ಕೆ ಆಗುತ್ತದೆಯೇ? ಇವೆಲ್ಲವನ್ನು ಒಂದು ತೆಕ್ಕೆಗೆ ತರಲು ಸರ್ಕಾರದ ಕೈಯಿಂದ ಏಕೆ ಆಗುತ್ತಿಲ್ಲ? ಒಂದು ಹಂತದಲ್ಲಿ ಅವನು ಬಂದು borewell ಹಾಕಿ, electricity connection ಕೊಟ್ಟು TC ಅನುಸ್ಥಾಪಿಸಿ ಹೋಗಬೇಕು. ಹೀಗೆ ಮಾಡಬೇಕೆಂದು ರೈತನು ಎಷ್ಟು ಸಾರಿ ಬಡಿದುಕೊಳ್ಳಬೇಕು? ರೈತನು ಎಷ್ಟು ಕಷ್ಟದಲ್ಲಿದ್ದಾನೆಂದರೆ KPTCL ಇಲಾಖೆಗೆ ಅಲೆದು-ಅಲೆದು ಸಾಕಾಗಿ ಹೋಗಿದ್ದಾನೆ. ಯಾವ ಅಧಿಕಾರಿಗಳು ಯಾರ ಮಾತನ್ನು ಕೇಳುವ ಸ್ಥಿತಿಯಲ್ಲಿಲ್ಲ. ಗಂಗಾ ಕಲ್ಯಾಣ ಯೋಜನೆಗಾದರೂ ಆದ್ಯತೆ ಕೊಡಬೇಕಲ್ಲವೇ? 2-3 ವರ್ಷಗಳವರೆಗೆ ರೈತನಿಗೆ electricity connection ಕೊಡಲಿಲ್ಲ ಎಂದರೆ ಆ ಯೋಜನೆ ಏಕೆ? Borewell ಅನ್ನು ಮಾತ್ರ ಬಹಳ ಬೇಗ ಹಾಕುತ್ತಾರೆ. ಅದು ಯಾವ ಕಾರಣಕ್ಕೆ ಹಾಕುತ್ತಾರೆ ನನಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೊತ್ತಿಲ್ಲ. Borewell ಗಳನ್ನು ಬಹಳ speed ಆಗಿ ಹಾಕಿಬಿಡುತ್ತಾರೆ. Borewell ಹಾಕುವುದಕ್ಕೆ ಬಿಡುವು ಕೊಡುವುದಿಲ್ಲ. ನಂತರ ಅದರಲ್ಲಿ ನೀರು ಬರಲಿ, ಬರದೇ ಹೋಗಲಿ, ಹಾಕಿಬಿಡುತ್ತಾರೆ. ಅದೇ ಒಂದು ದಂಧೆಯಾಗಿದೆ. ಆದರೆ electrification ಮತ್ತು TC ಹಾಕುವುದು ಹಾಗೂ ರೈತನ ಹೊಲಕ್ಕೆ ನೀರು ಹರಿಯುವುದು ಮುಖ್ಯವಾಗಬೇಕಲ್ಲವೇ? ಆಗಲೇ purpose serve ಆಗುವುದು. ದಯಮಾಡಿ ಗಂಗಾ ಕಲ್ಯಾಣ ಯೋಜನೆಯನ್ನು ಮತ್ತಷ್ಟು ಸದೃಢ ಮಾಡಬೇಕು. ಅದರ ವ್ಯಾಪ್ತಿಯನ್ನು ಹಿರಿದು ಮಾಡಿ ಶಕ್ತಿ ತುಂಬಬೇಕು. ಅದರ ಘನ ಉದ್ದೇಶ ಈಡೇರುವಂತೆ ನೋಡಿಕೊಳ್ಳುವ ಮಹತ್ತರ ಜವಾಬ್ದಾರಿ ಸರ್ಕಾರದ ಮೇಲಿದೆ, ಈ ದಿಸೆಯಲ್ಲಿ ಸರ್ಕಾರವು ಒಂದು ನಿರ್ಣಯವನ್ನು ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

ಇನ್ನು ಬಹಳ ಮುಖ್ಯವಾಗಿ ನನ್ನ ಜಿಲ್ಲೆಯ ಸರಹದ್ದಿಗೆ ಸಂಬಂಧಪಟ್ಟ Mysugar ಕಾರ್ಖಾನೆಯ ವಿಚಾರವಾಗಿದೆ. Mysugar ಕಾರ್ಖಾನೆ ಇಡೀ ಏಷ್ಯಾ ಖಂಡದಲ್ಲಿ ಮೊಟ್ಟಮೊದಲು ಆದ ಸಕ್ಕರೆ ಕಾರ್ಖಾನೆಯಾಗಿದೆ. ಆ ಸಕ್ಕರೆ ಕಾರ್ಖಾನೆಗೆ ಬಹಳ ದೊಡ್ಡ ಇತಿಹಾಸ ಇದೆ. ಈಗಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ರವರಿಂದ ಹಿಡಿದು ಶ್ರೀ ಕೋಲ್‌ಮನ್ ಹಾಗೂ ಮಾನ್ಯ ವಿಶ್ವೇಶ್ವರಯ್ಯನವರ ಭಾವ ಚಿತ್ರಗಳನ್ನು ಇಟ್ಟುಕೊಂಡು ನಮ್ಮ ಜಿಲ್ಲೆಯ ಜನ ನಿರಂತರವಾಗಿ ಹೋರಾಟ ಮಾಡುತ್ತಿದ್ದಾರೆ. ಆವತ್ತು ಪಠ್ಯ ಪುಸ್ತಕಗಳಲ್ಲಿ 'ಮಂಡ್ಯದ ಸಕ್ಕರೆ ಬಾ ಅಣ್ಣ, ನೀ ಸಿಹಿ ತಿಂದೋಗಣ್ಣ' ಎಂದು ಓದುತ್ತಿದ್ದೆವು. ಈಗ ಎಲ್ಲಿಗೆ ಹೋಗುವುದು ಎಲ್ಲಿ ತಿನ್ನುವುದೋ ಅರ್ಥವಾಗುತ್ತಿಲ್ಲ. ಸರ್ಕಾರಿ ಸ್ವಾಮ್ಯದ ಏಕೈಕ ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳುವ ಶಕ್ತಿ ಸರ್ಕಾರಕ್ಕಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಬೂಕನಕೆರೆ ಗ್ರಾಮದವರಾಗಿದ್ದಾರೆ. ಅವರು ಬಂದ ಹೊಸದರಲ್ಲಿ ಅವರಿಂದ ಮಾತು ತೆಗೆದುಕೊಂಡೆ, ಅವರು 'ಈ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ಜವಾಬ್ದಾರಿಯಲ್ಲಿ ಮುನ್ನಡೆಸುವ ತೀರ್ಮಾನಕ್ಕೆ ಬಂದಿದ್ದೇನೆ, ನಿಮಗೆ ಆತಂಕ ಬೇಡ' ಎನ್ನುವ ಮಾತುಗಳನ್ನು ಹೇಳಿದರು. ಕಾರ್ಖಾನೆ ಮುಚ್ಚಿ ಎರಡು ವರ್ಷಗಳು ಕಳೆದು ಹೋಯಿತು.

(ಮುಂದು)

**(225)/08.02.2021/4.40/ಹೆಚ್‌ವಿ:ವಿಕೆ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ಈ ಸಕ್ಕರೆ ಕಾರ್ಖಾನೆ ತನ್ನ ಕಾರ್ಯವನ್ನು ನಿಲ್ಲಿಸಿ ಸುಮಾರು 2 ವರ್ಷಗಳಾಗಿವೆ. ಅದರ ಮರುಚಾಲನೆಗೆ ಬೇಕಾಗಿರುವುದು ಕೇವಲ 8 ರಿಂದ 10 ಕೋಟಿ ರೂಪಾಯಿಗಳು ಮಾತ್ರ. ಈ ಕಾರ್ಖಾನೆಗೆ ಸೇರಿದ ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಆಸ್ತಿ ಇದೆ. ನೂರಾರು ಎಕರೆ ಜಮೀನಿದೆ. ಕಾರ್ಖಾನೆಯಲ್ಲಿ ಕೋ–ಜನ್ ಮತ್ತು ಡಿಸ್ಟಲರಿ ಉತ್ಪಾದನೆ ಮಾಡುವ ವ್ಯವಸ್ಥೆಯಿದೆ. ಒಂದು ಕಾಲಕ್ಕೆ ಮಂಡ್ಯದ ರಮ್ ಮತ್ತು ಮಂಡ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬ್ರಾಂದಿ ಎಂದರೆ ಬಹಳ ಹೆಸರುವಾಸಿಯಾಗಿತ್ತು. ಅದರಲ್ಲಿಯೇ ಅರ್ಧ ಆದಾಯ ಬರುತ್ತಿತ್ತು. ಇವತ್ತು ಕೋ-ಜನ್ ಮತ್ತು ಡಿಸ್ಟಲರಿ ಉತ್ಪಾದನೆ ಮಾಡುವ ಕೆಲಸ ನಡೆಯುತ್ತಿಲ್ಲ. ಇವತ್ತು ಈ ಸಕ್ಕರೆ ಕಾರ್ಖಾನೆ ಯಾವ ಸ್ಥಿತಿಯಲ್ಲಿದೆಯೆಂದು ನಾವು ಹುಡುಕಬೇಕಾಗಿದೆ. ಈ ಸಕ್ಕರೆ ಕಾರ್ಖಾನೆಯನ್ನು ಪುನರ್ ಆರಂಭ ಮಾಡುವ ದಿಸೆಯಲ್ಲಿ ಯಾವುದೇ ಪ್ರಯತ್ನಗಳು ನಡೆಯುತ್ತಿಲ್ಲ. ಈಗ ಆ ಕಾರ್ಖಾನೆಯನ್ನು ಖಾಸಗೀಕರಣ ಮಾಡುವಂತಹ ಮಾತುಗಳು ಕೇಳಿ ಬರುತ್ತಿವೆ. ಸರ್ಕಾರಿ ಸಕ್ಕರೆ ಕಾರ್ಖಾನೆಯನ್ನು ನಡೆಸುವುದಕ್ಕೆ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ, ಈ ಕಾರ್ಖಾನೆಗೆ ಸೇರಿದ ಸಾವಿರಾರು ಕೋಟಿ ರೂಪಾಯಿಗಳಷ್ಟು ಮೌಲ್ಯದ ಆಸ್ತಿಯನ್ನು ಸರ್ಕಾರ ಖಾಸಗಿಯವರಿಗೆ ನೀಡುತ್ತಿದೆ. ಇಡೀ ರಾಜ್ಯದ ಸಕ್ಕರೆ ಲಾಬಿಯನ್ನು ಹತೋಟಿಯಲ್ಲಿಡುವುದಕ್ಕೆ ಈ ಒಂದು ಸರ್ಕಾರಿ ಸಕ್ಕರೆ ಕಾರ್ಖಾನೆಯ ಅವಶ್ಯಕತೆ ಇದೆ. ಸರ್ಕಾರ ಸಕ್ಕರೆ ದರವನ್ನು ನಿಗದಿ ಮಾಡಿದರೆ ಅದನ್ನು ಅನುಷ್ಠಾನಕ್ಕೆ ತರುತ್ತಿದ್ದದ್ದು ಮೈ ಶುಗರ್ ಕಾರ್ಖಾನೆ. ಮೈ ಶುಗರ್ ಕಾರ್ಖಾನೆ ದರವನ್ನು ಅನುಷ್ಠಾನಕ್ಕೆ ತಂದ ಮೇಲೆ ಬೇರೆ ಸಕ್ಕರೆ ಕಾರ್ಖಾನೆಗಳು ಇದನ್ನು ಫಾಲೋ ಮಾಡುತ್ತಿದ್ದವು. ಸರ್ಕಾರ ಈ ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಿದರೆ ಇಡೀ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಖಾಸಗಿಯವರ ಲಾಬಿಗೆ ಮಣಿಯಬೇಕಾಗುತ್ತದೆ. ರೈತರ ಕಷ್ಟ ಕೇಳುವವರು ಯಾರು? ನಮ್ಮ ಜಿಲ್ಲೆಯ ಜನರ ಬದುಕು, ಜೀವದ ಉಸಿರು ಮೈಶುಗರ್ ಸಕ್ಕರೆ ಕಾರ್ಖಾನೆಯಾಗಿದೆ. ಈಗ ನಮ್ಮ ರೈತರ ಬದುಕು 'ಎದೆಯುದ್ದ ಸಾಲ, ಮಂಡಿಯುದ್ದ ಕಬ್ಬು' ಎನ್ನುವ ರೀತಿಯಾಗಿದೆ. ನಮ್ಮ ರೈತರನ್ನು ಕೇಳುವವರೇ ಇಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರ ಈಗ 'ಒಂದು ಜಿಲ್ಲೆ ಒಂದು ಉತ್ಪನ್ನ' ಎನ್ನುವ ಒಂದು ಹೊಸ ಯೋಜನೆಯನ್ನು ತಂದಿದೆ. ಇದು 'ಆತ್ಮನಿರ್ಭರ ಭಾರತ ಯೋಜನೆ' ಆಗಿದೆ. ಇದೊಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಒಳ್ಳೆಯ ಕಾರ್ಯಕ್ರಮವನ್ನು ಒಳ್ಳೆಯದೆಂದು ಹೇಳಬೇಕು.

ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯನ್ನು 'ಒಂದು ಜಿಲ್ಲೆ; ಒಂದು ಉತ್ಪನ್ನ' ಯೋಜನೆ ಅಡಿಯಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಹಿಂದೆ ನಾವು ಕಬ್ಬನ್ನು ನುರಿಸುವುದಕ್ಕೆ ಕಾರ್ಖಾನೆಯವರನ್ನು ಕಾಯುತ್ತಿರಲಿಲ್ಲ. ನಾವು ಬೆಳೆದಂತಹ ಕಬ್ಬನ್ನು ನಮ್ಮ ಆಲೆಮನೆಗಳಲ್ಲಿಯೇ ನುರಿದು ಬೆಲ್ಲವನ್ನು ತಯಾರು ಮಾಡುತ್ತಿದ್ದೆವು. ಈ ಬೆಲ್ಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ಬೇರೆಬೇರೆ ರಾಜ್ಯಗಳಿಗೆ ಅಂದರೆ, ರಾಜಾಸ್ಥಾನ್, ಒರಿಸ್ಸಾ ಮತ್ತು ಜಾರ್ಖಂಡ್ ರಾಜ್ಯಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಈ ಸಕ್ಕರೆ ಕಾರ್ಖಾನೆಗಳ ಲಾಬಿ ಬಂದು ನಮ್ಮ ಕಾರ್ಖಾನೆಯ ವ್ಯಾಪ್ತಿಗೆ ಇಷ್ಟು ಸಾವಿರ ಎಕರೆ, ನಿಮ್ಮ ಕಾರ್ಖಾನೆಗೆ ಇಷ್ಟು ಸಾವಿರ ಎಕರೆ ಎಂದು ಏರಿಯಾ ಹಂಚಿಕೆಕೊಂಡುಬಿಟ್ಟಿದ್ದಾರೆ. ಇವತ್ತು ನಮ್ಮ ಜಿಲ್ಲೆಯಲ್ಲಿ 4-5 ಸಕ್ಕರೆ ಕಾರ್ಖಾನೆಗಳಿವೆ. ಇವರುಗಳು ಆಲೆಮನೆಗಳಿಗೆ ಲೈಸೆನ್ಸ್, ವಿದ್ಯುತ್ ಕೊಡದೇ ಇರುವಂತೆ ನೋಡಿಕೊಂಡಿದ್ದಾರೆ. ಮೊದಲು ಆಲೆಮನೆಯವರು ಬಂದು ಕಬ್ಬು ಕೊಡುವಂತೆ ನಮ್ಮನ್ನು ಗೋಗರೆಯಬೇಕಾಗಿತ್ತು. ಅವರು ಬಹಳ ಆನಂದವಾಗಿ ಸಾವಯವ ಬೆಲ್ಲವನ್ನು ತಯಾರು ಮಾಡಿ, ಜನರಿಗೆ ಕೊಡುತ್ತಿದ್ದರು. ಬೆಲ್ಲ ಆರೋಗ್ಯಕ್ಕೆ ಅತ್ಯಂತ ಉತ್ತಮವಾಗಿದೆ. ಇದು ಹತ್ತಾರು ಕಾಯಿಲೆಗಳಿಗೆ ಮದ್ದಾಗಿದೆ. ಇವತ್ತಿಗೂ ಬೆಳಗ್ಗೆ ಒಂದು ಚೂರು ಶುಂಠಿಯ

ಜೊತೆಗೆ ಬೆಲ್ಲವನ್ನು ತಿಂದರೆ ಜೀವನ ಆನಂದಮಯವಾಗಿರುತ್ತದೆ. ಈ ದಿನ ಸದನದಲ್ಲಿ 5 ಜನ ಪ್ರಭಾವಿ ಮಂತ್ರಿಗಳು ಉಪಸ್ಥಿತರಿದ್ದಾರೆ. ಪಡಿತರ ವ್ಯವಸ್ಥೆಯಡಿಯಲ್ಲಿ ಸಕ್ಕರೆ ಬದಲಿಗೆ ಬೆಲ್ಲವನ್ನು ಹಂಚಿಕೆ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಏಕೆಂದರೆ, ಸಕ್ಕರೆ ಒಂದು ಬಗೆಯ ವಿಷ ಎನ್ನುವುದು ಎಲ್ಲರಿಗೂ ಗೊತ್ತಿದೆ. ವ್ಯಾಟ್ಸ್‌ಆಪ್ ಆನ್ ಮಾಡಿದರೆ ಡಾ॥ಖಾದರ್‌ರವರು ಸಕ್ಕರೆ ಎಷ್ಟರ ಮಟ್ಟಿಗೆ ವಿಷ, ಅದು ನಮ್ಮ ಜೀವವನ್ನು ಯಾವ ರೀತಿ ತಿನ್ನುತ್ತದೆ ಎನ್ನುವುದರ ಬಗ್ಗೆ ಹೇಳುತ್ತಾರೆ. ಸಕ್ಕರೆಗೆ ಕೆಮಿಕಲ್ ಸೇರಿಸುವುದರಿಂದ ಆ ಬಣ್ಣ ಬರುತ್ತದೆ. ಸಕ್ಕರೆಗೆ ಬದಲಾಗಿ ಬೆಲ್ಲವನ್ನು ತಿನ್ನುವುದಾದರೆ, ಅದರಲ್ಲೂ ಸಾವಯವ ಬೆಲ್ಲವನ್ನು ಕೇಳಿದರೆ, ನಾವು ಉತ್ಪಾದನೆ ಮಾಡಿ ಕೊಡುತ್ತೇವೆ. ಆ ಮೂಲಕ ಪಡಿತರದಲ್ಲಿ ಸಕ್ಕರೆ ಬದಲಿಗೆ ಬೆಲ್ಲವನ್ನು ಹಂಚಿಕೆ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಉಮೇಶ್ ವಿ. ಕತ್ತಿ:–** ಸನ್ಮಾನ್ಯ ಸಭಾಪತಿಯವರೇ, ಬೆಲ್ಲದ ಬೆಲೆ ಸಕ್ಕರೆಗಿಂತ ಹೆಚ್ಚಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಪಡಿತರದಲ್ಲಿ ಬೆಲ್ಲ ಕೊಡುವುದಕ್ಕೆ ಹೆಚ್ಚು ಖರ್ಚಾಗುತ್ತದೆ ಎನ್ನುವುದಕ್ಕಿಂತ ಜನರ ಆರೋಗ್ಯ, ಬದುಕು ಮತ್ತು ಜೀವನ ಮುಖ್ಯವಾಗಿದೆ. ಬೇಡಿಕೆ ಹೆಚ್ಚಾದಾಗ ಬೆಲೆ ತಾನಾಗಿಯೇ ಹತೋಟಿಗೆ ಬರುತ್ತದೆ. ಬೆಲ್ಲವನ್ನು ಪಡಿತರದಲ್ಲಿ ಹಂಚಿಕೆ ಮಾಡುವ ಬಗ್ಗೆ ಸರ್ಕಾರ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಒಂದು ಆದೇಶವನ್ನು ಹೊರಡಿಸಬೇಕಾಗಿದೆ. ಆಹಾರ ಸಚಿವರಾಗಿರುವ ಮಾನ್ಯ ಉಮೇಶ್‌ಕತ್ತಿಯವರು ಸಹ ಈ ದಿನ ಸದನದಲ್ಲಿ ಉಪಸ್ಥಿತರಿದ್ದಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಮಾನ್ಯ ಉಮೇಶ್ ಕತ್ತಿಯವರ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿಸಬೇಕೆಂದು ಇದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಬೆಲ್ಲವನ್ನು ಪಡಿತರದಲ್ಲಿ ಕೊಟ್ಟರೆ, ಸಕ್ಕರೆ ಕಾರ್ಖಾನೆ ಮುಚ್ಚುವುದಿಲ್ಲ. ಸಕ್ಕರೆಗೆ ವಿದೇಶದಲ್ಲಿ ಮತ್ತು ಈ ದೇಶದಲ್ಲಿಯೂ ಬೇಡಿಕೆ ಇದೆ. ಈ ರಾಜ್ಯದ ರೈತರ ಜೀವನ ಉಳಿಯಬೇಕು. ಪಡಿತರ ತೆಗೆದುಕೊಳ್ಳುವ ಬಡವನ ಆರೋಗ್ಯವು ಉತ್ತಮವಾಗಿರಬೇಕು. ಆದ್ದರಿಂದ 'ಬೆಲ್ಲ ಕೊಡಿ' ಎಂದು ಕೇಳಿಕೊಳ್ಳುತ್ತಿದ್ದೇನೆ. ಬೆಲ್ಲವನ್ನು ಪಡಿತರ ವಿತರಣೆಯಡಿಯಲ್ಲಿ ಸಕ್ಕರೆಯ ಬದಲಾಗಿ ಬೆಲ್ಲವನ್ನು ಕೊಟ್ಟರೆ, ಇಡೀ ರಾಜ್ಯದ ರೈತರು ಇವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಜನರು ಖುಷಿ ಪಡುತ್ತಾರೆ. ಇದು ಬಹಳ ಸುಲಭವಾಗಿರುವ ಕೆಲಸವಾಗಿದೆ. ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆಗೆ ಬದಲಾಗಿ ಬೆಲ್ಲವನ್ನು ವಿತರಣೆ ಮಾಡಿದರೆ ಗ್ರಾಹಕ ಖುಷಿಪಡುತ್ತಾನೆ, ಕಬ್ಬು ಬೆಳೆಯುವ ರೈತನಿಗೆ ಮಾರುಕಟ್ಟೆ ದೊರೆತಂತಾಗುತ್ತದೆ. ಇಲ್ಲಿ ಸರ್ಕಾರ ಸಾವಯುವ ಬೆಲ್ಲಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆಯೇ ಹೊರತು ರಾಸಾಯನಿಕ ಬೆಲ್ಲಕ್ಕಲ್ಲ. ಆಗ ಸಹಜವಾಗಿಯೇ ರೈತರು ಸಾವಯುವ ಬೆಲ್ಲವನ್ನು

ಕೊಡುತ್ತಾರೆ. ಆಲೆಮನೆಗಳೆಲ್ಲ ಪುನಃ ಅಸ್ತಿತ್ವಕ್ಕೆ ಬರುತ್ತವೆ. ನಮ್ಮಲ್ಲಿ ವಿ.ಸಿ. ಫಾರಂ ಎಂದು ಇದೆ. ಅದಕ್ಕೆ ಸರ್ಕಾರ 4–5 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದರೆ, ಅವರು ಆಲೆಮನೆಗಳಲ್ಲಿ ಯಾವ ರೀತಿಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹೇಗೆ ಸಾವಯವ ಬೆಲ್ಲವನ್ನು ಉತ್ಪತ್ತಿ ಮಾಡಬಹುದು ಎನ್ನುವುದರ ಬಗ್ಗೆ ಸಂಶೋಧನೆ ಮಾಡಿ, ಹೊಸ ಆವಿಷ್ಕಾರವನ್ನು ಮಾಡಿ ಎಂದು ಹೇಳುವುದರ ಮೂಲಕ ಆ ದಿಸೆಯಲ್ಲಿ ಒಂದು ಮೈಲಿಗಲ್ಲನ್ನು ಸ್ಥಾಪನೆ ಮಾಡಿದರೆ, ರಾಜ್ಯದ ಕಬ್ಬು ಬೆಳೆಯುವ ರೈತರಿಗೆ ಹೊಸ ಆಶಾಕಿರಣ ದೊರೆದಂತಾಗುತ್ತದೆ. ಸ್ವದೇಶಿ ಎನ್ನುವ ಅವರ ಧೋರಣೆಗೆ ಮತ್ತು ಅಭಿಯಾನಕ್ಕೆ ಚಾಲನೆ ದೊರೆಯುತ್ತದೆ ಮತ್ತು ಬಲ ಬರುತ್ತದೆ ಆದ್ದರಿಂದ ದಯಮಾಡಿ ಮುಂದಿನ ಆಯವ್ಯಯದಲ್ಲಿ ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆಗೆ ಬದಲಾಗಿ ಬೆಲ್ಲ ಕೊಡುವಂತಹ ನಿರ್ಣಯ ಮಾಡಿದರೆ, ಇಡೀ ರಾಜ್ಯದ ರೈತರ ಪರವಾಗಿ ನಾನು ಅವರಿಗೆ ನಮಸ್ಕರಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಏರ್ ಶೋನಲ್ಲಿ ನಡೆದಂತಹ ಘಟನೆ ಮತ್ತು ಶಿವಮೊಗ್ಗದ ಕಾರ್ಯಕ್ರಮದಲ್ಲಿ ಆದಂತಹ ಘಟನೆ ನನ್ನ ಮನಸ್ಸಿಗೆ ಬಹಳ ನೋವನ್ನುಂಟು ಮಾಡಿದೆ. ನಮ್ಮಲ್ಲಿ ತ್ರಿಭಾಷಾ ಸೂತ್ರವನ್ನು ಅನುಸರಿಸುತ್ತಿದ್ದೇವೆ. ಕನ್ನಡ–ಇಂಗ್ಲೀಷ್–ಹಿಂದಿ ಭಾಷೆಗಳನ್ನು ಕಲಿಯುತ್ತಿದ್ದೇವೆ. ಕರ್ನಾಟಕಕ್ಕೆ ಬಂದು ಕನ್ನಡವನ್ನು ಏತಕ್ಕೋಸ್ಕರ ಒತ್ತರಿಸುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಯುಗದ ಕವಿ ಕುವೆಂಪು ರವರು ಆ ಕಾಲದಲ್ಲಿಯೇ 'ಹಿಂದಿ ಭಾಷೆಯನ್ನು ನಮ್ಮ ಮೇಲೆ ಬಲವಂತವಾಗಿ ಹೇರುತ್ತಿದ್ದೀರಿ' ಎನ್ನುವ ಮಾತನ್ನು ಹೇಳಿದ್ದರು. ಹೇರಲಿ, ಚಿಂತೆ ಇಲ್ಲ. ಆದರೆ, ಕನ್ನಡವನ್ನು ಸಂಪೂರ್ಣವಾಗಿ ಮರೆಯಲಾಗುತ್ತಿದೆ ಮತ್ತು ತುಳಿಯಲಾಗುತ್ತಿದೆ. ಕನ್ನಡಕ್ಕೆ ಆದ್ಯಪಟ್ಟ ಕೊಡುತ್ತೇವೆಂದು ಹೇಳುತ್ತಾರೆ. ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗುತ್ತದೆಂದು ಹೇಳುತ್ತಿದ್ದಾರೆ. ಉನ್ನತ ಶಿಕ್ಷಣದಲ್ಲಿ ಕನ್ನಡವನ್ನು ಜಾರಿಗೆ ತರಲಾಗುತ್ತದೆಂದು ಹೇಳುತ್ತಾರೆ ಆದರೆ, ಎಲ್ಲೋ ಒಂದು ಕಡೆ ಕೇಂದ್ರ ಗೃಹ ಸಚಿವರಾದ ಮಾನ್ಯ ಅಮಿತ್ ಶಾ ಅವರು ಬಂದಾಗ ಕನ್ನಡ ಭಾಷೆಯೇ ಇಲ್ಲ. 'ಏರ್ ಶೋ' ಮಾಡಿದರು ಅಲ್ಲಿಯೂ ಕನ್ನಡ ಇಲ್ಲ. ಇದು ಭಾಷೆಯ ವಿಚಾರವಾಗಿದೆ. ಇನ್ನು ನೆಲದ ವಿಚಾರಕ್ಕೆ ಬಂದಾಗ, ಅದನ್ನು ಮಾನ್ಯ ಉಮೇಶ್ ಕತ್ತಿಯವರೇ ಹೇಳಬೇಕಾಗಿದೆ. ಪ್ರತಿದಿನ ಮಹಾರಾಷ್ಟ್ರ ಗಡಿಯಲ್ಲಿ ಜಗಳವಾಗುತ್ತಿರುತ್ತದೆ. ಮಹಾಜನ್ ವರದಿ ಬಂದು ಬಹಳಷ್ಟು ವರ್ಷಗಳಾಗಿವೆ. ವಿಧಾನಸೌಧಕ್ಕೆ ಪರ್ಯಾಯವಾಗಿ ಮತ್ತೊಂದು ಸೌಧವನ್ನು ಬೆಳಗಾವಿಯಲ್ಲಿ ಕಟ್ಟಿದ್ದೇವೆ. ಇನ್ನೂ ನೆಲದ ಬಗ್ಗೆ ಮತ್ತು ಭಾಷೆಯ ಬಗ್ಗೆ ಜಗಳವಾಗುತ್ತಲೇ ಇದೆ. ಇದರ ಬಗ್ಗೆ ಸರ್ಕಾರ ಯಾಕೆ ರಾಜ್ಯಪಾಲರಿಂದ ಏನನ್ನು ಹೇಳಿಸಲಿಲ್ಲವೆನ್ನುವು ನನ್ನ ಪ್ರಶ್ನೆಯಾಗಿದೆ. ಬೆಳಗಾವಿ ನಮ್ಮದು ಇದರ ಬಗ್ಗೆ ಯಾವುದೇ ಜಗಳಕ್ಕೆ ಅವಕಾಶವೇ ಇಲ್ಲ. 'ಮಾನ್ಯ ಉದ್ಧವ್ ಠಾಕ್ರೆಯವರೇ, ಸ್ವಲ್ಪ ವಿರಮಿಸಿ, ಯಾಕೆ ಜಗಳ ತೆಗೆಯುತ್ತಿದ್ದೀರಿ' ಎಂದು ಘನತೆವೆತ್ತ ರಾಜ್ಯಪಾಲರಿಂದ ಹೇಳಿಸಬೇಕಾಗಿತ್ತು. ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದವರಿಗೆ ಇಂಗ್ಲೀಷ್–ಹಿಂದಿ ಭಾಷೆಯ ಜೊತೆಗೆ ಕನ್ನಡ ಇರಲೇಬೇಕು ಎಂದು ಹೇಳಬೇಕು. ತಮಿಳುನಾಡಿನಲ್ಲಿ ಈ ರೀತಿ ಮಾಡಿದರೆ ಉಳಿಯುವುದಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಆದರೆ, ಕರ್ನಾಟಕದವರ ಉದಾರತೆಯನ್ನು ಮತ್ತು ಹೃದಯ ವೈಶಾಲ್ಯತೆಯನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ತ್ರಿಭಾಷಾ ಸೂತ್ರಕ್ಕೆ ನಾವು ಬದ್ಧರಾಗಿರಲೇಬೇಕಾಗಿದೆ.

ಸನ್ಮಾನ್ಯ ಸಾಪತಿಯವರೇ, ನನ್ನ ಪ್ರೀತಿಯ ಆದ್ಯತೆಯ ವಿಚಾರ ಶಿಕ್ಷಣವಾಗಿದೆ. ಶಿಕ್ಷಣದ ಬಗ್ಗೆ ಈ ಸರ್ಕಾರ ಘನತೆವೆತ್ತ ರಾಜ್ಯಪಾಲರಿಂದ ಏನಾದರೂ ಹೇಳಿಸುತ್ತದೆಂದು ಕಾಯುತ್ತಿದ್ದೆ. 'ಹೊಸ ಶಿಕ್ಷಣ ನೀತಿ'ಯನ್ನು ಮೊದಲು ಜಾರಿಗೆ ತರಬೇಕೆಂದು ಹೊರಟವರು ನಮ್ಮ ಕರ್ನಾಟಕ ರಾಜ್ಯದವರು. ಆ ವಿಚಾರ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವುದರಲ್ಲಿ ನಮ್ಮವರು ಸ್ವಲ್ಪ ಆತುರದಲ್ಲಿದ್ದಾರೆ. ಇದನ್ನು ಜಾರಿಗೆ ತರುವುದು ಅಷ್ಟು ಸುಲಭದ, ಹುಡುಗಾಟದ ಮಾತಲ್ಲ. ಇದು ಇಡೀ ವ್ಯವಸ್ಥೆಯನ್ನೇ ಬದಲಿಸುತ್ತದೆ. ಎರಡನೆಯ ತರಗತಿಯವರೆಗೆ 5 ವರ್ಷದ ಶಿಕ್ಷಣವನ್ನು ಹೊಸ ಶಿಕ್ಷಣ ನೀತಿ ಹೇಳುತ್ತಿದೆ. ಬೇಬಿ ಸಿಟ್ಟಿಂಗ್, ಎಲ್.ಕೆ.ಜಿ., ಯು.ಕೆ.ಜಿ., ಮಾದರಿ ಮೂರು ವರ್ಷ ನಂತರ ಒಂದನೇ ಮತ್ತು ಎರಡನೆ ತರಗತಿಗಳು ಒಟ್ಟು ಮೊದಲನೆಯ ಹಂತದಲ್ಲಿ 5 ವರ್ಷಗಳ ಕಲಿಕೆ. ಇದಕ್ಕೆ ಸರ್ಕಾರ ಯಾವ ರೀತಿಯಲ್ಲಿ ಸಿದ್ಧತೆಯನ್ನು ಮಾಡಿಕೊಂಡಿದೆ? ಇದನ್ನು ಹೇಗೆ ಪ್ರಾರಂಭ ಮಾಡುತ್ತದೆನ್ನುವುದು ನನ್ನ ಪ್ರಶ್ನೆಯಾಗಿದೆ. ಈಗ ಇರುವಂತಹ ವ್ಯವಸ್ಥೆಯಲ್ಲಿ 1 ರಿಂದ 5ನೇ ತರಗತಿಯವರೆವಿಗೆ ಮೊದಲನೆಯ ಹಂತವಾಗಿದೆ. ಬೇಬಿ ಸಿಟ್ಟಿಂಗ್‌ನಿಂದ ಎರಡನೆಯ ತರಗತಿಯವರೆವಿಗೆ ಮೊದಲನೆಯ ಹಂತ, ನಂತರ ಮೂರರಿಂದ ಐದನೇ ತರಗತಿಯವರೆವಿಗೆ ಎರಡನೆಯ ಹಂತವಾಗಿದೆ.

(ಮುಂದುವರಿದಿದೆ)

(226) 08–02–21/4.50/ಡಿಎಸ್–ಬಿಎನ್‌ಎಸ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)**

ಆಮೇಲೆ 3, 4, 5ನೇ ತರಗತಿ ಒಂದು ಹಂತ. 6, 7, 8ನೇ ತರಗತಿ ಮತ್ತೊಂದು ಹಂತ. 9, 10, 11, 12ನೇ ತರಗತಿ ಮತ್ತೊಂದು ಹಂತ. ಆಮೇಲೆ ಪದವಿಗೆ 4 ವರ್ಷ. ಒಂದು ಪದವಿಗೆ ಒಂದು ವರ್ಷ ಹೆಚ್ಚಾದರೆ ಕಾಲೇಜುಗಳಲ್ಲಿ ನಮಗೆ ಕೊಠಡಿಗಳು ಎಷ್ಟು ಹೆಚ್ಚಾಗಬೇಕು? ಕಾಮರ್ಸ್, ಸೈನ್ಸ್, ಆರ್ಟ್ಸ್, ಬಿ.ಕಾಂ., ಬಿ.ಬಿ.ಎಂ., ಇರುತ್ತದೆ. ಇನ್ನು 9, 10, 11, 12ನೇ ತರಗತಿ ನಾವು ಒಂದು ಹಂತದಲ್ಲಿ ಪ್ರೌಢಶಾಲೆಯ ಜೊತೆಗೆ ಇದ್ದಂತಹ ಪಿ.ಯು. ಕಾಲೇಜುಗಳನ್ನು ಬೇರೆ ಮಾಡಿದ್ದೇವೆ. ಪದವಿ ಕಾಲೇಜುಗಳ ಜೊತೆಗೆ ಇದ್ದ ಪಿ.ಯು. ಕಾಲೇಜುಗಳನ್ನು ಬೇರೆ ಮಾಡಿದ್ದೇವೆ. ಇವತ್ತು ಇಡೀ ಕರ್ನಾಟಕಕ್ಕೆ ಪಿ.ಯು. ಶಿಕ್ಷಣ ಮಾದರಿಯಾಗಿದೆ. ಬಹಳ ಒಳ್ಳೆಯ ಗುಣಮಟ್ಟದ ಶಿಕ್ಷಣ ಇದೆ. ಯಾರಾದರು ಈ ದೇಶದಲ್ಲಿ ನೀನು ಪಿ.ಯು.ಸಿ. ಎಲ್ಲಿ ಓದಿದ್ದೀಯಾ ಎಂದು ಕೇಳಿದರೆ ನಾನು ಕರ್ನಾಟಕದಲ್ಲಿ ಓದಿದ್ದೇನೆ ಎಂದು ಹೇಳುತ್ತಾರೆ. ಈಗ ಅಲ್ಲಿಗೆ 9, 10ನೇ ತರಗತಿಯನ್ನು ಪಿ.ಯು.ಸಿ. ಯೊಂದಿಗೆ ಸೇರಿಸುತ್ತಿದ್ದಾರೆ, ಅದು ಸರಿ. ಆದರೆ ಅದರ ಗುಣಮಟ್ಟವನ್ನು ಹೇಗೆ ಕಾಪಾಡುತ್ತಾರೆ? ಅಲ್ಲಿ ಪಾಠ ಮಾಡುವವರು ಯಾರು? ಪ್ರೌಢಶಾಲೆಯವರು ಪಾಠ ಮಾಡುತ್ತಾರೆಯೋ, ಪಿ.ಯು. ಕಾಲೇಜಿನವರು ಪಾಠ ಮಾಡುತ್ತಾರೆಯೋ? ಅಲ್ಲಿ ಪ್ರಿನ್ಸಿಪಾಲರು ಇರುತ್ತಾರ? ವೈಸ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಿನ್ಸಿಪಾಲರು ಇರುತ್ತಾರ? ಕಟ್ಟಡ ಪಿ.ಯು.ಸಿ. ಗೆ ಮಾತ್ರ ಇದೆ. 9, 10, 11, 12ನೇ ತರಗತಿ ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಏನು ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ? 6, 7, 8ನೇ ತರಗತಿಗೆ ಹೊಸ ವ್ಯವಸ್ಥೆ. ಹೇಗೆ ಮಾಡುತ್ತಾರೆ? ಇದರ ಬಗ್ಗೆ ಚಿಂತನೆ ಮಾಡಬೇಕಲ್ಲವೇ? ಅದಕ್ಕೆ ಸಿದ್ಧತೆ, ತಾಲೀಮುಗಳಾಗಬೇಕಲ್ಲವೇ? ಶಿಕ್ಷಣದಲ್ಲಿ ಸಾಲು ಸಾಲಾಗಿ ದೊಡ್ಡ ಸಮಸ್ಯೆಗಳಿವೆ. ಅವತ್ತು ಮಾನ್ಯ ಬಸವರಾಜ ಹೊರಟ್ಟಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡಿದ್ದರು. 1985-86 ರವರೆಗೆ ಇದ್ದ ಅನುದಾನವನ್ನು 1995 ರವರೆಗೆ ವಿಸ್ತರಣೆ ಮಾಡಿದರು. ಆ ನಿರ್ಧಾರಕ್ಕೆ ಇನ್ನೂ 38 ಸಂಸ್ಥೆಗಳು ಉಳಿದುಕೊಂಡಿವೆ. 1995ರ ಆನಂತರದ ಕನ್ನಡ ಮಾಧ್ಯಮ ಶಾಲೆಗಳಿಗೆ ಏನಾದರೂ ನೆರವು ಕೊಡಬೇಕಲ್ಲವೇ? ಕನ್ನಡ ಭಾಷೆ, ಕನ್ನಡ ಶಾಲೆಗಳು ಉಳಿಯಬೇಕಲ್ಲವೇ? ನಾವು ದಿನಾ ಹೇಳುವುದ್ದಾಗಿದೆ, ಮದ್ದೂರಿನ ಶಿವಪುರ ಸತ್ಯಾಗ್ರಹ ಸೌಧದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಿದ್ದಾಗಿದೆ. ಧರಣಿ ಮಾಡಿದ್ದಾಗಿದೆ. 1995 ರ ಆನಂತರದ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವುದಕ್ಕೆ ನಿರ್ಣಯ ಮಾಡಬೇಕಲ್ಲವೇ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳುತ್ತಿರುವುದೆಲ್ಲಾ ಸರಿಯಾಗಿದೆ. ಈಗ ಹೋರಾಟ ಮಾಡುತ್ತಿದ್ದಾರಲ್ಲಾ ಹಿಂದೆ ಯಾವ ಸರ್ಕಾರ ಇತ್ತು, ಅವರು ಏಕೆ ಮಾಡಲಿಲ್ಲ, ಮಾಡಬಹುದಾಗಿತ್ತಲ್ಲವೇ?

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಂಕನೂರರವರೇ, ನಮ್ಮ ಸರ್ಕಾರದಲ್ಲಿ ಈ ಪರಿಸ್ಥಿತಿ ಇತ್ತೇ ಎಂಬುದನ್ನು ಹೇಳಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಂಕನೂರ ರವರ ಮಾತನ್ನು ನಾನು ಭಾಗಶಃ ಒಪ್ಪುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಹಿಂದೆ ಸರ್ಕಾರವನ್ನು ನಾವು ನೀವು ಸೇರಿ ಮಾಡಿದ್ದೇವೆ. ನಾವು ನೀವು ಕೂಡಿ ಮುಖ್ಯಮಂತ್ರಿಗಳನ್ನು ಭೇಟಿ ಆಗಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಒಬ್ಬ ಮೇಷ್ಟ್ರು ಶಿಕ್ಷಣ ಸಚಿವರಾಗಿದ್ದರಿಂದ ಅದು ಸಾಧ್ಯವಾಯಿತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಿದ್ದರಾಮಯ್ಯನವರು ಇದ್ದಾಗ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಇದ್ದಾಗ ನಾವೆಲ್ಲರೂ ಸೇರಿ ಹೋರಾಟ ಮಾಡಿದ್ದೇವೆ. ಆಗ ಏಕೆ ಆಗಲಿಲ್ಲ? ಈಗ ಖಂಡಿತವಾಗಿಯೂ ನಮ್ಮ ಸರ್ಕಾರ ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಬ್ಬ ಶಿಕ್ಷಕ ನಿವೃತ್ತಿಯಾದರೆ ಅವರಿಗೆ ಒಂದು ಲಕ್ಷ ರೂಪಾಯಿ ಸಂಬಳ ಬರುತ್ತದೆ. ಹೊಸದಾಗಿ ಸೇರುವವರಿಗೆ 35,000 ಸಂಬಳ ಕೊಡಬೇಕು. ಅದಕ್ಕೂ ಆರ್ಥಿಕ ಇಲಾಖೆಗೆ ಹೋಗಬೇಕೆಂದು ಹೇಳುತ್ತಿದ್ದಾರೆ. ಅವರು ವೆಸ್ಟ್ ಬೆಂಗಾಲ್‌ಗೆ ಹೋಗಿ ನೋಡಿಕೊಂಡು ಬರಲಿ. ಏಕೆ formulate ಮಾಡುವುದಿಲ್ಲ? ಕೊನೆ ಪಕ್ಷ ಆರೋಗ್ಯ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದು ಆದ್ಯತೆ ಮೇಲೆ ಆರ್ಥಿಕ ಇಲಾಖೆಗೆ ಹೋಗಬಾರದು. ಯಾರು ನಿವೃತ್ತಿಯಾಗುತ್ತಾರೆಯೋ ಆ ಸ್ಥಳಕ್ಕೆ ಮತ್ತೊಬ್ಬರನ್ನು ತೆಗೆದುಕೊಳ್ಳಬೇಕು. ಅವರಿಗೆ ಹಣವೂ ಉಳಿಯುತ್ತದೆ. ಆರ್ಥಿಕ ಇಲಾಖೆಗೆ ಏಕೆ ಹೋಗಬೇಕು?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮುಂದಿನ ತಿಂಗಳು ಬಜೆಟ್ ಇದೆ. ಮಾನ್ಯ ಸಂಕನೂರರವರು ಇದ್ದಾರೆ. ಶಿಕ್ಷಕರ ಕ್ಷೇತ್ರದಿಂದ, ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂಥವರ ಸಂಖ್ಯೆ ಹೆಚ್ಚಾಗಿದೆ. ನಾನು ಒಂದು ಗುಟ್ಟನ್ನು ಹೇಳುತ್ತೇನೆ. ಒಂದು ಕಾಲದಲ್ಲಿ ಬಿಜೆಪಿಯ ಸಂಖ್ಯೆ ಇದ್ದದ್ದು ಮೇಲ್ಮನೆಯಲ್ಲಿ. ಅದು ಶಿಕ್ಷಕರ ಕ್ಷೇತ್ರದಿಂದ, ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂಥವರ ಸಂಖ್ಯೆ ಹೆಚ್ಚಾಗಿದೆ. ಇಲ್ಲಿ ಎಂ.ಎಲ್.ಎ. ಗಳೇ ಇರಲಿಲ್ಲ. ಅವರಿಗೆ ಒಂದು ಅರ್ಥದಲ್ಲಿ ಜನ್ಮ ಕೊಟ್ಟವರು ಶಿಕ್ಷಕರು ಮತ್ತು ಪದವೀಧರರಾಗಿದ್ದಾರೆ. ಬಹಳ ದೊಡ್ಡ ಜವಾಬ್ದಾರಿ ನಿಮ್ಮೆಲ್ಲರ ಹೆಗಲ ಮೇಲೆ ಇದೆ. ಸರ್ಕಾರ ಏನಾದರೂ ಮಾಡಿ 1995 ರಿಂದ 2005 ರವರೆಗೆ ಹತ್ತು ವರ್ಷಗಳ ಕಾಲ ಅನುದಾನಿತ ಶಾಲೆಗಳು ಎಂದು ಘೋಷಣೆಯನ್ನು ಮಾಡಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾವು ನೀವು ಸೇರಿ ಮಾಡೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬಹಳ ಸಂತೋಷ. ನಮ್ಮನ್ನು ಅಂತಹ ಒಳ್ಳೆಯ ಕೆಲಸಕ್ಕೆ ಭಾಗಿ ಮಾಡುವುದಾದರೆ ಅವರಿಗೆ ನಾನು ಧನ್ಯವಾದ ಹೇಳಿ ಶಿರಬಾಗಿ ನಮಸ್ಕರಿಸುತ್ತೇನೆ. ದಯಮಾಡಿ ಒಂದು ಪಾಸಿಟಿವ್ ನಿರ್ಣಯ ಈ ಬಾರಿಯ ಬಜೆಟ್‌ನಲ್ಲಿ ಮಾಡಬೇಕು. ಆ ನೊಂದಿರುವಂತಹ ಜನರಿಗೆ ಏನಾದರೂ ಒಂದಿಷ್ಟು ಪರಿಹಾರವನ್ನು ಸಿಕ್ಕಲಿ. ಇನ್ನು ಆರ್ಥಿಕ ಮಿತವ್ಯಯ ಆದೇಶದ ಬಗ್ಗೆ ಹೇಳುವುದಾದರೆ, ನಮಗೆ ಅನುಮತಿ ಕೊಟ್ಟಿರುವುದು 2015 ರಲ್ಲಿ ಖಾಲಿ ಇರುವ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ. 2015ಕ್ಕೆ ಸತ್ತವರು, ರಾಜೀನಾಮೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟವರು, ನಿವೃತ್ತಿಯಾದವರು, ಬಜೆಟ್ ಭಾಷಣಕ್ಕೆ sky is the limit, ಆಕಾಶವೇ ಮಿತಿ. ಇದು ಒಂದರಲ್ಲೇ ಯಾವ ವಿಚಾರ ಬೇಕಾದರೂ ಪ್ರಸ್ತಾಪ ಮಾಡಬಹುದು. ಹಾಗಾಗಿ 2015 ರಲ್ಲಿ ಇದ್ದಂತಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟುಬಿಟ್ಟಿದ್ದಾರೆ. ಇದು ಎಲ್ಲಿಗೆ ಹೋಗಿದೆ ಎಂದರೆ, ಮ್ಯಾನೇಜ್‌ಮೆಂಟ್‌ನವರು ನಿಮಗೆ ಅನುದಾನ ಸಿಗುತ್ತಿದೆ ಹೋಗಿ ನಾವು ಸಂಬಳ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ.

**(ಈ ಹಂತದಲ್ಲಿ ಹಂಗಾಮಿ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಆರ್ಥಿಕ ಮಿತವ್ಯಯ ಆದೇಶ ಇರುವುದರಿಂದ ನಾವು ಆದೇಶ ಕೊಡುವುದಕ್ಕಾಗುವುದಿಲ್ಲ ಸ್ವಲ್ಪ ತಡೆಯಿರಿ ಎಂದು ಸರ್ಕಾರ ಹೇಳುತ್ತಿದೆ. ಬಹಳ ಜನರದ್ದು ಈಗಾಗಲೇ ಪ್ರಕಟಣೆ ಮಾಡಿದ್ದಾರೆ, ಆರ್ಡರ್ ಕೊಟ್ಟಿದ್ದಾರೆ. ಆರ್ಥಿಕ ಇಲಾಖೆಯ ಕ್ಲಿಯರೆನ್ಸ್ ಆಗಿದೆ. P.U. Board, CPI office, Collegiate Education Department ನಲ್ಲಿ ನಿಂತಿದೆ, orders issue ಆಗುತ್ತಿಲ್ಲ. ಇನ್ನು ಕೆಲವರದ್ದು ಪ್ರಸ್ತಾವನೆ D.D. (Deputy Director), divisional level ನಲ್ಲಿ ನಿಂತಿದೆ. ಇನ್ನು ಕೆಲವು ನಿರ್ದೇಶಕರು, ಆಯುಕ್ತರ ಹಂತದಲ್ಲಿ ನಿಂತಿದೆ. ನಾವು ಹಿಂದಿನ ವರ್ಷಗಳ ಬಗ್ಗೆ ಮಾತನಾಡುವುದಿಲ್ಲ. 2015ರ ಹಿಂದೆ ಇದ್ದಂತಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅಡ್ಡಿಯಾಗುತ್ತಿದೆ ಎಂದು ಅನುದಾನಿತ ಶಾಲೆಗಳಿಗೆ ಹೇಳುತ್ತಿದ್ದಾರೆ. ಸರ್ಕಾರದವರಿಗೆ ಮಾತ್ರ ಎಲ್ಲಾ ನೇಮಕಾತಿಗಳನ್ನು ಮಾಡವುದಕ್ಕೆ ಅನುಮತಿಗಳನ್ನು ಕೊಡುತ್ತಾರೆ. ವಸತಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ಕೊಟ್ಟಿದ್ದಾರೆ. ಪಿ.ಯು. ಗೆ ಕೊಟ್ಟಿದ್ದಾರೆ. ಮೊನ್ನೆ ಕೆ.ಪಿ.ಎಸ್.ಸಿ. ಗೆ ಕೊಟ್ಟಿದ್ದಾರೆ. ಎಲ್ಲಾ ಹುದ್ದೆಗಳನ್ನು ಸರ್ಕಾರವೇ ತುಂಬುವಂಥದ್ದು. ಅನುದಾನಿತ ಶಾಲೆಯಲ್ಲಿ ಸೇರಿಕೊಂಡವರೇನು ಪಾಪಿಗಳೇ? ದಯಮಾಡಿ ಆರ್ಥಿಕ ಮಿತವ್ಯಯ ಆದೇಶವನ್ನು ಸರ್ಕಾರ ಹೋಗಲಾಡಿಸಬೇಕು.

ಬಹಳ ಮುಖ್ಯವಾಗಿ ನಾನು ಒಂದು ಮನವಿ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಒಬ್ಬ ಹಿರಿಯ ಹೋರಾಟಗಾರರಿದ್ದಾರೆ. ನನ್ನ ಪ್ರೀತಿಯ ವಿಚಾರ ಸಕ್ಕರೆ ಕಾರ್ಖಾನೆಯ ಬಗ್ಗೆ. ಏನಾದರೂ ಮಾಡಿ ಸಕ್ಕರೆ ಕಾರ್ಖಾನೆಯನ್ನು ಉಳಿಸಬೇಕೆಂದು ಮಾನ್ಯ ಜಿ.ಮಾದೇಗೌಡರು ತಮಗೆಲ್ಲರಿಗೂ ಗೊತ್ತಿದೆ, ಅವರು ರಾಜ್ಯದ ಹೋರಾಟಗಾರರು. ಅವರು ಒಂದು ಮಾತನ್ನು ಹೇಳುತ್ತಾರೆ. "ಮೈಷುಗರ್ ಕಾರ್ಖಾನೆಯನ್ನು ಸ್ಥಾಪಿಸಲು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು, ಡಾ॥ ಲೆಸ್ಲಿ ಕೋಲ್‌ಮನ್, Sir M.Visvesvaraya, ಶ್ರೀ ಮಿರ್ಜಾ ಇಸ್ಮಾಯಿಲ್ ರವರ ಅಪಾರವಾದ ಶ್ರಮ ಮತ್ತು ದೂರದರ್ಶಿತ್ವವನ್ನು ಹಾಕಿ ಪ್ರಾರಂಭ ಮಾಡಿದ್ದಾರೆ. ಸರ್ಕಾರ ಮೈಷುಗರ್ ಕಾರ್ಖಾನೆಯನ್ನು ಮಾರಾಟ, ಗುತ್ತಿಗೆ, ವಿಲೀನ, ಸ್ಥಳಾಂತರ ಮತ್ತು ಓ.ಎಮ್. ಮಾಡುವ ಯಾವುದೇ ಪ್ರಯತ್ನ ಮಾಡಬಾರದು. ಸಾವಿರಾರು ಕೋಟಿ ಆಸ್ತಿಯುಳ್ಳ ಮೈಷುಗರ್ ಕಾರ್ಖಾನೆಯನ್ನು ಸರ್ಕಾರ ತನ್ನ ಒಡೆತನದಲ್ಲಿ

ನಡೆಸುವುದರಿಂದ ಜಿಲ್ಲೆಯ ಹಾಗೂ ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಜಿಲ್ಲೆಯವರೇ ಆಗಿರುವುದರಿಂದ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ನಿರ್ಧಾರವನ್ನು ಕೈಗೊಳ್ಳುತ್ತಾರೆ ಎಂಬ ಭರವಸೆ ನನಗಿದೆ. ರೈತರು ಶ್ರಮ ಪಟ್ಟು ಕಬ್ಬು ಬೆಳೆಯುತ್ತಾರೆ. ಕಾರ್ಮಿಕರು ಕಾರ್ಖಾನೆಯಲ್ಲಿ ಸಕ್ಕರೆಯ ಜೊತೆಗೆ ವಿದ್ಯುತ್ ಹಾಗೂ distillery ಉತ್ಪಾದನೆಯಿಂದ ಲಕ್ಷಾಂತರ ಜನರಿಗೆ ಜೀವನಾಧಾರವಾಗಿರುವ ಮೈಷುಗರ್ ಕಾರ್ಖಾನೆಯನ್ನು ಸರ್ಕಾರದ ಸ್ವಾಮ್ಯದಲ್ಲಿ ನಿರ್ವಹಣೆ ಮಾಡುವುದು ಸೂಕ್ತ. ಒಂದು ವೇಳೆ ಖಾಸಗೀಕರಣ ಮಾಡಿದರೆ ಮಂಡ್ಯದ ರೈತರು ದಂಗೆ ಏಳುತ್ತಾರೆ. ಈ ದಂಗೆಗೆ ಅವಕಾಶ ಕೊಡದ ಹಾಗೆ ನಮ್ಮ ಜಿಲ್ಲೆಯ ಏಕೈಕ ಸಕ್ಕರೆ ಕಾರ್ಖಾನೆಯನ್ನು ಏಷ್ಯಾ ಖಂಡದಲ್ಲೇ ಪ್ರಸಿದ್ಧವಾಗಿರುವ ಕಾರ್ಖಾನೆಯನ್ನು ಸರ್ಕಾರದ ಸ್ವಾಮ್ಯದಲ್ಲೇ ಉಳಿಸಿಕೊಳ್ಳಬೇಕೆಂದು ಆಗ್ರಹವನ್ನು ಮಾಡುತ್ತೇನೆ." ನಾನು ಬೆಳಕು ಚೆಲ್ಲಿರುವ ವಿಚಾರಗಳ ಬಗ್ಗೆ ಅದು ನೀರಾವರಿ ಇರಲಿ, ಅದು ಶಿಕ್ಷಣ ಇರಲಿ, ಆರೋಗ್ಯ ಇರಲಿ, ಅವೆಲ್ಲಾ ಆದ್ಯತೆ ಮೇರೆಗೆ ಮುಂದಿನ ಬಜೆಟ್‌ನಲ್ಲಿ ನನಗೆ ಉತ್ತರ ಸಿಗುತ್ತದೆ, ಈ ನಾಡಿನ ಜನರಿಗೆ ಫಲ ಸಿಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

**ಹಂಗಾಮಿ ಸಭಾಪತಿಯವರು:–** ಈಗ ಐದು ಗಂಟೆಯಾಗಿದೆ. ನಾಳೆ ಸಂಪೂರ್ಣವಾಗಿ ಎಲ್ಲರಿಗೂ ಮಾತನಾಡವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಈಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ನಡೆಯುತ್ತಿದೆ. ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಟ್ಟಾದ ಮೇಲೆ ವಿಧೇಯಕಗಳನ್ನು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಎರಡು–ಮೂರು ದಿವಸಗಳಿಂದ ಬೇರೆ ಬೇರೆ ಸಮಸ್ಯೆಗಳಿಂದ ವಿಧೇಯಕವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ನಾಳೆಯೂ ಅಧಿವೇಶನ ಇದೆ. ನಾಳೆ ವಿಧೇಯಕವನ್ನು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿಧೇಯಕಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಎಲ್ಲರೂ ಚೆನ್ನಾಗಿ ಮಾತನಾಡುತ್ತಿದ್ದಾರೆ. ತುರ್ತಾಗಿರುವಂತಹ ವಿಧೇಯಕ ಯಾವುದು ಇಲ್ಲವಲ್ಲಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದಾದರೂ ವಿಧೇಯಕದ ಪ್ರಸ್ತಾಪ ಬಂದಾಗ ಅಜೆಂಡಾವನ್ನು ಬದಿಗೊತ್ತಿ ವಿಧೇಯಕವನ್ನು ತೆಗೆದುಕೊಳ್ಳುವುದು ರೂಢಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ವಿಧೇಯಕವನ್ನು ನಾಳೆ ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಸಲಹೆಯನ್ನು ಕೊಟ್ಟಿದ್ದೀರಿ. ಆದರೆ ನಾವು ವಿಧೇಯಕವನ್ನು ಪಾಸ್ ಮಾಡಿಕೊಳ್ಳಬೇಕಾಗಿದೆ.

**ಹಂಗಾಮಿ ಸಭಾಪತಿಯವರು:–** ಈಗಾಗಲೇ ಮೂರು ವಿಧೇಯಕಗಳನ್ನು ಪಾಸ್ ಮಾಡಿದ್ದೇವೆ. ಈಗ ಇನ್ನೊಂದು ವಿಧೇಯಕ ಬಾಕಿ ಇದೆ. ಆ ವಿಧೇಯಕವನ್ನು ಪಾಸ್ ಮಾಡಿಕೊಳ್ಳಬೇಕಾಗಿದೆ. ರಾಜ್ಯಪಾಲರ ಭಾಷಣವನ್ನು ನಾಳೆ ತೆಗೆದುಕೊಳ್ಳೋಣ. ಈಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಅಧಿವೇಶನ ಬುಧವಾರದ ವರೆಗೆ ನಡೆಯುತ್ತದೆ. ಹಾಗಾಗಿ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದಕ್ಕೆ ಸಾಕಷ್ಟು ಕಾಲಾವಕಾಶ ಇದೆ. ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾವುದೇ ಅಭ್ಯಂತರಗಳಿಲ್ಲ. ಈಗ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳೋಣ.

9. **ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

(ಗೊಂದಲ)

## ಈ) **ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ 2020 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>**ಪ್ರಸ್ತಾವವನ್ನು ಮಂಡಿಸಲಾಯಿತು**</u>

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇವೆ. ಸರ್ಕಾರ ಗೋಹತ್ಯೆ ವಿಧೇಯಕವನ್ನು ಕಳೆದ ಅಧಿವೇಶನದಿಂದಲೂ ತರುತ್ತಿದೆ. ಏಕೋ ಶಕುನ ಚೆನ್ನಾಗಿಲ್ಲವೆಂದು ವಾಪಸ್ ತೆಗೆದುಕೊಂಡು ಇವತ್ತು ಮತ್ತೆ ತೆಗೆದುಕೊಂಡು ಬಂದಿದ್ದಾರೆ. ಈಗಲೇ ವಿಧೇಯಕವನ್ನು ತೆಗೆದುಕೊಂಡು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ. ನಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸದಾ ಸಿದ್ಧರಿದ್ದೇವೆ. ಆದರೆ, ಈಗ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಬಗ್ಗೆ ಬಹಳ ಚೆನ್ನಾಗಿ ಚರ್ಚೆ ಪ್ರಾರಂಭವಾಗಿದೆ. ಬಹಳಷ್ಟು ಸದಸ್ಯರು ಮಾತನಾಡುವುದಕ್ಕೆ ಹೆಸರನ್ನು ಕೊಟ್ಟಿದ್ದಾರೆ.

(ಮುಂದು)

227/8-2-2021/5-00 BKP-BNS **(ಹಂಗಾಮಿ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು)**

ಮಾನ್ಯ ಸಭಾಪತಿಯವರೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಮತ್ತು ಸಂರಕ್ಷಣಾ ವಿಧೇಯಕ, 2020 ಈ ವಿಧೇಯಕದ ಬಗ್ಗೆ ಒಂದು ದಿವಸ ಪೂರ್ಣ ಚರ್ಚೆ ಆಗಬೇಕಾದಂತಹ ಅಗತ್ಯ ಇದೆ. ಏಕೆಂದರೆ, ವ್ಯಾಪಕವಾಗಿ ಎರಡೂ ಕಡೆಯ ಸದಸ್ಯರುಗಳು ಇದರ ಬಗ್ಗೆ ಮಾತನಾಡುವವರು ಇದ್ದಾರೆ. ಇದು ಬಹಳ ಪ್ರಮುಖವಾದಂತಹ ವಿಧೇಯಕವಾಗಿದ್ದು, ಎಲ್ಲರಿಗೂ ಸಾಕಷ್ಟು ಸಮಯಾವಕಾಶವನ್ನು ಕೊಡಬೇಕಾಗುತ್ತದೆ. ಈ ವಿಧೇಯಕದ ಬಗ್ಗೆ ಇಡಿ ರಾತ್ರಿ ಚರ್ಚೆಯಾಗಲಿ, ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಬುಧವಾರದವರೆಗೆ ಸದನ ನಡೆಯುತ್ತಿರುವುದರಿಂದ ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆ ಮಾಡಬೇಕಾಗಿರುವುದರಿಂದ ದಯವಿಟ್ಟು ಇದನ್ನು ನಾಳೆ ಮಧ್ಯಾಹ್ನ ತೆಗೆದುಕೊಳ್ಳಿ. ಅದರ ಬಗ್ಗೆ ಎಷ್ಟು ಸಮಯವಾದರೂ ಪರವಾಗಿಲ್ಲ, ಎಲ್ಲರೂ ಚರ್ಚೆ ಮಾಡೋಣ. ನಾವು ಸಹ ಭಾಗವಹಿಸುತ್ತೇವೆ. ಈಗ ಅದನ್ನು ತರಾತುರಿಯಲ್ಲಿ ತೆಗೆದುಕೊಂಡು, ಇದರ ಬಗ್ಗೆ ಮಾತನಾಡಲಿಕ್ಕೆ ಎಲ್ಲರಿಗೂ ಅವಕಾಶ ಸಿಗದ ರೀತಿಯಲ್ಲಿ ಆಗಿ ಅದರ ಬಗ್ಗೆ ಗೊಂದಲ ಉಂಟಾಗುವುದು ಬೇಡ. ದಯವಿಟ್ಟು ಇದನ್ನು ನಾಳೆ ಮಧ್ಯಾಹ್ನ ತೆಗೆದುಕೊಳ್ಳಿ. ನಾವುಗಳೆಲ್ಲರೂ ಸಿದ್ಧರಿದ್ದೇವೆ. ಇಡಿ ರಾತ್ರಿ ಸದನ ನಡೆಯಲಿ, ನಾವು ಇದರಲ್ಲಿ ಭಾಗವಹಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರ ಭಾವನೆ ನಮ್ಮ ಸರ್ಕಾರಕ್ಕೆ ಅರ್ಥವಾಗಿದೆ. ಅವರಿಗೆ ಮುಕ್ತವಾದ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುವಲ್ಲಿ ದಯವಿಟ್ಟು ಈ ವಿಧೇಯಕವನ್ನು ಕೈಗೆತ್ತಿಕೊಳ್ಳಬೇಕಾಗಿ ವಿನಂತಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೆ, ಇದು ನನಗೆ ಅರ್ಥವಾಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಈ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಕಷ್ಟು ಅವಕಾಶ ಇದೆ. ದಯವಿಟ್ಟು ಕೇಳಿ. ಈ ವಿಚಾರವಾಗಿ ಈಗಾಗಲೇ 3–4 ಬಾರಿ ಚರ್ಚೆ ಮಾಡಿದ್ದೇವೆ.

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020 ಅನ್ನು ಸದನದಲ್ಲಿ ಮಂಡನೆ ಮಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ನಾಳೆ ಎಂದು ಹೇಳಿದ ಮೇಲೆ ಮತ್ತೆ ಇನ್ನೇನಿದು.

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):–** ನಮ್ಮ ಭಾರತ ದೇಶದಲ್ಲಿ . . . **(ಗೊಂದಲ)** ಗೋವುಗಳ ರಕ್ಷಣೆ ಮಾಡುವ ಜವಾಬ್ದಾರಿ ಇದೆ. . . . **(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಬಿಲ್‌ನ್ನು ಕೈಗೆತ್ತಿಕೊಳ್ಳಲಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಚರ್ಚೆ ನಾಳೆನಾ?

**ಹಂಗಾಮಿ ಸಭಾಪತಿಯವರು:–** ಚರ್ಚೆ ಇವತ್ತೆ. ಮಂಡನೆ ಮುಗಿದ ನಂತರ ಚರ್ಚೆ ಪ್ರಾರಂಭ ಮಾಡಬಹುದು.

**ಶ್ರೀ ಮರಿತಿಬ್ಬೇಗೌಡ:–** ನಾಳೆ ಮಾಡಿ ಸರ್.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾಜಿ ಸಚಿವರು ಇದ್ದೀರಿ. ಹಿರಿಯ ಸದಸ್ಯರಿದ್ದೀರಿ, ಮಾನ್ಯ ಮಂತ್ರಿಗಳು ಬಿಲ್ ಮಂಡನೆ ಮಾಡುತ್ತಾರೆ. ಅದರ ಬಗ್ಗೆ ...

**ಶ್ರೀ ಸಿ.ಎಂ.ಇಬ್ರಾಹಿಂ:–** ನನಗೆ ಇದು ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈಗ ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಮತ್ತು ಸಂರಕ್ಷಣಾ ವಿಧೇಯಕ, 2020 ನ್ನು ತೆಗೆದುಕೊಳ್ಳಿ, ರಾಜ್ಯಪಾಲರ ಭಾಷಣದ ಮೇಲೆ ನಾಳೆ ಚರ್ಚೆ ಮಾಡಬಹುದು.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ರಾಜ್ಯಪಾಲರ ಭಾಷಣದ ಮೇಲೆ ನಾಳೆ ಚರ್ಚೆ ಮಾಡಬಹುದು. ಈಗಾಗಲೇ ಪೀಠದಿಂದ ಆದೇಶವಾಗಿದೆ. (ಗೊಂದಲ)

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ದಯವಿಟ್ಟು ಕೇಳಿ. ಬೆಳಿಗ್ಗೆಯಿಂದ ಈಗಾಗಲೇ ಮೂರು ಬಿಲ್‌ಗಳನ್ನು ಪಾಸ್ ಮಾಡಿದ್ದೇವೆ. ನಾಲ್ಕನೇ ಬಿಲ್‌ನ್ನು ಇಟ್ಟಿದ್ದೇವೆ. ಚರ್ಚೆ ಮಾಡಿ. ಚರ್ಚೆ ಮಾಡುವುದಕ್ಕೆ ಸಾಕಷ್ಟು ಸಮಯಾವಕಾಶವಿದೆ. ಸುಮ್ಮನೇ ಏಕೆ ಗಲಾಟೆ ಮಾಡುತ್ತೀರಿ. ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):–** ಗೋವುಗಳ ರಕ್ಷಣೆ ಆಗಬೇಕು. ಅದಕ್ಕಾಗಿ ಈ ಬಿಲ್‌ನ್ನು ಮಂಡಿಸುತ್ತಿದ್ದೇನೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರೇ, ಬಿಲ್‌ನ್ನು ಪಾಸ್ ಮಾಡಿಲ್ಲ. ಚರ್ಚೆಗೆ ಇಟ್ಟಿದ್ದೇವೆ. ಬಿಲ್‌ನ್ನು ಮಂಡಿಸಲು ಅವಕಾಶ ಕೊಟ್ಟಿದ್ದೇನೆ ಅಷ್ಟೆ. ಬಿಲ್‌ನ್ನು ಪಾಸ್ ಮಾಡುವುದು, ಬಿಡುವುದು ನಿಮ್ಮ ಕೈಯಲ್ಲಿದೆ. ಚರ್ಚೆಗೆ ಅವಕಾಶ ಕೊಡಬೇಡಿ ಎಂದರೆ ಹೇಗೆ?

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)**

**(ಗೊಂದಲ)**

**ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಅರ್ಧಕ್ಕೆ ಬಿಟ್ಟು ಬಿಲ್‌ನ್ನು ಕೈಗೆತ್ತಿಕೊಳ್ಳಲಾಗಿದೆ. ದಯಮಾಡಿ ಅರ್ಥಮಾಡಿಕೊಳ್ಳಬೇಕು.

**(ಗೊಂದಲ)**

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):–** 1862 ರಲ್ಲಿ ಪಂಜಾಬ್ ರಾಜ್ಯದಲ್ಲಿ ಈ ಬಗ್ಗೆ ದೊಡ್ಡ ದೊಡ್ಡ ಕ್ರಾಂತಿಯಾಯಿತು. ಪಂಜಾಬ್‌ನಲ್ಲಿ ಈ ಬಗ್ಗೆ ವಿಧೇಯಕವನ್ನು ತಿದ್ದುಪಡಿ ಮಾಡಲಾಗಿದೆ. ಅಲ್ಲಿ ಧರಣಿ ಮಾಡಿದ್ದರು. 19ನೇ ಶತಮಾನದಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರು ಗೋಹತ್ಯೆ ನಿಷೇಧ ಮಾಡಬೇಕೆಂದು strike ಮಾಡಿದರು. 20ನೇ ಶತಮಾನದಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧಿಯವರಿಗೆ ಗೋಹತ್ಯೆ ನಿಷೇಧದ ವಿಚಾರದಲ್ಲಿ ಕನಸು ಇತ್ತು. ಅದಕ್ಕಾಗಿ ನಾವು ಹೊಸತೇನು ಮಾಡುತ್ತಿಲ್ಲ. 1862 ರಿಂದ ಗೋಹತ್ಯೆ ನಿಷೇಧಕ್ಕಾಗಿ ಹೋರಾಟ ಮಾಡಲಾಗುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿಯೂ ಕೂಡ ಗೋಹತ್ಯೆ ವಿರೋಧಿಸಬೇಕೆಂದು ಸಪೋರ್ಟ್ ಮಾಡಿದ್ದಾರೆ. Freedom of animals . . . ಪ್ರಾಣಿಗಳ ಕಲ್ಯಾಣಕ್ಕಾಗಿ . . . ಈ ವಿಚಾರವಾಗಿ ಹಲವಾರು ಅಂಶಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದ್ದಾರೆ. ಉತ್ತರ ಪ್ರದೇಶದಲ್ಲಿಯೂ ಸಹ ಮಾಡಿದ್ದಾರೆ. ಆದ್ದರಿಂದ, ಇದನ್ನು ಪಾಸ್ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ದಯವಿಟ್ಟು ಬಿಲ್ ಬಗ್ಗೆ ಚರ್ಚೆ ಮಾಡಲಿ. ಅವರು ಬಾವಿಗೆ ಏತಕ್ಕೆ ಬಂದರು?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೇ, ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಸೋಮವಾರ ಈ ವಿಧೇಯಕವನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮುಖ್ಯ ಸಚೇತಕರು ಕೂಡ ಹಾಜರಿದ್ದರು. ನೀವು ಕೂಡ ಅದಕ್ಕೆ ಒಪ್ಪಿದ್ದೀರಿ. ಚರ್ಚೆಗೆ ಅವಕಾಶ ಕೊಡುತ್ತೇನೆ. ದಯವಿಟ್ಟು ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಕ್ಕೆ ತೆರಳಬೇಕೆಂದು ವಿನಂತಿಸುತ್ತೇನೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೇ, ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ಹೇಳಲಿಲ್ಲವಲ್ಲ. ದಯವಿಟ್ಟು ಚರ್ಚೆ ಮಾಡಿ. ವಿಧೇಯಕವನ್ನು ಇಂದು ತೆಗೆದುಕೊಳ್ಳಲು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ನಿರ್ಧಾರವಾಗಿದೆ. ಎಲ್ಲರೂ ಸಹಕರಿಸಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020 ಕಳೆದ ಸಾಲಿನಲ್ಲಿ ವಿಧಾನಸಭೆಯಿಂದ ಅನುಮೋದನೆಗೊಂಡು, ಈ ಸದನದಲ್ಲಿ ಅನುಮೋದನೆಯಾಗದೇ ಬಾಕಿ ಉಳಿದಿತ್ತು. ಈ ವಿಧೇಯಕವನ್ನು ಕೈಗೆತ್ತಿಕೊಳ್ಳಬೇಕೆಂದು ಎರಡೂ ಸದನಗಳಲ್ಲಿ ಸಹ ಒತ್ತಾಯ ಇತ್ತು. ಮೊನ್ನೆ ನಡೆದ ಬಿ.ಎ.ಸಿ. ಸಭೆಯಲ್ಲಿ ಪಾಲ್ಗೊಂಡಂತಹ ಎಲ್ಲರೂ ಸಹ ಈ ವಿಧೇಯಕವನ್ನು ಕೈಗೆತ್ತಿಕೊಳ್ಳಬೇಕೆಂದು ಚರ್ಚೆ ಆಗಬೇಕೆಂದು ಎಲ್ಲಾ ಬಿ.ಎ.ಸಿ. ಸದಸ್ಯರು ಹೇಳಿದ್ದಾರೆ. ಅದರಂತೆ, ಈ ವಿಧೇಯಕವನ್ನು ಕೈಗೆತ್ತಿಕೊಳ್ಳಲಾಗಿದೆ. ಸರ್ಕಾರದ ಕಾರ್ಯವೇನಿದೆ, ಅದು ಸಹ ಸರಿಯಾಗಿ ನಡೆಯಬೇಕೆಂಬುದು ನಮ್ಮ ಉದ್ದೇಶ. ಬೆಳಗ್ಗೆ ಸಹ ಪುರಸಭೆ ಮತ್ತು ನಗರ ಸಭೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಿಸಿದ ವಿಧೇಯಕಗಳನ್ನು ಪಾಸ್ ಮಾಡಿಕೊಟ್ಟಿದ್ದೀರಿ. ಇದು ಬಹಳ ಮಹತ್ವದ ವಿಧೇಯಕವಾಗಿದ್ದು, ಎಲ್ಲರಿಗೂ ಈ ವಿಧೇಯಕದ ಮೇಲೆ ಚರ್ಚೆ ಮಾಡಬೇಕು ಹಾಗೂ ಈ ವಿಧೇಯಕದ ಮೇಲೆ ಬೆಳಕು ಚೆಲ್ಲಬೇಕೆಂಬುದು ಎಲ್ಲರ ಮನಸ್ಸಿನ ಭಾವನೆಯಾಗಿದೆ ಎಂಬುದು ನನಗೆ ಅರ್ಥವಾಗುತ್ತಿದೆ. ಜೊತೆಗೆ ಈ ವಿಧೇಯಕಕ್ಕೆ ಅನುಮೋದನೆ ದೊರಕಬೇಕು. ಈ ಹಿನ್ನೆಲೆಯಿಂದ ಅಜೆಂಡಾದಲ್ಲಿದ್ದ ವಿಧೇಯಕವನ್ನೇ ನಾವು ಸಹ ಅನುಮೋದನೆಗಾಗಿ ತಂದಿದ್ದೇವೆ ವಿನಃ ಬೇರೆ ಏನು ಇದರಲ್ಲಿ ಇಲ್ಲ. ಜೊತೆಗೆ ಈ ವಿಧೇಯಕದ ಮೇಲೆ ಚರ್ಚೆ ನಡೆಸಲು ನಾವು ಸಹ ಸಿದ್ಧರಿದ್ದೇವೆ ಹಾಗೂ ವಿರೋಧ ಪಕ್ಷದವರೂ ಸಹ ಸಿದ್ಧರಾಗಿದ್ದಾರೆ. ಚರ್ಚೆ ನಡೆದ ನಂತರ ವಿಧೇಯಕದ ಅನುಮೋದನೆಗೆ ನಮ್ಮ ಹಕ್ಕನ್ನು ನಾವು ಮಂಡಿಸುತ್ತೇವೆ. ನಂತರ ಕಾನೂನಿನ ಪ್ರಕಾರ ಏನು ಪ್ರಕ್ರಿಯೆ ಇದೆ ಅದು ಮುಂದುವರೆಯಲಿ. ಹಾಗಾಗಿ ದಯವಿಟ್ಟು ಚರ್ಚೆಯನ್ನು ಪ್ರಾರಂಭಿಸೋಣ.

**ಹಂಗಾಮಿ ಸಭಾಪತಿಯವರು:-** ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020, ...

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ವಿರೋಧ ಪಕ್ಷದ ಸದಸ್ಯರು ಸಹ ಮಾತನಾಡಲು ಅವಕಾಶ ಕಲ್ಪಿಸಿಕೊಡಿ. ತಾವು ಆಲಿಸಿ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಸಹ ಉಪ ಸಭಾಪತಿಯಾಗಿ ಕರ್ತವ್ಯ ನಿರ್ವಹಿಸಿರುವಂಥವರು, ಚರ್ಚೆಗೂ ಮೊದಲು ನಾನು ಈ ವಿಧೇಯಕವನ್ನು ಓದಬೇಕಲ್ಲವೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಈಗ ಆ ಕಡೆಯಿಂದ ಗೃಹ ಸಚಿವರ ಮಾತನ್ನು ನಾವು ಕೇಳಿದ್ದೇವೆ. ಅದರಂತೆ ವಿರೋಧ ಪಕ್ಷದ ಕಡೆಯಿಂದ ಸಹ ಒಂದೆರಡು ಮಾತನ್ನು ಸದನದ ಮೂಲಕ ದಯವಿಟ್ಟು ಮಾತನಾಡಲು ಅವಕಾಶ ಕಲ್ಪಿಸಿ.

**ಹಂಗಾಮಿ ಸಭಾಪತಿಯವರು:-** ಆಗಲಿ. ಚರ್ಚೆಗೆ ಅವಕಾಶ ಕಲ್ಪಿಸಿಕೊಡುತ್ತೇನೆ ಅಲ್ಲವೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶ ಕಲ್ಪಿಸಲು ಕೇಳುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಮರಿತಿಬ್ಬೇಗೌಡರೆ, ಮಾನ್ಯ ಸಭಾಪತಿಯವರು ತಮಗೂ ಮಾತನಾಡಲು ಅವಕಾಶ ಕಲ್ಪಿಸುತ್ತಾರೆ ಸ್ವಲ್ಪ ಇರಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಹಂಗಾಮಿ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ಸಚಿವರು ಬಿಲ್‌ನ್ನು ಮಂಡಿಸಿದ ನಂತರ ತಾವು ಚರ್ಚೆ ಮಾಡಿ.

**ಶ್ರೀ ಮರಿತಿಬ್ಬೇಗೌಡ:-** ನಾವು ಚರ್ಚೆ ಮಾಡಲು ಸಿದ್ದರಿದ್ದೇವೆ. ಚರ್ಚೆಗೂ ಮೊದಲು ದಯವಿಟ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಡಿ. ವಿರೋಧ ಪಕ್ಷದ ಕಡೆಯಿಂದಲೂ ಒಂದೆರಡು ವಿಚಾರಗಳ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡಿ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡಲು ಆಗುವುದಿಲ್ಲ. ತಾವು ವಿಧಾನಸಭೆಯಿಂದ ಅಂಗೀಕೃತವಾದ ವಿಧೇಯಕವನ್ನು ಓದಬೇಕು. ನಂತರ ಚರ್ಚೆಗೆ ಅವಕಾಶವನ್ನು ಕೊಡಬೇಕು.

**(ಮುಂದು..**

**(228) 08.02.2021 05.10 ಎಸ್‌ವಿ-ಜಿಆರ್** **(ಹಂಗಾಮಿ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಸಚಿವರು ವಿಧೇಯಕದ ಕುರಿತು ವಿವರಣೆಯನ್ನು ನೀಡುವ ಸಂದರ್ಭದಲ್ಲಿ ನಾವು ಸದನದ ಬಾವಿಯಲ್ಲಿದ್ದ ಕಾರಣ ಮಾನ್ಯ ಸಚಿವರು ಮತ್ತೊಮ್ಮೆ ವಿವರಣೆಯನ್ನು ನೀಡಬೇಕು.

**ಹಂಗಾಮಿ ಸಭಾಪತಿಯವರು:-** ಮಾನ್ಯ ಕಾನೂನು ಸಚಿವರೇ, ಮುಂದುವರೆಸಿ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಜಾನುವಾರು ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020 ಈ ಕಾನೂನನ್ನು ತಂದಿರುವ ಉದ್ದೇಶವಿಷ್ಟೇ. ನಮ್ಮ ಜಾನುವಾರುಗಳ ರಕ್ಷಣೆಯಾಗಬೇಕು. ಅವು ನಮ್ಮ ಸಂಪತ್ತು. ಅವುಗಳ ಉಪಯೋಗಗಳು ಹಲವು. ನಮ್ಮ ಮನುಷ್ಯರ ಬದುಕಿನ ಜೊತೆಗೆ ಜಾನುವಾರುಗಳ ಬದುಕು ಹಾಸುಹೊಕ್ಕಾಗಿದೆ. ಕೆಲವು ಪದ್ಧತಿಗಳಿಂದ ಜಾನುವಾರುಗಳನ್ನು ಹತ್ಯೆ ಮಾಡುವಂಥದ್ದು ಮತ್ತು ಅವುಗಳನ್ನು ದುರುಪಯೋಗ ಮಾಡುವಂಥದ್ದು, ಜಾನುವಾರುಗಳ ಸಾಗಾಣಿಕೆ ಮಾಡುವಂಥದ್ದು ಹೀಗೆ ಹಲವಾರು ಪ್ರಸಂಗಗಳಿವೆ. ನಾವು ತಂದಿರುವ ಈ ಕಾನೂನು ಇದೇ ಮೊದಲ ಬಾರಿಯದ್ದಲ್ಲ. 1964ರಿಂದಲೂ ಈ ಕಾನೂನು ಇದೆ. ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುವ ಅವಶ್ಯಕತೆ ನಮಗೆ ಕಂಡು ಬಂದಿದೆ. ಏಕೆಂದರೆ ಕಾಲ ಬದಲಾಗಿದ್ದು, ಜಾನುವಾರುಗಳ ಸಂಖ್ಯೆ ಬದಲಾವಣೆಯಾಗಿದೆ. ಜನಸಂಖ್ಯೆ ಬದಲಾಗಿದೆ. ಬೇಡಿಕೆಗಳು ಬದಲಾಗಿದೆ. Commercialisation ಆಗಿದೆ. 1964ರ ಪರಿಸ್ಥಿತಿಗನುಗುಣವಾಗಿ ಆ ಕಾನೂನನ್ನು ಮಾಡಲಾಗಿತ್ತು. ಇವತ್ತಿನ ಸಂದರ್ಭದಲ್ಲಿ ಆ ಕಾನೂನಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನಷ್ಟು ಬಲವನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಹಲವಾರು ಸೆಕ್ಷನ್‌ಗಳನ್ನು ಇದರಲ್ಲಿ ಸೇರಿಸಿ ಈ ಒಂದು ಕಾನೂನನ್ನು ತಂದಿದ್ದೇವೆ.

ಐತಿಹಾಸಿಕವಾಗಿ ನೋಡಿದರೆ ಗೋಹತ್ಯೆ ಮತ್ತು ಇತರ ಪ್ರಾಣಿಹತ್ಯೆ ನಿಷೇಧ ಧರ್ಮದಲ್ಲಿಯೇ ಇದೆ. ಬೇರೆ ಬೇರೆ ಆಡಳಿತ ವ್ಯವಸ್ಥೆಯಲ್ಲಿಯೂ ಕೂಡ ಈ ಕಾನೂನು ಜಾರಿಯಲ್ಲಿತ್ತು. ಹಿಂದೆ ನಮ್ಮನ್ನಾಳಿದಂತಹ ಬ್ರಿಟಿಷರು, ಮೊಘಲರ ಕಾಲದಲ್ಲಿಯೂ ಗೋಹತ್ಯೆ ನಿಷೇಧವನ್ನು ಮಾಡಲಾಗಿತ್ತು. ಹೀಗಾಗಿ ಸ್ವಾತಂತ್ರ್ಯ ಬಂದ ನಂತರ 1964ರಲ್ಲಿ ಮಹಾತ್ಮಾ ಗಾಂಧೀಜಿಯವರ ಆಶಯಗಳಂತೆ ಅವರ ಆದರ್ಶಗಳ ಪರಿಪಾಲನೆಯಲ್ಲಿ ಗೋವು ಇಡೀ ದೇಶದಲ್ಲಿಯೇ ಅತಿ ಹೆಚ್ಚು ಪೂಜಿತವಾಗಿದ್ದು, ಅದರ ಜೊತೆಗೆ ಇತರ ಜಾನುವಾರುಗಳು ಸಹ ಅಷ್ಟೇ ಪೂಜಿತವಾಗಿದೆ. ಎಮ್ಮೆ, ಕೋಣ, ಆಕಳು, ಹೋರಿ ಇತ್ಯಾದಿಗಳು ದೇವಾನುದೇವತೆಗಳಿಗೆ ವಾಹನಗಳಾಗಿರುವುದನ್ನು ನಾವು ಪುರಾಣಗಳಲ್ಲಿ ಕಾಣಬಹುದು. ಪುರಾಣಗಳ ಬಗ್ಗೆ ಹೆಚ್ಚಿಗೆ ನಾನು ಹೋಗುವುದಿಲ್ಲ. ಮನುಷ್ಯನ ಜೀವನಕ್ಕೆ ಸಹ ಉಪಯೋಗವಾಗುವಂತಹ ಜಾನುವಾರುಗಳು ದಿನನಿತ್ಯ ನಮ್ಮ ರೈತಾಪಿ ವರ್ಗಕ್ಕೆ, ನಮ್ಮ ವಿವಿಧ ಚಟುವಟಿಕೆಗಳಲ್ಲಿ ಅವೆಲ್ಲವೂ ಕೂಡ ಭಾಗಿಯಾಗಿವೆ. ಯಂತ್ರೋಪಕರಣ ಬರುವುದಕ್ಕಿಂತಲೂ ಮುಂಚೆ ಇವೇ ನಮ್ಮ ಆಧಾರವಾಗಿದ್ದವು. ಈಗ ಯಂತ್ರೋಪಕರಣಗಳು ಬಂದ ಮೇಲೆ ಅದರ ಬಳಕೆಯನ್ನು ನಾವು ಮಾಡುತ್ತಿದ್ದೇವೆ. ಮೂಲವಾಗಿ ಜಾನುವಾರುಗಳೇ ಆಧಾರವಾಗಿದ್ದವು. ಈಗ ನಮಗೆ ಬದುಕಿನ ಒಂದು ಸಂಗಾತಿಯಾಗಿದೆ.

ಇವುಗಳ ರಕ್ಷಣೆ ಮಾಡುವುದು ಬಹಳ ಅವಶ್ಯಕತೆಯಿರುವ ವಿಚಾರ. ಪಶುಸಂಪತ್ತು ನಶಿಸಿ ಹೋಗುತ್ತಿದೆ. ಅದರ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಕಾನೂನನ್ನು ತರಲಾಗಿದೆ. ಎರಡು ತರಹದ ಪಶುಗಳನ್ನು ನಾವು ನೋಡುತ್ತೇವೆ. Small animals – ಅವು ಏಳೆಂಟು ವರ್ಷಗಳ ಕಾಲ ಬದುಕುತ್ತವೆ. ಉದಾಹರಣೆಗೆ ಕುರಿ ಇತ್ಯಾದಿ. ಅವುಗಳ ವಯಸ್ಸು ಪೂರ್ತಿಯಾಗುವುದರಿಂದ ನಾವು ಅವುಗಳನ್ನು ಬಿಟ್ಟು ಅದರ ಮೇಲೆ ಇರುವಂತಹ ಹತ್ತರಿಂದ ಹನ್ನೆರಡು–ಹದಿನೈದು–ಹದಿನೇಳು ವರ್ಷ ಆಯುಷ್ಯವಿರುವುದನ್ನು ನಾವು ಕಾನೂನಿನ ವ್ಯಾಪ್ತಿಯಲ್ಲಿ ತಂದಿದ್ದೇವೆ. ಇದರಲ್ಲಿ ಪ್ರಮುಖವಾಗಿ ಯಾವ ಯಾವ ಜಾನುವಾರುಗಳನ್ನು ರಕ್ಷಣೆ ಮಾಡುತ್ತೇವೆಂಬುದನ್ನು ತಿಳಿಸಿದ್ದೇವೆ. ಅಲ್ಲದೆ ಇದನ್ನು ಯಾವ ರೀತಿ ಸಂರಕ್ಷಣೆ ಮಾಡಬೇಕೆಂಬುದನ್ನು ನಾವು ತಿಳಿಸಿದ್ದೇವೆ. ಹದಿಮೂರು ವರ್ಷದ ಮೇಲ್ಪಟ್ಟಿರುವ ಕೋಣಗಳಿಗೆ ಇದರಲ್ಲಿ ವಿನಾಯ್ತಿಯನ್ನು ನೀಡಿದ್ದೇವೆ. ಅದರ ಒಳಗೆ ಇರುವ ಪ್ರಾಣಿಗಳನ್ನು ಹತ್ಯೆ ಮಾಡಬಾರದೆನ್ನುವ ವಿಚಾರವನ್ನು ಈ ಕಾನೂನಿನಲ್ಲಿ ತಂದಿದ್ದೇವೆ.

ಇದು ಎಲ್ಲಾ ರಾಜ್ಯಗಳಲ್ಲಿಯೂ ಇದೆ. ದೆಹಲಿ, ಹರಿಯಾಣ, ಉತ್ತರ ಪ್ರದೇಶ, ರಾಜಾಸ್ಥಾನ ಹೀಗೆ 14 ರಾಜ್ಯಗಳಲ್ಲಿ ಈ ಕಾನೂನು ಇದೆ. ಅವುಗಳಲ್ಲಿ ಕೆಲವು ಸೆಕ್ಷನ್‌ಗಳು ಬೇರೆ ಬೇರೆ ರೂಪದಲ್ಲಿದೆ. ಒಂದೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರಹದಲ್ಲಿದೆಯೆಂದು ನಾನು ಹೇಳುವುದಿಲ್ಲ. ಸ್ಥಳೀಯತೆಗೆ ಅನುಗುಣವಾಗಿ ಮಾಡಿಕೊಂಡಿದ್ದಾರೆ. ಇವುಗಳ ರಕ್ಷಣೆಗೆ ಬೇರೆ ಬೇರೆ ಯೋಜನೆಗಳನ್ನು ಕೂಡ ರೂಪಿಸಿದ್ದಾರೆ. ತಾತ್ವಿಕವಾಗಿ ಇದರ ಬಗ್ಗೆ ವ್ಯತ್ಯಾಸವಿರುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಈ ಕಾನೂನು ತಂದಾಗ ಕೆಲವು ಮೂಲಭೂತ ಪ್ರಶ್ನೆಗಳು ಮೂಡುತ್ತವೆ. ಇದರಿಂದ ನಮ್ಮ ಬದುಕಿನ ಮೇಲೆ ಯಾವ ರೀತಿಯ ಪರಿಣಾಮಗಳಾಗುತ್ತವೆ? ಯಾರು ಇವುಗಳನ್ನು ಸಾಕಾಣಿಕೆ ಮಾಡುತ್ತಾರೆ ಎನ್ನುವ ಪ್ರಶ್ನೆಗಳೂ ಕೂಡ ಮೂಡುತ್ತವೆ. ಉದಾಹರಣೆಗೆ ವಯಸ್ಸಾದ ಮೇಲೆ ಯಾವ ರೀತಿ ನಮ್ಮ ದನಗಳನ್ನು ಇಟ್ಟುಕೊಳ್ಳಲು ಸಾಧ್ಯವೇ ಎನ್ನುವ ಒಂದು ಮೂಲಭೂತ ಪ್ರಶ್ನೆಯಿದೆ. ಹೀಗಾಗಿ ಅವುಗಳಿಗೂ ನಾವು ಸಾಕಷ್ಟು ಯೋಜನೆಯನ್ನು ರೂಪಿಸಬೇಕಾಗುತ್ತದೆ.

ಈಗಾಗಲೇ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಸುಮಾರು 184 ಗೋಶಾಲೆಗಳಿವೆ. ಅದರಲ್ಲಿ ಸುಮಾರು 50,000 ಜಾನುವಾರುಗಳನ್ನು ರಕ್ಷಣೆ ಮಾಡಲಾಗುತ್ತಿದೆ. ಸರ್ಕಾರ ಖಾಸಗಿ ಗೋಶಾಲೆಯಲ್ಲಿರುವ ಒಂದು ಪಶುವಿಗೆ ಒಂದು ದಿವಸಕ್ಕೆ ರೂ.17.50 ಅನ್ನು ನೀಡುತ್ತಿದೆ. ಒಂದು rough estimate ಪ್ರಕಾರ ಸುಮಾರು ಎರಡು ಲಕ್ಷದಷ್ಟು ಈ ಜಾನುವಾರುಗಳ ಹತ್ಯೆಯಾಗುತ್ತದೆ. 50,000 ಇರುವ ಸಾಕಾಣಿಕೆಯನ್ನು ಎರಡು ಲಕ್ಷಕ್ಕೆ ಹೆಚ್ಚಿಸಬೇಕೆನ್ನುವ ಗುರಿಯನ್ನು ಸರ್ಕಾರ ಹೊಂದಿದೆ. ಅದಕ್ಕೆ ಬೇಕಾದ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಒಂದು ಗೋಶಾಲೆಯಲ್ಲಿ ಇಷ್ಟು ಗೋವುಗಳು ಇರಬೇಕು ಎನ್ನುವುದನ್ನು ಹೆಚ್ಚಿಸುವುದು, ಹೆಚ್ಚಿನ ಗೋಶಾಲೆಗಳನ್ನು ತೆಗೆಯುವುದು ಈ ರೀತಿ ಕೆಲವು ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

ತಮಗೆಲ್ಲಾ ತಿಳಿದಿರುವಂತೆ ನಮ್ಮಲ್ಲಿ ಬಹಳಷ್ಟು Agriculture Department, Horticulture Department and Forest Department ಗಳಲ್ಲಿರುವ ಹುಲ್ಲುಗಾವಲನ್ನು ನಾವು ಉಪಯೋಗ ಮಾಡಿಕೊಂಡಿಲ್ಲ. 5,000–10,000 ಎಕರೆ ಈ ರೀತಿ ಹುಲ್ಲುಗಾವಲುಗಳಿವೆ. ಶಿವಮೊಗ್ಗ, ಹಾಸನ, ಚಿತ್ರದುರ್ಗ ಇಲ್ಲಿ ಬಹಳ ದೊಡ್ಡ ಕಾವಲ್‌ಗಳಿವೆ. ಅವುಗಳನ್ನು ಕೂಡ ನಾವು ಉಪಯೋಗ ಮಾಡಿಕೊಂಡರೆ ಜಾನುವಾರು ಸಾಕಾಣಿಕೆಗೆ ಬೇಕಾಗಿರುವಂತಹ fodder ಅಥವಾ ಮೇವು ಬೆಳೆಯುವುದಕ್ಕೆ ಯೋಚನೆಯನ್ನು ಮಾಡಬಹುದೆಂದು ನಾವು ತೀರ್ಮಾನ ಮಾಡಿದ್ದೇವೆ.

**(...ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(229) 08.02.2021, 5.20. KG.GR

**ಶ್ರೀ ಬಸವರಾಜ ಬೊಮ್ಮಾಯಿ** (ಮುಂದು)

ಅಂದರೆ, ಕೇವಲ ಈ ವಿಧೇಯಕವನ್ನು ತರುವಂತಹದ್ದು, restriction ಹಾಕುವಂತಹದ್ದು ಅಷ್ಟೇ ಅಲ್ಲ. ಇದರ ಸಂರಕ್ಷಣೆಯು ಸಹ ಇದೆ. ಜಾನುವಾರು ಮತ್ತು ಇತರೆ ಪ್ರಾಣಿಗಳ ಹತ್ಯೆಯ ನಿಷೇಧದ ಜೊತೆಗೆ ಇದರ ಸಂರಕ್ಷಣೆಗೂ ಸಹ ಸರ್ಕಾರ ಈಗಾಗಲೇ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅಲ್ಲದೇ, ಇನ್ನೂ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ನಾವು ಮುಂಬರುವ ಬಜೆಟ್‌ನಲ್ಲಿ ಇದಕ್ಕೆ ವಿಶೇಷವಾದಂತಹ ಅನುದಾನವನ್ನು ಕೊಡುವುದಕ್ಕೂ ಸಹ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಈ ಕಾನೂನು ಬರುವವರೆಗೆ ಒಂದು ರೀತಿ ಇತ್ತು, ಈ ಕಾನೂನು ಬಂದ ಮೇಲೆ ಇದರ ರಕ್ಷಣೆಗೆ ಮತ್ತು ಸಂರಕ್ಷಣೆಯ ಕಾರ್ಯಕ್ರಮಗಳಿಗೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಒದಗಿಸುವುದಕ್ಕೆ ನಾವು ಸಿದ್ಧರಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ತರಹದ ಸಂರಕ್ಷಣೆಯನ್ನು ಮಾಡುತ್ತಿದ್ದಾರೆ. ಅದರ ಸಂಪೂರ್ಣವಾದ ವಿವರಗಳನ್ನು ಸಹ ಪಡೆದುಕೊಳ್ಳುತ್ತೇವೆ. ಒಟ್ಟಾರೆಯಾಗಿ, ಗೋಹತ್ಯೆ ನಿಷೇಧವಾದ ಕಾರಣದಿಂದ ಹೆಚ್ಚಾಗುತ್ತಿರುವಂತಹ ಈ ಸಂಖ್ಯೆ ವಯಸ್ಸಾದಂತಹ ಜಾನುವಾರುಗಳ ಸಂಪತ್ತನ್ನು ರಕ್ಷಣೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಇಲ್ಲಿ ಪ್ರಮುಖವಾಗಿ, ಮೊದಲು ಇದು non-cognizable offence ಇತ್ತು. ಆಮೇಲೆ ಎಲ್ಲಾ amendment ಗಳಾದ ಮೇಲೆ ಈಗಾಗಲೇ cognizable offence ಇದೆ. ಈ ಅಪರಾಧವನ್ನು ಮಾಡಿದಂತಹವರಿಗೆ ಮೂರು ವರ್ಷ ಮತ್ತು ಅದರ ಮೇಲ್ಪಟ್ಟು ಇರುವಂತಹದ್ದಕ್ಕೆ cognizable offence ಬರುತ್ತದೆ. ನಾವು ಅದರಡಿಯಲ್ಲಿ ಅದನ್ನೇ ಪುನರುಚ್ಚಾರ ಮಾಡಿದ್ದೇವೆ. ಇಲ್ಲಿ ಪ್ರಮುಖವಾಗಿ, ಒಂದೇ ಒಂದು ಬದಲಾವಣೆಯನ್ನು ಮಾಡಿದ್ದೇವೆ. ನಾವು penalty ಗಳನ್ನು ಹೆಚ್ಚು ಮಾಡಿರುವಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇಲ್ಲಿ transport ಗಳನ್ನು ಮಾಡುವುದಕ್ಕೆ ಕೆಲವೊಂದು ನಿರ್ಬಂಧಗಳನ್ನು ಮಾಡಿದ್ದೇವೆ. ಮೊದಲು ಅಂತರರಾಜ್ಯಕ್ಕೆ ಮಾತ್ರ ಸೀಮಿತವಾಗಿತ್ತು. ಈಗ ನಮ್ಮ ರಾಜ್ಯದ ಒಳಗಡೆಯೂ ಸಹ transport ಮಾಡುವುದಕ್ಕೆ ನಿರ್ಬಂಧಗಳನ್ನು ಈ ಕಾನೂನಿನಡಿಯಲ್ಲಿ ತಂದಿದ್ದೇವೆ.

ಮಾನ್ಯ ಸಭಾಪತಿಯವರೇ, ಕಲಂ 12 ರಡಿ ದಂಡನೆಗಳ ಬಗ್ಗೆ ವಿವರ ನೀಡಿದ್ದು, ಅದು ಈ ಕೆಳಕಂಡಂತೆ ಇದೆ:–

> **"ಕಲಂ 12, ದಂಡನೆಗಳಲ್ಲಿ (1) 4ನೇ ಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ, ಅಪರಾಧ ನಿರ್ಣೀತನಾದ ಮೇಲೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದೆ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಜಾನುವಾರಿಗೆ ಐವತ್ತು ಸಾವಿರ ರೂಪಾಯಿಗಳಿಗೆ**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಕಡಿಮೆಯಿಲ್ಲದ ಆದರೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು, ಎರಡನೇ ಅಥವಾ ಮುಂದುವರೆದ ಅಪರಾಧದ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮುಂದುವರೆದ ಜುಲ್ಮಾನೆಯೊಂದಿಗೆ, ಜೊತೆಗೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಎಂದು ಕಲಂ.12 ರಲ್ಲಿ ತಂದಿದ್ದೇವೆ".**

ಮಾನ್ಯ ಸಭಾಪತಿಯವರೇ, ಇದಕ್ಕೆ ವಿಶೇಷವಾದಂತಹ ನ್ಯಾಯಾಲಯವನ್ನು ರಚನೆ ಮಾಡಿ ಪ್ರಕರಣಗಳು ತ್ವರಿತಗತಿಯಲ್ಲಿ ಆಗಬೇಕೆಂದು, ಇದರಿಂದ ನ್ಯಾಯ ಸಿಗುತ್ತದೆಂಬ ನಿಟ್ಟಿನಲ್ಲಿ ಹಾಗೂ ಆಕಸ್ಮಾತ್ ಯಾರಾದರೂ innocent ವಿರುದ್ಧ ಪ್ರಕರಣ ದಾಖಲಿಸಿದ್ದರೆ, ಅವರಿಗೂ ಸಹ ನ್ಯಾಯ ಸಿಗಬೇಕು ಎನ್ನುವಂತಹ ಕಾರಣದಿಂದ ವಿಶೇಷ ನ್ಯಾಯಾಲಯವನ್ನು ಕಲಂ 9 ರಡಿ ಮಾಡಿದ್ದೇವೆ. ಅದೇರೀತಿ, ಮೇಲ್ಮನವಿಗಳಿಗೂ ಕಲಂ 10 ರಡಿ ಮಾಡಿದ್ದೇವೆ. ನಂತರ search and seizures ಅನ್ನು ಸಹ Inspector level ಗಿಂತ ಕೆಳಗಡೆ ಇದ್ದವರು search ಮಾಡಬಾರದು, Sub-Inspector level ಅಲ್ಲಿಯೇ ಆಗಬೇಕೆಂದು ಮಾಡಿದ್ದೇವೆ. ಅದಾದ ಮೇಲೆ ಅದನ್ನು ಕೂಡಲೇ Assistant Commissioner, who is the Sub Divisional Magistrate, ಗೆ ಕೊಟ್ಟು, ಆದಷ್ಟು ಬೇಗನೆ ಯಾವುದು ಇದಕ್ಕೆ ಸಂಬಂಧಪಟ್ಟಿದು ಇದೆ, ಯಾವುದು ಇದಕ್ಕೆ ಸಂಬಂಧಪಟ್ಟಿಲ್ಲದ ವಸ್ತುಗಳೆಂದು ತೀರ್ಮಾನ ಮಾಡಿ ಅದನ್ನು ಸಹ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶಗಳನ್ನು ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಕಲಂ 18 (ಬಿ) ರಡಿ ಈ ಕೆಳಕಂಡ ಕೆಲವು ವಿನಾಯಿತಿಗಳನ್ನು ಸಹ ನೀಡಿದೇವೆ.

(ಬಿ) **ಯಾವುದೇ ಜಾನುವಾರು:-**

**(i) ಜಾನುವಾರು ಹತ್ಯೆ ನಡೆಸಲು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪಶುವೈದ್ಯಾಧಿಕಾರಿಯು ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಯಲ್ಲಿ ಅಗತ್ಯವಾಗಿರುವುದೆಂದು ಪ್ರಾಮಾಣಿಸಿದರೆ,**

**(ii) ಯಾವುದೇ ರೋಗದಿಂದ ಬಳಲುತ್ತಿದ್ದು, ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪಶುವೈದ್ಯಾಧಿಕಾರಿಯು ಇತರ ಜಾನುವಾರುಗಳಿಗೆ ಸಾಂಕ್ರಾಮಿಕ ಮತ್ತು ಮಾರಕವೆಂದು ಪ್ರಮಾಣಿಸಿದರೆ ಅದಕ್ಕೆ ಅವಕಾಶ ಇದೆ.**

ಮಾನ್ಯ ಸಭಾಪತಿಯವರೇ, ಅದೇರೀತಿ ಸಂಚಾರ ಮಾಡುವಾಗ fish ಗೆ ಸಂಬಂಧಪಟ್ಟಂತಹ ಮತ್ತು animal husbandry ಗೆ, ಈ ಪಶು ಅಭಿವೃದ್ಧಿಯ ಚಟುವಟಿಕೆಗೆ ಸಂಬಂಧಪಟ್ಟವರಿಗೆ ರಿಯಾಯಿತಿಯನ್ನು ಕೊಟ್ಟಿದ್ದೇವೆ. ತಾಲ್ಲೂಕಿನಲ್ಲಿರುವಂತಹ Veterinary Officerರವರ ಕಡೆಯಿಂದ ಒಂದು ಪ್ರಮಾಣ ಪತ್ರವನ್ನು ತೆಗೆದುಕೊಂಡು ಅವರು ಸಂಚಾರವನ್ನು ಮಾಡಬಹುದು, ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗಬಾರದೆಂದು. ಅಷ್ಟೇ ಅಲ್ಲ, 15

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೀಲೋಮೀಟರ್ ಒಳಗಡೆ ಸಂಚಾರ ಮಾಡಿದರೆ ಯಾವುದೇ ರೀತಿಯಾದಂತಹ certification ಬೇಕಾಗಿಲ್ಲ. ಅದಕ್ಕೆ ಸಂಪೂರ್ಣವಾದಂತಹ ವಿನಾಯಿತಿಯನ್ನು ಕೊಟ್ಟಿದ್ದೇವೆ. ಸ್ಥಳೀಯವಾಗಿ ಜಾನುವಾರುಗಳ ಸಂತೆಗಳು ನಡೆಯುತ್ತವೆ, ಅಂತಹ ಸಂದರ್ಭಗಳಲ್ಲಿ ಎ.ಪಿ.ಎಂ.ಸಿ., ಒಳಗಡೆಯಾದರೆ, A.P.M.C., Secretary ಅದಕ್ಕೆ ಅವರು ಅಧಿಕಾರಿಯಾಗಿ certification ಕೊಡುತ್ತಾರೆ. ಮತ್ತೆ ಎ.ಪಿ.ಎಂ.ಸಿ., ಹೊರಗಡೆ ಸ್ಥಳೀಯ ಸಂತೆಗಳು ನಡೆಯುತ್ತವೆ. ಅಂತಹವುಗಳಿಗೆ ಯಾರಾದರೊಬ್ಬರು witness ಇದ್ದರೆ ಸಾಕು, ಅದಕ್ಕೂ ಸಹ ಅನುಮತಿಯನ್ನು ಕೊಟ್ಟಿದೇವೆ. ಈ ರೀತಿ ಕೃಷಿ, ಕೃಷಿ ಚಟುವಟಿಕೆ, ಕೃಷಿಕನ ಸಂಚಾರಕ್ಕೆ ಮತ್ತು ಹೈನುಗಾರಿಕೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಈ ಕಾನೂನಿನಲ್ಲಿ ಅಳವಡಿಸಿದ್ದೇವೆ. ಹೀಗಾಗಿ, ಇದೊಂದು ಸಂಪೂರ್ಣ ಮತ್ತು ಸಮರ್ಪಕವಾಗಿರುವಂತಹ ಅತ್ಯಂತ ಅವಶ್ಯವಾಗಿರುವಂತಹ ಕಾನೂನು ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ಪಶು ಸಂಪತ್ತನ್ನು ರಕ್ಷಣೆ ಮಾಡುವಂತಹದ್ದು ಮತ್ತು ಅವುಗಳನ್ನು ಜನೋಪಯೋಗಿಯಾಗಿ ಬಳಕೆ ಮಾಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಹಾಗಾಗಿ, ಒಂದು ಅಂದಾಜು, ಇದನ್ನು ಸಹ ಮಾನ್ಯ ಸದಸ್ಯರಾದ ಸಿ.ಎಂ.ಇಬ್ರಾಹಿಂರವರು ಒಪ್ಪುವುದಿಲ್ಲ. ದಿನದ ಮಾಂಸದ consumption ಅನ್ನು ನೋಡಿದಾಗ, ಶೇಕಡಾ 70 ರಿಂದ 75 ರಷ್ಟು ಕುರಿ, ಮೇಕೆ, ಕೋಳಿ ಮಾಂಸ ಬಳಕೆಯಾಗುತ್ತದೆ. ಉಳಿದ 20 ರಿಂದ 25% ರಷ್ಟು ಬೇರೆ ಒಂದು consumption ಇದೆ. ಹೀಗಾಗಿ, ಯಾರು ಮಾಂಸಹಾರಿಗಳು ಇದ್ದಾರೆ, ಅವರ ಒಂದು consumption ಗೂ ಸಹ ಯಾವುದೇ ಒಂದು ರೀತಿಯ ತೊಂದರೆಯಾಗದಂತೆ ನಾವು ಇದರಲ್ಲಿ ನೋಡಿಕೊಳ್ಳುವುದಕ್ಕೆ ಸಾಧ್ಯತೆ ಇದೆ.

ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಶ್ನೆ ಇದೆ. ಇದನ್ನು ನಾನು ಮೊನ್ನೆ ದಿವಸ ದಿನಪತ್ರಿಕೆಯಲ್ಲಿ ಓದಿದ್ದೇನೆ. ಮೃಗಾಲಯಕ್ಕೆ ಏನು ಮಾಡಬೇಕೆಂಬ ಪ್ರಶ್ನೆ ಸಹ ಬಂದಿತ್ತು. ಅದರಲ್ಲಿ ನಾವು 13 ವರ್ಷಗಳಿಗೆ ಮೇಲ್ಪಟ್ಟಿರುವಂತಹ Buffalo ಗಳಿಗೆ ಮತ್ತು ಕೋಣಗಳಿಗೆ ಏನು ಅವಕಾಶ ಕೊಟ್ಟಿದ್ದೇವೆಯೋ, ಅವುಗಳನ್ನು ಸರಬರಾಜು ಮಾಡುವುದಕ್ಕೆ ಎಲ್ಲಾ ರೀತಿಯ ಸಹಾಯವನ್ನು ಮಾಡುತ್ತೇವೆ, ಯಾವುದೇ ಮೃಗಾಲಯಕ್ಕೂ ಸಹ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ಹೀಗೆ, ಮನುಷ್ಯರು ಮತ್ತು ಪ್ರಾಣಿಗಳನ್ನು ಎಲ್ಲವನ್ನು ಗಮದಲ್ಲಿಟ್ಟುಕೊಂಡು ಇದನ್ನು ಮಾಡುತ್ತಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಲಂ 17ರಡಿಯ ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ವ್ಯಕ್ತಿಗಳ ಸಂರಕ್ಷಣೆಯ ಬಗ್ಗೆ ವಿವರಣೆ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಸದ್ಭಾವನೆಯಿಂದ ಕಾರ್ಯ ನಿರ್ವಹಿಸುವಂತಹದ್ದು ಏನಿದೆ, ಇದು ನಮ್ಮ ರಾಜ್ಯದ Civil Service Rules ನಲ್ಲಿದೆ. ಸದ್ಭಾವನೆಯಿಂದ ಮಾಡುವಂತಹವರಿಗೆ ರಕ್ಷಣೆ ಕೊಡಬೇಕೆಂದು ಇದೆ. ಕೇವಲ ಇದೊಂದೇ ಕಾನೂನು ಅಲ್ಲಿ ಇಲ್ಲ. ಹಾಗಾಗಿ, ಇದು ಹೊಸದಲ್ಲ. ಸಕ್ಷಮ ಪ್ರಾಧಿಕಾರಕ್ಕೆ ಅಧಿಕಾರವನ್ನು ಬೇರೆ ಬೇರೆ ಇಲಾಖೆಗಳಲ್ಲಿಯೂ ಕೊಟ್ಟಿದ್ದೇವೆ. ಆದ್ದರಿಂದ, ಯಾವುದೇ ಒಬ್ಬ ಅಧಿಕಾರಿ ಸರ್ಕಾರದ ಆದೇಶದ ಮೇಲೆ ಮಾಡುತ್ತಿರುವುದರಿಂದ, ಇದು ಕಾನೂನು ಜಾರಿಯಾದಂತಹ ಸಂದರ್ಭದಲ್ಲಿ ಕಾನೂನಾತ್ಮಕವಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ. ನಾವು ಇದನ್ನು in good faith ಮಾಡುತ್ತಿದ್ದೇವೆ. ಹಾಗಾಗಿ, ಇದರಲ್ಲಿ ಅಂತಹ ವ್ಯತ್ಯಾಸಗಳು ಆಗುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಯಾರಿಗೆ ಈ ಮನೆಯಲ್ಲಿ ಬಂದು represent ಮಾಡುವುದಕ್ಕೆ ಆಗುವುದಿಲ್ಲವೋ, ಯಾರಿಗೆ ಉಪಯುಕ್ತವಾದ ಮೇಲೆ ಕೊಂದು ಹಾಕುವಂತಹ ಒಂದು ಪರಿಸ್ಥಿತಿ ಇದೆ, ಇಲ್ಲಿ ಅಲ್ಲ ಎಲ್ಲಿಯೂ ಸಹ ಧ್ವನಿ ಇಲ್ಲ. ಈ ಸದನದಲ್ಲಿರುವಂತಹ ಸದಸ್ಯರಾದ ನಾವುಗಳಷ್ಟೇ ನಮ್ಮ ಧ್ವನಿಯನ್ನು ಎತ್ತಿದರೆ ಸಾಲದು ಅಥವಾ ನಮ್ಮನ್ನು ಆರಿಸಿ ಕಳುಹಿಸಿದಂತಹ ಜನರು ಎತ್ತಿದರೆ ಸಾಲದು, ನಮ್ಮನ್ನು ಆರಸಿ ಕಳುಹಿಸಿದವರಲ್ಲಿ ಇಲ್ಲದಿದ್ದರೂ ಸಹ ಅವರು ಮಕ್ಕಳು ಇರಬಹುದು, ಪ್ರಾಣಿಗಳು ಇರಬಹುದು, ಅವರ ಭಾವನೆಗಳನ್ನು ಅರ್ಥಮಾಡಿಕೊಂಡು ನಾವು ಕಾನೂನನ್ನು ಮಾಡಬೇಕಾಗಿದೆ. ನಮ್ಮ environment ಇರಬಹುದು, ನಮ್ಮ ecology ಇರಬಹುದು, ಹೀಗೆ ಯಾವುದನ್ನು ಈ ಸದನದಲ್ಲಿ represent ಮಾಡುವುದಕ್ಕೆ ಸಾಧ್ಯವಿಲ್ಲವೋ. ಅವರ ಬಗ್ಗೆಯೂ ಸಹ ಚಿಂತನೆ ಮಾಡಬೇಕೆಂದು ನಮ್ಮ Constitution ಬರೆದವರ ಆಶಯಗಳು ಇವೆ.

**(ಮುಂದು)**

(230)08–02–2021(5–30)ಎಂವಿ–ಎಂಡಿ(ಜಿಆರ್)

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು)**

ಆ ಹಿನ್ನೆಲೆಯಲ್ಲಿ ನಮ್ಮ ಜಾನುವಾರುಗಳಿಗೆ ತಮ್ಮ ಪ್ರಾಣ ರಕ್ಷಣೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಜಾನುವಾರುಗಳ ಉಪಯುಕ್ತವಾದ ಮೇಲೆ ಅವುಗಳು ಬದುಕುವುದಕ್ಕೂ ಅವಕಾಶವಿಲ್ಲ. ಯಾವುದಕ್ಕೂ ಕೂಡ ಅವಕಾಶವಿಲ್ಲದೆ ಇರುವಂತಹ ಈ ಸಂದರ್ಭದಲ್ಲಿ ನಾವು ಸರ್ಕಾರವಾಗಿ ಸೂಕ್ಷ್ಮತೆಯಿಂದ ಅವುಗಳ ರಕ್ಷಣೆ ಮಾಡುವಂಥದ್ದು ಕೂಡ ನಮ್ಮ ಕರ್ತವ್ಯವಾಗಿದೆ. ಆದುದರಿಂದ ಈ ಸದನ ಮಾನವೀಯತೆಯ ಆಧಾರದ ಮೇಲೆ ಚರ್ಚೆ ಮಾಡಬೇಕೆಂದು ಕಳಕಳಿಯ ವಿನಂತಿ ಮಾಡುತ್ತೇನೆ. ಜಾನುವಾರುಗಳ ಬಗ್ಗೆ ಕನಿಕರದಿಂದ ಚರ್ಚೆ ಮಾಡಿ, ನಾವು ಆ ಜಾಗದಲ್ಲಿ ಇದ್ದರೆ

ಏನಾಗಬಹುದು ಎಂಬುದನ್ನು ಚರ್ಚೆ ಮಾಡಬೇಕು. ಅದೇ ರೀತಿ ಇದು ಮೇಲ್ಮನೆ ಆಗಿರುವುದರಿಂದ ಕೇವಲ ಸೆಕ್ಷನ್‌ಗಳ ಆಧಾರದ ಮೇಲೆ ಚರ್ಚೆ ಮಾಡುವುದಕ್ಕಿಂತ, ಆ ಸೆಕ್ಷನ್‌ಗಿಂತ ಜಾನುವಾರುಗಳ ಬದುಕಿನ ಆಧಾರದ ಮೇಲೆ ನಾವು ಚರ್ಚೆ ಮಾಡಿದರೆ ಬಹಳಷ್ಟು ಉಪಯುಕ್ತವಾಗುತ್ತದೆ. ಆದುದರಿಂದ ತಮ್ಮಲ್ಲಿ ಬಹಳ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇದರ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಾದ ಬಸವರಾಜ ಬೊಮ್ಮಾಯಿಯವರು ಏನು ಹೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ನಿಜಕ್ಕೂ ಅವರಿಗೆ ಜಾನುವಾರುಗಳ ಬಗ್ಗೆ ಕಳಕಳಿ ಇದೆಯೇ? ಅವರಿಗೆ ಜಾನುವಾರಗಳ ಬಗ್ಗೆ ಕಳಕಳಿ ಇದ್ದಿದ್ದರೆ ಮೊದಲು ಅವರು ಈ ಜಾನುವಾರುಗಳನ್ನು ಸಂರಕ್ಷಣೆ ಮಾಡುವುದಕ್ಕೆ ಸರ್ಕಾರದಿಂದ ಏನಾದರೂ ವ್ಯವಸ್ಥೆ ಮಾಡುತ್ತಿದ್ದರು. ಈಗ ಯಾರೋ ಮಾಡಿರುವಂತಹ ಗೋಶಾಲೆಗಳನ್ನು ಅವಲಂಬಿಸಿ ಕೊಂಡಿದ್ದಾರೆ. ಈಗ ವಾರಕ್ಕೆ ಎಷ್ಟು ಸಾವಿರ ಹಸುಗಳು ಮತ್ತು ಎತ್ತುಗಳು ಹೊರಗೆ ಬರುತ್ತವೆ ಎನ್ನುವುದರ ಬಗ್ಗೆ ಅವರ ಹತ್ತಿರ ಲೆಕ್ಕವಿಲ್ಲ. ಒಂದು ಹಸು ಮತ್ತು ಎತ್ತುವನ್ನು ಸಾಕುವುದಕ್ಕೆ ಎಷ್ಟು ಬೇಕು. ಹಸು ಹಾಲು ಕೊಡುತ್ತಿದ್ದಾಗ ಎಷ್ಟು ಬೇಕು. ಅದೇ ಹಸು ಹಾಲು ಕೊಡುವುದನ್ನು ನಿಲ್ಲಿಸಿದಾಗ ಎಷ್ಟು ಬೇಕು. ರಾಜ್ಯದಲ್ಲಿ ಹಾಲು ನಿಲ್ಲಿಸಿರುವಂತಹ ಹಸು ಏನಾಗಿದೆ ಮತ್ತು ಅದರ ಸಂಖ್ಯೆ ಎಷ್ಟೆಂದು ಲೆಕ್ಕ ಸಿಗುತ್ತದೆಯೇ? ಈಗ ಅದರಿಂದ ಜೀವನ ಮಾಡುವಂತಹವರ ಸಂಖ್ಯೆ ಎಷ್ಟು? ಅದರ ಅಂಕಿ ಅಂಶಗಳನ್ನೇನಾದರೂ ತೆಗೆದುಕೊಂಡಿದ್ದಾರೆಯೇ? ನಾನು ಅವೊತ್ತೆ ಅವರಿಗೆ ಹೇಳಿದ್ದೇನೆ ಮತ್ತು ಅನೇಕ ಜನ ಸ್ವಾಮಿಜೀಗಳ ಜೊತೆ ಮಾತನಾಡಿದ್ದೇನೆ. ಇದಕ್ಕೆ ಅವರು ಸ್ವಲ್ಪ ಕಾಲಾವಕಾಶ ತೆಗೆದುಕೊಳ್ಳಲ್ಲಿ. ಇವತ್ತು ಇವುಗಳನ್ನು ವಿಂಗಡಣೆ ಮಾಡಬೇಕಾಗುತ್ತದೆ. ಅಂದರೆ, ನಾಡ ಹಸು, ಜೆರ್ಸಿ ಹಸು, ಎಮ್ಮೆ, ಕೋಣ ಮತ್ತೆ ಬೇಸಾಯಕ್ಕೆ ಇರತಕ್ಕಂಥ ಆಕಳು. ಇವುಗಳನ್ನೆಲ್ಲವನ್ನು ವಿಂಗಡಣೆ ಮಾಡಬೇಕು. ಇವತ್ತು ಕೆಲವು ಸ್ವಾಮಿಜೀಗಳ ಅಭಿಪ್ರಾಯ ಏನೆಂದರೆ, ನಾಡ ಹಸು ಏನಿದೆ ಅದನ್ನು ಸಂರಕ್ಷಣೆ ಮಾಡಬೇಕು. ಹೌದು, ಅದರ ಬಗ್ಗೆ ಚರ್ಚೆ ನಡೆಯಲಿ. ವಿರೋಧ ಪಕ್ಷದವರು, ಸರ್ಕಾರದವರು ಮತ್ತು ರೈತ ಸಂಘದವರು, ಎಲ್ಲರೂ ಕುಳಿತು ಚರ್ಚೆ ಮಾಡೋಣ. ಅದರ ಬಗ್ಗೆ ಚರ್ಚೆ ಮಾಡಿ, ಈ ನಮ್ಮ ನಾಡ ತಳಿಯನ್ನು ಉಳಿಸುವಂಥದ್ದಕ್ಕೆ ಮತ್ತು ಹಾಲು ಕೊಡುತ್ತಿರುವಂತಹ ತಳಿಯನ್ನು ಯಾರು ಸಹ ಮುಟ್ಟುವುದಕ್ಕೆ ಹೋಗುವುದಿಲ್ಲ. ಅದು ಹಾಲು ಕೊಡುವುದನ್ನು ನಿಲ್ಲಿಸಿದರೆ ಮುಂದೇನು ಮಾಡಬೇಕು? ಅದನ್ನು ಸಾಕುವುದಕ್ಕೆ ಏನು ಮಾಡಬೇಕು? ನಾನು ಸಹ ಒಬ್ಬ ರೈತ ಎಂದು ಈಗಾಗಲೇ ಹೇಳಿದ್ದೇನೆ. ನಾನು ಇಪ್ಪತ್ತೈದು ಸಾವಿರ ಕೊಟ್ಟು ಒಂದು ಹಸುವನ್ನು ತಂದಿದ್ದೆ. ಅದು ನಾಲ್ಕು ವರ್ಷ ಹಾಲು ಕೊಟ್ಟಿತು. ನಂತರ ಹಾಲು ಕೊಡುವುದನ್ನು ನಿಲ್ಲಿಸಿಬಿಟ್ಟಿತು. ನಾನು ಆ ಹಸುವನ್ನು ಮಾರಿದರೆ ಅರ್ಧ ದುಡ್ಡು ಸಿಗುತ್ತದೆ. ಇನ್ನು ಅರ್ಧ ದುಡ್ಡು ಹಾಕಿ ಬೇರೆ ಹಸು ತರಬೇಕು. ಇದರಿಂದ ನಾನು ಜೀವನ ಮಾಡುವಂಥದ್ದು. ಇದು ನನ್ನ ಅವಲಂಬನೆ. ಇವತ್ತು ಅವರು ಅದರ ಬಾಯಿಗೆ

ಮಣ್ಣು ಹಾಕುತ್ತಿದ್ದಾರೆ. ಅವರು ಏನು ಮಾಡಬೇಕಾಗಿತ್ತು ಎಂದರೆ, ರೈತ ನೀನು ಹೆದರಬೇಡ, ನಿನ್ನ ಹಸು ಹಾಲು ಕೊಡುವುದನ್ನು ನಿಲ್ಲಿಸಿಬಿಟ್ಟಿದೆಯೇ? ಅದನ್ನು ಗೋಶಾಲೆಗೆ ಕಳುಹಿಸುವುದಕ್ಕಿಂತ ಮುಂಚೆ, ನೀನು ಐವತ್ತು ಸಾವಿರ ಕೊಟ್ಟು ಹಸುವನ್ನು ಖರೀದಿ ಮಾಡಿದ್ದೀಯಾ, ಅದಕ್ಕೆ ಇಪ್ಪತ್ತೈದು ಸಾವಿರ ತೆಗೆದುಕೊಂಡು, ಈ ಹಸುವನ್ನು ಕರೆದುಕೊಂಡು ಹೋಗಿ ಗೋಶಾಲೆಗೆ ಬಿಟ್ಟು ಬಾ ಎಂದು ಅದಕ್ಕೇನಾದರೂ ವ್ಯವಸ್ಥೆ ಮಾಡಿದ್ದಾರೆಯೇ? ಅವರು ಆ ರೀತಿಯ ವ್ಯವಸ್ಥೆ ಮಾಡಿಲ್ಲ. ನಾನು ರೈತ, ಎರಡು ಜೊತೆ ಎತ್ತುಗಳನ್ನು ತೆಗೆದುಕೊಂಡು ಬೇಸಾಯ ಮಾಡುತ್ತಿದ್ದೇನೆ. ಮೂರು ವರ್ಷವಾದ ಮೇಲೆ ನಾಲ್ಕನೆ ವರ್ಷಕ್ಕೆ ಅದಕ್ಕೆ ನೊಗ ಕಟ್ಟುವುದಕ್ಕೆ ಆಗುವುದಿಲ್ಲ. ಆ ಎತ್ತನ್ನು ಮಾರುವುದಕ್ಕೆ ಬರಲೇಬೇಕು. ಅದನ್ನು ಸಂತೆಯಲ್ಲಿ ತೆಗೆದುಕೊಳ್ಳುವವರು ಯಾರು ಇಲ್ಲ. ಮತ್ತೆ ಮುಂದೆ ರೈತನ ಗತಿ ಏನಾಗಬೇಕು. ಮುಂದಿನ ಬೇಸಾಯಕ್ಕೆ ಎತ್ತುಗಳನ್ನು ಎಲ್ಲಿಂದ ತರುವುದು? ಇದರ ಬಗ್ಗೆ ಸರ್ಕಾರದವರು ಒಂದು ವಿಧೇಯಕವನ್ನು ತಂದು ರೈತ ನೀನು ಎತ್ತು ಮಾರಾಟ ಮಾಡುತ್ತಿದ್ದೀಯಾ ಅದು ಬೇಸಾಯಕ್ಕೆ ಉಪಯೋಗವಾಗುವುದಿಲ್ಲ. ಐವತ್ತು ಸಾವಿರ ತೆಗೆದುಕೊಂದು ನಿನ್ನ ಎರಡು ಜೊತೆ ಎತ್ತುಗಳನ್ನು ಗೋಶಾಲೆಗೆ ಬಿಟ್ಟು ಬೇರೆ ಎತ್ತುಗಳನ್ನು ತೆಗೆದುಕೊಂಡು ಬಾ ಎಂದು ಅವರು ಈ ರೀತಿ ಏನಾದರೂ ವ್ಯವಸ್ಥೆಯನ್ನು ಮಾಡಿದ್ದಾರೆಯೇ? ಸಾಬ್ರು ತಿನ್ನುತ್ತಾರೆಂದು ಅವರಿಗೆ ಸಾಬ್ರು ಚಿಂತೆ. ನಾವು ತಿನ್ನುವುದಿಲ್ಲವೆಂದು ಅವರಿಗೆ ಬರೆದುಕೊಡುತ್ತೇವೆ. ಈಗ ಎಮ್ಮೆ ಮತ್ತು ಕೋಣ ಎಂದು ಹೇಳಿದ್ದಾರೆ. ಅವರಿಗೆ ಅಷ್ಟಕ್ಕಾದರೂ ಸಮಾಧಾನವಾಗುತ್ತದೆಯೇ? ನಾವು ಇವತ್ತು ನಿಂತಿರುವುದು ರೈತರ ಪರವಾಗಿ. ನಾನು ಸಹ ಒಬ್ಬ ರೈತನ ಮಗ. ಇವತ್ತು ನನಗೂ ಸಹ ಇಪ್ಪತ್ತೈದು ಎಕರೆ ಗದ್ದೆ ಇದೆ. ನಾನು ಎತ್ತು ಮತ್ತು ಎಮ್ಮೆಯನ್ನು ಸಾಕುತ್ತಿದ್ದೇನೆ. ಇವತ್ತು ನಾನು ಈ ಕರುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗಲಿ. ಅವರು ಹದಿಮೂರು ವರ್ಷದವರೆಗೆ ಏನೂ ಮಾಡಬಾರದೆಂದು ಹೇಳುತ್ತಾರೆ. ಹಾಗಾದರೆ, ಅದನ್ನು ಸಾಕುವವರು ಯಾರು? ಮಾನ್ಯ ಪಶುಸಂಗೋಪನಾ ಸಚಿವರೇ ಆ ಹದಿಮೂರು ವರ್ಷ ಅವುಗಳನ್ನು ಸಾಕುವುದಕ್ಕೆ ರೈತರಿಗೆ ಪ್ರತಿ ತಿಂಗಳು ಐನೂರು ರೂಪಾಯಿಯಂತೆ ಏನಾದರೂ ಹಣವನ್ನು ಕೊಡುತ್ತಾರೆಯೇ? ಜರ್ಸಿ ಆಕಳು ಗಂಡು ಕರುವನ್ನು ಹಾಕಿದರೆ, ಅದು ಆಂಗ್ಲೋ ಇಂಡಿಯನ್. ಏಕೆಂದರೆ, ಅದು ಯಾವ ಕೆಲಸಕ್ಕೂ ಬರುವುದಿಲ್ಲ. ಅದನ್ನು ಏನು ಮಾಡುವುದು? ನಾನು ಅದನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದು? ಅವರು ಇದಕ್ಕೆ ಏನು ತರದೆ, ಇದ್ದಕ್ಕಿದ್ದಂತೆ ತಂದುಬಿಟ್ಟು, ಏನು ಕತ್ತೆ ಮೇಲೆ ಕೈ ಇಟ್ಟು ಬಿಟ್ಟು, ಹಾಡನ್ನು ನೆನಪಿಸಿಕೊಂಡು ಮತ್ತೊಂದನ್ನು ಮಾಡಿ, ಇವರ ಮೇಲೆ ಹಾಕಿದರೆ, ಸಾಬ್ರು ಏನಾದರೂ ಹೆದರು ಬಿಡುತ್ತಾರೇನೋ? ಆ ರೀತಿ ಮಾಡಿದರೆ ದರದರ ಅಂತ ಮತಗಳು ಬಂದುಬಿಡುತ್ತದೆಂದು ತಿಳಿದುಕೊಂಡಿದ್ದರೆ, ಅದು ಇಲ್ಲ. ಇದನ್ನು ಹೇಳಿಕೊಂಡು ನಾವೇ ನಾಳೆ ಹೊರಡುತ್ತೇವೆ. ಜೆರ್ಸಿ ಹಸು ಉಳಿಸಿ, ನಮ್ಮ ಅವ್ವ ಹಾಲು ಕೊಡುತ್ತಿಲ್ಲ. ನಮ್ಮ ಅವ್ವ ಕಾಕ ಅಂಗಡಿ ಮತ್ತು ಬಸ್ ಸ್ಟ್ಯಾಂಡಿನಲ್ಲಿ ಸಿಪ್ಪೆ ತಿನ್ನುತ್ತಿದೆ. ಆ ನಮ್ಮ ಅವ್ವನನ್ನು ಉಳಿಸಿ ಎಂದು ನಾವೇ ಹೊರಡುತ್ತೇವೆ. ಅವರು ನಮ್ಮ ಜೊತೆಗೆ ಬರುತ್ತಾರೆಯೇ? ಅವರು ಬರುವುದಾದರೆ ನಡೆಯಿರಿ ಹೋಗೋಣ. ಇವತ್ತು ಬಸ್ ಸ್ಟ್ಯಾಂಡಿನಲ್ಲಿ ಎಷ್ಟು ಹಸುಗಳು ಮೇಯುತ್ತಿವೆ? ರಸ್ತೆಗಳಲ್ಲಿ ಎಷ್ಟು ಹಸುಗಳಿವೆ? ಅವು ತಾಯಂದಿರಲ್ಲವೇ? ಅದು ಗೋವು ಅಲ್ಲವೇ? ಅದನ್ನು ಕಾಪಾಡುವಂಥಕ್ಕೆ ಏನಾದರೂ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯವಸ್ಥೆ ಮಾಡಿದ್ದಾರೆಯೇ? ಬಸ್ ಸ್ಟ್ಯಾಂಡಿನಲ್ಲಿ ಇರುವುದು ಅವ್ವ ಅಲ್ಲ. ಇಲ್ಲಿ ಅವರು ತಂದಿರುವಂಥದ್ದಕ್ಕೆ ಏನು definition ಎಂದು. ಅದೂ ಗೋವು, ಇದೂ ಗೋವು. ಜೆರ್ಸಿ ಇದರ definition ಏನು? ಆತುರ ಮಾಡಬೇಡಿ ಎಂದು ನಾನು ಇದನ್ನೇ ಹೇಳಿದ್ದು. ನಾವು ಅವರಿಗೆ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಅವರು ಇದಕ್ಕೆ ಒಂದು Select Committee ಮಾಡಲಿ. ರೈತ ಮುಖಂಡರಾದ ಮಾನ್ಯ ಕೋಡಿಹಳ್ಳಿ ಚಂದ್ರಶೇಖರ್‌ರವರು ಇದಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿದ್ದಾರೆ. ಆ ರಿಟ್ ಕಾಪಿ ತರಿಸಿಕೊಂಡು ಓದಲಿ. ಸುಮಾರು 80 ಲಕ್ಷ ಜನ ಹಾಲು ಬೆಳೆಗಾರರಿದ್ದಾರೆ. ಇವತ್ತು ಅವರು ಕೂಡ ರಿಟ್ ಅರ್ಜಿ ಹಾಕಿದ್ದಾರೆ. ಇವರ್‍ಯಾರೂ ಸಹ ಸಾಬ್ರು ಅಲ್ಲ. ಕ್ಯಾರೇ ಕಾಸಿಂ ಅಂದರೆ, ಹೂವಾ ಸಾಬ್...

**(ಈ ಹಂತದಲ್ಲಿ ಮಾನ್ಯ ಸದಸ್ಯರು ಉರ್ದು ಭಾಷೆಯಲ್ಲಿ ಮಾತನಾಡಿದರು)**

ಅದಕ್ಕೆ ಅವರು ಆತುರ ಮಾಡಿಕೊಳ್ಳುವುದು ಬೇಡ. ನಮ್ಮನ್ನು confidence ಗೆ ತೆಗೆದುಕೊಳ್ಳಲಿ ಮತ್ತು ರೈತ ಸಂಘದವರನ್ನು confidence ಗೆ ತೆಗೆದುಕೊಳ್ಳಲಿ. ಇದಕ್ಕೆ ಜಾತಿ ಮತ್ತು ಧರ್ಮದ ಬಣ್ಣ ಕೊಡುವುದಕ್ಕೆ ಹೋಗುವುದು ಬೇಡ. ಇದಕ್ಕೆ ಮಾನವೀಯತೆ ರೈತನ ಜೀವನ ಇದರ ಮೇಲೆ depend ಆಗಿದೆ. ಅವರು ರೈತ ಧರ್ಮವನ್ನು ಕಾಪಾಡುವುದಕ್ಕೆ ಪ್ರಯತ್ನಪಡಲಿ. ವಿಧೇಯಕದಲ್ಲಿ ಇರುವಂತಹ 17ನೆ ಕಾಲಂನ ತಿದ್ದುಪಡಿಯಲ್ಲಿ ಏನು ಹೇಳುತ್ತಾರೆಂದರೆ, ವ್ಯಕ್ತಿಗಳ ಸಂರಕ್ಷಣೆ ಎಂದು ಇದೆ. ಸರ್ಕಾರದ ಅಧಿಕಾರವಿಲ್ಲ. ಯಾರಾದರೂ ಮಾನ್ಯ ಪಶುಸಂಗೋಪನಾ ಸಚಿವರು ಹಾಕಿಕೊಂಡಿರುವಂತಹ ಶಾಲು ಹಾಕಿಕೊಂಡಿದ್ದರೆ ಅವರನ್ನು ಕೇಳುವಂತಿಲ್ಲ. ಅವರಿಗೆ ಅದೇ ಪಾಸ್‌ಪೋರ್ಟ್ ಇದ್ದಂತೆ. ಇದು ನಮ್ಮ ದರ್ಗಾದಲ್ಲಿ ಇರುವಂತಹ ಫಕೀರರು ಹಾಕಿಕೊಳ್ಳುತ್ತಾರೆ. ಅದನ್ನು ಹಾಕಿಕೊಂಡು ಹೊಡೆದು ಬಿಟ್ಟರೆ, ಅವರ ಮೇಲೆ ಪ್ರಕರಣವೇ ದಾಖಲು ಆಗುವುದಿಲ್ಲ. ಕೋರ್ಟ್‌ನಲ್ಲಿ ಈ ರೀತಿಯ ಕಾನೂನು ನಿಲ್ಲುತ್ತದೆಯೇ? ದಯವಿಟ್ಟು ಮಾನ್ಯ ಸಭಾನಾಯಕರೆ, ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರಿಗೆ ಹೇಳಿ. ಏಕೆಂದರೆ, ಅವರು ಸಹ ರೈತ ಮುಖಂಡರು. ಮಾನ್ಯ ಗೃಹ ಸಚಿವರಾದ ಬಸವರಾಜ ಬೊಮ್ಮಾಯಿಯವರೆ ನೀವು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದೊಡ್ಡ ಬೊಮ್ಮಾಯಿಯವರ ಮಗ. ಅವರು ರೈತರ ಮಧ್ಯದಲ್ಲಿ ಬೆಳೆದಿರುವವರು. ದಯವಿಟ್ಟು ಇದರ ಬಗ್ಗೆ ನಮಗೆ ಅವಕಾಶ ನೀಡಿ. ನಾನು ನಮ್ಮ ಸಮಾಜದ ಎಲ್ಲಾ ಮುಖಂಡರನ್ನು ಮತ್ತು ವಿದ್ವಾಂಸರನ್ನು ಕರೆಸುತ್ತೇನೆ. ಇದಕ್ಕೆ ಸರ್ವಸಮ್ಮತವಾದ ಒಂದು ಕಾನೂನನ್ನು ತರಲಿ. ಕನ್ನಡ ನಾಡು ಆರೂವರೆ ಕೋಟಿ ಜನ ಇರತಕ್ಕಂಥ ಸಂಸ್ಕೃತಿ ನಾಡು. ನಾವು ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಮಾದರಿ ಅಲ್ಲ. ಇಲ್ಲಿ ಬೂಬಮ್ಮ, ಹಳದಮ್ಮ, ಕಾಸಿಂ ಸಾಬ್, ಫಕೀರ್ ಸಾಬ್, ಸಿದ್ದಪ್ಪ, ಮಲ್ಲಪ್ಪ ಮತ್ತು ಸೂಫಿ ಸಂತರು ಬಾಳಿದಂತಹ ಇತಿಹಾಸ, ಹನ್ನೆರಡನೆ ಶತಮಾನದಿಂದ ನಡೆದುಕೊಂಡು ಬರುತ್ತಿದೆ. ಈರಾ, ಪೀರಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವುದು ನಮ್ಮ ಸಂಸ್ಕೃತಿ. ಅದಕ್ಕೆ ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಇದಕ್ಕೆ ಧರ್ಮದ ಬಣ್ಣ ಕೊಡದೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು. ಅವರು ಇದನ್ನು ಸಮಗ್ರವಾಗಿ ಚರ್ಚೆ ಮಾಡಲಿ.

**(ಮುಂದು)**

(231) 08.02.2021 05.40 LL-MD(GR)

**ಶ್ರೀ ಸಿ.ಎಂ.ಇಬ್ರಾಹಿಂ(ಮುಂದುವರೆದಿದ್ದು...)**

ಆಡಳಿತ ಪಕ್ಷದವರಿಗೆ ದೇವರು ಸದ್ಬುದ್ಧಿ ಕೊಡಲಿ. ಈ ಬಗ್ಗೆ ಎಷ್ಟು ಮಾತನಾಡಿದರೂ ಸಹ, ಈ ವಿಧೇಯಕದ ತಿದ್ದುಪಡಿಯಿಂದ ರೈತರಿಗೆ ಅನಾನುಕೂಲವಾಗುತ್ತದೆ ಎನ್ನುವುದು ಸರ್ಕಾರಕ್ಕೂ ಸಹ ಗೊತ್ತಿರುತ್ತದೆ. ಅವರ ಒಳಮನಸ್ಸು ಈ ರೀತಿ ಹೇಳುತ್ತಿದೆಯೆಂದು ಎಲ್ಲರಿಗೂ ಅನ್ನಿಸುತ್ತಿದೆ. ಈ ಅಧಿವೇಶನ ಮುಗಿದ ತರುವಾಯ ಬಜೆಟ್ ಅಧಿವೇಶನ ಬರುತ್ತದೆ. ಹಾಗಾಗಿ, ಮುಂದಿನ ಅಧಿವೇಶನವನ್ನು ಹದಿನೈದು ದಿವಸ ಅಥವಾ ಒಂದು ತಿಂಗಳಿನಲ್ಲಿಯೇ ಕರೆಯಲಿ. ಆ ಸಮಯದಲ್ಲಿ ನಾವೆಲ್ಲರೂ ಕುಳಿತು, ಸಲಹೆ ಕೊಟ್ಟು, ಏನು ನಮ್ಮ ದೇಶಿ ತಳಿಯ ಹಸುಗಳಿವೆ ಅವುಗಳನ್ನು ಉಳಿಸಿಕೊಳ್ಳುವಂಥದ್ದಕ್ಕೆ ಪ್ರಯತ್ನ ಮಾಡೋಣ. ಎರಡನೆಯದಾಗಿ, ಡಬ್ಬದಲ್ಲಿ 'ಬೀಫ್ ಸಾಸೇಜ್' ಎಂದು ಈಗಾಗಲೇ ಮಾರುಕಟ್ಟೆಗೆ ಬರುತ್ತಿದೆ. ಅದೇ ರೀತಿ, 'ಪೋರ್ಕ್ ಸಾಸೇಜ್' ಎಂದು ಬರುತ್ತಿದ್ದು, ಎಲ್ಲಾ ಮಾಲ್‌ಗಳಲ್ಲಿಯೂ ಸಹ ಅದು ಲಭ್ಯವಿದೆ. ಅವುಗಳನ್ನು ತಡೆಗಟ್ಟುವವರು ಯಾರೂ ಇರುವುದಿಲ್ಲ. ಮಹಾರಾಷ್ಟ್ರ ಹೈಕೋರ್ಟ್ ಈ ವಿಷಯದಲ್ಲಿ ಒಂದು ಜಡ್ಜ್‌ಮೆಂಟ್ ಕೊಟ್ಟಿರುತ್ತದೆ. ಅದರಲ್ಲಿ, "ಈ ರಾಜ್ಯದಲ್ಲಿ ಜಾನುವಾರುಗಳನ್ನು ಕುಯ್ಯಬಾರದು. ಆದರೆ, ಪಕ್ಕದ ರಾಜ್ಯದಲ್ಲಿ ಕುಯ್ಯುವಂತಹ ಜಾನುವಾರುಗಳನ್ನು ಇಲ್ಲಿ ತೆಗೆದುಕೊಂಡು ಬಂದು ಮಾರಾಟ ಮಾಡಬಹುದು" ಎಂದು ಮಹಾರಾಷ್ಟ್ರ ಹೈಕೋರ್ಟ್ ಜಡ್ಜ್‌ಮೆಂಟ್ ಇರುತ್ತದೆ. ಅಲ್ಲದೇ, ಗೋವಾದಲ್ಲಿಯೂ ಸಹ ಇರುತ್ತದೆ. ಅಲ್ಲಿಯೂ ಕೂಡ ಬಿ.ಜೆ.ಪಿ., ಸರ್ಕಾರವೇ ಅಧಿಕಾರದಲ್ಲಿರುತ್ತದೆ. ಆದರೆ, ಅಲ್ಲಿ ಗೋವು ಇವರಿಗೆ 'ಅವ್ವ' ಆಗಿರುವುದಿಲ್ಲ. ಅಲ್ಲಿ ಗೋವು 'ಚಿಕ್ಕವ್ವ' ಆಗಿದ್ದು, ನಮ್ಮ ರಾಜ್ಯದಲ್ಲಿ ಮಾತ್ರ 'ಅವ್ವ' ಆಗಿರುತ್ತದೆ. ಮಿಜೋರಾಂ ರಾಜ್ಯದಲ್ಲಿ ಮಾನ್ಯ ಮಂತ್ರಿಗಳು, "I am eating beef." ಎಂದು ಹೇಳಿಕೆ ನೀಡಿರುತ್ತಾರೆ. ಆದರೆ, ನಾನು ಆ ರೀತಿ ಹೇಳಿರುವುದಿಲ್ಲ. ನಾವು ದನದ ಮಾಂಸವನ್ನು ತಿಂದರೂ ಸಹ ಆ ರೀತಿ ಹೇಳಿಕೆ ನೀಡಿರುವುದಿಲ್ಲ. ಏಕೆಂದರೆ, ನನ್ನ ಅನಿಸಿಕೆಯಲ್ಲಿ ಇನ್ನೊಬ್ಬರ ಭಾವನೆಗೆ ಧಕ್ಕೆ ಬರಬಾರದೆಂದು ಹೇಳಿರುವುದಿಲ್ಲ. ನಾವು ಹಂದಿ ಮಾಂಸ ತಿನ್ನುವುದಿಲ್ಲ. ಆದರೆ, ಹಂದಿ ಮಾಂಸ ತಿನ್ನುವವರು ಇದ್ದಾರೆ. ಅವರಿಗೆ, "ತೂ, ನೀನು ಹಂದಿ ಮಾಂಸ ತಿನ್ನುತ್ತೀಯಾ" ಎಂದು ಹೇಳಬಾರದು. ಒಬ್ಬರ ಮನಸ್ಸನ್ನು ನೋಯಿಸಬಾರದು. ಅದೇ ಮಾನವ ಧರ್ಮ. ಅದೇ ಕರ್ನಾಟಕ ರಾಜ್ಯದ ಸಂಸ್ಕೃತಿ.

ಆದುದರಿಂದ, ಇವೊತ್ತಿನ ದಿವಸ ಈ ವಿಧೇಯಕದಲ್ಲಿ ಏನು ತಿದ್ದುಪಡಿ ತಂದಿದ್ದಾರೆ, ಅದನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಿ. ಅದರ ಬಗ್ಗೆ ನಾವು ಕೂಡ ಚರ್ಚೆ ಮಾಡುತ್ತೇವೆ. ನಮ್ಮ ಮಾತಿನ ಮೇಲೆ ನಂಬಿಕೆ ಇಟ್ಟು, ಈ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ. ಇದರಿಂದ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಓಟು ತೆಗೆದುಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ಅದರ ಬದಲಾಗಿ, ಈ ವಿಧೇಯಕ ಪಾಸ್ ಆದರೆ ಓಟು ಬರುತ್ತದೆ ಎಂದು ಇಲ್ಲ. ಏಕೆಂದರೆ, ಈ ಹಿಂದೆ, 'ಅಕ್ಕಿ ಪುಗ್ಸಟೆ ಕೊಟ್ಟ ತಕ್ಷಣ ಓಟು ಬರುತ್ತದೆ" ಎಂದು ಅಕ್ಕಿ ಕೊಟ್ಟಾಯಿತು. ಅದರಿಂದ ಓಟು ಬರಲಿಲ್ಲ. ಅಲ್ಲದೇ, 120 ರಿಂದ 80 ಸ್ಥಾನಗಳು ಬಂದಿರುತ್ತವೆ. ಅದು ತಮಗೆ ತಿಳಿದಿದೆಯೇ? ಯಾವ ಸಮಯದಲ್ಲಿ ಜನ ಹೇಗೆ ಬದಲಾಗುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಅದು ಹವಾ ಮೇಲೆ ಹೋಗುತ್ತದೆ. ಅದೇ ರೀತಿ ಮುಂದೆ ಏನಾಗುತ್ತದೆಯೆಂದು ಸಹ ನಮಗೆ ಗೊತ್ತಿರುವುದಿಲ್ಲ. ಆದುದರಿಂದ, ಸರ್ಕಾರದವರಲ್ಲಿ ಮನವಿ ಮಾಡುವುದೇನೆಂದರೆ, ಈ ವಿಷಯದ ಬಗ್ಗೆ ಮಾನ್ಯ ಹೈಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇದ್ದು, ಅದರಲ್ಲಿ ಏನು ತೀರ್ಪು ಬರುತ್ತದೆ ಎನ್ನುವುದನ್ನು ಕಾದು ನೋಡಬೇಕು.

ಇವೊತ್ತಿನ ದಿವಸ ಅಹಮದಾಬಾದ್‌ನಲ್ಲಿ 'ಭೀಫ್ ಎಕ್ಸ್‌ಪೋರ್ಟ್ ಸ್ಪೆಷಲ್ ಝೋನ್'ಗಳನ್ನು ಮಾಡಿರುತ್ತಾರೆ. ಇದರಿಂದಾಗಿ, ಅವರಿಗೆ ಸುಮಾರು 30 ಸಾವಿರ ಕೋಟಿ ರೂಪಾಯಿಗಳ ವರಮಾನ ಇದೆ. ನಮ್ಮಲ್ಲಿ ಅದು ಇರುವುದಿಲ್ಲ. ಅಲ್ಲದೇ, ಉತ್ತರಪ್ರದೇಶದಲ್ಲಿ ಶೇಕಡ 80 ರಷ್ಟು ಬಿ.ಜೆ.ಪಿ., ಪಕ್ಷದ ಎಂ.ಪಿ.ಗಳದ್ದೇ ಫ್ಯಾಕ್ಟರಿ ಇದ್ದು, ಅವರೇ ವ್ಯಾಪಾರ ನಡೆಸುತ್ತಿದ್ದಾರೆ. ವ್ಯಾಪಾರ ನಡೆಸುವುದಕ್ಕೆ ಏನು ತೊಂದರೆ ಇದೆಯೆಂದು ನಾನು ಹೇಳುತ್ತೇನೆ. ಈಗ ಎಲ್ಲರೂ ಸಹ ವ್ಯಾಪಾರಕ್ಕೆ ಇಳಿದಿದ್ದಾರೆ. ಆದರೆ, ಇದಕ್ಕೆ ಒಂದು ಧರ್ಮದ ರೂಪ ಕೊಟ್ಟು, ಏನೋ ನಾವು ಒಂದು ಧರ್ಮದ ಕೆಲಸ ಮಾಡುತ್ತಿದ್ದೇವೆ ಎನ್ನುವ ತಪ್ಪು ಭಾವನೆ ಮೂಡಿಸುವುದಕ್ಕಿಂತಲೂ ಎಲ್ಲಾ ಧರ್ಮದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರ ವಿಶ್ವಾಸವನ್ನು ಪಡೆದುಕೊಂಡು ಇಂತಹ ಒಂದು ಕಾನೂನನ್ನು ತರುತ್ತಿದ್ದೇವೆಂದರೆ, ಮುಂಚೂಣಿಯಲ್ಲಿ ನಾವೇ ನಿಂತು ಸರ್ಕಾರಕ್ಕೆ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆಂದು ಹಾಗೂ ದೇವರು ಇವರಿಗೆ ಸದ್ಬುದ್ಧಿ ಕೊಡಲಿ ಎಂದು ಶ್ರೀ ಬಸವಣ್ಣನವರ ಹೆಸರಿನಲ್ಲಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ರಾಷ್ಟ್ರೀಯ ಸಂವಿಧಾನದ ಆರ್ಟಿಕಲ್ 48 ರ ಪ್ರಕಾರ, "ಕೃಷಿ ಮತ್ತು ಪಶುಸಂಗೋಪನೆಯ ಸಂಘಟನೆ, ರಾಜ್ಯ ಕೃಷಿಯನ್ನು ಮತ್ತು ಪಶುಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಘಟನೆಗೊಳಿಸುವುದಕ್ಕಾಗಿ ಪ್ರಯತ್ನಿಸತಕ್ಕದ್ದು ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ, ಸುಧಾರಣೆಗೊಳಿಸುವುದಕ್ಕಾಗಿ ಹಸುಗಳ ಮತ್ತು ಕರುಗಳ ಮತ್ತು ಇತರೆ ಹಾಲು ಕೊಡುವ ಮತ್ತು ಭಾರ ಎಳೆಯುವ ಜಾನುವಾರಗಳ ವಧೆಯನ್ನು ನಿಷೇಧಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುವಂಥದ್ದು" ಎಂದು ಇದೆ. ಯಾವುದಾದರೂ ಸರ್ಕಾರ ಕಾನೂನು, ಕಾಯಿದೆಗಳನ್ನು ಜಾರಿಗೊಳಿಸುವಾಗ, ಅದರಿಂದ ಜನಸಾಮಾನ್ಯರಿಗೆ ಎಷ್ಟು ಅನುಕೂಲವಾಗುತ್ತದೆ ಎನ್ನುವುದನ್ನು ನೋಡುತ್ತಾರೆಯೇ ವಿನಃ, ಜನಸಾಮಾನ್ಯರಿಗೆ ತೊಂದರೆ ಏನಾಗುತ್ತದೆ ಅಥವಾ ತೊಂದರೆ ಹೇಗೆ ಕೊಡಬೇಕು ಎನ್ನುವುದನ್ನು ನೋಡುವುದಿಲ್ಲ. ಒಳ್ಳೆಯ ಓಪನಿಂಗ್ ಬ್ಯಾಟ್ಸ್‌ಮನ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಸಚಿನ್ ತೆಂಡುಲ್ಕರ್‌ರವರ ರೀತಿ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಈ ವಿಧೇಯಕವನ್ನು ಪೈಲೆಟ್ ಮಾಡುವುದಕ್ಕೆ ಬಿಟ್ಟಿರುತ್ತಾರೆ. ಈ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುತ್ತಿಲ್ಲ. ಅದೇನೆಂದರೆ, ಭಾರತೀಯ ಜನತಾ ಪಾರ್ಟಿ ಸರ್ಕಾರ ಇಲ್ಲಿದೆ, ಈ ಕಾನೂನನ್ನು ಯಾರ ಬೇಡಿಕೆಯ ಮೂಲಕ ತಿದ್ದುಪಡಿಗೆ ತಂದಿರುತ್ತಾರೆ? ಒಂದು ವೇಳೆ ಈ ಬಗ್ಗೆ ರೈತರು ಕೇಳಿದ್ದಾರೆಯೇ, ಹಸುಗಳನ್ನು ಸಾಗಣೆ ಮಾಡುವವರು ಯಾರಾದರೂ ಕೇಳಿದ್ದಾರೆಯೇ ಅಥವಾ ಅವರ ಸಿದ್ಧಾಂತ ಏನಿದೆ... ಏಕೆಂದರೆ, ಹಿಂದೂ ಧರ್ಮದ ಸಿದ್ಧಾಂತ ಎಂದರೆ ನಾನು ತಿಳಿದುಕೊಂಡಿರುವುದೇನೆಂದರೆ, ಅದು ಸ್ವಾಮಿ ವಿವೇಕಾನಂದರ ಸಿದ್ಧಾಂತ ಎಂದು ತಿಳಿದುಕೊಂಡಿದ್ದೇನೆ. ಹಿಂದುತ್ವದ ಸಿದ್ಧಾಂತ ಎಂದು ಹೇಳಿದರೆ, ಅದು ಶ್ರೀ ಸಾವರ್ಕರ್ ಸಿದ್ಧಾಂತ ಎಂದು ತಿಳಿದುಕೊಂಡಿದ್ದೇನೆ. ಅದರಂತೆ, ಹಿಂದೂ ಧರ್ಮದ ಸಿದ್ಧಾಂತ ಎಂದು ಹೇಳುವುದಾದರೆ, *The Complete Works of Swami Vivekananda, Volume 3, at Page 536,* ಪುಸ್ತಕದಲ್ಲಿ Hinduism's greatest propagator Swami Vivekananda ಏನು ಹೇಳುತ್ತಾರೆಂದರೆ:

> "You will be surprised to know that according to ancient Hindu rites and rituals, a man cannot be a good Hindu who does not eat beef."

ಅದೇ ರೀತಿ, ಸಾವರ್ಕರ್‌ರವರ ಹಿಂದುತ್ವದ ಸಿದ್ಧಾಂತ... ಏಕೆಂದರೆ, ಹಿಂದೂ ಧರ್ಮಕ್ಕೂ, ಹಿಂದುತ್ವಕ್ಕೂ ಬಹಳಷ್ಟು ವ್ಯತ್ಯಾಸ ಇರುತ್ತದೆ. ಅದರಂತೆ, ಸ್ವಾಮಿ ವಿವೇಕಾನಂದರು ಹೇಳಿದ ಹಿಂದೂ ಧರ್ಮದ ಬಗ್ಗೆ ಹೇಳುತ್ತಾರೆ, ಅದಕ್ಕೆ ಯಾರೂ ಸಂಸ್ಥಾಪಕರು ಇರುವುದಿಲ್ಲ. ಆದರೆ, 'ಹಿಂದುತ್ವ' ದ ಸಂಸ್ಥಾಪಕರಿದ್ದು, ಅದು ಶ್ರೀ ಸಾವರ್ಕರ್ ಆಗಿರುತ್ತಾರೆ. ಅದಕ್ಕೆ 1923ನೇ ಇಸವಿಯಲ್ಲಿ ಸಂಸ್ಥಾಪನೆ ಮಾಡಿರತಕ್ಕಂಥದ್ದು ಇದೆ. ಶ್ರೀ ಪ್ರಭು ಚವ್ಹಾಣ್‌ರವರಿಗೆ ಮರಾಠಿ ಭಾಷೆ ಬರುತ್ತದೆಯೆಂದು ಕಾಣುತ್ತದೆ. ಹಾಗಾಗಿ, ಇದು ಚೆನ್ನಾಗಿ ಅರ್ಥವಾಗುತ್ತದೆ. ಅದರಲ್ಲಿ ಏನು ಹೇಳಿದ್ದಾರೆಂದರೆ, "ಗೋಪಾಲನ್ ಹವೇ, ಗೋಪೂಜಾ ನವೇ" ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ, ಶ್ರೀ ಸಾವರ್ಕರ್‌ರವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ *Samaj chitre or portraits of society, Samagra Savarkar Vangmaya, Vol.2,* ಪುಸ್ತಕದ 678ನೇ ಪುಟದಲ್ಲಿ ಅವರು ಏನು ಹೇಳುತ್ತಾರೆಂದರೆ:

> "Cow is worthy of protection so long as this serves humanitarian and national interests. ..."

ಇದರ ಜೊತೆಗೆ *Samagra Savarkar Vangmaya, Vol.3,* ಪುಸ್ತಕದ 341ನೇ ಪುಟದಲ್ಲಿ ಅವರು ಏನು ಹೇಳುತ್ತಾರೆಂದರೆ:

> "When humanitarian interests are not served and in fact harmed by the cow and when humanism is shamed, self-defeating extreme cow protection should be rejected."

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈಗಾಗಲೇ ನಾನು ಹೇಳಿದ ಹಾಗೆ, ಈ ವಿಧೇಯಕ ತರಬೇಕೆಂದು ರೈತರ ಬೇಡಿಕೆ ಇತ್ತೇ ಅಥವಾ ಗೋಪಾಲಕರ ಬೇಡಿಕೆ ಇತ್ತೇ ಎಂದು ಕೇಳಿರುತ್ತೇನೆ. ಈಗಾಗಲೇ ಮಾನ್ಯ ಇಬ್ರಾಹಿಂರವರು ಮಾತನಾಡುತ್ತಾ, ರಾಜ್ಯದಲ್ಲಿ ಸುಮಾರು 80 ಲಕ್ಷ ಜನ ಗೋಪಾಲಕರು ಇದ್ದಾರೆಂದು ಹೇಳಿರುತ್ತಾರೆ. ಅಲ್ಲದೇ, ಈ ಬಗ್ಗೆ ಮಾನ್ಯ ಸುಪ್ರೀಂ ಕೋರ್ಟ್ ಸಹ ಒಂದು ನಿರ್ದೇಶನ ನೀಡಿರುತ್ತದೆ. ಏಕೆಂದರೆ, ಸರ್ಕಾರದ ಆದ್ಯತೆ ಏನು ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕು. ಅದರಂತೆ, ಮಾನ್ಯ ಸುಪ್ರೀಂ ಕೋರ್ಟ್ ಪ್ರಕರಣ (Tehseen Poonawalla and others) ಒಂದರಲ್ಲಿ ಒಂದು ನಿರ್ದೇಶನ ನೀಡಿರುತ್ತದೆ. In the said case, the Apex Court condemned the case of mobocracy and asked the Parliament to draft a new law. Condemning the ever-increasing incidents of mob lynching, especially under the garb of cow protection, the Supreme Court took cognizance of the 'rising intolerance and growing polarisation' prevailing in the Indian Society. ಅದರಂತೆ, ರಸ್ತೆಯಲ್ಲಿ ಹಸುವಿನ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುತ್ತಿದ್ದಾರೆ. ಅದಕ್ಕೆ ಯಾವುದಾದರೂ ಒಂದು ಕಾನೂನು ತರಬೇಕೆಂದು ಮಾನ್ಯ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿರುತ್ತದೆ. ಅದರ ಬಗ್ಗೆ ಕಾನೂನು ತಂದಿದ್ದರೆ ನಮಗೆ ಬಹಳ ಸಂತೋಷವಾಗುತ್ತಿತ್ತು. ಆದರೆ, ತಾವು ಮನುಷ್ಯರನ್ನು ಕೊಲ್ಲುವುದು ಹಾಗೆಯೇ ಇರಲಿ, ಹಸುಗಳನ್ನು ಕೊಲ್ಲಬಾರದೆಂದು ಕಾನೂನು ತಂದಿದ್ದಾರೆ. ಅದು ಸರ್ಕಾರಕ್ಕೆ ಬಿಟ್ಟಂತಹ ವಿಷಯ.

ಈ ಹಸುವಿನ ಬಗ್ಗೆ ಯಾರಿಗಾದರೂ ಮಾತನಾಡತಕ್ಕಂತಹ ಹಕ್ಕು ಇದೆಯೆಂದು ಹೇಳುವುದಾದರೆ, ಅದು ರೈತರಿಗೆ ಮಾತ್ರ. ಇದರಲ್ಲಿ ಬೇರೆ ಯಾರಿಗಾದರೂ ಹಕ್ಕು ಇರುವುದಿಲ್ಲ. ಅದು ಸಹ ನಮ್ಮ ಮಾನ್ಯ ಮಂತ್ರಿಗಳು ಮಾತನಾಡುತ್ತಾ, "ನಾನು ಉತ್ತರಪ್ರದೇಶಕ್ಕೆ ಹೋಗಿದ್ದೆ, ಗುಜರಾತ್ ಪ್ರದೇಶಕ್ಕೆ ಹೋಗಿದ್ದೆನು" ಎಂದು ಹೇಳಿದರು. ಅವರು ಎಂತಹ ಪ್ರದೇಶದ ಹೆಸರು ಹೇಳಿದರು ಸ್ವಾಮಿ? ಏಕೆಂದರೆ, ಉತ್ತರಪ್ರದೇಶ ಎಂದು ಹೇಳಿದರೆ ಅದು 'ಉಲ್ಟಾ ಪ್ರದೇಶ' ಎಂದು ಹೇಳುತ್ತಾರೆ. ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಎಂದು ಹೇಳಿದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. **(ಗೊಂದಲ)** ಯಾವಾಗಲೂ ನಡೆದುಕೊಂಡು ಬಂದಿರುತ್ತದೆ. ಅದು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಅದೇ ರೀತಿ ಹಾಗೂ ಇವರ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಅದೇ ರೀತಿ ಇರುತ್ತದೆ. ಆ ರಾಜ್ಯ ನಮಗೆ ಮಾದರಿಯಾಗುವುದಕ್ಕೆ ಸಾಧ್ಯವಿಲ್ಲ. ನಾವು ಇದ್ದಾಗಲೂ ಮಾದರಿ ಇಲ್ಲ ಹಾಗೂ ಇವರ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಅದು ಮಾದರಿಯಾಗುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆದರೆ, ಈಗ ಮಾದರಿ ಆಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅದು ಸಾಧ್ಯವೇ ಇಲ್ಲ. ಏಕೆಂದರೆ, ಅಲ್ಲಿ ಒಬ್ಬ ಬಿ.ಜೆ.ಪಿ. ಪಕ್ಷದ ಎಂ.ಪಿ., ಒಂದು ಮಹಿಳೆಯನ್ನು ರೇಪ್ ಮಾಡಿದರೂ ಸಹ, ಅವರ ವಿರುದ್ಧ ಒಂದು ವರ್ಷದವರೆಗೂ ಎಫ್.ಐ.ಆರ್., ಆಗಿರುವುದಿಲ್ಲ. ಅದೇ ರೀತಿ ಅಲ್ಲಿ ಮಾದರಿ ಆಗುತ್ತಿರುವುದು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅದೇ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಒಂದು ಡಾಬಾದಲ್ಲಿ ಮಹಿಳೆಯನ್ನು ತಂದೂರಿ ಒಲೆಯಲ್ಲಿ ಸುಟ್ಟಿದ್ದನ್ನು ನಾವು ಕೂಡ ನೋಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬಲ್‌ರಾಮ್‌ಪುರದಲ್ಲಿ mass rape ಆಯಿತು. ಹಾಗಾಗಿ, ನಮಗೆ ಉತ್ತರಪ್ರದೇಶ ಮಾದರಿ ಬೇಕಾಗಿರುವುದಿಲ್ಲ. **(ಗೊಂದಲ)** ಒಂದು ವೇಳೆ ಯು.ಪಿ. ಮಾದರಿ ತರುವುದಿದ್ದರೆ, ಅದೆಲ್ಲವೂ ನಮ್ಮ ಹೆಣದ ಮೇಲೆ ನಡೆಯುತ್ತದೆಯೇ ವಿನಃ, ಆ ರೀತಿ ನಮ್ಮ ಕರ್ನಾಟಕ ರಾಜ್ಯ ಮಾದರಿ ಆಗುವುದಕ್ಕೆ ಬಿಡುವುದೇ ಇಲ್ಲ. ಅದು ಯು.ಪಿ., ಮಾದರಿಯಾಗಿ ನಮ್ಮ ಹೆಣದ ಮೇಲೆಯೇ ಆಗಬೇಕಾಗುತ್ತದೆ. ಅದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅದರಲ್ಲಿ ವಿಚಿತ್ರ ಏನೆಂದರೆ, ಇಷ್ಟೆಲ್ಲಾ ಚರ್ಚೆಯಾಗುತ್ತಿದೆ. ಆದಾಗ್ಯೂ, ಈ ಬಗ್ಗೆ ಯಾವುದೇ ರೈತ ನಾಯಕರಲ್ಲಿ ಮಾತನಾಡಿರುವುದಿಲ್ಲ, ಗೋಪಾಲಕರಲ್ಲಿ ಮಾತನಾಡಿರುವುದಿಲ್ಲ. ಅದರ ಬದಲಾಗಿ, ಗೋಶಾಲೆ ನಡೆಸತಕ್ಕಂತಹವರು ಸೂಪರ್ ಕ್ಲಾಸ್ ಯಾರು ಇರುತ್ತಾರೆ, ಅದರಲ್ಲಿ ಮೆಜಾರಿಟಿ ಸಂಘ ಪರಿವಾರದವರೇ ಇರುವುದು. ಇವರಲ್ಲಿ ಚರ್ಚೆ ಮಾಡಿ ಈ ಕಾನೂನನ್ನು ತರುತ್ತಾರೆ. ಅವರು ಯಾವತ್ತು ಸಹ ಫೋಟೋದಲ್ಲಿ ಮಾತ್ರ ಹಸುವಿಗೆ ಹುಲ್ಲು ಹಾಕುವುದಕ್ಕೆ ಬರುತ್ತಾರೆ. ಅವರು ಯಾವತ್ತೂ ಸಹ ಸಗಣಿ ತೆಗೆದವರು ಅಲ್ಲ, ಗಂಜಲ ಬಳಿದವರು ಅಲ್ಲ ಅಥವಾ ಅವುಗಳನ್ನು ಸಾಕಿದವರೂ ಅಲ್ಲ. ಇವರಿಗೋಸ್ಕರ ಮಾತ್ರ ಈ ಕಾನೂನನ್ನು ತರುತ್ತಿದ್ದಾರೆ.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ರೀತಿಯ ಉಲ್ಲೇಖ ಮಾಡುವುದು ಸರಿ ಇರುವುದಿಲ್ಲ.

**(ಗೊಂದಲ)**

**ಶ್ರೀ ಆರ್. ಅಶೋಕ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಲ್ಲಿರುವವರ ಬಗ್ಗೆ ಮಾತನಾಡಲಿ. ಸಂಘ ಪರಿವಾರ ಎನ್ನುವುದು ಒಂದು ಸಾರ್ವಜನಿಕ ಸಂಸ್ಥೆ. ಹಾಗಾಗಿ, ಆ ಸಂಸ್ಥೆಯ ಬಗ್ಗೆ ಪ್ರಸ್ತಾಪ ಸಂಘ ಪರಿವಾರ, ಆರ್.ಎಸ್.ಎಸ್., ಎನ್ನುವುದು ಇಲ್ಲಿ ಬೇಡ ಎಂದು ಅನ್ನಿಸುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಆರ್.ಎಸ್.ಎಸ್., ಗೆ ಬಂದಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಅವರು ಮಾತನಾಡುವುದಾದರೆ, ಕಾಂಗ್ರೆಸ್ ಸರ್ಕಾರದವರು ಹಸುಗಳಿಗೆ ಎಷ್ಟು ಹುಲ್ಲು ಹಾಕಿದ್ದರು, ಶ್ರೀ ರಾಹುಲ್ ಗಾಂಧಿ ಎಷ್ಟು ಹುಲ್ಲು ಹಾಕಿದ್ದರು, ಶ್ರೀಮತಿ ಇಂದಿರಾಗಾಂಧಿಯವರು ಎಷ್ಟು ಹುಲ್ಲು ಹಾಕಿದ್ದರು ಎಂಬ ಬಗ್ಗೆ ಎಲ್ಲವನ್ನೂ ನಾವು ಸಹ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹೇಳಲಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ದೇಶದ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮಂಗಳೂರಿನಲ್ಲಿ...

**(ಗೊಂದಲ)**

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಹಾಗಾಗಿ ಈ ವಿಧೇಯಕದಲ್ಲಿ ತಂದಿರುವ ತಿದ್ದುಪಡಿ ಬೇಕೋ ಅಥವಾ ಬೇಡವೋ ಎಂಬ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸಮಗ್ರವಾದ ಚರ್ಚೆಯಾಗಲಿ. ನಾವು ಚರ್ಚೆ ಮಾಡುತ್ತೇವೆ. ಆಡಳಿತ ಪಕ್ಷದವರು ಚರ್ಚೆ ಮಾಡಲಿ.

**(ಗೊಂದಲ)**

(ಮುಂದುವರೆದಿದೆ)

(232) 08.02.2021 5.50 ವೈಎಲ್-ಎಕೆ

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರದ ಗಮನ ಸೆಳೆಯಲಿ. ಈ ವಿಧೇಯಕದಿಂದ ಏನೇನು ಅನಾಹುತ ಆಗುತ್ತದೆ ಎಂಬುದರ ಬಗ್ಗೆ ಮಾತನಾಡಲಿ. ಏಕೆಂದರೆ ಅವರು ವಿರೋಧ ಪಕ್ಷದಲ್ಲಿರುವುದರಿಂದ ಮಾನ್ಯ ಸದಸ್ಯರು ವಿರೋಧ ಮಾಡಲೇಬೇಕು, ವಿರೋಧ ಮಾಡೇ ಮಾಡುತ್ತಾರೆ. ಆದ್ದರಿಂದ ವಿಧೇಯಕಕ್ಕೆ ಸಂಬಂಧಿಸಿದಂತೆ ಮಾತನಾಡಲಿ. ಅದು ಬಿಟ್ಟು ಪರಿವಾರ ಸಂಘದ ಬಗ್ಗೆ ಮಾತನಾಡಿದರೆ, ನಾವು ಸಹ ಅವರಿಗಿಂತ ಜೋರಾಗಿಯೇ ಮಾತನಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾತನಾಡಲಿ. ಮಾತನಾಡುವುದಕೋಸ್ಕರವೇ ಈ ಸದನ ಇರುವುದು.

**ಹಂಗಾಮಿ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೆ ಟೀಕೆಗಳು ಆರೋಗ್ಯಕರವಾಗಿರಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸದನ ಇರುವುದೇ ಮಾತನಾಡುವುದಕೋಸ್ಕರ ಹಾಗೂ ಮಾತನ್ನು ಕೇಳುವುದಕೋಸ್ಕರ.

**ಶ್ರೀ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಟೀಕೆಗಳನ್ನು ನಡೆಸುವುದಕೋಸ್ಕರವೇ ಸದನ ನಡೆಸುವುದಾದರೆ, ಆರಾಮವಾಗಿ ನಾವು ಮಾತನಾಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆದುದರಿಂದ ಯಾವುದೇ ರೈತರಿಗೆ,...

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ರಾಹುಲ್‌ಗಾಂಧಿಯವರು ಹಸು ಸಾಕಿದ್ದಾರೆಯೇ? ರಾಹುಲ್‌ಗಾಂಧಿಯವರು ಗಂಜಲ ಹಿಡಿದಿದ್ದಾರೆಯೇ? ಶ್ರೀಮತಿ ಇಂದಿರಾಗಾಂಧಿಯವರು ಹಸು ಸಾಕಿದ್ದಾರೆಯೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ರೀತಿ ಇಷ್ಟ ಬಂದ ಹಾಗೆ ಮಾತನಾಡುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಸೋನಿಯಾಗಾಂಧಿಯವರು ಏನಾದರೂ ಹಸುಗಳಿಗೆ ಮೇವು ಹಾಕಿದ್ದಾರೆಯೇ? ಶ್ರೀಮತಿ ಸೋನಿಯಾಗಾಂಧಿಯವರು ಎಷ್ಟು ಹಸುಗಳನ್ನು ಸಾಕಿದ್ದಾರೆ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ನಮ್ಮ ಊರಿನ ಹೋಟೆಲ್‌ಗಳಿಗೆ ಹೋಗಿ...

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಾಗ ಈ ರೀತಿ ಎದ್ದು disturb ಮಾಡುವುದು ಸರಿಯಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅದನ್ನು ಅವರು ಸಹ ನೋಡಿದ್ದಾರೆ.

**(ಗೊಂದಲ)**

**ಶ್ರೀ ಪ್ರಭು ಬಿ. ಚವ್ಹಾಣ್(ಪಶುಸಂಗೋಪನಾ ಹಾಗೂ ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಮಾತನಾಡಲಿ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ತಿಮ್ಮಾಪೂರರವರೆ ಕುಳಿತುಕೊಳ್ಳಿ. ಮಾನ್ಯ ಹರಿಪ್ರಸಾದ್‌ರವರೆ ಮಾತನ್ನು ಮುಂದುವರೆಸಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು ಹೇಳುವುದು ಏನೆಂದು ನನಗೆ ಗೊತ್ತಿದೆ. ನಾನು ವಿಧೇಯಕದ ಬಗ್ಗೆ ಮಾತನಾಡುತ್ತಿರುವುದು.

**ಹಂಗಾಮಿ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೆ ಟೀಕೆಗಳು ಆರೋಗ್ಯಕರವಾಗಿರಲಿ ನಿಮ್ಮ ಮಾತನ್ನು ಮುಂದುವರೆಸಿ. ತಾವು yield ಆದರೆ ನನಗೆ ಗೊತ್ತಿಲ್ಲ. ಹಾಗಾಗಿ ತಾವು yield ಆಗದೇ ಮಾತನಾಡಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ರಾಹುಲ್‌ಗಾಂಧಿಯವರಾಗಲಿ ಹಾಗೂ ಶ್ರೀಮತಿ ಸೋನಿಯಾಗಾಂಧಿಯವರಾಗಲಿ ಗೋ ಶಾಲೆಯನ್ನು ನಡೆಸುತ್ತಿಲ್ಲ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೆ ತಾವು yield ಆದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ತಾವು yield ಆಗದೇ ಮಾತನ್ನು ಮುಂದುವರೆಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾವ ಸಂಘ ಪರಿವಾರದಲ್ಲಿ ಗೋ ಶಾಲೆಗಳನ್ನು ನಡೆಸುತ್ತಿದ್ದಾರೆಯೋ, ಅವರು ತಲೆಯೇ ಎತ್ತಲಿಲ್ಲಾ ಎಂದು ಹೇಳುತ್ತೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯ ಸಾಮಾಜಿಕ, ಆರ್ಥಿಕ,...

**ಶ್ರೀ ಆರ್.ಅಶೋಕ್:-** ಮಾನ್ಯ ನಾರಾಯಣಸ್ವಾಮಿಯವರೇ ತಮ್ಮ ಗುರುತು ಹಸು-ಕರು.

**ಶ್ರೀ ಎಂ.ನಾರಾಯಣಸ್ವಾಮಿ:-** ಹೌದು.

**ಶ್ರೀ ಆರ್.ಅಶೋಕ್:-** ಅದನ್ನೇ ಕೊಲ್ಲಬೇಕೆಂದು ಹೇಳುತ್ತೀರಲ್ಲಾ?

**ಶ್ರೀ ಎಂ.ನಾರಾಯಣಸ್ವಾಮಿ:-** ಕೊಲ್ಲುವುದಕ್ಕೆ ಧೈರ್ಯ ಇಲ್ಲ ಸ್ವಾಮಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರ ಕಾಂಗ್ರೆಸ್ ಗುರುತು ಏನಾಗಿತ್ತು? ಹಸು-ಕರು ಕಥೆ ಏನಾಗಿತ್ತು, ಜೋಡೆತ್ತು ಕರು-ಕಥೆ ಅಬ್ಬೇಪಾರಿ ಆಗಿ ಹೋಗಿತ್ತಲ್ಲಾ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಹಸು-ಕರುವಿನ ಕಥೆಯಲ್ಲಿ ಏನು ಮಾಡುವುದಕ್ಕೆ ಹೊರಟ್ಟಿದ್ದಾರೆ ಎಂಬುದನ್ನು ನಾವು ಇಲ್ಲಿ ಹೇಳುತ್ತಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸಾಮಾಜಿಕವಾಗಿ ಆಗಲಿ ಹಾಗೂ ಆರ್ಥಿಕವಾಗಲಿ ಯಾವುದಾದರೂ ಒಂದು ವಿಚಾರವನ್ನು ತೆಗೆದುಕೊಂಡಾಗ, ಅದರ ಬಗ್ಗೆ ಒಳ್ಳೆಯ ವಿಚಾರವನ್ನು ತಿಳಿದುಕೊಂಡು ಅಧ್ಯಯನ ಮಾಡಿ ಈ ವಿಧೇಯಕವನ್ನು ತಂದಿದ್ದರೆ ಯಾರ ಅಭ್ಯಂತರವು ಇರಲಿಲ್ಲ. ಯಾವುದೋ five-star ಗೋ ಶಾಲೆಗಳೇನಿವೆ, ಅದಕೋಸ್ಕರ ಈ ವಿಧೇಯಕವನ್ನು ತಂದಿದ್ದಾರೆ. ಗೋ ರಕ್ಷಕರು ಯಾರೆಂದರೆ, ಭಜರಂಗ ದಳದವರು, ಹಿಂದೂ ವಿಶ್ವ ಪರಿಷತ್ತಿನವರು. ಹಾಗಾಗಿ, ಅವರಿಗೋಸ್ಕರ ಈ ಉದ್ಯೋಗವನ್ನು ತರಲಾಗುತ್ತಿದೆ. ಏಕೆಂದರೆ, pakoda economics ಆಗಿತ್ತು, ಈಗ ಮತ್ತೊಂದು ಉದ್ಯೋಗ ಜಾರಿ ಮಾಡುತ್ತಿದ್ದಾರೆ. ನಿರುದ್ಯೋಗಗಳಿಗೆ ಏನಾದರೂ ಉದ್ಯೋಗ ನೀಡಬೇಕೆಂದು ಈ ರೀತಿ ಮಾಡುತ್ತಿದ್ದಾರೆ. ಅದಲ್ಲದೇ, ಮಾನ್ಯ ಸಚಿವರು ಗೋ ಶಾಲೆಗಳನ್ನು ನಿರ್ಮಿಸುತ್ತೇವೆ ಎಂದು ಹೇಳಿದರು. ಸರ್ವೇ ಏನೆಂದು ಹೇಳುತ್ತದೆ? ಪ್ರತಿ ವರ್ಷ 3:4 ಗಂಡು ಕರುಗಳಿವೆ. 3.5 crore cattle will reach reproductive age every year. The average lifespan of a bull is ten years. ಇವೆಲ್ಲವೂ ಸೇರ್ಪಡೆಗೊಂಡಾಗ ಆರು ಕೋಟಿಗಿಂತ ಹೆಚ್ಚಾಗಿ ಪಶು ಸಂಪತ್ತು ಇದೆ. ಇದನ್ನು ನೋಡಿಕೊಳ್ಳುವವರಿಗೆ ರೂ.100.00 ನೀಡಿದರೆ ಎಷ್ಟಾಗುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.36,500 ಕೋಟಿ ರೂಪಾಯಿ ಬೇಕಾಗುತ್ತದೆ. ಗೋ ಶಾಲೆ ಎಂದು ಹೇಳುತ್ತಾರೆ. ಈ ದೇಶದಲ್ಲಿ 18,000 ವೃದ್ಧಾಶ್ರಮಗಳಿವೆ. ಈ ದೇಶದಲ್ಲಿ ವಯಸ್ಸಾದ ತಂದೆ–ತಾಯಿಗಳನ್ನು ಮನೆಗಳಲ್ಲಿ ಸಾಕುವುದಕ್ಕೆ ಆಗದೇ ಇರುವಂಥವರನ್ನು ನಾವು ನೋಡಿದ್ದೇವೆ, ಹೀಗಿರುವಾಗ ಹಸುಗಳನ್ನು ಸಾಕುವುದರ ಬಗ್ಗೆ ಹೇಳುತ್ತಿದ್ದಾರೆ. ಜನ್ಮ ಕೊಟ್ಟ ತಂದೆ–ತಾಯಿಗಳನ್ನು ಸಾಕುವುದರ ಬಗ್ಗೆ ಯಾರಿಗೂ ಬುದ್ಧಿ ಹೇಳುತ್ತಿಲ್ಲ. ಇನ್ನೂ ಹೆಚ್ಚಿನ ವಿಚಾರವನ್ನು ಹೇಳುವುದಾದರೆ, ಯಾವ್ಯಾವ ರಾಜ್ಯದಲ್ಲಿ ಏನೇನಿದೆ ಎಂಬುದನ್ನು ಸಹ ಹೇಳಬಲ್ಲೆ. ಕರ್ನಾಟಕ ರಾಜ್ಯದಲ್ಲಿ 1964ನೇ ಸಾಲಿನಿಂದ ಸಹ ಗೋಹತ್ಯಾ ನಿಷೇಧ ಕಾನೂನು ಜಾರಿಯಲ್ಲಿದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಈಗಾಗಲೇ 'ಒಬ್ಬ ಡಾಕ್ಟರ್ ಆಗಲಿ, ಅಧಿಕಾರಿಯಾಗಲಿ, ಗೋವುಗಳನ್ನು ಪ್ರಮಾಣಿಕರಿಸಿ, ಅವುಗಳು ಹತ್ಯೆಗೆ ಯೋಗ್ಯ ಎಂದು ಕಂಡು ಬಂದಲಿ, ಅವುಗಳನ್ನು ಕರೆದುಕೊಂಡು ಹೋಗಿ ಹತ್ಯೆ ಮಾಡಬಹುದು' ಎಂಬ ಮಾತನ್ನು ಹೇಳಿದ್ದಾರೆ. ಆ ರೀತಿ ಹತ್ಯೆ ಮಾಡುವ ಗೋವುಗಳಿಗೆ ಕನಿಷ್ಠ ಪಕ್ಷ 12 ವರ್ಷ ವಯಸ್ಸಾಗಿರಬೇಕು ಎಂದು ಹೇಳಿದರು. ಗೋಹತ್ಯಾ ನಿಷೇಧವನ್ನು ಮುಸ್ಲಿಂಮರು ಮತ್ತು ಕ್ರಿಶ್ಚಿಯನರು ವಿರೋಧಿಸುತ್ತಾರೆ ಎಂಬ ತಪ್ಪು ಕಲ್ಪನೆ ಇದೆ. ದನದ ಮಾಂಸವನ್ನು ನಿತ್ಯಾ ಆಹಾರವಾಗಿ ಬಳಸುತ್ತಿರುವವರಲ್ಲಿ ಶೂದ್ರರು ಮತ್ತು ದಲಿತರು ಸಹ ಒಳಗೊಂಡಿದ್ದಾರೆ. ಕೇವಲ ಅಲ್ಪಸಂಖ್ಯಾತರು ಮಾತ್ರ ಇಲ್ಲ. ಗೋ ಮಾಂಸ ತಿನ್ನುವವರು ಗಣನೀಯವಾಗಿದ್ದಾರೆ. ಏತಕ್ಕೆ ಗೋ ಮಾಂಸ ತಿನ್ನುತ್ತಾರೆ ಎಂದರೆ, ಅದರ ರುಚಿಯಿಂದ ಅಥವಾ ನೋವು ಉಂಟು ಮಾಡಬೇಕೆಂದು ಹತ್ಯೆ ಮಾಡುವುದಿಲ್ಲ. ಇದು ಬಹಳ ಕಡಿಮೆ ಬೆಲೆಗೆ ಸಿಗುತ್ತದೆ.

ಅಷ್ಟೊಂದು ಕಾಳಜಿ ಇದ್ದರೆ ಕುರಿ, ಮೇಕೆ, ಕೋಳಿ ಬೆಲೆ ಕಡಿಮೆ ಮಾಡಲಿ, ಆಗ ಶೂದ್ರರು, ದಲಿತರು ಹಸು ತಿನ್ನುವುದನ್ನು ಬಿಟ್ಟು ಬಿಡುತ್ತಾರೆ. ಇದರ ಕಡೆ ಸರ್ಕಾರ ಗಮನಹರಿಸುತ್ತಿಲ್ಲ. ಅದಲ್ಲದೇ ಇಡೀ ಪ್ರಪಂಚದಲ್ಲಿಯೇ ಈ ದೇಶದಿಂದಲೇ ಹೆಚ್ಚಾಗಿ ಗೋಮಾಂಸವನ್ನು ರಫ್ತು ಮಾಡಲಾಗುತ್ತದೆ. ಹಾಗಾಗಿ ಸರ್ಕಾರ ಮೊದಲು ರಫ್ತಾಗುವ ಗೋಮಾಂಸವನ್ನು ಬ್ಯಾನ್ ಮಾಡಬೇಕಾಗಿತ್ತು. ಕೇಂದ್ರದಲ್ಲಿಯು ಸಹ ಇವರದೇ ಸರ್ಕಾರ ಅಸ್ತಿತ್ವದಲ್ಲಿದ್ದು, ಅದನ್ನು ಬ್ಯಾನ್ ಮಾಡಲಿಲ್ಲ. ಇವರದು most powerful ಸರ್ಕಾರ. ಅದನ್ನು ಬ್ಯಾನ್ ಮಾಡುವುದನ್ನು ಬಿಟ್ಟು, ಈ ದೇಶದಿಂದ ಶೇ.13 ರಷ್ಟು ಚರ್ಮವನ್ನು ರಫ್ತು ಮಾಡಲಾಗುತ್ತಿದೆ, ಸುಮಾರು 30 ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಿದೆ. ಇದರ ಬಗ್ಗೆ ಚಿಂತನೆ ಮಾಡದೇ ಈ ರೀತಿ ತಂದಿರುವ ಕಾನೂನು ಏನಿದೆ, ಇದು ಕೇವಲ ಕೆಲವೇ ಕೆಲವು ವಿಚಾರದಲ್ಲಿ ಕೆಲವರಿಗೆ ನೋವುಂಟು ಮಾಡುವುದಕೋಸ್ಕರ ಈ ವಿಧೇಯಕವನ್ನು ತಂದಿದ್ದಾರೆ. 1955–56ರ ನಡುವಿನಲ್ಲಿ ಹಲವಾರು ರಾಜ್ಯಗಳಲ್ಲಿ ಗೋಹತ್ಯಾ ನಿಷೇಧ ಕಾನೂನುಗಳು ಜಾರಿಗೆ ಬಂದವು. ಅವುಗಳಲ್ಲಿ ಬಿಹಾರ ಸರಕಾರವು ಮಾಡಿದ ಕಾನೂನಿನ ವಿರುದ್ಧ ದಾವೆಯೊಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. 1959ರ ಮುಹಮ್ಮದ್ ಹನೀಫ್ ಖುರೇಷಿ ಮತ್ತು ಬಿಹಾರ ರಾಜ್ಯದ ನಡುವಿನ ಆ ಪ್ರಕರಣದಲ್ಲಿ ನಿರ್ಣಯವನ್ನು ನೀಡುವಾಗ ವರಿಷ್ಠ ನ್ಯಾಯಾಲಯವು ಗೋಹತ್ಯಾ ನಿಷೇಧದ ಬಗ್ಗೆ ಹೀಗೆ ಅಭಿಪ್ರಾಯ ಪಟ್ಟಿದೆ: ಪ್ರಸ್ತುತ ಆರ್ಥಿಕ ಸಂದರ್ಭದಲ್ಲಿ ಉಪಯೋಗಕ್ಕೆ ಬಾರದ ಜಾನುವಾರುಗಳು ಸಮಾಜಕ್ಕೆ ಒಂದು ಹೊರೆಯಾಗುವುದರಿಂದ ಅದು ಸಾರ್ವಜನಿಕ ಹಿತಾಸಕ್ತಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿರುದ್ಧವಾಗಿದೆ. ಹೀಗಾಗಿ ಸಂಪೂರ್ಣ ಜಾನುವಾರು ಹತ್ಯಾ ನಿಷೇಧ ಸಾಧ್ಯವಿಲ್ಲ ಎಂಬ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾ ಮುಖ್ಯ ನ್ಯಾಯಮೂರ್ತಿ ಸಿ.ಆರ್.ದಾಸ್‌ರವರು ಮೂರು ಮುಖ್ಯಾಂಶಗಳನ್ನು ಪ್ರಸ್ತಾಪಿಸಿದ್ದರು.

"1. ಎಲ್ಲಾ ವಯಸ್ಸಿನ ಹಸುಗಳ ಮತ್ತು ಎಲ್ಲಾ ಕರುಗಳ ಹತ್ಯೆಯ ಮೇಲಿನ ನಿಷೇಧ ಸಿಂಧುವಾದದ್ದು.

2. ಹಾಲು ನೀಡುವ ಎಮ್ಮೆಗಳ ಮತ್ತು ಉಳುವ ಯೋಗ್ಯ ಎತ್ತುಗಳ ಹತ್ಯೆಯ ಮೇಲಿನ ನಿಷೇಧವೂ ಸರಿಯಾದದ್ದೇ.

3. ಆದರೆ ಹಾಲು ನೀಡದ ಎಮ್ಮೆಗಳ ಮತ್ತು ಉಳುಮೆಗೆ ಸಹಕಾರಿಯಾಗದ ಎತ್ತು ಮತ್ತು ದನಗಳ ಹತ್ಯೆಯ ಮೇಲಿನ ನಿಷೇಧವೂ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಸರಿಯಾದದ್ದಲ್ಲ."

ಈಗಾಗಲೇ ಮಾನ್ಯ ಇಬ್ರಾಹಿಂರವರು ಹೇಳಿದ ಹಾಗೆ 1964 ರಲ್ಲಿ 16ಕ್ಕೂ ಹೆಚ್ಚು ರಾಜ್ಯಗಳಲ್ಲಿ ಗೋಹತ್ಯಾ ನಿಷೇಧ ಕಾನೂನು ಜಾರಿಯಲ್ಲಿದೆ. 14 ವರ್ಷಕ್ಕೆ ಮೇಲ್ಪಟ್ಟ ಅಂದರೆ ಹಾಲು ಕೊಡದ ಹಸುಗಳ ಹತ್ಯೆಗೂ ಶರತ್ತುಬದ್ಧ ಅವಕಾಶಗಳನ್ನು ಮಾಡಿಕೊಟ್ಟಿತ್ತು. ಈಗ ಅವರದೇ ಮಾಡಲ್. 1994 ರಲ್ಲಿ ಆಗಿನ ಗುಜರಾತ್ ಸರ್ಕಾರ ಆವರೆಗೆ ಅಸ್ತಿತ್ವದಲ್ಲಿದ್ದ "Bombay Animal Preservation Act" ಗೆ ತಿದ್ದುಪಡಿ ತರಲು Bombay Animal Preservation (Gujarat Amendment) Act, 1994 ಕಾಯ್ದೆಯನ್ನು ಜಾರಿಗೆ ತಂದಿತ್ತು. ಅದರಲ್ಲಿನ ಸೆಕ್ಷನ್ 2 ರಲ್ಲಿ ಆವರೆಗೆ ಹಸುವಿನ ಹತ್ಯೆಯ ಸಂಪೂರ್ಣ ನಿಷೇಧ ಎಂಬ ಕಡೆ ದನ, ಗೂಳಿಗಳನ್ನು ಸೇರಿಸಿತ್ತು. ಅದರ ವಿರುದ್ಧ ಖುರೇಷಿ ಸಮುದಾಯದವರು ಹೈಕೋರ್ಟ್‌ನಲ್ಲಿ ಹಾಕಿದ್ದ ಅಪೀಲ್‌ನ್ನು ಎತ್ತಿಹಿಡಿದ ಗುಜರಾತ್ ಹೈ ಕೋರ್ಟ್ ಈ ಮಸೂದೆ ಸಂವಿಧಾನ ವಿರೋಧ ಎಂದು ಆ ಕಾಯ್ದೆಯನ್ನು ರದ್ದುಗೊಳಿಸಿತ್ತು. ಆದರೆ ನರೇಂದ್ರ ಮೋದಿ ಆಡಳಿತದಲ್ಲಿ ಕೆಲವು ಸಂಘಪರಿವಾರ ಘೋಷಿತ ಸಂಘಟನೆಗಳು ಈ ಪ್ರಕರಣವನ್ನು 2002 ರಲ್ಲಿ ಸುಪ್ರೀಂ ಕೋರ್ಟ್‌ಗೆ ಕೊಂಡೊಯ್ದರು. ಈ ಪ್ರಕರಣದಲ್ಲಿ ಹಲವಾರು ಸಂವಿಧಾನಾತ್ಮಕ ಅಂಶಗಳಿದ್ದುದರಿಂದ ಇದನ್ನು ಏಳು ನ್ಯಾಯಾಧೀಶರ ಬೆಂಚ್‌ಗೆ ವರ್ಗಾಯಿಸಲಾಯಿತು. 2005 ರಲ್ಲಿ ಗುಜರಾತ್ ಸರಕಾರದ ಕಾಯ್ದೆಯನ್ನು ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠ ಅಂದರೆ ಏಳು ನ್ಯಾಯಾಧೀಶರ ಬೆಂಚ್ ಎತ್ತಿಹಿಡಿಯಿತು. ಸುಪ್ರೀಂಕೋರ್ಟ್‌ನ ಏಳು ಜನರ ಪೀಠದಲ್ಲಿ ಆರು ನ್ಯಾಯಾಧೀಶರು 1994ರ ಗುಜರಾತ್ ಕಾಯ್ದೆಯನ್ನು ಎತ್ತಿ ಹಿಡಿದರು. ಇದು ಈವರೆಗೂ ಗೋಹತ್ಯಾ ನಿಷೇಧದ ಬಗ್ಗೆ ಬಂದಿರುವ ಅತ್ಯುನ್ನತ ಸಾಂವಿಧಾನಿಕ ಪೀಠದ ಆದೇಶ. ಹೀಗಾಗಿ ಒಂದೊಮ್ಮೆ ಕರ್ನಾಟಕ ಸರ್ಕಾರ ತರಲಿರುವ ಕಾನೂನಿನ ವಿರುದ್ಧ ನ್ಯಾಯಾಲಯದ ಬಾಗಿಲು ತಟ್ಟಿದರೂ ಸಹ ಇದೇ ಗತಿಯಾಗುತ್ತದೆ ಎಂಬುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. "ಗುಜರಾತಿನ ಕಾಯ್ದೆಯು ಜಾನುವಾರುಗಳಲ್ಲಿ ಗೋ-ಸಂತತಿಯಲ್ಲದ ಇತರ ಜಾನುವಾರುಗಳನ್ನು ಹತ್ಯೆ ಮಾಡುವ ಮೂಲಕ ಅವರು ತಮ್ಮ ವ್ಯಾಪಾರವನ್ನು ಮುಂದುವರಿಸಬಹುದು.

ಅದಕ್ಕಾಗಿ ನಾನು ಈಗಾಗಲೇ ಹೇಳಿದ ಹಾಗೆ ಅವರ ಸಿದ್ಧಾಂತದಲ್ಲಿ ಏನಾದರೂ ಇದ್ದರೆ,... ಏಕೆಂದರೆ, ನಮ್ಮ ಸಿದ್ಧಾಂತದಲ್ಲಿ ಮಹಾತ್ಮ ಗಾಂಧಿಜೀಯವರು ಸತ್ಯ ಮತ್ತು ಅಹಿಂಸೆ ಎಂದು ಹೇಳುತ್ತಾರೆ. ಅವರ ಸಿದ್ಧಾಂತದಲ್ಲಿ ಸಾವರ್ಕರ್ ಹಿಂಸೆ ಮತ್ತು ಸುಳ್ಳು ಎಂದು ಹೇಳುತ್ತಾರೆ. ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ಸಿದ್ಧಾಂತದಲ್ಲಿ ಏನಾದರೂ ಇವರಿಗೆ ನಂಬಿಕೆ ಇದ್ದರೆ, ... ಹಿಂದೂ ಧರ್ಮವಾದರೂ ಸ್ವಾಮಿ ವಿವೇಕಾನಂದರು ಕೇಳಬೇಕು ಅಥವಾ ಹಿಂದುತ್ವವಾದರೂ ಸಾವರ್ಕರ್ ಕೇಳಬೇಕು. ಹಾಗಾಗಿ ಅವರು ಯಾರನ್ನು ಕೇಳಿ ಇಲ್ಲಿಗೆ ಬಂದಿದ್ದಾರೆ ಎಂಬುದೇ ಬಹಳ ಮುಖ್ಯವಾದ ಪ್ರಶ್ನೆ ಕಾಣುತ್ತಿದೆ. ನಮಗೆಲ್ಲಾ ತಿಳಿದ ಹಾಗೆ 2001 ಡಿಸೆಂಬರ್ 13 ರಂದು ಅಫ್ಜಲ್ ಗುರು ನೇತೃತ್ವದಲ್ಲಿ ಪಾರ್ಲಿಮೆಂಟ್ ಮೇಲೆ ಉಗ್ರರ ದಾಳಿ ನಡೆದಿತ್ತು. ಅದೇ ರೀತಿ 1968ನೇ ಸಾಲಿನಲ್ಲಿ ಸಹ ಗೋಹತ್ಯಾ ನಿಷೇಧ ಚರ್ಚೆಯಾದಾಗ ವಿಚಾರದಲ್ಲಿ ಪಾರ್ಲಿಮೆಂಟ್ ಮೇಲೆ ಸಹ ಹಲ್ಲೆಯಾಗಿತ್ತು, ಆಕ್ರಮಣಕಾರಿ ದಾಳಿ ನಡೆದಿತ್ತು. ಈ ರೀತಿಯ ದಾಳಿ ಪಾರ್ಲಿಮೆಂಟ್ ಮೇಲೆ ನಡೆದಿರುವುದು ಹೊಸದೇನಲ್ಲ.

(ಮುಂದು...)

(233)08.02.2021/6.00/ಎಸ್‌ಕೆ-ಎಕೆ

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು)**

ಆದ್ದರಿಂದ, ಹಸುಗಳ ಮೇಲೆ ಏನು ಪ್ರೀತಿಯಿದೆ; ತಾವು ಹಿಂಸೆಯ ವಿರುದ್ಧವಾಗಿದ್ದರೆ, ಅಹಿಂಸೆಯ ಮೇಲೆ ನಂಬಿಕೆಯಿದ್ದರೆ, ಕೋಣ, ಎಮ್ಮೆಗಳನ್ನು ಏತಕ್ಕೆ ಕಡಿಯುವುದಕ್ಕೆ ಬಿಡುತ್ತೀರಿ. ಅದು ಕಪ್ಪಾಗಿದೆ ಅಂತನಾ, ಅಲ್ಲಿಯೂ ಕೂಡ ಬೇಧ-ಭಾವವನ್ನು ತೋರಿಸುತ್ತೀರಿ ನೋಡಿ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಕಾನೂನಿನಲ್ಲಿ ನಾವು 13 ವರ್ಷದೊಳಗಡೆ ಇರುವಂತಹ ಕೋಣಗಳನ್ನು ಕೂಡ ನಿಷೇಧ ಮಾಡಿದ್ದೇವೆ. ಬೇರೆ ರಾಜ್ಯಗಳಲ್ಲಿ ಕೋಣವನ್ನು ಅವರು ಅನುಮತಿಯನ್ನು ಕೊಟ್ಟರೂ ಕೂಡ, ನಾವು ಕೋಣ, ಎಮ್ಮೆಯನ್ನು ನಿಷೇಧ ಮಾಡಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅಲ್ಲ ಸ್ವಾಮಿ, ಅದೇ ಕಾನೂನು ಧನ-ಕರುಗಳಿಗೂ ಸಹ ಲಾಭವಾಗುತ್ತದೆ. ಅದನ್ನು ಏಕೆ ban ಮಾಡುತ್ತಿದ್ದೀರೆಂಬುದು ಪ್ರಶ್ನೆ. ಕೋಣ ಮತ್ತು ಬೇರೆ ಪಶುಗಳಿಗೆ ಹದಿಮೂರು ವರ್ಷದ ಮೇಲೆ ಕಡಿಯುತ್ತೀರೆಂದು ಹೇಳಿ, ಕಡಿಯುವುದಕ್ಕೆ ಅವಕಾಶವಿದೆ ಎಂದಿರಲ್ಲ, ಅದನ್ನೇ ನಾವು ಕೇಳುತ್ತಿರುವುದು. ಬೆಂಗಳೂರಿನಲ್ಲಿ ಕೋಳಿಗೆ ಹೊಸ ಯಂತ್ರ ಬಂದು ಬಿಟ್ಟಿದೆ. ಒಂದು ಗಂಟೆಗೆ ಒಂದು ಲಕ್ಷ ಕೋಳಿಗಳನ್ನು ಕಟ್ ಮಾಡಿ, ಪ್ಯಾಕ್ ಮಾಡಿ ಬಿಸಾಕಿ ಬಿಡುತ್ತದೆ. ಅದೂ ಏನು ಹಿಂಸೆಯಲ್ಲವೇ? ಅದನ್ನು ನಿಲ್ಲಿಸಿ. ಪಾಪದ ಪ್ರಾಣಿ ಕುರಿ, ಅದನ್ನು ನಿಲ್ಲಿಸಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಮಾನ್ಯ ಹರಿಪ್ರಸಾದ್‌ರವರೇ, ತಾವು ಗೋವುಗಳ ಬಗ್ಗೆ ಮಾತನಾಡಿದ್ದೀರಾ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗೋವುಗಳನ್ನು ಪೂಜೆ ಮಾಡುತ್ತೇವೆ. ಮನೆ ಗೃಹ ಪ್ರವೇಶ ಮಾಡಬೇಕಾದರೆ, ಮೊದಲು ಹಸುವನ್ನು ಒಳಗಡೆ ಕರೆದುಕೊಂಡು, ಆನಂತರ ನಾವು ಗೃಹ ಪ್ರವೇಶ ಮಾಡುತ್ತೇವೆ. ನಾವು ಯುಗಾದಿ ಹಬ್ಬ, ಮಹಾನವಮಿ ಎಲ್ಲಾ ಹಬ್ಬಗಳನ್ನು ಕೂಡ ಮಾಡುತ್ತಿದ್ದೇವೆ. ಹಾಗೆಯೇ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳು ಅಂದರೆ ರಾಮಾಯಣ, ಮಹಾಭಾರತ ಕಾಲದಿಂದಲೂ ಗೋವುಗಳಿಗೆ ಸಂಕ್ರಾಂತಿ ಹಬ್ಬವನ್ನು ಇಟ್ಟಿದ್ದೇವೆ. ಹಸುವಿಗೆ ಒಂದು ಹಬ್ಬವನ್ನು ಇಟ್ಟಿದ್ದೇವೆ. ಸಂಕ್ರಾಂತಿ ಹಬ್ಬದಿಂದ ಹಸುಗಳನ್ನು ಕಿಚ್ಚಾಯಿಸುತ್ತೀರಿ, ಎತ್ತುಗಳಿಗೆ ಬಣ್ಣ ಬಳಿಯುತ್ತೀರಿ. ತಾಯಿ ಒಂಭತ್ತು ತಿಂಗಳು ನಮಗೆ ಹಾಲು ಕೊಟ್ಟರೆ, ಇಡೀ ಜೀವನ ಪೂರ್ತಿ ಹಾಲು ಕೊಡುವಂತಹದ್ದು ಹಸು. ಆ ದೃಷ್ಟಿಯಿಂದ ಅವತ್ತಿನಿಂದ ಈ ಗೋ ಸಂಪತ್ತು ಉಳಿಯಬೇಕು. ಗೋವು ಪೂಜ್ಯವೆಂದು ಹೇಳಿ, ನಮ್ಮ ಪೂರ್ವಿಕರು ಮಾಡಿದ್ದಾರೆ. ಇದನ್ನು ನಾನಾಗಲೀ, ಮಾನ್ಯ ಹರಿಪ್ರಸಾದ್‌ರವರಾಗಲೀ ಮಾಡಿಲ್ಲ. ಪೂರ್ವಿಕರು ನಮ್ಮ ತಂದೆ ನಮಗೆ ಹೇಳಿಕೊಟ್ಟಿದ್ದಾರೆ. ನಮ್ಮ ತಂದಗೆ ಅವರ ತಂದೆ ಹೇಳಿಕೊಟ್ಟಿದ್ದಾರೆ. ಇದನ್ನು ಹೇಳಿಕೊಂಡು ಬಂದಿರುವ ಪರಂಪರೆಯನ್ನು ನಡೆಸಿಕೊಂಡು ಹೋಗುತ್ತಿದ್ದೇವೆ ಅಷ್ಟೆ. ಹೊಸ ಪರಂಪರೆ ಏನಿಲ್ಲ. ಪೂಜ್ಯ ಭಾವನೆಯಿದೆ. ಅದಕ್ಕೋಸ್ಕರ ಈ ಗೋವಿನ ಬಗ್ಗೆ ಈ ಒಂದು ಕಾಯಿದೆಯನ್ನು ನಾವು ತಂದಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ, ಎಲ್ಲಾ ಪ್ರಾಣಿಗಳ ಮೇಲೆಯೂ ಪೂಜ್ಯ ಭಾವನೆಯಿದೆ. ತಮ್ಮ icon ಮಾನ್ಯ ವಿಶ್ವನಾಥರವರಿದ್ದಾರೆ. ಅವರ ಊರಿನವರು ಎಸ್.ಎಲ್. ಭೈರಪ್ಪನವರು ದುರ್ಯೋಧನ ಯಾವ ಮಾಂಸ ತಿನ್ನುವುದಕ್ಕೆ ಹೋಗಿದ್ದ ಎಂದು ಹೇಳಿ ಪರ್ವದಲ್ಲಿ ಬರೆದಿದ್ದಾರೆ. ಅವರ ಸಂಘ ಪರಿವಾರದ ಜೊತೆಗೆ ಗುರುತಿಸಿಕೊಂಡಿದ್ದಾರೆ. ಅದಕ್ಕೆ ಅವರ ಬಗ್ಗೆ ಏನಾಗುವುದಿಲ್ಲ. ಅವರಿಗೆ ಮ್ಯೂಸಿಯಂ ಅಥವಾ ಏನೋ ಒಂದು ಮಾಡುವುದಕ್ಕೆ ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಬಿಟ್ಟಿದ್ದಾರೆ. ಆದ್ದರಿಂದ, ಧರ್ಮದ ಬಗ್ಗೆ ಚರ್ಚೆ ಮಾಡುವುದು ಬೇಡ. ಯಾರೋ ಗೃಹ ಪ್ರವೇಶ ಮಾಡುವುದಕ್ಕೆ ಹಸುಗಳನ್ನು ಕರೆದುಕೊಂಡು ಹೋಗಿ ಗೌರವ ತೋರಿಸುತ್ತಾರೆ ಅಷ್ಟೆ. ನಾನು ಕೂಡ ಹಸುವನ್ನು ಸಾಕಿದವನು. ಯಾವ ರೀತಿ ಹಸುವನ್ನು ಸಾಕಿದ್ದೇನೆಂಬುದು ನನಗೂ ಸಹ ಗೊತ್ತಿದೆ. ಆದ್ದರಿಂದ, ಬೇರೆ ರಾಜಕೀಯ ಪಕ್ಷದವರಿಂದ ಹಸು ಬಗ್ಗೆ ನಾನು ಕೇಳುವುದು ಬೇಕಾಗಿಲ್ಲ. ಹಿಂದೂ ಪತ್ರಿಕೆ ಏನು ಹೇಳುತ್ತಿದೆ ನೋಡಿ, ಈ ಬಿಲ್ ಪಾಸಾದ ತಕ್ಷಣ 'Karnataka's giant leaps backward' ಎಂದು ಹೇಳಿ, ಇವತ್ತು ಇಡೀ ಪ್ರಪಂಚಕ್ಕೆ ಒಂದು ಮಾದರಿ ರಾಜ್ಯವಾಗಿದ್ದಂತಹ ಈ ಕರ್ನಾಟಕ ರಾಜ್ಯವನ್ನು ತಾವು ಹಿಂದೆ ತೆಗೆದುಕೊಂಡು ಹೋಗುತ್ತಿದ್ದೀರಾ, ಅದರ ಬಗ್ಗೆ ನಮಗೆ ಯೋಚನೆ. ತಾವು ಹೇಳಿರುವಂತೆ ಕರ್ನಾಟಕ ಇಡೀ ದೇಶದಲ್ಲಿ ಹಸುವಿನ ಬಗ್ಗೆ ಗೌರವವಿದೆ. ನಾವು ಸಂಕ್ರಾಂತಿ ಹಬ್ಬದಂದು ಕಿಚ್ಚಾಯಿಸುತ್ತೇವೆ, ಪೂಜೆ ಮಾಡುತ್ತೇವೆ, ಗೃಹ ಪ್ರವೇಶಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದು ತಾವು ಹೇಳಿದಿರಿ. ಆದರೆ ಗೋವಾದಲ್ಲಿ ಹಿಂದೂಗಳು ಇಲ್ಲವೇ ಸ್ವಾಮಿ. ಮೇಘಾಲಯದಲ್ಲಿ BJP leader ಏನು ಹೇಳುತ್ತಾರೆಂದರೆ, *"We will make beef cheaper if voted*

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*to power in Meghalaya".* ಕೇರಳದಲ್ಲಿ ಬಿ.ಜೆ.ಪಿ ಅಭ್ಯರ್ಥಿ N. Sreeprakash has said, *"He would make a good halal beef available at cleaner slaughter houses. It will be a door delivery".* ಇದು ಕೇರಳದಲ್ಲಿ ಸ್ವಾಮಿ. ನಾವಲ್ಲ.

**ಶ್ರೀ ಆರ್. ಅಶೋಕ:–** ನಾವು ಕಾಯಿದೆಯನ್ನು ತಂದಿರುವುದು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಒಂದೇ ನಿಮಿಷ ಬಂದೆ ಬಂದೆ. ದೇಶದಲ್ಲಿ ಯು.ಪಿ. ಗುಜರಾತಿನ ಬಗ್ಗೆ ಬಂದಿದ್ದಾರೆ. ಕೇರಳದಲ್ಲಿ ಅವರು door delivery ಕೊಡುತ್ತೇವೆಂದು ಬಹಳ ಜೋರಾಗಿ ಹೇಳಿದ್ದಾನೆ. ಆದ್ದರಿಂದ ಪ್ರಶ್ನೆ ಗೋವಿನದಲ್ಲ. ನಮ್ಮ ಕುಟುಂಬಕ್ಕೆ ಸೇರಿದ ಕುಂದಾಪುರದ ಜಿಲ್ಲೆಯ ಪ್ರವೀಣ್ ಪೂಜಾರಿ ಎಂಬ ಹುಡುಗ. ಒಂದು ರಾಜಕೀಯದ ಪಕ್ಷದ ಮಂಡಲ್ ಅಧ್ಯಕ್ಷ. ನಾನು ಆ ಪಕ್ಷದ ಬಗ್ಗೆ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಇದ್ದಕಿದ್ದ ಹಾಗೇ ಅವನ ಕೊಲೆಯಾಗುತ್ತದೆ. ಅವನು ಕೊಲೆಯಾದಂತಹ ಸಮಯದಲ್ಲಿ ನಾನು ದೆಹಲಿಯಲ್ಲಿದ್ದೆ. ಆಗ ನನಗೆ ಫೋನ್ ಮಾಡುತ್ತಾರೆ. ಸಾರ್, ಈ ತರಹ ಹುಡುಗ ಕೊಲೆಯಾಗಿದ್ದಾನೆ. ನಾನು ಯಾರು ಎಂದು ಕೇಳಿದಾಗ, ಈ ಮಂಡಲ್ ಎಂದಾಗ, ನನಗೂ ಮತ್ತು ಅವರಿಗೂ ಸಂಬಂಧವಿಲ್ಲ. ನಾನು ಬರುವುದಿಲ್ಲ ಎಂದು ಹೇಳಿದೆ. ಅವನು ಬಡ ಹುಡುಗ ತಾವು ಬರಬೇಕು ಎಂದು ಹೇಳುತ್ತಾರೆ. ಅವನ ಊರು ಮಂದರ್ತಿ. ಮಾನ್ಯ ಪ್ರತಾಪ್ ಚಂದ್ರ ಶೆಟ್ಟಿಯವರಿಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಏನಾಗಿದೆ ಎಂದು ಹೋದರೆ, ಅವನನ್ನು ಕೊಲೆ ಮಾಡಿದವರು ಯಾರು ಸ್ವಾಮಿ? ಯಾರೋ ಮುಸ್ಲಿಮರು ಅಲ್ಲ, ಅವರು ಹಿಂದೂ ಜಾಗರಣ ಸಮಿತಿಯವರು. ಅವನನ್ನು ಏತಕ್ಕೆ ಕೊಲೆ ಮಾಡಿದರು ಎಂದರೆ, ಅವನು ದನ ಸಾಗಿಸುತ್ತಿದ್ದ ಎಂದು ಕೊಲೆ ಮಾಡಿದರು. ಅಲ್ಲಿ ಹೋಗಿ ಕೇಳಿದರೆ, ಅವನು ಒಳ್ಳೆಯ ಹುಡುಗ, ನೋಡುವುದಕ್ಕೆ ಅವನೊಬ್ಬ ಒಳ್ಳೆಯ film actor ಇದ್ದಹಾಗೆ ಇದ್ದಾನೆ. ಏಕೆಂದರೆ, ಮಂಗಳೂರು ಜನರು ದಷ್ಟಪುಷ್ಟವಾಗಿ ಇರುತ್ತಾರೆ, ಆರು ಅಡಿಯುಳ್ಳ ಹುಡಗ film actor ತರಹ ಇದ್ದಾನೆ. ಕೋಳಿ, ಹಾಲು, ಮೊಟ್ಟೆ ಮಾರಿಕೊಂಡು, ಸ್ವಲ್ಪ ಆರ್ಥಿಕವಾಗಿ ಮೇಲೆ ಬಂದ ಎಂದು ಹೇಳಿ, ಹಸುವಿನ ಹೆಸರು ಹೇಳಿಬಿಟ್ಟು, ಅಸೂಯೆಗಾಗಿ ಕೊಲೆ ಮಾಡಿದ್ದಾರೆ. ಈ ತರಹ ದುರಪಯೋಗಗಳು ಆಗುವುದು ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ನೋಡಬೇಕಾಗಿದೆ ಮತ್ತು ಎಷ್ಟು ಕಳ್ಳಸಾಗಾಣಿಕೆಯಾಗಿದೆ ಎಂಬುದನ್ನು ನೋಡಬೇಕು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸದಸ್ಯರೇ ಒಂದೇ ನಿಮಿಷ.

**ಶ್ರೀ ಬಿ.ಕೆ. ಹರಿಪ್ರಸಾದ್:–** ತಾವು ಆ ಸಂಘಟನೆಯವರು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಕೇರಳದಲ್ಲಿ ಬಿ.ಜೆ.ಪಿ. ನಾಯಕರು ಗೋಹತ್ಯೆಯ ಬಗ್ಗೆ ಹೇಳಿದ್ದಾರೆ. Beef ಅನ್ನು ಕಟ್ ಮಾಡಿ, ಮನೆ ಮನೆಗೆ ಪ್ಯಾಕ್ ಮಾಡಿ ಹೇಗೆ ಕಳುಹಿಸುತ್ತಿದ್ದಾರೆಂದು ಹೇಳಿದಿರಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಹೇಗೆ ಕಳುಹಿಸುತ್ತಿದ್ದರಲ್ಲ. ಕಳುಹಿಸುತ್ತೇವೆ.

**ಶ್ರೀ ಎನ್.ರವಿಕುಮಾರ್:-** ತಾವು ಕಳುಹಿಸುತ್ತೇವೆಂದು ಹೇಳಿದಿರಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಹೌದು.

**ಶ್ರೀ ಎನ್.ರವಿಕುಮಾರ್:-** ಬಿ.ಜೆ.ಪಿ. ನಾಯಕರು ಯಾರೋ ಹೇಳಿದ್ದಾರೆಂದು ಇಟ್ಟುಕೊಳ್ಳೋಣ. ಸಾಮಾನ್ಯವಾಗಿ ಹೇಳಿರುವುದಿಲ್ಲ. ಸಾಮಾನ್ಯವಾಗಿ ಹೇಳಿದ್ದಾರೆಂದು ಇಟ್ಟುಕೊಳ್ಳೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ತಂದಿರುವುದು.

**ಶ್ರೀ ಎನ್.ರವಿಕುಮಾರ್:-** ನಾನು ಅದನ್ನು ಒಪ್ಪಿಕೊಂಡೆ. ಒಂದು ಕಾಲದಲ್ಲಿ ಗೋಹತ್ಯೆಯನ್ನು ನಿಷೇಧ ಮಾಡಬೇಕು. ಗೋಹತ್ಯೆಯನ್ನು ಮಾಡಬಾರದು. ಹಸುವನ್ನು ಪೂಜೆ ಮಾಡಬೇಕೆಂದು ಹೇಳಿ, ನಮ್ಮ ದೇಶದೊಳಗೆ ಹಸುವಿನ ಆರಾಧಕರು ಆಗಬೇಕು ಎಲ್ಲರೂ ಹೇಳಿ, ಒಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷ ನಿಶ್ಚಯ ಮಾಡುತ್ತದೆ. ಆದರೆ ಕಾಂಗ್ರೆಸ್ ಪಕ್ಷದ ಚಿಹ್ನೆ ಹಸು ಮತ್ತು ಕರು. ಇಡೀ ದೇಶದೊಳಗೆ ಹಸು ಮತ್ತು ಕರುವಿನ ಚಿಹ್ನೆಯನ್ನಿಟ್ಟುಕೊಂಡು ಚುನಾವಣೆಗೆ ಹೋಗುತ್ತದೆ. ಇದರ ಅರ್ಥವೇನು? ಹಸು ಮತ್ತು ಕರುವನ್ನು ಹತ್ಯೆ ಮಾಡಬಾರದು. ಇವುಗಳನ್ನು ಪೂಜಿಸಬೇಕೆಂದು ಹೇಳಿ ಚುನಾವಣೆಗೆ ಹೋದಿರಿ. ಅರ್ಥಾತ್ ಇದನ್ನು ಹತ್ಯೆ ಮಾಡಿ ಎಂದು ಚುನಾವಣೆಗೆ ಹೋಗಿದ್ದೀರಾ.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕೇರಳದಲ್ಲಿ ಮೊನ್ನೆ ಪಾರ್ಲಿಮೆಂಟ್ ಚುನಾವಣೆಯಾದಾಗ, ಉತ್ತರ ಕೇರಳದ ಒಬ್ಬ ಬಿ.ಜೆ.ಪಿ. ಪಕ್ಷದ ಅಭ್ಯರ್ಥಿಯ Election Manifesto ಏನಪ್ಪ ಎಂದರೆ, ನಾನು ಗೆದ್ದರೆ, ನಿಮಗೆ beef ಸಿಗುತ್ತದೆ. ನಾನು ಚೆನ್ನಾಗಿರುವುದನ್ನು ಕೊಡುತ್ತೇನೆ. ಯಾವುದೇ ಒಂದೇ ಕೊರತೆಯಿಲ್ಲದಿರುವ beef ಸಿಗುತ್ತದೆ ಎಂದು Election Manifesto ನ್ನು pamphlet ಮಾಡಿಬಿಡುತ್ತಾನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಇಲ್ಲ ಇಲ್ಲ. ನಾನು ಇದಕ್ಕೆ ಏನು ಹೇಳುತ್ತಿದ್ದೇನೆಂದರೆ, ನಮ್ಮ ಪಕ್ಷದ ಶ್ರದ್ಧೆ ಏನಪ್ಪ ಅಂದರೆ, ನಮ್ಮ ಪಕ್ಷ ಏನು ಹೇಳುತ್ತದೆ ಎಂದರೆ, ಗೋಹತ್ಯೆವನ್ನು ನಿಷೇಧ ಮಾಡುತ್ತೇವೆಂದು ನಮ್ಮ Election Manifesto ಹೇಳುತ್ತದೆ. ಅದನ್ನು ಇಟ್ಟುಕೊಂಡೇ ನಮ್ಮ ದೇಶದ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ನೀವು ಗೋಹತ್ಯೆಯನ್ನು ಮಾಡುತ್ತೇವೆ. ಗೋವನ್ನು ಸ್ವಾತಂತ್ರ್ಯವಾಗಿ ಹತ್ಯೆ ಮಾಡಬಹುದು ಎಂದು Election Manifesto ದಲ್ಲಿ ಹಾಕಿಕೊಂಡು ಚುನಾವಣೆಗೆ ಹೋಗಿ. ತಾವು ಗೋಹತ್ಯೆಯನ್ನು ಸ್ವಾಗತ ಮಾಡುತ್ತೀರಾ ಎನ್ನುವುದಾದರೆ, ಅದನ್ನೇ ಚುನಾವಣೆಗೆ ಇಟ್ಟುಕೊಂಡು ಹೋಗಿ. ಅದನ್ನು ಯಾರು ಬೇಡ ಎನ್ನುತ್ತಾರೆ. ನಾವು ಕೋಳಿ ಕುರಿ ಎಲ್ಲಾ ಪ್ರಾಣಿಗಳನ್ನು ...

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ರವಿಕುಮಾರ್‌ರವರೇ ಸಮಯ ಆಯಿತು. ತಮಗೆ ಅವಕಾಶ ಸಿಕ್ಕಿದಾಗ ಮಾತನಾಡಿ. ನನ್ನ flow ಗೆ ಅಡ್ಡ ಬರಬೇಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸದಸ್ಯರೇ, ಒಂದೇ ಒಂದು ನಿಮಿಷ. ಹಾಗೇ ನೋಡಿದರೆ,

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ದಯವಿಟ್ಟು, ...

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಒಂದು ನಿಮಿಷ. ಮರ-ಗಿಡಗಳಿಗೂ ಜೀವವಿದೆ. ಮರ-ಗಿಡಗಳು ಕೂಡ ಬೆಳೆಯುತ್ತವೆ. ಆ ಗಿಡ-ಮರಗಳನ್ನು ಕಟ್ ಮಾಡಿದರೆ, ಸಾಯುತ್ತವೆ. ಅಂದರೆ ಅರ್ಥಾತ್ ಮರ-ಗಿಡಗಳನ್ನು ಕಟ್ ಮಾಡಬಾರದು. ಯಾವ ಪ್ರಾಣಿಗಳನ್ನು ಕಟ್ ಮಾಡಬಾರದು. ಕೋಳಿಗಳನ್ನು ಕಟ್ ಮಾಡಬಾರದು. ಇಲ್ಲಿ ವಿಷಯ ಏತಕ್ಕೆ ಬಂತು ಎಂದರೆ,

**ಶ್ರೀ ಬಿ.ಕೆ.ಹರಿಪ್ರಸಾದ್:-** ದಯವಿಟ್ಟು, ಮಾನ್ಯ ಸದಸ್ಯರೇ ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ನಮ್ಮ ದೇಶದಲ್ಲಿ ಗೋವಿನ ಬಗ್ಗೆ ಕೋಟ್ಯಂತರ ಜನರಿಗೆ ಶ್ರದ್ಧೆಯಿದೆ. (ಗೊಂದಲ) ಆ ಹಿನ್ನೆಲೆಯಲ್ಲಿ ಗೋ ಹತ್ಯೆ ನಿಷೇಧವನ್ನು ಮಾಡಬೇಕು. ಬಿ.ಜೆ.ಪಿ. ಯ manifesto...

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಅವರು ಮಾತನಾಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರು yield ಆಗಿದ್ದು. ನಾನು ಅಲ್ಲ. ಅವರೇ ಮಾತನಾಡಿದ್ದು. ನನ್ನದೇನೂ ಇಲ್ಲ. ತಾವು ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಇದು ಸವಿಸ್ತಾರವಾಗಿ ಚರ್ಚೆಯಾಗಲಿ. ನಾನು ಮಾತನಾಡುವುದಕ್ಕೆ ತಯಾರಿದ್ದೇನೆ. Bharatiya Janata Party ಯ All India Election Manifesto ನಲ್ಲಿ ಇದೆ. ನಾವು cow slaughter ban ಮಾಡುತ್ತೇವೆ. ಕೇರಳದ Election Manifesto ನಲ್ಲಿ ಏನಿದೆ? ಗೋವಾದ Election Manifesto ನಲ್ಲಿ ಏನಿದೆ? ಮೇಘಾಲಯದ Election Manifesto ನಲ್ಲಿ ಏನಿದೆ? ಮಣಿಪುರ್ Election Manifesto ನಲ್ಲಿ ಏನಿದೆ? ನಮಗೆ ಇದನ್ನು ಹೇಳಿ. ಅಷ್ಟು ಸುಲಭವಾಗಿ ಜಾರಿಕೊಳ್ಳುವುದಕ್ಕೆ ಆಗುವುದಿಲ್ಲ.

**(ಮುಂದು)**

(234)08.02.2021/6.10/ಎಂ.ಎಂ–ಆರ್.ಎನ್

**ಶ್ರೀ ಎನ್. ರವಿಕುಮಾರ್:–** ಗೋವಾ ರಾಜ್ಯದ ಬಗ್ಗೆ ನೀವು ಹೇಳಿದಿರಿ. ಅಲ್ಲಿ ಗೋ ಹತ್ಯೆ ನಿಷೇಧ . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಗೋವಾದಲ್ಲಿ ಇಲ್ಲ. ನನ್ನ ಹತ್ತಿರ ಮಾಹಿತಿ ಇದೆ. ಆದ್ದರಿಂದ ಅದಕ್ಕೆ ಹೋಗುವುದಕ್ಕೆ ಹೋಗಬೇಡಿ. ನಿಮ್ಮದು double standard ಏನು ಎಂಬುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಿಮ್ಮ manifesto ನಲ್ಲಿ ಇದೆಯೆಂದು ಹೇಳುತ್ತೀರಲ್ಲಾ. ಗೋ ಮಾಂಸವನ್ನು ರಫ್ತು ಮಾಡುತ್ತಿರುವ ಪ್ರಮುಖ ಕಂಪನಿಗಳು ಅದರಲ್ಲಿ ಸಂಘ ಪರಿವಾರದ ಮುಖಂಡ ಸಂಗೀತ್ ಸೋಮ್ ಅಲ್‌ದುವ exports ಕಂಪನಿ ಅವರು ಬಿ.ಜೆ.ಪಿ ಎಂ.ಎಲ್.ಎ ಆಗಿದ್ದಾರೆ. ಉತ್ತರ ಪ್ರದೇಶದ ಮಹೇಶ್ ಸಿಂಗ್ ಒಡೆತನದ ಹಿಂದು ಆಗ್ರೋ ಇಂಡಸ್ಟ್ರೀಸ್, ಸುನೀಲ್ ಸೂದ್ ಒಡೆತನದ ಆಲ್ ನೂರ್ exports ಕಂಪನಿ, ಸತೀಶ್ & ಅತುರ್–ಸಭರ್‌ವಾಲ್ ಒಡೆತನದ ಅಲ್ ಕಬೀರ್ exports ಕಂಪನಿ, ಕೇರಳದ ಇಂದ್ರಾಣಿ ನೂಹಿ exports ಕಂಪನಿ, ಅದು ಹಿಂದುಗಳ ಕಂಪನಿ, ಸುನಿಲ್ ಕಪೂರ್ ಅರೇಬಿಯನ್ exports ಕಂಪನಿ, ಮದನ್ ಅಬ್ಲೋಟ್‌ರವರ MKR exports ಕಂಪನಿ, ಹಿಂದುಗಳ ಕಂಪನಿ ಅದು ನೂಹಿ exports ಕಂಪನಿ, ಸುನೀಲ್ ಕಪೂರ್‌ರವರ ಅರೇಬಿಯನ್ exports ಕಂಪನಿ, ಎ.ಎಸ್. ಬಿಂದ್ರಾ ಅವರ PML exports ಕಂಪನಿ, ಇವೆಲ್ಲವೂ ಸಹ ಭಾರತೀಯ ಜನತಾ ಪಾರ್ಟಿಯ ಜೊತೆ ಬಹಳ ಹತ್ತಿರದ ಸಂಬಂಧ ಇಟ್ಟುಕೊಂಡಿರುವವರು ಹಾಗೂ ನಾಯಕರಾಗಿರುವಂತಹವರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಹರಿಪ್ರಸಾದ್‌ರವರೇ, ಅವರು ಭಾರತೀಯ ಜನತಾ ಪಾರ್ಟಿಯವರಲ್ಲ ಅವರು ವ್ಯಾಪಾರಸ್ಥರಾಗಿದ್ದಾರೆ. ಜಗತ್ತಿನಲ್ಲಿ ಎಲ್ಲಾ ಸಮಾಜದವರು ಎಲ್ಲಾ ರೀತಿಯ ವ್ಯಾಪಾರ ಮಾಡುತ್ತಾರೆ ಅದಕ್ಕೆ ಯಾವುದಾದರೂ ಪಕ್ಷಕ್ಕೆ ಸೇರಿಸುವುದಕ್ಕಾಗುತ್ತದೆಯೇ? Don't connect. ಸುಮ್ಮ–ಸುಮ್ಮನೇ connection ಮಾಡಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾವು ಹೇಳುತ್ತಿದ್ದೀರಲ್ಲಾ ನಾವು ಭಾರತೀಯ ಜನತಾ ಪಾರ್ಟಿಯವರು ಬಹಳ ಪರಿಶುದ್ಧರು, ನಮ್ಮ manifesto ದಲ್ಲಿ ಇದೆಯೆಂದು, ನೀವು ಹೇಳುವುದು ಒಂದು, ಮಾಡುವುದು ಒಂದು ಆಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ನಾವು ಹೇಳುವುದೊಂದು ಮಾಡುವುದು ಇನ್ನೊಂದಲ್ಲ, ನಾನು ಹೇಳುವುದೇನೆಂದರೆ, ಈಗ ನಿಮ್ಮ supporters ಬೇಕಾದ್ದು ಮಾಡುತ್ತಾರೆ ಅದನ್ನು;

**ಶ್ರೀ ಬಿ.ಕೆ.ಹರಿಪ್ರಸಾದ್:–** ಏನೂ ಹೇಳಿಲ್ಲ, ನೀವು ಏನನ್ನೂ ಬಾಕಿ ಉಳಿಸಿಲ್ಲ, ಎಲ್ಲವನ್ನೂ ಹೇಳಿಬಿಟ್ಟಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:–** ನಾವು ಏನೂ ಹೇಳಿಲ್ಲ. ನಾವು ಏನೂ ಮಾತನಾಡಿಲ್ಲ. ನಮಗೆ ಈ ಕಾನೂನಿನಲ್ಲಿ ನಂಬಿಕೆ ಇದೆ. ಆಗ ನೀವು ಏನು ಹೇಳಿದರೂ ನಮಗೇನೂ ವ್ಯತ್ಯಾಸವಾಗುವುದಿಲ್ಲ. ನಮ್ಮ ನಂಬಿಕೆ ಬಹಳ ಗಟ್ಟಿಯಾಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ನೀವು ಅದಕ್ಕೋಸ್ಕರ ಎಮ್ಮೆ, ಕೋಣಗಳನ್ನು ಕಡಿಯುವುದನ್ನು ಸ್ವಲ್ಪ ತಪ್ಪಿಸಬಹುದು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಯಾರು ಯಾವುದನ್ನು ವ್ಯಾಪಾರ ಮಾಡುತ್ತಾರೋ ಅವರು ವ್ಯಾಪಾರಸ್ಥರಾಗಿರುತ್ತಾರೆ, ಯಾವುದೇ ಪಕ್ಷದ ಜೊತೆ ಸಂಬಂಧವಿರುವುದಿಲ್ಲವೆಂದು ತಾವು ಹೇಳಿದಿರಿ. ಇಷ್ಟೆಲ್ಲಾ ಸರ್ಕಸ್ ಮಾಡುವ ಬದಲು ಯಾರ್‍ಯಾರು ರಫ್ತು ಮಾಡುತ್ತಾರೆ ಆ ಕಂಪನಗಳನ್ನು ಬ್ಯಾನ್ ಮಾಡಿಬಿಟ್ಟರೆ ಈ ಕಾನೂನು ಬೇಕಾಗುವುದೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಯಾರ್ಯಾರು ಬೀಫ್ ರಫ್ತು ಮಾಡುತ್ತಿದ್ದಾರೆ, ಯಾವ ರೀತಿಯ ಬೀಫ್, ಎನ್ನುವುದು ಆ ರಾಜ್ಯಕ್ಕೆ ಸಂಬಂಧವಿದೆ. ನಾವು ಈ ರಾಜ್ಯದಲ್ಲಿ ಕಾನೂನನ್ನು ತಂದಿದ್ದೇವೆ. ಇಲ್ಲಿಂದ ಪ್ರಾರಂಭ ಮಾಡೋಣ. ಇಡೀ ದೇಶಕ್ಕೆ ಆಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಗೋ ಸಂತತಿ ನಶಿಸಿ ಹೋಗುತ್ತಿದೆ ಎಂದು ಹೇಳುತ್ತಾರೆ. **"**Cattle numbers down by 6% since 2012, sharpest fall in states with tough cow slaughter laws'; 20th livestock census: Cattle population down in UP, increases in Bengal. Cattle population again down in UP." ಆದ್ದರಿಂದ ಇದರಲ್ಲಿ ತಮಗೆ ಗೊತ್ತಿದೆ. ಮಾನ್ಯ ಗೃಹ ಸಚಿವರೇ, **"**ಬೇಟಿ ಬಚಾವೋ, ಬೇಟಿ ಪಢಾವೋ**"** ಎಂದು ಏತಕ್ಕೆ ಮಾಡಿದರು ಎಂದರೆ, ಭ್ರೂಣ ಹತ್ಯೆ ನಡೆಯುತ್ತಿತ್ತು. ಭ್ರೂಣದಲ್ಲಿರುವುದು ಹೆಣ್ಣು ಮಗು ಎಂದರೆ ಭ್ರೂಣ ಹತ್ಯೆ ನಡೆಯುತ್ತಿತ್ತು. ಈಗ ಗಂಡು ಕರು ಕೆಲಸಕ್ಕೆ ಬರುವುದಿಲ್ಲವೆಂದು ಅದು ಬಹಳ ದೂರವೇನೂ ಇಲ್ಲ ನಮ್ಮ ವಿಜ್ಞಾನಿಗಳು ಕಂಡುಹಿಡಿದು ಬಿಡುತ್ತಾರೆ. ಏಕೆಂದರೆ, ಈಗಾಗಲೇ ಹೇಳಿದ್ದಾರೆ. ಕೇವಲ ಅವರು ಪ್ರಧಾನಮಂತ್ರಿಯವರಲ್ಲ ಮಹಾನ್ ವಿಜ್ಞಾನಿಯು ಕೂಡ ಆಗಿದ್ದಾರೆ. ಹಸುವಿನಲ್ಲಿ 33 ಕೋಟಿ ದೇವರಿದೆ ಅದು ಆಮ್ಲಜನಕವನ್ನು ತೆಗೆದುಕೊಂಡು ಆಮ್ಲಜನಕವನ್ನು ಹೊರಗಡೆ ಬಿಡುತ್ತದೆ ಎಂದು ಹೇಳುತ್ತಾರೆ. ನಾಳೆ ದಿನ ಗಂಡು ಕರು ಹುಟ್ಟಬಾರದೆಂದು ಹಸುಗಳ ಮೇಲೂ ಸಹ ಏನಾದರೂ ಸಂಶೋಧನೆಗಳನ್ನು ಮಾಡಿದರೆ ಆಗ ಏನು ಮಾಡುತ್ತೀರಿ? ಅದೂ ಭ್ರೂಣ ಹತ್ಯೆಯೇ. ಆದ್ದರಿಂದ ಮುಂದಾಲೋಚನೆಯಿಲ್ಲದೇ . . .

**ಶ್ರೀ ಬಸವರಾಜ ಬೊಮ್ಮಾಯಿ:–** ಈಗ ಸಧ್ಯ ನಮ್ಮ ರಾಜ್ಯದಲ್ಲಿ ಆ ರೀತಿ ಇಲ್ಲವಲ್ಲ.

**ಶೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ನಾನಿದನ್ನು ಮುಗಿಸಿಬಿಡುತ್ತೇನೆ. ಅದೂ ಪ್ರಾರಂಭವಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಈಗ ಏನು ನಡೆಯುತ್ತಿದೆ ಅದಕ್ಕೆ ಕಾನೂನು ಮಾಡಬಹುದು. ಮುಂದೆ ಏನು ನಡೆಯುತ್ತದೆ ಅದಕ್ಕೋಸ್ಕರ ಈಗ ಕಾನೂನು ತರುವುದಕ್ಕಾಗುತ್ತದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಪ್ರಜಾಪ್ರಭುತ್ವದಲ್ಲಿ . .

**ಶ್ರೀ ಬಸವರಾಜ ಬೊಮ್ಮಾಯಿ:–** ಇದು ಒಳ್ಳೆಯ ಸಮಾಚಾರ. ನೀವು ಕಾಲಜ್ಞಾನಿಗಳು, ನಾವು ಇಲ್ಲಿರುವವರು. ಮುಂದೆ ಏನಾಗುತ್ತದೆ ಎಂಬುದನ್ನು ನೀವು ಹೇಳುತ್ತೀರಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಆ ಬಿರುದುಗಳನ್ನೆಲ್ಲಾ ನೀವೇ ತೆಗೆದುಕೊಂಡಿರುವುದು. ನಾವೆಲ್ಲಾ ಶೂದ್ರರು, ದಲಿತರು. ಕಾಲಜ್ಞಾನಿಗಳಾಗುವುದಕ್ಕೆ ಆಗುತ್ತದೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:-** ನೀವೆಲ್ಲಾ ಕಾಲಜ್ಞಾನಿಗಳಾದ್ದರಿಂದ ನೀವು ಹೇಳಿದ್ದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಮುಂದೆ ಅಂತಹ ಪ್ರಸಂಗ ಬಂದಾಗ ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವೆಲ್ಲಾ ಕಾಲಜ್ಞಾನಿಗಳು, ತ್ರಿಕಾಲ ಜ್ಞಾನಿಗಳು, ವೇದಾಂತಿಗಳು, ಜ್ಞಾನಿಗಳು, ವಿಜ್ಞಾನಿಗಳು ಎಲ್ಲಾ ನೀವೇ.

**ಶ್ರೀ ಬಸವರಾಜ ಬೊಮ್ಮಾಯಿ:-** ತ್ರಿಕಾಲ ಅಲ್ಲ ಎಲ್ಲಾ ಕಾಲದ ಜ್ಞಾನಿಗಳು ನೀವು. ಮುಂಬರುವಂತಹ ಎಲ್ಲಾ ಕಾಲಗಳ ಜ್ಞಾನ ಕೂಡ ನಿಮ್ಮಲ್ಲಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಿಮ್ಮ ಪ್ರಧಾನಮಂತ್ರಿಗಿಂತ ದೊಡ್ಡ ವಿಜ್ಞಾನಿ, ಕಾಲಜ್ಞಾನಿ ಯಾರೂ ಇಲ್ಲ. ವಾದ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, argument ಅಲ್ಲ. ಈ ವಿಧೇಯಕದ ಬಗ್ಗೆ, ನನ್ನ ಬಗ್ಗೆ ಯಾರು ಬೇಕಾದರೂ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ನಾನು ಅದರ ಬಗ್ಗೆಯೇ ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಪ್ರಧಾನಮಂತ್ರಿಯವರು ಬಂದು ಇಲ್ಲೇನು defend ಮಾಡುವುದಕ್ಕಾಗುತ್ತದೆಯೇ? How can you take his name? Any Member of the other of this House, you should not take his name.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾವು policy makers ಬಗ್ಗೆಯೂ ಮಾತನಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಯಾರು ಇಲ್ಲ ಅವರು defend ಮಾಡುವುದಕ್ಕಾಗುವುದಿಲ್ಲ. ಪದೇ ಪದೇ ಅವರ ಹೆಸರು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ನಾನು ಹೆಸರು ಹೇಳುತ್ತಿಲ್ಲ ಪ್ರಧಾನಮಂತ್ರಿ ಎಂದು ಮಾತ್ರ ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಅದೇ ಪ್ರಧಾನಮಂತ್ರಿಯೇ. ಪ್ರಧಾನಮಂತ್ರಿಯವರು ಬಂದು ಇಲ್ಲಿ defend ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ನೀವು ಇದಕ್ಕೆ ಸೀಮಿತವಾಗಿ ಮಾತನಾಡಿ. ಈ ಕಾನೂನಿಗೆ ಬಂದಿರುವಂತಹದ್ದು, ಬೇರೆ ರಾಜ್ಯಗಳಲ್ಲಿ ಇರುವುದು ಇದನ್ನೆಲ್ಲಾ ಒಪ್ಪಿಕೊಳ್ಳುತ್ತೇವೆ. ಅದೇನು ಪ್ರಶ್ನೆಯಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಬೇರೆ ರಾಜ್ಯದವರೂ ಬಂದು ಇಲ್ಲಿ defend ಮಾಡುವುದಕ್ಕಾಗುವುದಿಲ್ಲ ಅದನ್ನೂ ಮಾಡಬೇಡಿ ಎಂದು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಇಲ್ಲ. ಒಂದು ನೀತಿ, ಪಾಲಿಸಿ, ಕಾಯಿದೆ, ಕಾನೂನು ಇದರ ಬಗ್ಗೆ ಚರ್ಚೆ ಮಾಡಬಹುದು. ಆದರೆ ವ್ಯಕ್ತಿಗಳ ಬಗ್ಗೆ ಮಾತನಾಡಬೇಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈಗ ತಂದಿರುವ ಕಾನೂನಿನ ಮೂಲಕ ನೀವು ಏನನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಇದು ಜನಸಾಮಾನ್ಯರ ಕಾರ್ಯಕ್ರಮವಂತೂ ಅಲ್ಲವೇ ಅಲ್ಲ. ಈ ಕಾರ್ಯಕ್ರಮ ಕೇವಲ ಕೆಲವು ಶಕ್ತಿಗಳೇನಿವೆ, ರಾಜ್ಯದಲ್ಲಿ ಭಯದ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೋದಕ್ಕೋಸ್ಕರ ಕೆಲವು ಶಕ್ತಿಗಳು ಸುಮಾರು ವರ್ಷದಿಂದ ಪ್ರಯತ್ನ ಮಾಡುತ್ತಿವೆಯಲ್ಲ ಆ ಶಕ್ತಿಗಳಿಗೆ ಮಣೆ ಹಾಕುವುದಕ್ಕೋಸ್ಕರ ನೀವು ಈ ಕಾನೂನನ್ನು ತಂದಿದ್ದೀರಿ. ಇದರಿಂದ ದೇಶಕ್ಕೂ ಒಳ್ಳೆಯದಲ್ಲ, ಸಮಾಜಕ್ಕೂ ಒಳ್ಳೆಯದಲ್ಲ ಮತ್ತು ಆರ್ಥಿಕ ಸ್ಥಿತಿ ಏನಿದೆ ಅದಕ್ಕೂ ಸಹ ಒಳ್ಳೆಯದಲ್ಲ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನೀವು export ban ಮಾಡಿಲ್ಲ. ಗುಜರಾತ್‌ನಲ್ಲಿ 'ಅಮುಲ್' ಕಂಪನಿ ಇದೆ. ಆ ಕಂಪನಿ ಹಾಲು ಉತ್ಪಾದನೆಗೆ per day twenty-four crore liquid cash distribute ಮಾಡುತ್ತದೆ. ಅದು ಸಹಕಾರಿ ಕ್ಷೇತ್ರದಲ್ಲಿದೆ. ಈಗ ಆ ಹಸುಗಳನ್ನೆಲ್ಲಾ ಕೊಂದು, ಹಸುಗಳನ್ನೆಲ್ಲಾ ಬ್ಯಾನ್ ಮಾಡಿ ರೈತರು ಹಸುಗಳನ್ನು ಸಾಕುವುದನ್ನು ನಿಲ್ಲಿಸಿದ ಮೇಲೆ ಅದನ್ನೂ ಕೂಡ ಕಾರ್ಪೊರೇಟರ್‌ಗಳು ತೆಗೆದುಕೊಳ್ಳುವುದಕ್ಕೋಸ್ಕರ ಏನು ನೀವು ರೈತರ ಬಗ್ಗೆ ಕಾಳಜಿ ವಹಿಸಿದ್ದೀರಲ್ಲಾ, ಕಪ್ಪು ಕಾನೂನನ್ನು ತಂದಿದ್ದೀರಲ್ಲಾ ಅದೇ ರೀತಿ ಈ ಕಾನೂನನ್ನು ತಂದು ರೈತರಿಗೆ;

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನನಗೆ ಇವರ ವಾದ ಅರ್ಥವಾಗುತ್ತಿಲ್ಲ. ನಾವು ಹಸುಗಳನ್ನು ಉಳಿಸಿ, ಬೆಳೆಸಿ ಅದಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಮಾಡಿದರೆ ಇವರು ಹಸುಗಳನ್ನು ವಧೆ ಮಾಡುವವರ ಪರವಾಗಿ ಮಾತನಾಡಿ; ಹಸುಗಳನ್ನು ಬೆಳೆಸುವುದಕ್ಕೋಸ್ಕರ ನಾವು ಇದುವರೆಗೂ 'ಅಮುಲ್' ಅನ್ನು ಕಟ್ಟಿ ಬೆಳೆಸಿದವರಿಗೆ ಅಪಮಾನ ಮಾಡುವ ರೀತಿಯಲ್ಲಿ; ನಾವು ಅದನ್ನು ಬೆಳೆಸಬೇಕು, ಶಕ್ತಿಯುತವನ್ನಾಗಿ ಮಾಡಬೇಕೆಂದು ಈ ಕಾನೂನನ್ನು ತಂದರೆ ಇವರು ಅದನ್ನು ಮುಗಿಸಿ ಪ್ರೈವೇಟ್‌ಗೆ ಕೊಡಬೇಕೆನ್ನುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಮಾಡುತ್ತಿರುವುದು ಅದನ್ನೇ.

**ಶ್ರೀ ಬಸವರಾಜ ಬೊಮ್ಮಾಯಿ:-** ಬರೀ ಪ್ರೈವೇಟ್‌ಗೆ ಕೊಡುವಂತಹದ್ದನ್ನು ಇವರ ಕಾಲದಲ್ಲಿ ಮಾಡಿದ್ದಾರೆ. ಅದಕ್ಕೆ ಅದೇ ಅನುಭವದಿಂದ ನಮಗೆ ಹೇಳುತ್ತಾರೆ ಅಷ್ಟೇ. ಇದು ಅವರ ಅನುಭವದ ಮಾತುಗಳು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಒಬ್ಬ ಗೃಹ ಸಚಿವರಾಗಿ ತಾವು ಈ ರೀತಿ ಮಾತನಾಡುವುದು ತಪ್ಪು. ನಾವು ಯಾವುದೇ ಕಂಪನಿಗಳನ್ನು ಸಹ ಪ್ರೈವೇಟ್ ಮಾಡಿಲ್ಲ, privatize ಮಾಡಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ನಾವು ಅಮುಲ್ ಅನ್ನು ಮಾಡಿದ್ದೇವೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಮಾಡುತ್ತಿರುವ ಎಲ್ಲಾ ಕಂಪನಿಗಳೂ privatize ಆಗಿವೆ (**ಗೊಂದಲ**) ರೈಲನ್ನೂ ಕೂಡ ಮಾರುವುದಕ್ಕೆ ಹೋಗುತ್ತಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಸಾರ್ವಜನಿಕ ವಲಯದ ಮಾರಾಟ ಪ್ರಾರಂಭವಾಗಿದ್ದೇ ಕಾಂಗ್ರೆಸ್ ಪಕ್ಷದಿಂದ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ವಾಸ್ತವಿಕವಾಗಿರುವಂತಹ ವಿಚಾರವಿದು. ಕಾಲ್ಪನಿಕವಲ್ಲ. ಒಂದಾದ ಮೇಲೊಂದು ಕಂಪನಿಗಳನ್ನು, ಎಲ್ಲಾ ಕಂಪನಿಗಳನ್ನೂ ಸಹ ತಾವು ಮಾರುತ್ತಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಹರಿಪ್ರಸಾದ್‌ರವರೇ, ಒಂದು ನಿಮಿಷ ಕೇಳಿ. . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಭಾರತ್ ಪೆಟ್ರೋಲಿಯಂ ಅನ್ನು ಮಾರುತ್ತಿದ್ದೀರಿ. ಎಲ್ಲವನ್ನು ಮಾರಿದಿರಿ. ಎಲ್.ಐ.ಸಿ., ಮಾರುತ್ತಿದ್ದೀರಿ, ಪ್ರತಿಯೊಂದು ಕಂಪನಿಗಳನ್ನು ಮಾರುತ್ತಿದ್ದೀರಿ. (ಗೊಂದಲ) ಇನ್ನೂ ಹತ್ತಾರು ವಿಮಾನ ನಿಲ್ದಾಣಗಳನ್ನು ಮಾರುತ್ತಿದ್ದೀರಿ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಒಂದು ನಿಮಿಷ ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಗೃಹಸಚಿವರು ಬಹಳ ದೊಡ್ಡ ಮನಸ್ಸು ಇಟ್ಟುಕೊಂಡಿದ್ದಾರೆಂದು ಕೇಳಿದ್ದೆ, ಆದರೆ ಈ ರೀತಿ ಸಣ್ಣ ಮನಸ್ಸಿನವರು ಎಂದು ತಿಳಿದಿರಲಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಒಂದು ನಿಮಿಷ ... Please yield for a minute.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ನಾನು yield ಆಗುವುದಿಲ್ಲ. ಸ್ವಲ್ಪ ಕುಳಿತುಕೊಳ್ಳಿ. ನಾನು ಮಾತನಾಡಿ ಮುಗಿಸುತ್ತೇನೆ, ಆಮೇಲೆ ಮಾತನಾಡಿ. ರಕ್ಷಣೆ ಕೊಡಬೇಕಾದ ಗೃಹ ಸಚಿವರು ರಕ್ಷಣೆ ಕೊಡುವ ಹಾಗೆ ಕಾಣುತ್ತಿಲ್ಲ. ದಯವಿಟ್ಟು ಮಾನ್ಯ ಸಚಿವರು ಕುಳಿತುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ನೀವೇ ಹೇಳಿದರೆ ಹೇಗೆ ಸ್ವಲ್ಪ ಬೇರೆಯವರು ಹೇಳಿದ್ದನ್ನು ಕೇಳಬೇಕಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್:–** ಪೂರ್ತಿ ಕೇಳುತ್ತೇನೆ. ನಾನು ಮಾತನಾಡುವಾಗ ಅವರು ಮಾತನಾಡಿದರೆ ಅವರು ಮಾತನಾಡುವಾಗ ನಾನು ಅಡ್ಡ ಹೋಗುತ್ತೇನೆ ಅಷ್ಟೇ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಪಾರ್ಲಿಮೆಂಟ್‌ನಲ್ಲಿದ್ದವರು. ಹಾಗಾಗಿ ಅಲ್ಲಿನ ವಿಷಯಗಳನ್ನು ಬೆಳಕು ಚೆಲ್ಲುತ್ತಿದ್ದಾರೆ. ಪ್ರಶ್ನೆ ಇಲ್ಲ. ಯಾವ ಸಂದರ್ಭದಲ್ಲಿ ಯಾವ ಕಂಪನಿಗಳನ್ನು ಯಾರು ಮಾಡಿದ್ದಾರೆಂದು ನಮ್ಮಲ್ಲಿ ದಾಖಲೆಗಳು ಇವೆ. ದ್ವಂದ್ವ ನೀತಿಗಳ ಬಗ್ಗೆ ಹೇಳಿದರು. ನನ್ನ ಹತ್ತಿರ ಬೇಕಾದಷ್ಟು ಉದಾಹರಣೆಗಳಿವೆ. ಆದರೂ ನಾನು ಯಾವುದನ್ನೂ ಕೊಡುವುದಿಲ್ಲ, ಒಂದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಕ್ಲಾಸಿಕ್ ಉದಾಹರಣೆ ಹೇಳುತ್ತೇನೆ. ಈ ದೇಶದಲ್ಲಿ Nationalisation of Banks ಯಾರು ಮಾಡಿದರು? ಕಾಂಗ್ರೆಸ್ ಪಕ್ಷದ ಪ್ರಧಾನಮಂತ್ರಿಯವರಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಹೌದು ಪ್ರೈವೇಟ್‌ನಿಂದ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

(ಮುಂದು)

(235) 08–02–2021/ 06–20/ ಕೆಹೆಚ್–ಆರ್‌ಎನ್

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಹರಿಪ್ರಸಾದ್‌ರವರೇ ನಾನು ಅದನ್ನೇ ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ನನಗೆ ಅಷ್ಟೊಂದು ಇಂಗ್ಲೀಷ್ ಬರುವುದಿಲ್ಲ. ಅದಕ್ಕೆ ಆ ಮಾತು ಹೇಳಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಹರಿಪ್ರಸಾದ್‌ರವರೇ, ತಾವು ಸೂಪರ್ ಆಗಿ ಇಂಗ್ಲೀಷ್ ಮಾತನಾಡುತ್ತೀರಿ ಎಂದು ನನಗೆ ಗೊತ್ತಿದೆ. ನಮ್ಮದೆಲ್ಲಾ ಕನ್ನಡ ಇಂಗ್ಲೀಷ್. ಎರಡನೆಯದಾಗಿ, ಮಾನ್ಯ ಮನಮೋಹನ್ ಸಿಂಗ್‌ರವರು ಬಂದು ಬ್ಯಾಂಕ್‌ಗಳನ್ನು privatisation ಮಾಡಿದರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಅವರು ಯಾವಾಗ ಮಾಡಿದರು ಸ್ವಾಮಿ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಎಲ್ಲಾ privatisation ಬ್ಯಾಂಕ್‌ಗಳೇ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು mislead ಮಾಡುತ್ತಿದ್ದಾರೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮನಮೋಹನ್ ಸಿಂಗ್‌ರವರು ಇದ್ದಾಗ nationalize ಗೆ ಅವಕಾಶ ಇರಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಹಂಗಾಮಿ ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ, ತಮ್ಮ ತಮ್ಮ ಸರದಿಗಳು ಬಂದಾಗ ಮಾತನಾಡಿ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, privatization ಗೆ ಮಾನ್ಯ ಇಂದಿರಾ ಗಾಂಧಿಯವರ ಕಾಲದಲ್ಲಿ ಅವಕಾಶ ಇರಲಿಲ್ಲ. ಅವರು private ಬ್ಯಾಂಕುಗಳನ್ನೆಲ್ಲಾ nationalized ಬ್ಯಾಂಕುಗಳಾಗಿ ಮಾಡಿದರು. ಅದಕ್ಕೆ ಅವಕಾಶ ಇರಲಿಲ್ಲ. ಡಾ॥ ಮನಮೋಹನ್ ಸಿಂಗ್‌ರವರು ಬಂದು ಖಾಸಗಿ ಬ್ಯಾಂಕ್‌ಗಳಿಗೆ ಅವಕಾಶ ಮಾಡಿಕೊಟ್ಟರು. ಇದು ಯಾವ ರೀತಿ ಸ್ವಾಮಿ, ಒಂದು ಕಡೆ nationalize ಮಾಡುತ್ತಾರೆ. ಇನ್ನೊಂದು ಕಡೆ privatize ಮಾಡುತ್ತಾರೆ. ಇದೊಂದೇ ಉದಾಹರಣೆ ಸಾಕು. Nationalized ನಲ್ಲಿರುವಂತಹ ಎಲ್ಲದಕ್ಕೂ ಕೂಡ ಪೂರ್ಣವಾಗಿ privatize ಮಾಡಬೇಕು; Partial ಮಾಡಬೇಕು, Full ಮಾಡಬೇಕೆಂದು ಕಾಲಕಾಲಕ್ಕೆ ನೀತಿಯನ್ನು ತಂದವರೇ ಯು.ಪಿ.ಎ., ಸರ್ಕಾರ. ಆದ್ದರಿಂದ, ಇವರಿಂದ ನಾವು ಕಲಿಯಬೇಕಾಗಿಲ್ಲ. ಕಲಿಯುವಂತಹ ಪರಿಸ್ಥಿತಿ ನಮ್ಮಲ್ಲಿ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ತಮಗೆ ಕಲಿಯುವುದಕ್ಕೂ ಆಗುವುದಿಲ್ಲ. ತಾವು ಆ ರೀತಿ ಹೇಳುವುದಕ್ಕೆ ನಾನು WhatsApp University ಅಥವಾ Nagpur University ನಿಂದ ಬಂದವನು ಅಲ್ಲ. ಸನ್ಮಾನ್ಯ ಶ್ರೀಮತಿ ಇಂದಿರಾ ಗಾಂಧಿಯವರು ಯಾವುದೇ ಕಂಪನಿಗಳನ್ನು privatize ಮಾಡಲಿಲ್ಲ. ಡಾ॥ ಮನಮೋಹನ್ ಸಿಂಗ್‌ರವರು ಯಾವುದೇ ಕಂಪನಿಯನ್ನು privatize ಮಾಡಲಿಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರಿಗೆ ಯಾವ ರೀತಿಯೋ ನನಗೆ ಗೊತ್ತಿಲ್ಲ. ನೇರವಾಗಿ ಕ್ಲಬ್ ಅಂಡ್ ಬಾರ್ ವಿಶ್ವವಿದ್ಯಾನಿಲಯದಿಂದ ಓದಿಕೊಂಡು ಬಂದವರು, ನಮ್ಮ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ಏನು ಅಧಿಕಾರ ಇದೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆ ರೀತಿ ಏನಾದರೂ ಮಾಡಿದ್ದರೆ, ಮಾನ್ಯ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯವರೇ ಮಾಡಿರುವಂತಹದ್ದು. ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಡಾ॥ ಮನಮೋಹನ್ ಸಿಂಗ್‌ರವರು ಯಾವುದನ್ನೂ ತರುವುದಕ್ಕೆ ಆಗುವುದಿಲ್ಲ. ಯಾವುದಾದರೂ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣದಿಂದ ಖಾಸಗೀಕರಣ ಮಾಡಿದ್ದರೆ, ಅದಕ್ಕೆ ನೇರ ಹೊಣೆ ಮಾನ್ಯ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯವರು ಎಂದು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಮ್ಮ ವಿದ್ಯೆ ವಿದೇಶ. ಇಂಡೋ–ಇಟಾಲಿಯನ್...

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದು ಖಾಸಗೀಕರಣ ಅಲ್ಲ. ಸ್ವಂತ ಬಂಡವಾಳವನ್ನು ಗಳಿಸುವುದಕ್ಕೋಸ್ಕರ ಗುಜರಾತಿನಲ್ಲಿರುವಂತಹ ಈಗಲೂ . . .

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇಂಡೋ–ಇಟಾಲಿಯನ್ ಸಂಸ್ಕೃತಿಯಲ್ಲಿ ಹೀಗೆಯೇ ಇರುತ್ತದೆ. ಇದನ್ನು ನೋಡಿ ಮಾನ್ಯ ಹರಿಪ್ರಸಾದ್‌ರವರು ಏಕೆ ಸಂಕಟಪಡುತ್ತಾರೆ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಆಯನೂರು ಮಂಜುನಾಥ್‌ರವರೇ, ದಯಮಾಡಿ ಕುಳಿತುಕೊಳ್ಳಿ. ತಾವು ನಂತರ ಮಾತನಾಡಿ. ಮಾನ್ಯ ಗೃಹ ಸಚಿವರು ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಮಾತನಾಡಿದ ನಂತರ ತಾವು ಮಾತನಾಡಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಮಾನ್ಯ ಗೃಹ ಸಚಿವರ ಹತ್ತಿರ ಯಾವ ಪ್ರಶ್ನೆಗೆ ಮಾತನಾಡಬೇಕೋ, ಮಾತನಾಡಿ. 'ವಿಶ್ವವಿದ್ಯಾನಿಲಯ' ಎಂದು ತಾವು ಹೇಳಿರುವುದಕ್ಕೆ ನಾನು ಓದಿರುವುದು ನೆನಪಾಯಿತು. ನಾನು ಇಟಾಲಿಯನ್ ವಿಶ್ವವಿದ್ಯಾನಿಲಯದಲ್ಲಿ ಓದಿದ್ದೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಆಯನೂರು ಮಂಜುನಾಥ್‌ರವರೇ, ಈ ರೀತಿ ಮಾತನಾಡಿರುವುದಕ್ಕೆ . . .

**ಹಂಗಾಮಿ ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಮಾತನಾಡುವುದಕ್ಕೆ ಇನ್ನು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಕೇಳಿ. ಏನಾದರೂ ಇಲ್ಲದೇ ಇರುವುದನ್ನು ಹೇಳುವುದಕ್ಕೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, . . .

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮನಮೋಹನ್ ಸಿಂಗ್‌ರವರು ಉದಾರಣೀಕರಣವನ್ನು ಜಾರಿಗೆ ತಂದರು. ಆದರೆ, ಯಾವುದನ್ನೂ ಸಹ ಖಾಸಗೀಕರಣ ಮಾಡಲಿಲ್ಲ. ಅಲ್ಲಿ ಜಾಗ ಗೊತ್ತಿದ್ದರೂ ಸಹ ಯಾರು ಮಾತನಾಡಲಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಇಟಾಲಿಯನ್ ಪ್ರಾಡಕ್ಟ್. ಕ್ಲಬ್‌ನ ಪ್ರಾಡಕ್ಟ್ ನಾನು. ಜಾನ್ಸನ್ ಪ್ರಾಡಕ್ಟ್ ನಾನು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಗುಜರಾತ್‌ನಲ್ಲಿ ಇರುವಂತಹ ಅಮುಲ್ ಕಂಪನಿಯನ್ನು ಖಾಸಗಿಯವರ ಕೈಗೆ ಕೊಡುವುದಕ್ಕೆ ಇದು ಒಂದು ದೊಡ್ಡ ಹುನ್ನಾರ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಸಂಪೂರ್ಣವಾಗಿ ಹಸಿ ಸುಳ್ಳನ್ನು ಹೇಳುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ತಾವು ನಂತರ ಹೇಳಿ. ನಾನು ಈಗ ಹೇಳಿ ಆಯಿತು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಸುಳ್ಳು ಎಂದು ಹೇಳುವುದಕ್ಕೆ ಆ ಒಂದು ವಿಶ್ವವಿದ್ಯಾನಿಲಯದಿಂದ ನಾನು ಬಂದವನು ಅಲ್ಲ. **(ಗೊಂದಲ)** ನಾನು ಯಾವುದೋ ಒಂದು ವಿಶ್ವವಿದ್ಯಾನಿಲಯದವನು ಅಲ್ಲ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಈ ರೀತಿ ಕಾಲಹರಣ ಮಾಡಿದರೆ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ದಯಮಾಡಿ, ಆದಷ್ಟೂ ವಿಚಾರಕ್ಕೆ ಬನ್ನಿ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಂತ್ರಿಗಳು ಇದ್ದಾರೆ. ಅವರು ಉತ್ತರವನ್ನು ಕೊಡಲಿ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ಇಲ್ಲದಿದ್ದರೆ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ ಅಷ್ಟೇ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಗಾದರೆ ಯಾರಿಗೂ ಅವಕಾಶವನ್ನೇ ಕೊಡಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇಷ್ಟೊಂದು ಕೋಟ್ಯಂತರ . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತನಾಡುವುದಕ್ಕೆ ಯಾರಿಗೂ ಅವಕಾಶ ಸಿಗುವುದಿಲ್ಲ ಎಂದು ಹೇಳುತ್ತಿದ್ದೀರಲ್ಲವೇ? ಅವರು ಏನು ವಿಷಯ ಬಿಟ್ಟು ಮಾತನಾಡಿದ್ದಾರೆಯೇ?

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ತಾವು ಸುಮ್ಮನೆ ಇಲ್ಲದೇ ಇರುವುದನ್ನು ಹೇಳುತ್ತಿದ್ದೀರಿ. ನಾನು ಸಮಯ ಆಗುತ್ತದೆ, ಉಳಿದ ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಸಮಯ ಸಿಗುವುದಿಲ್ಲ ಎಂದು ಹೇಳಿದೆ. ಅದನ್ನು ತಾವು ಅರ್ಥ ಮಾಡಿಕೊಳ್ಳಿ. ಇದಕ್ಕೆ ನಾನೇನು ಮಾಡಲಿ. ನಾನು ಎಲ್ಲರಿಗೂ ಸಮಯ ಸಿಗಬೇಕೆಂದು ಹೇಳುತ್ತಿದ್ದೇನೆ. **(ಗೊಂದಲ)** ತಾವು ಎಲ್ಲಾ ಸಂದರ್ಭದಲ್ಲಿಯೂ ಮೂಗು ತೂರಿಸುತ್ತೀರಿ. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಮಾತನಾಡಿ. ತಾವು ಈಲ್ಡ್ ಆಗಬೇಡಿ, ತಾವು ಏಕೆ ಯೀಲ್ಡ್ ಆಗುತ್ತೀರಿ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾತಿನ ಮೇಲೆ ಹಿಡಿತ ಇಲ್ಲದಿದ್ದರೆ ಈ ರೀತಿಯೇ ಆಗುವುದು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಹೌದು. ಈ ರೀತಿಯೇ ಆಗುವುದು. ಪ್ರತಿ ಬಾರಿಯೂ . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ 159 ಗೋಶಾಲೆಗಳು ಮಾತ್ರ ಇರುವಂತಹದ್ದು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕಕ್ಕೆ ಹೆಮ್ಮೆ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರೇ, ಹೆಮ್ಮೆ ಇರಲಿ. ಈ ಕರ್ನಾಟಕ ರಾಜ್ಯದಲ್ಲಿ 159 ಗೋಶಾಲೆಗಳಲ್ಲಿದ್ದು, ಆ ಗೋಶಾಲೆಗಳಲ್ಲಿ ಕೋಟ್ಯಂತರ ಹಸುಗಳನ್ನು ಯಾರು ಸಾಕುತ್ತಾರೆ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಚರ್ಚೆ ಮಾಡುವಾಗ ಸಂಘ ಪರಿವಾರವನ್ನು ಎತ್ತಿಕೊಂಡು ಬರುವುದು; ಆ ಸಂಘ ನನ್ನ ತಾಯಿ, ನನ್ನ ತಾಯಿಯ ಬಗ್ಗೆ ಉಲ್ಲೇಖ ಮಾಡಿದರೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರೇ, ಹಾಗಾದರೆ ತಾವು ಕೂಗಿಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸಂಘ ಪರಿವಾರ ನನಗೆ ಶಿಕ್ಷಣವನ್ನು ಕೊಟ್ಟು ಬೆಳೆಸಿದೆ. ಅದು ನಮ್ಮ ತಾಯಿ, ಅದು ನಮ್ಮ ಶಕ್ತಿ. ಅದಕ್ಕೋಸ್ಕರ ನಾವು ಇಲ್ಲಿ ಬಂದು ಕುಳಿತುಕೊಂಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಈಲ್ಡ್ ಆಗುತ್ತಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು, ಪ್ರತಿ ಬಾರಿ ನಮ್ಮ ಬಗ್ಗೆ ಏನಾದರೂ ಉಲ್ಲೇಖ ಮಾಡಿ ಮಾತನಾಡುವಾಗ, 'ಪರಿವಾರ, ಸಂಘ' ಎಂದು ಮಾತನಾಡಿದರೆ, ಇದಕ್ಕೆ ಏನಾದರೂ ಅರ್ಥವಿದೆಯೇ? **(ಗೊಂದಲ)** ಇದರ ಬಗ್ಗೆ ಇವರಿಗೆ ಏನಾದರೂ ಗೊತ್ತಿದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರೇ, ಈ ಅನಾಹುತಕ್ಕೆ ಯಾರು ಕಾರಣ? ಈ ದೇಶಕ್ಕೆ ಎಲ್ಲಿಂದಲೋ ಅನಾಹುತ ಆಗಿದೆಯೇ?

**ಹಂಗಾಮಿ ಸಭಾಪತಿಯವರು:-** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರೇ, ದಯಮಾಡಿ ವಿಚಾರಕ್ಕೆ ಬನ್ನಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ದೇಶಕ್ಕೆ ಎಲ್ಲಿಂದಲೋ ಅನಾಹುತ ಆಗಿಲ್ಲ, ಕಾಂಗ್ರೆಸ್ ಪಕ್ಷದಿಂದಲೇ ಅನಾಹುತ ಆಗಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ 159 ಗೋಶಾಲೆಗಳು ಇರುವಂತಹದ್ದು. ಈ ಸರ್ಕಾರದವರು ಯಾವ ರೀತಿ ಕೋಟ್ಯಂತರ ಹಸುಗಳನ್ನು ಸಾಕುತ್ತಾರೆ ಎಂಬುದನ್ನು ಹೇಳಲಿ. ಮಾನ್ಯ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಗಳಾದ ಮೇಲೆ ನಿರುದ್ಯೋಗವನ್ನು ನಿವಾರಣೆ ಮಾಡುತ್ತೇವೆ ಎಂದು ಹೇಳಿದರು. ಇವರು ಇನ್ನು ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕೆ ಆಗಲಿಲ್ಲ. . . .

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರೇ, ತಾವು ವಿಷಯಾಂತರ ಮಾಡಬೇಡಿ. ಆ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಾಳೆ ರಾಜ್ಯಪಾಲರ ಭಾಷಣದ ಮೇಲೆ ಅವಕಾಶಗಳು ಇವೆ. ತಾವು ಅದರಲ್ಲಿ ಚರ್ಚೆ ಮಾಡಿ. ಈಗ ತಾವು ವಿಧೇಯಕದ ವಿಚಾರಕ್ಕೆ ಬನ್ನಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಯವರು ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ.

**ಶ್ರೀ ಸುನೀಲ್ ವಲ್ಯಾಪೂರೆ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಸುನೀಲ್ ವಲ್ಯಾಪೂರೆರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ನಾಳೆ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಾಗ ಈ ವಿಚಾರಗಳನ್ನು ಮಾತನಾಡಿ. ಇವತ್ತು ನೇರವಾಗಿ ಈ ವಿಧೇಯಕದ ವಿಚಾರಕ್ಕೆ ಬನ್ನಿ. ಇಲ್ಲದಿದ್ದರೆ ಸುಮ್ಮನೆ ಕಾಲಹರಣವಾಗುತ್ತದೆ. ಇದರಲ್ಲಿ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಕಾರ್ಯಕ್ರಮಗಳ ಬಗ್ಗೆ ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಮೊದಲು ವಿಚಾರಕ್ಕೆ ಬನ್ನಿ. ಮಾನ್ಯ ಸಚಿವರು ಮಂಡಿಸಿರುವ ಗೋಹತ್ಯೆ ನಿಷೇಧ ವಿಧೇಯಕದ ಬಗ್ಗೆ ಚರ್ಚೆ ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, . . .

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಆ ವಿಚಾರದ ಬಗ್ಗೆ ನಾಳೆ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಎಷ್ಟು ಬೇಕಾದರೂ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಯುವಕರಿಗೆ ಯಾವ ರೀತಿಯ ಉದ್ಯೋಗಾವಕಾಶಗಳನ್ನು ಕೊಡುವುದಕ್ಕೂ ಇವರಿಗೆ ಆಗುತ್ತಿಲ್ಲ. ಆದ್ದರಿಂದ ಸರ್ಕಾರ ನಿರುದ್ಯೋಗಿ ಯುವಕರನ್ನು ದನ ಕಾಯುವುದಕ್ಕೆ ಹಾಕುವುದಕ್ಕೋಸ್ಕರ ಈ ಕಾನೂನನ್ನು ತರುತ್ತಿದೆ. ಸರ್ಕಾರ ಕೂಡ ದನ ಕಾಯುತ್ತದೆ, ನಿರುದ್ಯೋಗಿ ಯುವಕರನ್ನು ದನ ಕಾಯುವುದಕ್ಕೆ ಕಳುಹಿಸುತ್ತಾರೆ ಎನ್ನುವಂತಹ ಮಾತು ಸಹ ಇದೆ. ಈ ಒಂದು ಜಾನುವಾರುಗಳ ಹತ್ಯೆಯ ಬಗ್ಗೆ ಏನು ವಿಧೇಯಕವನ್ನು ತಂದಿದ್ದಾರೆ, ಇದನ್ನು ನಾವು ಸಂಪೂರ್ಣವಾಗಿ ನಿರ್ನಾಮ ಮಾಡುತ್ತೇವೆ ಎಂದು ಈ ಸದನದ ಮೂಲಕ ಹೇಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ಮಾತು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ನಮ್ಮ ದೇಶದಲ್ಲಿ ಎಷ್ಟು ಜನರು ದನ ಕಾಯುತ್ತಿದ್ದಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, . . .

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರೇ, ತಮಗೂ ಸಮಯವನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಬೇರೆ ವಿಚಾರದ ಬಗ್ಗೆ ನಾವು ಉತ್ತರ ಕೂಡ ಕೊಡುತ್ತೇವೆ. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಸರ್ಕಾರದವರು ದನ ಕಾಯುತ್ತಾರೆ ಎಂದು ಹೇಳಿದ್ದಾರೆ. ನಾವು ಗೋ-ರಕ್ಷಣೆಯ ಕಾನೂನನ್ನು ತಂದಿದ್ದೇವೆ. ಇದರ ಬಗ್ಗೆ ನಮಗೆ ಹೆಮ್ಮೆ ಇದೆ. ನಾವು ದನ ಕಾಯುವ ಸಲುವಾಗಿ, ಗೋವುಗಳನ್ನು ರಕ್ಷಣೆ ಮಾಡುವ ಸಲುವಾಗಿ ಈ ವಿಧೇಯಕವನ್ನು ತಂದಿದ್ದೇವೆ. ಇವರು ದನ ಕೊಲ್ಲುವವರು, ನಾವು ದನ ಕಾಯುವವರು ಮತ್ತು ರಕ್ಷಣೆ ಮಾಡುವವರು.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ
ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಈ ರಾಜ್ಯದಲ್ಲಿ ವಾಸ ಮಾಡುವಂತಹ ಜನರ ಬಗ್ಗೆ ಈಗಾಗಲೇ ಸರ್ವೆ ಕೂಡ ಆಗಿದೆ. ಈ ರಾಜ್ಯದಲ್ಲಿ ಸುಮಾರು ಶೇಕಡಾ 15 ರಿಂದ 16 ರಷ್ಟು ಜನರು minorities ವಾಸ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿಯ ಜನಾಂಗದವರು, ಹಿಂದುಳಿದ ವರ್ಗದ ಜನಾಂಗದವರು ಮತ್ತು ಶೂದ್ರರು ಇವರೆಲ್ಲಾ ಸೇರಿದರೆ ಸುಮಾರು ಶೇಕಡಾ 70 ರಷ್ಟು ಜನರು ಇದನ್ನು ತಿನ್ನುತ್ತಾರೆ. ಇದರಲ್ಲಿ ಪ್ರೋಟೀನ್ ಇರುವಂತಹ ಒಂದು ಅಂಶ. ಈ ವ್ಯವಸ್ಥೆಗೆ ಕೈ ಹಾಕುವುದಕ್ಕೆ ಸರ್ಕಾರ ಹೊರಟಿದೆ. ದಯವಿಟ್ಟು, ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಶಾಂತರಾಮ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸದಸ್ಯರಾದ ನಸೀರ್ ಅಹ್ಮದ್‌ರವರೇ, ತಾವು ಎಲ್ಲರಿಗೂ ಎಂದು ಹೇಳುತ್ತಿದ್ದೀರಾ?

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸದಸ್ಯರಾದ ಶಾಂತರಾಮ ಬುಡ್ನ ಸಿದ್ದಿಯವರೇ, ನಾನು ಶೇಕಡಾ 70 ರಷ್ಟು ಎಂದು ಹೇಳಿದ್ದೆ.

**ಶ್ರೀ ಶಾಂತರಾಮ ಬುಡ್ನ ಸಿದ್ದಿ:-** ಮಾನ್ಯ ಸದಸ್ಯರಾದ ನಸೀರ್ ಅಹ್ಮದ್‌ರವರೇ, ತಾವು ಹೇಳಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸದಸ್ಯರಾದ ಶಾಂತರಾಮ ಬುಡ್ನ ಸಿದ್ದಿಯವರೇ, ಇದರ ಬಗ್ಗೆ ಸರ್ವೆ ಮಾಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸದಸ್ಯರಾದ ಶಾಂತರಾಮ ಬುಡ್ನ ಸಿದ್ದಿಯವರೇ, ತಾವು ತಿನ್ನುವುದಿಲ್ಲ. ತಾವು ತಿನ್ನುವುದಕ್ಕೂ ಸಾಧ್ಯ ಇಲ್ಲ. ಬಹಳಷ್ಟು ಜನ ಶೂದ್ರರು ತಿನ್ನುತ್ತಾರೆ ಎಂದು ಹೇಳಿದ್ದಾರೆ ಅಷ್ಟೇ.

**ಹಂಗಾಮಿ ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ತಾವು ಮಾತನಾಡಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಸದನದಿಂದ ಮಾನ್ಯ ಗೃಹ ಸಚಿವರು ಹೊರಟು ಹೋಗಿದ್ದಾರೆ. ಮಾನ್ಯ ಸಚಿವರ ಗಮನಕ್ಕೆ ತರಬೇಕಾಗಿರುವಂತಹದ್ದು, ಸೆಕ್ಷನ್ 17ರಲ್ಲಿ any persons ಎಂದರೆ, ಯಾರಾದರೂ ಒಬ್ಬರೂ ಗೋ–ಹತ್ಯೆ ಮಾಡುವುದಕ್ಕೆ ಹೊರಟಿದ್ದರೆ, ಅವರನ್ನು ಹೋಗಿ ನಿಲ್ಲಿಸಿ, ಅವರನ್ನು ಕೊಂದು ಹಾಕಿದರೂ ಸಹ ಅವನಿಗೆ humanity ಇದೆ ಎಂದು ಸೆಕ್ಷನ್ 17 ಹೇಳುತ್ತದೆ.

(ಮುಂದು)

**(236) 08/02/2021/ಎಸ್‌ಪಿಆರ್/ವಿಕೆ/6:30**

**ಶ್ರೀ ನಸೀರ್ ಅಹ್ಮದ್(ಮುಂದು)**

ಅಂದರೆ, ಅವರಿಗೆ indemnity ಇದೆ ಎಂದು ಹೇಳಿದರೆ, ಇದರರ್ಥವೇನು? ಒಬ್ಬರನ್ನು ಕೊಂದರೂ ಸಹ ಅವರಿಗೆ indemnity ಸಿಗುತ್ತದೆ ಎಂದು ವಿಧೇಯಕದ ಕಲಂಗಳಲ್ಲಿ ತಿಳಿಸಲಾಗಿದೆ. ಯಾವ ಮಟ್ಟದಲ್ಲಿ ಸಮಾಜದಲ್ಲಿ ಸಂದೇಶ ಹೋಗಬಹುದು ಎಂಬುದರ ಬಗ್ಗೆ ಸರ್ಕಾರವು ಯೋಚನೆ ಮಾಡಬೇಕು. ಒಂದು ಕಡೆ, 70 percent of the population are used to eat this protein food. ಒಂದು ವೇಳೆ ಯಾವುದಾದರೂ ಘಟನೆ ನಡೆದು, ಯಾರದೋ ಮನೆಯಲ್ಲಿ ಅವಕಾಶ ಮಾಡಿದ್ದಾರೆ ಅಥವಾ ಮಾಡಿಲ್ಲವೋ ಗೊತ್ತಿಲ್ಲ; ಅಲ್ಲಿ ಗೋಮಾಂಸವನ್ನು ಇಟ್ಟುಕೊಂಡಿದ್ದಾರೋ, ಅಥವಾ ಇಲ್ಲವೋ ಎನ್ನುವುದು ಗೊತ್ತಿಲ್ಲ. ಒಂದು ವೇಳೆ ಅಂತಹ ಘಟನೆಯನ್ನು ಹೋಗಿ ತಡೆಯುವ ನೆಪದಲ್ಲಿ ಯಾರನ್ನಾದರೂ ಕೊಲೆಗೈದರೂ ಸಹ ಅವರಿಗೆ indemnity ಇದೆ ಎಂಬುದಾಗಿ ವಿಧೇಯಕದ ಕಲಂನಲ್ಲಿ ತಿಳಿಸುತ್ತದೆ. ಸರ್ಕಾರವು ದಯಮಾಡಿ ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತೂ ಮುಂದಿನ ದಿನಗಳಲ್ಲಿ ಈ ರಾಜ್ಯದಲ್ಲಿ ಯಾವ ಮಟ್ಟಿಗೆ ಘಟನೆಗಳಾಗಬಹುದು ಎನ್ನುವುದನ್ನು ಸರ್ಕಾರವು ಯೋಚಿಸಬೇಕು. ಇದು ಬಹಳ ಗಂಭೀರವಾದ ವಿಷಯವಾಗಿದೆ. ವಿಧೇಯಕದ ಕಲಂ 16 ಮತ್ತು 17 ಗಳೆಡೆಗೆ ಸರ್ಕಾರವು ಗಮನಿಸಬೇಕು. ಹಿರಿಯ ಕಂದಾಯ ಸಚಿವರು ಪ್ರಸ್ತುತ ಸದನದಲ್ಲಿದ್ದಾರೆ. ಒಂದು ವೇಳೆ ಗೋರಕ್ಷಕರು ಅದನ್ನು ತಡೆದರೆ, ಅವರ ವಿರುದ್ಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಪ್ರಕರಣವನ್ನು ದಾಖಲಿಸುವಂತಿಲ್ಲ. They get indemnity ಎಂಬುದಾಗಿ ಇದರಲ್ಲಿ ತಿಳಿಸಲಾಗಿದೆ. It is a very serious matter.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು indemnity ಎಂದು ಹೇಳುತ್ತಿದ್ದಾರೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದಾರೆ. It amounts to indemnity only. You please go through that. ಅವರುಗಳ ವಿರುದ್ಧ ಯಾವುದೇ ರೀತಿಯಾದ ಪ್ರಕರಣವನ್ನು ದಾಖಲಿಸುವುದಿಲ್ಲವೆಂದು ಹೇಳಿದ್ದು, definitely it amounts to indemnity only. ಅವಶ್ಯವೆನಿಸಿದ್ದಲ್ಲಿ ನಾನು ವಿಧೇಯಕದಲ್ಲಿರುವ ಸದರಿ ಕಲಂಗಳನ್ನು ಓದಿ ಹೇಳುತ್ತೇನೆ. ರಾಜ್ಯದಲ್ಲಿರುವ ಸುಮಾರು 70 percent of the people are used to have this kind of protein food. ನಮ್ಮಲ್ಲಿ ಎಷ್ಟೋ ಪ್ರಾಣಿ ಸಂಗ್ರಹಾಲಯಗಳಿವೆ. ಆ ಪೈಕಿ ನಗರದ ಬನ್ನೇರುಘಟ್ಟ ಉದ್ಯಾನವನದಲ್ಲಿ ನೂರಾರು ಹುಲಿ, ಸಿಂಹಗಳಂತಹ ಪ್ರಾಣಿಗಳಿವೆ. ಅವರಿಗೆ ಯಾವ ರೀತಿಯ ಆಹಾರಗಳನ್ನು ನೀಡಲಾಗುತ್ತದೆ? ದಿನಂಪ್ರತಿ ಎರಡು ಟನ್‌ಗಳಷ್ಟು ಮಾಂಸವನ್ನು ಇಷ್ಟು ದಿವಸಗಳ ಕಾಲ ಆ ಪ್ರಾಣಿಗಳಿಗೆ ಕೊಡಲಾಗುತ್ತಿತ್ತು. This has come from the beginning. ಸಚಿವರು ತಿಳಿಸಿದಂತೆ, ಈ ಪ್ರಕ್ರಿಯೆಯು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇತ್ತೀಚೆಗೆ ಪತ್ರಿಕೆಯಲ್ಲಿ ವರದಿಯೊಂದು ಪ್ರಕಟವಾಗಿತ್ತು. ಅದರಲ್ಲಿ ರೈತರು ಮಾರುಕಟ್ಟೆಗೆ ಮಾರಲು ತಂದ ಪ್ರಾಣಿಗಳು, ವ್ಯಾಪಾರವಾಗದೇ ಅವುಗಳನ್ನು ಹಿಂದಕ್ಕೆ ತೆಗೆದುಕೊಂಡು ಹೋದರು ಎಂಬುದಾಗಿ ವರದಿಯಾಗಿತ್ತು. ಯಾವುದೇ ರೈತ ತಾನು ಮಾರಲು ಬಂದ ಪ್ರಾಣಿಗೆ ಸುಮಾರು 40-60 ಸಾವಿರ ರೂಪಾಯಿಗಳಷ್ಟು ಹಣ ದೊರೆತಾಗ, ಬಂದ ಹಣದಿಂದ ಮತ್ತೊಂದು ಹಸುವನ್ನು ಖರೀದಿಸುತ್ತಾನೆ; ಇಂತಹ ವ್ಯಾಪಾರ ಮುಂದುವರೆಯುತ್ತದೆ. ನಾನು ಕೋಲಾರ ಪ್ರದೇಶದಿಂದ ಬಂದವನಾಗಿದ್ದು, ನಮ್ಮ ಭಾಗದಲ್ಲಿ ಹಾಲಿನ ವಿಚಾರದಲ್ಲಿ ಬಹಳ ಕ್ರಾಂತಿಯಾಗಿದೆ. ಆ ಭಾಗದ ಪ್ರತಿಯೊಂದು ಹಳ್ಳಿಯಲ್ಲಿ ಹಾಲಿನ ಡೈರಿ ಇದೆ. ಅಲ್ಲಿನ ಸುಮಾರು ಮನೆಗಳಲ್ಲಿ 2-3 ಹಸುಗಳನ್ನಿಟ್ಟುಕೊಂಡಿದ್ದಾರೆ. ಇದರಿಂದಾಗಿ ದಿನಂಪ್ರತಿ ಸುಮಾರು 11 ಲಕ್ಷ ಲೀಟರ್‌ಗಳಷ್ಟು ಹಾಲಿನ ವಹಿವಾಟುವಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ಮೂರ್‍ನಾಲ್ಕು ಹಸುಗಳನ್ನಿಟ್ಟುಕೊಂಡಿರುತ್ತಾರೆ. ಒಂದು ಹಂತದಲ್ಲಿ ರೈತರು ತಮ್ಮ ಹಸುಗಳಿಗಾಗಿ ದಿನಕ್ಕೆ ಸುಮಾರು 100-150 ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕಾಗಿರುತ್ತದೆ. ಆದರೆ ಇಷ್ಟು ಖರ್ಚು ಮಾಡುವ ಶಕ್ತಿ ಅವರುಗಳಿಗಿರುವುದಿಲ್ಲ. ಇಂತಹ ವ್ಯವಸ್ಥೆಯು ನಡೆದುಕೊಂಡು ಹೋಗುತ್ತಿದೆ. ಇದು ನೈಸರ್ಗಿಕವಾಗಿ ಜಗತ್ತಿನೆಲ್ಲೆಡೆ ನಡೆಯುವ ವ್ಯವಸ್ಥೆಯಾಗಿದೆ. I do not know what the intention is. ಪ್ರಸ್ತುತ ಮಂಡಿಸಿರುವ ವಿಧೇಯಕವು ಸರಿಯಿಲ್ಲ. Karnataka Prevention of Cow Slaughter

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

and Cattle Prevention Act, 1964 ಎಂಬ ವಿಧೇಯಕವು 1964 ನೇ ಇಸ್ವಿಯಿಂದಲೂ ಇದೆ. ಹೀಗಾಗಿ ಇದು ಹೊಸದಾದ ವಿಧೇಯಕವೇನಲ್ಲ. ಅದರಲ್ಲಿಯೂ ಸಹ ಗೋ ಹತ್ಯೆ ಮಾಡಬಾರದೆಂಬುದಾಗಿ ಕಾನೂನು ಇದೆ. ಅದರಂತೆ ಮಾಡುವುದೂ ಇಲ್ಲ. ಮಂತ್ರಿಗಳಾದ ಶ್ರೀ ಆರ್.ಅಶೋಕ್ ಅಥವಾ ಶ್ರೀ ಬಸವರಾಜ ಬೊಮ್ಮಾಯಿಗಳಿರಬಹುದು, ಅಥವಾ ಗೋವನ್ನು ಪೂಜೆ ಮಾಡುವ ಪ್ರತಿಯೊಬ್ಬರಿಗೂ ಸಹ ತಿಳಿದಿದೆ. ಅದನ್ನು ನಾವೂ ಸಹ ಗೌರವಿಸುತ್ತೇವೆ, ಇದರಲ್ಲಿ ಯಾವುದೇ ರೀತಿಯಾದ ಅನುಮಾನ ಬೇಡ. ಒಂದು ಹಂತದ ನಂತರ ಗೋವುಗಳನ್ನು ಏನು ಮಾಡಲಾಗುತ್ತದೆ? ಸರ್ಕಾರವು ಗೋವು ಶಾಲೆಗಳ ಬಗ್ಗೆ ವಿಧೇಯಕದಲ್ಲಿ ತಿಳಿಸಿದ್ದು, ಸರ್ಕಾರಿ ಗೋಶಾಲೆಗಳು ಒಂದೂ ಸಹ ಇಲ್ಲ; ಆದರೆ, ಖಾಸಗಿಯವರು ಗೋವು ಶಾಲೆಗಳನ್ನು ನಡೆಸುತ್ತಿದ್ದಾರೆ. ಯಾವುದೇ ಸಂದೇಹವಿಲ್ಲದೇ, ಸರ್ಕಾರಕ್ಕೆ ಕೊಡುವ ಮಾಹಿತಿ ಏನೆಂದರೆ, ಅದೇ ಗೋಶಾಲೆಗಳವರು ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಹೆಚ್ಚಿನ ರೀತಿಯಲ್ಲಿ ದಾಳಿ ಮಾಡಿ ಪ್ರಾಣಿಗಳನ್ನು ತೆಗೆದುಕೊಂಡು ಹೋಗಿರುವವರಿದ್ದಾರೆ. ನಂತರದಲ್ಲಿ ಅವರುಗಳೇ ಕಸಾಯಿಖಾನೆಯವರನ್ನು ಕರೆಸಿ, ಪ್ರಾಣಿಗಳನ್ನು ಮಾರಾಟ ಮಾಡುತ್ತಾರೆ. ಏಕೆಂದರೆ, ಗೋವುಗಳನ್ನು ನೋಡಿಕೊಳ್ಳಲು ಅವರ ಬಳಿ ಹಣವಿಲ್ಲ. These things are there. I am not telling just because of this. It has happened. ಇದನ್ನು ಸರ್ಕಾರವು ತಿಳಿದುಕೊಳ್ಳಬೇಕು ಹಾಗೂ ಈ ಬಗ್ಗೆ ವರದಿಯನ್ನು ಪಡೆಯಬೇಕು. ಆ ಸಂದರ್ಭದಲ್ಲಿ ಕೃಷ್ಣರಾಜಪುರಂ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ನಿರೀಕ್ಷಕರೇ ನನಗೆ ಈ ಮಾಹಿತಿಯನ್ನು ನೀಡಿದ್ದರು. These are all facts. ಗೋಹತ್ಯೆಯನ್ನು ನಿಷೇಧಿಸಬೇಕೆಂಬ ಹೋರಾಟವನ್ನು ನಾವು ಮಾಡುತ್ತಿಲ್ಲ. ಹೀಗಾಗಿ ಈ ಹಿಂದೆ ಜಾರಿಯಲ್ಲಿದ್ದ ಕಾನೂನನ್ನೇ ಮುಂದುವರೆಸಿ. ಹೊಸದಾಗಿ ವಿಧೇಯಕವನ್ನು ತಂದಾಗ, ಸಮಾಜದ ಒಂದು ಭಾಗದ ಬಹುಸಂಖ್ಯೆಯ ಜನರಿಗೆ ಇದು ತಿನ್ನುವ ಆಹಾರವಾಗಿದೆ. ಇವತ್ತಿನ ದಿವಸ ಒಂದು ಕುರಿ ಮಾಂಸದ ಬೆಲೆ 700 ರೂಪಾಯಿಗಳಷ್ಟಿದ್ದು, ಇದು ಸರ್ಕಾರಕ್ಕೆ ತಿಳಿದಿದೆಯೇ ಅಥವಾ ಇಲ್ಲವೆ ನನಗೆ ಗೊತ್ತಿಲ್ಲ. ಇಷ್ಟು ದುಡ್ಡು ಕೊಟ್ಟು ಯಾವ ಬಡವನು ಇದನ್ನು ಖರೀದಿಸಿ, ತಿನ್ನುವುದಕ್ಕಾಗುತ್ತದೆ? ನಮ್ಮ ಸಮಾಜದಲ್ಲಿ ಈ ರೀತಿಯಾದ ಪದ್ಧತಿಯೊಂದು ಬಂದಿದೆ. ನಮ್ಮ ದೇಶದಲ್ಲಿ ಶಿವ ದೇವರಿಗೆ ಮಾಂಸವನ್ನಿಟ್ಟು ಪೂಜೆ ಮಾಡುವ ಜನರೂ ಸಹ ಇದ್ದಾರೆ. ಅದೇ ರೀತಿಯಾಗಿ ಕಾಶ್ಮೀರದಲ್ಲಿಯೂ ಸಹ ಅಲ್ಲಿನ ಪಂಡಿತರು ಮಾಂಸವನ್ನಿಟ್ಟು ದೇವರ ಪೂಜೆಯನ್ನು ಮಾಡುವವರಿದ್ದಾರೆ. ಈ ರೀತಿಯಾಗಿ ಹಿಮಾಚಲ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿಯೂ ಸಹ ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ನಮ್ಮ ಪೂರ್ವಿಕರಿಗೆ ನಮಸ್ಕಾರ ಮಾಡುವುದಕ್ಕಾಗಿ ಪಿತೃಪಕ್ಷ ಎಂದು ಆಚರಿಸುತ್ತೇವೆ. ಅದನ್ನು 'ಮಾರ್‌ನಾಮಿ' ಹಬ್ಬ ಎಂಬುದಾಗಿಯೂ ಸಹ ನಾವು ಕರೆಯುತ್ತೇವೆ. ಅಲ್ಲಿ ನಾವು ಎಡೆಯನ್ನಿಡುತ್ತೇವೆ. ಆಗ ಮಾಂಸದ ಸಾರು, ಕೋಳಿ ಸಾರು, ಸಾರಾಯಿ ಇತ್ಯಾದಿಗಳೆಲ್ಲವನ್ನೂ ಇಟ್ಟು, ನಮಸ್ಕಾರ ಮಾಡುತ್ತೇವೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, Please have a relook on this. Karnataka Prevention of Cow Slaughter and Cattle Prevention Act, 1964 ರ ಗೋ ಹತ್ಯೆ ಪ್ರತಿಬಂಧಕ ವಿಧೇಯಕವಿದೆ. ಅವಶ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಶಕ್ತಿಯನ್ನು ಅದಕ್ಕೆ ತುಂಬಿ. ಆದರೆ, ಅದನ್ನು ಸಾಮಾನ್ಯವಾಗಿ ನಿಷೇಧಿಸುವುದು ಸರಿಯಲ್ಲ. ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ನಾವು ಮಾತನಾಡಬೇಕು ಮತ್ತು ಅದರ ಬಗ್ಗೆ ನೋಡಬೇಕು. ಇವತ್ತಿನ ಉದ್ಯೋಗ ಪರಿಸ್ಥಿತಿಯನ್ನೂ ಸಹ, ಸರ್ಕಾರವು ನೋಡಬೇಕು. So many families are depending on this business. ಕೇವಲ ಮಾಂಸ ಮಾರಾಟ ಮಾತ್ರವಲ್ಲ; ಇದರಲ್ಲಿ ರೈತರ ಮತ್ತು ಚರ್ಮೋದ್ಯಮವೂ ಸಹ ಒಳಪಡುತ್ತದೆ. Farmers give a big contribution to this. ರೈತನೊಬ್ಬನು ಮೂರು ಹಸುಗಳನ್ನಿಟ್ಟುಕೊಂಡಿದ್ದು, ಹಸು ಹಾಲು ಕೊಡುವುದನ್ನು ನಿಲ್ಲಿಸಿದ ಮೇಲೆ ಅದನ್ನು ಮಾರಾಟ ಮಾಡಿ, ಮತ್ತೊಂದು ಹಸುವನ್ನು ಕೊಳ್ಳುತ್ತಾನೆ. This is going on from the beginning. ಇದು ಹೊಸದಾಗಿ ಬಂದ ಪದ್ಧತಿಯಾಗಿಲ್ಲ. ಹೀಗಾಗಿ ಸರ್ಕಾರವು ಇದರ ಬಗ್ಗೆ ಯೋಚಿಸಬೇಕು. ಒಂದು ವೇಳೆ ಈ ವಿಧೇಯಕದಿಂದಾಗಿ ಯಾವುದಾದರೂ ವ್ಯಾಜ್ಯಗಳಾದರೆ, ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವ ಅವಕಾಶಗಳಿವೆ. ಆದರೆ, ಪ್ರಸ್ತುತ ವಿಧೇಯಕದಲ್ಲಿ ಆ ರೀತಿಯಾದ ಅವಕಾಶವಿಲ್ಲ. ವ್ಯಾಜ್ಯವನ್ನು ದಾಖಲಿಸಲು ಅವರು ಎಲ್ಲಿಗೆ ಹೋಗಬೇಕು? ಏಕೆಂದರೆ ಇದರಲ್ಲಿ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವ ಅವಕಾಶಗಳಿಲ್ಲ. ಇದರ ಬಗ್ಗೆ ಮಂತ್ರಿಗಳೂ ಸಹ ಹೇಳುತ್ತಾರೆ. There are certain things. ಸರ್ಕಾರವು ಇದರ ಬಗ್ಗೆ Joint Select Committee ಅಥವಾ ಸದನ ಸಮಿತಿಯನ್ನು ರಚಿಸಿ, ಅದಕ್ಕೆ ವಹಿಸಬೇಕು. ಆಗ ಎಲ್ಲಾ ಪಕ್ಷದವರು ಸೇರಿ ವ್ಯವಸ್ಥಿತವಾದ ಚರ್ಚೆಯನ್ನು ಮಾಡೋಣ ಎಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಡಿ ಇರುವ 119 ನೇ ನಿಯಮದನ್ವಯ ವಿಧಾನಸಭೆಯವರು ಅಂಗೀಕರಿಸಿದ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020 ಅಂದರೆ, The Karnataka Prevention of Slaughter and Preservation of Cattle Bill, 2020 ಇದಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1) ವಿಧೇಯಕದ ಕಲಂ 2 ರಲ್ಲಿನ ಪರಿಭಾಷೆಯಲ್ಲಿರುವ ಆವರಣವನ್ನು ಕೈಬಿಡಬೇಕು. ಅದರಲ್ಲಿ 'premises' ಎಂಬುದನ್ನು ವ್ಯಾಖ್ಯಾನಿಸಿದ್ದಾರೆ. ಇದನ್ನು ಜಪ್ತಿ ಮಾಡುವುದಕ್ಕೆ ಮಾಡಿದ್ದು, ಇದನ್ನು ಕೈಬಿಡಬೇಕು.

(2) ಜಾನುವಾರು ಹತ್ಯೆ ಎಂದು ಇರುವುದನ್ನು ಜಾನುವಾರು ವಧೆ ಎಂಬುದಾಗಿ ಬದಲಾಯಿಸಬೇಕು. ವಧೆ ಎಂದರೆ, slaughter ಎಂದು ಆಗುತ್ತದೆ. ಅದು ಹತ್ಯೆಯಾಗಲಾರದು. ಹತ್ಯೆ ಎಂದರೆ ಕೊಲ್ಲುವುದು ಎಂದರ್ಥ. ಇದು culling ಇದ್ದಹಾಗೆ. ಹೀಗಾಗಿ ಇದನ್ನು ಬದಲಾಯಿಸಬೇಕೆಂದು ಸೂಚಿಸುತ್ತೇನೆ.

ವಿಧೇಯಕದ ಕಲಂ 14 ರಲ್ಲಿರುವ ಜಾನುವಾರು ಹತ್ಯೆ ನಿಷೇಧ ಕೈಬಿಟ್ಟು, ಕರ್ನಾಟಕ ಗೋವು ಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣೆ ಕಾಯ್ದೆ, 1964 ಇದರ ಕಲಂ (4) ಅಡಿ ವಿವರಿಸಿರುವಂತೆ ತಿದ್ದುಪಡಿಯನ್ನು ಮಾಡುವಂತೆ ಕೋರುತ್ತೇನೆ.

**(ಮುಂದು)**

(237)08-02-2021(06-40)ಎಲ್ಎಂ(ಬಿಎಸ್‌ಡಿ)-ವಿಕೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು)**

ಅಲ್ಲಿ ಏನಾಗಿದೆ ಎಂದರೆ ಹೊಸ ವಿಧೇಯಕದಲ್ಲಿ 13 ವರ್ಷಗಳಿಗೆ ಮೀರಿದ ಕೋಣ ಮತ್ತು ಎಮ್ಮೆಗಳನ್ನು ಹೊರತುಪಡಿಸಿ ಬೇರೆ ಯಾವುದನ್ನೂ ವಧೆ ಮಾಡುವ ಹಾಗಿಲ್ಲ ಎನ್ನುವಂತೆ ಆಗಿದೆ. ಬಾಕಿ ಎಲ್ಲವನ್ನೂ ಗೋಶಾಲೆಗೆ ಕಳುಹಿಸಬೇಕು. ಮನುಷ್ಯನಂತೆ ಅವು ಸಹ ಸ್ವಾಭಾವಿಕ ಮರಣ ಹೊಂದಬೇಕೆ ವಿನಃ ಅವುಗಳು ದಾರಿಯಲ್ಲಿ ಬಿದ್ದು, ಅದನ್ನು ನಾಯಿ-ನರಿ ತಿಂದರೂ ಯಾರೂ ಏನೂ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ತಿದ್ದುಪಡಿ ತರಬೇಕಾಗುತ್ತದೆ. ಇದು ಬೇರೆ ರೀತಿಯಲ್ಲಿ ಗೋಮಾಂಸವನ್ನು ತಿನ್ನುವವರಿಗೆ ಮಾತ್ರ ಸಂಬಂಧಪಟ್ಟಿರದೇ ರೈತರ ಮೇಲೆ ತುಂಬಾ ಪರಿಣಾಮ ಬೀರುತ್ತದೆ, ಆದ್ದರಿಂದ ಇದಕ್ಕೆ ತಿದ್ದುಪಡಿ ತರಬೇಕೆಂದು ವಿನಂತಿ ಮಾಡುತ್ತೇನೆ. ಹಳೆಯ ಕಾಯ್ದೆಯಡಿಯಲ್ಲಿ ಜಾನುವಾರುಗಳನ್ನು ಸರ್ಕಾರ ನಿಗದಿಪಡಿಸಿದ್ದಲ್ಲಿ ಮಾತ್ರ ಅವಕಾಶ ಇತ್ತು. ಆದರೆ ಹೊಸ ವಿಧೇಯಕದಲ್ಲಿ ಈ ಅಂಶವನ್ನು ಕೈಬಿಡಲಾಗಿದೆ. ಇದನ್ನು ಸೂಕ್ತ section ಸೇರ್ಪಡೆಯೊಂದಿಗೆ ಈ ಅಂಶವನ್ನು ಸೇರಿಸಬೇಕು. Governmental Slaughter Houses ಎಲ್ಲಿರಬೇಕೆಂದು notify ಮಾಡಬೇಕಾಗಿದೆ. ಹಿಂದಿನ The Karnataka Prevention of Cow Slaughter and Cattle Preservation Act, 1964 ನಲ್ಲಿ ಈ ವಿಚಾರ ಇದ್ದು, ಹೊಸ ಕಾಯ್ದೆಯಲ್ಲಿ ಯಾವುದನ್ನೂ ಹೇಳಿಲ್ಲ. ಅಂದರೆ ಬೇರೆ ಯಾರಾದರೂ ವಧೆ ಮಾಡಿದರೆ, ವಧೆ ಮಾಡಲು ಎಮ್ಮೆ ಅಥವಾ ಕೋಣವನ್ನು ಯಾರಾದರೂ ವ್ಯಕ್ತಿ ಕೊಟ್ಟಿದ್ದರೆ ಅವನು arrest ಆಗುತ್ತಾನೆ. ಅವನ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ. ಹಿಂದಿನ 1964 Act ನಲ್ಲಿ ಏನು provision ಇತ್ತೆಂದರೆ, Assistant Director of

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Veterinary Services ರವರು certify ಮಾಡಿದಂತಹ ಎಲ್ಲಾ ಜಾನುವಾರುಗಳು ಎಂದು ಇದ್ದು, ಅದು ಆಕಳು ಆಗಬಹುದು, ಆಕಳ ಕರು, ಎಮ್ಮೆ ಅಥವಾ ಗೂಳಿ ಆಗಬಹುದು, ಇಂಥಹವುಗಳೆಲ್ಲವನ್ನೂ ವಧೆ ಮಾಡಬಹುದು. ಹೊಸ Act ನಲ್ಲಿ ಆ ರೀತಿಯ provision ಇಲ್ಲ. ದಯಮಾಡಿ ಇವುಗಳಿಗೆ ಸೂಕ್ತ ತಿದ್ದುಪಡಿ ತರಬೇಕೆಂದು ಸೂಚಿಸುತ್ತೇನೆ. Section 5 ಮತ್ತು 6 ರಡಿಯಲ್ಲಿ ಕೃಷಿ ಮತ್ತು ಪಶುಸಂಗೋಪನೆ ಉದ್ಧೇಶಕ್ಕಾಗಿ ಹೊರತುಪಡಿಸಿ ಯಾವುದೇ ಜಾನುವಾರು ಸಾಗಾಣಿಕೆ ಮಾಡುವಂತಿಲ್ಲ. ಆದ್ದರಿಂದ ಹಳೆಯ ಕಾಯ್ದೆ 8ರಲ್ಲಿ ಇದ್ದಂತೆ ನಿರ್ಬಂಧವನ್ನು ಅಳವಡಿಸಬೇಕು. Transportation ಅನ್ನು ಯಾರೂ ಕೂಡ ಮಾಡುವಂತಿಲ್ಲ. ರೈತರು ವ್ಯಾವಹಾರಿಕವಾಗಿ ಜಾನುವಾರುಗಳನ್ನು ಸಂತೆ ಅಥವಾ ದನಗಳ ಜಾತ್ರೆಗೆ ತೆಗದುಕೊಂಡು ಹೋಗಬೇಕೆಂದರೆ ಸಂಬಂಧಪಟ್ಟ Assistant Director ಹತ್ತಿರ ಹೋಗಿ 'ಇದು ನನ್ನ ಹಸು, ನನ್ನ ಎಮ್ಮೆ, ನನ್ನ ಗೂಳಿ, ನಾನು ಸಂತೆಗೆ ತೆಗೆದುಕೊಂಡು ಹೋಗುತ್ತಿದ್ದೇನೆ' ಎಂದು certificate ತೆಗೆದುಕೊಂಡ ನಂತರವೇ ಸಂತೆ ಅಥವಾ ಜಾತ್ರೆಗೆ ಹೋಗಬೇಕಾಗುತ್ತದೆ. ಇದು ರೈತರಿಗೆ ತುಂಬಾ ತೊಂದರೆ ಮಾಡಿದಂತೆ ಹಾಗೂ ಅವಹೇಳನ ಮಾಡಿದಂತೆ ಆಗುತ್ತದೆ. ದಯಮಾಡಿ ಇದಕ್ಕೆ ಸೂಕ್ತ ತಿದ್ದುಪಡಿ ಮಾಡಬೇಕೆಂದು ಕೋರುತ್ತೇನೆ.

ಇನ್ನು ವಿಧೇಯಕ section 8 ರಡಿಯಲ್ಲಿ ಸಕ್ಷಮ ಪ್ರಾಧಿಕಾರ ಅಥವಾ Sub-Inspector ಹುದ್ದೆಗೆ ಕಡಿಮೆ ಇರದ ಅಧಿಕಾರಿ ಶೋಧಿಸುವ, ಜಪ್ತಿ ಮಾಡುವ ಅಧಿಕಾರ ನೀಡಲಾಗಿದೆ ಹಾಗೂ ಸಾಮಗ್ರಿ ಮತ್ತು ಆವರಣಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಉಪ ವಿಭಾಗೀಯ ಅಧಿಕಾರಿಗೆ ಅಧಿಕಾರ ನೀಡಲಾಗಿದೆ. ಒಬ್ಬ Sub-Inspector ಯಾವುದಾದರೂ ಜಾನುವಾರುಗಳನ್ನು ಎಲ್ಲಿ ಶೇಖರಣೆ ಮಾಡಿರುತ್ತಾರೋ, ಆ premises ಮತ್ತು ಜಾನುವಾರುಗಳು ಸೇರಿದಂತೆ ಜಪ್ತಿ ಮಾಡಿ, Sub Divisional Magistrate ಮುಂದೆ ಹಾಜರುಪಡಿಸಬೇಕು. Sub Divisional Magistrate ರವರು ಆ ಆವರಣವನ್ನು ಕೂಡ ಮುಟ್ಟುಗೋಲು ಹಾಕಿಕೊಳ್ಳಬಹುದು ಹಾಗೂ ಜಾನುವಾರುಗಳನ್ನು ಜಪ್ತಿ ಮಾಡಿಕೊಳ್ಳಬಹುದು. ತದನಂತರ ಒಂದು ವೇಳೆ police case ನ್ನು, criminal case ಅನ್ನು ಸಂಬಂಧಪಟ್ಟ Magistrate Court ನಲ್ಲಿ ದಾಖಲು ಮಾಡಲೀ ಅಥವಾ ದಾಖಲು ಮಾಡದೇ ಇತ್ಯರ್ಥವಾಗದಿದ್ದರೂ Sub Divisional Magistrate ರವರು ಯಾವಾಗ ಬೇಕಾದರೂ premises ಮತ್ತು ಸಾಮಗ್ರಿಗಳನ್ನು ಹರಾಜು ಹಾಕಿ, ಬಂದ ಹಣವನ್ನು ಇಟ್ಟುಕೊಳ್ಳಬಹುದು, case ಬಂದಾಗ ಏನು ಬೇಕಾದರೂ ತೀರ್ಮಾನ ಮಾಡಬಹುದು. ಇದು Sub Divisional Magistrate ರವರಿಗೆ ಕೊಟ್ಟಿರುವ ಪರಮಾಧಿಕಾರವಾಗಿದ್ದು, ದಯಮಾಡಿ ಇದನ್ನು Civil Court ಗೆ ಕೊಡಬೇಕೆಂದು ಕೋರುತ್ತೇನೆ. ಈ ರೀತಿ ಅಧಿಕಾರ ಕೊಟ್ಟಿರುವುದು ಸರಿಯಲ್ಲ, ಮಾನ್ಯ ಮರಿತಿಬ್ಬೇಗೌಡರು District Magistrate ಗಳು, Deputy Commissioner ಗಳಿಗೆ Sub Divisional Magistrate ಗಳಿಗೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Assistant Commissioner ಗೆ ಯಾವುದೇ ಕಾಲಾವಕಾಶ ಇಲ್ಲ ಎಂದು ಹೇಳುತ್ತಿದ್ದರು. ಇದನ್ನು ಕೊಟ್ಟರೆ ರೈತರಿಗೆ ಬಹುಶಃ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಪರಿಗಣನೆ ಮಾಡಬೇಕೆಂದು ಕೋರುತ್ತೇನೆ.

ಇನ್ನು section 12ರಡಿಯಲ್ಲಿ ದಂಡನೆಗಳ ಅಡಿಯಲ್ಲಿ section ಗಳಲ್ಲಿ ಜಾನುವಾರುಗಳ ವಧೆಯನ್ನು ಮಾಡಿದ್ದಲ್ಲಿ ಮತ್ತು section 5ರಡಿಯಲ್ಲಿ ಆ ವಧೆಗಳಿಗೆ ಕುಮ್ಮಕ್ಕು ನೀಡಿದ ಪ್ರಕರಣಗಳಲ್ಲಿ ವಿಧಿಸಲಾಗುವ ರೂ.5 ಲಕ್ಷದವರೆಗಿನ ಜುಲ್ಮಾನೆ ಮತ್ತು ಏಳು ವರ್ಷಗಳ ಕಾರಾಗೃಹ ವಾಸ ಹೇಯಕರ. ಆದ್ದರಿಂದ ಹಳೆಯ ಕಾಯ್ದೆಯಲ್ಲಿ section ಗಳಲ್ಲಿ ಇರುವಂತೆ section 12ಕ್ಕೂ ತಿದ್ದುಪಡಿ ಮಾಡಬೇಕೆಂದು ಈ ಮೂಲಕ ಸದನವನ್ನು ಒತ್ತಾಯಿಸುತ್ತೇನೆ.

**ಹಂಗಾಮಿ ಸಭಾಪತಿಯವರುः–** ಮಾನ್ಯ ರವಿಯವರೇ ಮಾತನಾಡಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ತಿಪ್ಪೇಸ್ವಾಮಿಯವರು ಕೆಲವು amendment ಗಳ ಬಗ್ಗೆ ಹೇಳಿದ್ದು, ಅದಕ್ಕೆ ಈಗಲೇ ಉತ್ತರ ಕೊಡಬಹುದೇ ಅಥವಾ ಕೊನೆಯಲ್ಲಿ ಉತ್ತರ ಕೊಡಲೇ?

**ಶ್ರೀ ಎಸ್. ರವಿ:–** ಒಟ್ಟಾರೆಯಾಗಿ ಕೊನೆಯಲ್ಲಿಯೇ ಕೊಡಬಹುದು. ಒಟ್ಟಾರೆ ಕೊಟ್ಟರೆ ಚೆನ್ನಾಗಿರುತ್ತದೆ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳಿರುವುದಕ್ಕೆ ಉತ್ತರ ಕೊಡಬಹುದಾಗಿದೆ, ಇಲ್ಲದಿದ್ದರೆ back-to-back ಆಗುತ್ತದೆ.

**ಶ್ರೀ ಎಸ್. ರವಿ:–** ನಾನು 5 minutes ನಲ್ಲಿ ಮಾತನಾಡುತ್ತೇನೆ, ಅಷ್ಟೇ.

**ಹಂಗಾಮಿ ಸಭಾಪತಿಯವರುः–** ಮಾನ್ಯ ಸಚಿವರೇ, ಆಮೇಲೆ ಉತ್ತರ ಕೊಡುತ್ತೀರಾ ಅಥವಾ ಈಗಲೇ ಕೊಡುತ್ತೀರಾ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ಬಂದಿರುವ ವಿಧೇಯಕಗಳಲ್ಲಿ ನನ್ನ ಪ್ರಕಾರ ಈ ವಿಧೇಯಕ ಅತ್ಯಂತ ಸೂಕ್ಷ್ಮವಾದಂತಹ ಸಂವೇದನಾಶೀಲವಾದಂತಹದ್ದಾಗಿದೆ. Bill

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗಿದೆ. ನಮ್ಮ ಆಡು ಭಾಷೆಯಲ್ಲಿ ಹೇಳುವುದಾದರೆ ಇದೊಂದು ರೀತಿ ಮುಟ್ಟಿದರೆ current ಹೊಡೆದಂತೆ ಇದೆ. ಇದನ್ನು ಉಗುಳುವಂತೆಯೂ ಇಲ್ಲ, ನುಂಗುವಂತೆಯೂ ಇಲ್ಲ. ಇದರ ಸಾಧಕ-ಬಾಧಕಗಳನ್ನು ಆಲೋಚನೆ ಮಾಡಿದಾಗ, ನಾನೂ ಒಬ್ಬ ಧಾರ್ಮಿಕ ಮನುಷ್ಯನಾಗಿ, ನಮ್ಮ ವಿಧಿವಿಧಾನಗಳು, ಸಂಪ್ರದಾಯಗಳನ್ನು ಪಾಲನೆ ಮಾಡುವ ಹಿಂದೂ ಧರ್ಮದ ಒಬ್ಬ ಆಸ್ತಿಕನಾಗಿ...... ನಮ್ಮ ಮನೆತನ ಕೂಡ ಈಶ್ವರನ ಆರಾಧನೆ ಮಾಡುತ್ತದೆ. ಶ್ರೀ ಶಂಭುಲಿಂಗೇಶ್ವರ ನಮ್ಮ ಮನೆ ದೇವರಾಗಿದೆ. ನಾವು ರೈತಾಪಿ ಕುಟುಂಬದಿಂದ ಬಂದಿದ್ದು, ನಾವು ಪಟ್ಟಣದಲ್ಲಿ ವಾಸ ಮಾಡುತ್ತಿದ್ದು, ಆ ಪ್ರದೇಶ ಸ್ವಲ್ಪ ವ್ಯವಸಾಯ ಅವಲಂಬಿತ ward ಆಗಿದೆ. ನಮ್ಮ ಸುತ್ತ ಗ್ರಾಮಾಂತರ ಪ್ರದೇಶ ಇದೆ. ನಮ್ಮಲ್ಲಿರುವ ಸಂಸ್ಕಾರದಂತೆ ಗೋವಿನ ಬಗ್ಗೆ, ಹಸು ಬಗ್ಗೆ ಇರುವ ಪ್ರೇಮ, ಗೌರವದ ಹಿನ್ನೆಲೆ ಇದೆ. ನಮ್ಮಲ್ಲಿ ಇವತ್ತೂ ಕೂಡ ಸೋಮವಾರ ಹೇರು ಕಟ್ಟುವುದಿಲ್ಲ. ನಮ್ಮಲ್ಲಿ ನಮ್ಮ ಅಕ್ಕಪಕ್ಕದ ಯಾವುದೇ ಗ್ರಾಮಗಳಲ್ಲಿ ಸೋಮವಾರ ಬಂಡಿ ಮತ್ತು ಉಳುವುದಕ್ಕೆ ನೊಗ ಕೂಡ ಇಡುವಂತಿಲ್ಲ. ನೊಗ ಹೂಡಿದರೆ ಆ ರೈತನು ನಮ್ಮಲ್ಲಿ ರೂ. 5,001 ದಂಡ ಕಟ್ಟಬೇಕು. ನಮ್ಮ ಪಕ್ಕದ ಭರಮನಹಳ್ಳಿ ಗ್ರಾಮದಲ್ಲಿ ಸಂಪೂರ್ಣ ರೈತಾಪಿ ಜನ ವಾಸವಾಗಿದ್ದು, ಅಲ್ಲಿ ರೂ. 10,001 ದಂಡ ಇದೆ. ಅಂತಹ ಧಾರ್ಮಿಕತೆ ಇದೆ. ಕೆಲವರು ಬೇರೆ ವಿಚಾರಗಳಲ್ಲಿ ಗೋ ಪ್ರಿಯರು, ಸಂರಕ್ಷಕರು ಎಂದು ಹೇಳಿಕೊಂಡರೂ, ನಾವು practical ಆಗಿ ಆ ಮಟ್ಟಕ್ಕೆ ಗೋವನ್ನು ಆರಾಧನೆ ಮಾಡಿ ಸಂರಕ್ಷಣೆ ಮಾಡುವವರಾಗಿದ್ದೇವೆ. ಅದರ ಬಗ್ಗೆ ಒಳ್ಳೆಯ ಭಾವನೆ ಹೊಂದಿದ್ದು, ನಮ್ಮ ಮೂಲ ಕುಲಕಸುಬು ಹೈನುಗಾರಿಕೆ ಆಗಿದೆ. ನಮ್ಮ ತಾತ, ಅಜ್ಜಿ ಅವರುಗಳೆಲ್ಲರೂ ಹಾಲು ಹಾಕಿಕೊಂಡು ಜೀವನ ಮಾಡಿದ್ದು, ನಾವು ಈ ಮಟ್ಟಕ್ಕೆ ಹಾಲು ಮಾರಿಕೊಂಡು ಬಂದಿದ್ದೇವೆ. ಈಗ ಅದು ಆಗುತ್ತಿಲ್ಲ, ಎಲ್ಲೋ ಒಂದು ಕಡೆ ಒಂದೆರಡು ಹಸುಗಳನ್ನು ಕಟ್ಟಬೇಕು, ಅಷ್ಟಕ್ಕೆ ಮಾತ್ರ ಸೀಮಿತವಾಗಿದ್ದೇವೆ. ನಾನು ವ್ಯವಸಾಯ ಮಾಡುತ್ತಿದ್ದು, ಎತ್ತು ಅಥವಾ ಹೋರಿ ಕಟ್ಟುವುದರಲ್ಲಿ ಹೆಸರುವಾಸಿಯಾಗಿದ್ದೆನು. ಯಾರೋ ನಾಲ್ಕು ಜನ ಬಂದು ನೋಡುವಂತೆ ಎತ್ತನ್ನು ಕಟ್ಟಿ, ಜಾತ್ರೆಗಳಲ್ಲಿಯೂ ಬದಲಾಯಿಸುತ್ತಿದ್ದೆನು. ನಾನು ತಳಿ ವಿಚಾರದಲ್ಲಿ ಶುದ್ಧವಾದ ರಾಸುಗಳನ್ನು ಕಟ್ಟುವವನಾಗಿದ್ದು, ಇಂತಹ ಹಿನ್ನೆಲೆಯ ಕುಟುಂಬದಿಂದ ಬಂದವನಾಗಿದ್ದೇನೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಧಾರ್ಮಿಕವಾಗಿ ನಾವು ಗೋವನ್ನು ಪ್ರೀತಿಸುವವರು ಹಾಗೂ ಅದಕ್ಕಿಂತ ಹೆಚ್ಚಾಗಿ ಆರಾಧನೆ ಮಾಡುವವರಾಗಿದ್ದೇವೆ. ಅಂತಹದ್ದರಲ್ಲಿ ಈ ಕಾನೂನನ್ನು ನಾನು ಎಲ್ಲೋ ಒಂದು ಕಡೆ ಸ್ವಾಗತ ಮಾಡಬೇಕಾಗುತ್ತದೆ.

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರೆಲ್ಲರೂ ಮಾನ್ಯ ಎಸ್.ರವಿಯವರ ಮಾತನ್ನು ಚಪ್ಪಾಳೆ ಹೊಡೆಯುವ ಮೂಲಕ ಸ್ವಾಗತಿಸಿದರು)**

**ಶ್ರೀ ಎಸ್. ರವಿ:-** ಈಗಲೇ ಚಪ್ಪಾಳೆ ಹೊಡೆಯುವುದು ಬೇಡ, ಸ್ವಲ್ಪ ತಾಳ್ಮೆ ಇರಲಿ, ಆತುರ ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ......

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ರವಿ:–** ಮಾನ್ಯ ಸಭಾನಾಯಕರು ನನಗಿಂತ ಚೆನ್ನಾಗಿ ಮಾತನಾಡುತ್ತಾರೆ, ಅವರು ಸ್ವಲ್ಪ ತಾಳ್ಮೆಯಿಂದ ಇರಬೇಕು. ಮಂಗಳೂರಿನವರು ಬಹಳ ಚೆನ್ನಾಗಿ ಮಾತನಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಸ್ವಾಗತ ಮಾಡಿದೆ ಅಷ್ಟೇ.

**Sri RAGHUNATH RAO MALKAPURE:-** Supplementary ಚಪ್ಪಾಳೆ.

**ಶ್ರೀ ಎಸ್. ರವಿ:–** ಇರಲಿ, ತಾಳ್ಮೆ ಇರಲಿ. ಆದ್ದರಿಂದ ಧಾರ್ಮಿಕ ಭಾವನೆಯಿಂದ ನೋಡುತ್ತಿರುವ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಉತ್ತಮವಾದ ಉದ್ದೇಶ ಇದೆಯೋ, ಏನೋ ಎಂಬುದು ಅಷ್ಟೇ. ಆದರೆ ವಾಸ್ತವಾಂಶಗಳ ನೆಲೆಗಟ್ಟಿನಲ್ಲಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಕಾನೂನು ಆಗುತ್ತಿರುವ ಈ ವಿಧೇಯಕ practical ಆಗಿ, ವಾಸ್ತವಾಂಶದಲ್ಲಿ ಸರಿ ಅಥವಾ ತಪ್ಪೋ? ಮುಂದಿನ ದಾರಿ ಏನು? ಈ ಕಾನೂನು ಅನುಷ್ಠಾನಗೊಳ್ಳುತ್ತಿರುವ ಸಂದರ್ಭದಲ್ಲಿ ದೂರಗಾಮಿ ಪರಿಣಾಮಗಳ ಬಗ್ಗೆ ಆಲೋಚನೆ ಮಾಡಬೇಕಲ್ಲವೇ? ಮುಂದಿನ ದಿನಗಳಲ್ಲಿ ಕಾನೂನನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಎದುರಾಗುವ ಪರಿಸ್ಥಿತಿಗಳು ಏನು? ಅದು ಆರ್ಥಿಕವಾಗಿ ಇರಬಹುದು, ಸಾಮಾಜಿಕವಾಗಿ ಇರಬಹುದು, ಇದನ್ನು ಅಧ್ಯಯನ ಮಾಡಬೇಕಲ್ಲವೇ? ನಾವು ಭಾರತೀಯರು, ಈ ನೆಲದವರು, ಈ ಮಣ್ಣನ್ನು ಮತ್ತು ಸಂಸ್ಕೃತಿಯನ್ನು ಗೌರವಿಸುವವರು, ಅದರಲ್ಲೂ ವಿಶೇಷವಾಗಿ ಇಡೀ ಪ್ರಪಂಚದಲ್ಲಿ ಪರಿಸರವನ್ನು ನಮ್ಮಷ್ಟು ಪ್ರೀತಿಸಿ ಆರಾಧಿಸಿ, ಪರಿಸರದೊಂದಿಗೆ ನಮ್ಮ ಜೀವನ ಮತ್ತು ಸಂಸ್ಕೃತಿಯನ್ನು ಅಳವಡಿಸಿಕೊಂಡಿರತಕ್ಕ ಸಮಾಜವಾಗಿದೆ.

(ಮುಂದು)

(238)08–02–2021(06–50)ಬಿಎಸ್‌ಡಿ–ಬಿಎನ್‌ಎಸ್

**ಶ್ರೀ ಎಸ್. ರವಿ (ಮುಂದು)**

ನಾವು ನಾಗರಹಾವನ್ನು ಪ್ರೀತಿಸುತ್ತೇವೆ ಹಾಗೂ ನಾಗರಹಾವನ್ನು ದೇವರೆಂದು ಭಾವಿಸುತ್ತೇವೆ. ಆದರೆ ನಾಗರಹಾವಿಗೆ ಅತಿ ಹೆಚ್ಚು ಭಯ ಬೀಳುತ್ತೇವೆ. ದೋಷಗಳನ್ನು ಪರಿಹಾರ ಮಾಡುವ ವಿಚಾರದಲ್ಲಿ ಕುಕ್ಕೆ ಸುಬ್ರಮಣ್ಯ ಅಥವಾ ಘಾಟಿ ಸುಬ್ರಮಣ್ಯಕ್ಕೆ ಹೋಗಿ ಭಯ–ಭೀತಿಯಿಂದ ಪೂಜೆ ಮಾಡುತ್ತೇವೆ. ಅದೇರೀತಿ ನಾಯಿ ಯನ್ನು ಮಾರ್ಕಂಡೇಯನ ರೂಪದಲ್ಲಿ ನೋಡುತ್ತೇವೆ. ಹಂದಿಯನ್ನು ವರಾಹನ ರೂಪದಲ್ಲಿ, ವಿಷ್ಣುವಿನ ರೂಪದಲ್ಲಿ ನೋಡುತ್ತೇವೆ. ಇವುಗಳು ಉದಾಹರಣೆಯಾಗಿವೆ. ನಮ್ಮ ಮನಸ್ಥಿತಿ, ನಮ್ಮ ಸುತ್ತ–ಮುತ್ತ ವಾಸಿಸುವ ಜೀವಿಗಳು ಹಾಗೂ ಪರಿಸರದ ಜೊತೆ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಇರುತ್ತೇವೆ. ಕೋಳಿಯನ್ನು ಸುಬ್ರಮಣ್ಯ ಎಂದು ಪೂಜೆ ಮಾಡುವ ಉದಾರ ಮನಸ್ಥಿತಿಯಲ್ಲಿದ್ದೇವೆ. ಅಶ್ವತ್ಥ ವೃಕ್ಷವನ್ನು ಪೂಜೆ ಮಾಡುತ್ತೇವೆ. ನಮ್ಮಲ್ಲಿ ಇರುವ forest ನಲ್ಲಿ ಎಲ್ಲಾ ಮರಗಳನ್ನು ಕಡಿದಿದ್ದಾರೆ, ಕಾಡನ್ನು ಕಡಿಯಬೇಡಿ ಎಂದರೂ ಕೇಳುವುದಿಲ್ಲ. ಆದರೆ ತಾರೆ ಮರವನ್ನು ಕಡಿಯುವುದಿಲ್ಲ, ಅದನ್ನು ಶನಿಮಹಾತ್ಮನ ಮರ ಎಂದು ಹೇಳುತ್ತೇವೆ. ಅದನ್ನು ಕಡಿಯದೇ ಬಿಟ್ಟಿದ್ದಾರೆ. ಅದು ಉದ್ದಕ್ಕೆ ಕಾಡಿನಲ್ಲಿ ಬೆಳೆಯುತ್ತದೆ. ಅದನ್ನು ಬಿಟ್ಟು ಇನ್ಯಾವ ಮರವೂ ಇಲ್ಲ. ಕಗ್ಗಿ ಮರವೂ ಇಲ್ಲ, ಇನ್ಯಾವ ಮರವೂ ಇಲ್ಲ, ಎಲ್ಲವನ್ನು ಕಡಿದು ಸೌದೆ ಮಾಡಿಕೊಂಡು ಬಿಟ್ಟಿದ್ದಾರೆ. ಆ ರೀತಿಯಾದ ಭಾವನೆಯನ್ನು ಹೊಂದಿದ್ದು, ರಕ್ತಗತವಾಗಿ ನಮಗೆ ಬಂದಿದೆ. ಇಲ್ಲಿ ಕುಳಿತಿರುವವರು ಹಿಂದೂಗಳಲ್ಲ; ಅಲ್ಲಿ ಕುಳಿತಿರುವವರು ಮಾತ್ರ ಹಿಂದೂಗಳು ಎಂದಲ್ಲ. ನಮ್ಮ ಸಂಸ್ಕಾರದಲ್ಲಿ ಇಂತಹದೊಂದು ಕಾನೂನು ಬರೆದು ನಿಂತಿದೆ. ಸಮಯದ ಅಭಾವ ಇರುವುದರಿಂದ ನಾನು ಇನ್ನೂ ಹೆಚ್ಚಿನ ವಿಶ್ಲೇಷಣೆ ಮಾಡುವುದಿಲ್ಲ. ಪ್ರಕೃತಿ ವಿಚಾರದಲ್ಲಿ ಇಷ್ಟನ್ನು ಹೇಳಬಯಸುತ್ತೇನೆ.

ಇನ್ನು ಗೋಹತ್ಯೆ ವಿಚಾರದಲ್ಲಿ ಜಾನುವಾರಗಳ ಬಗ್ಗೆ ನಮ್ಮ ಭಾವನೆಯ ವಿಚಾರವೂ ಇದ್ದು, ಮಾನ್ಯ ಕಂದಾಯ ಸಚಿವರು ಜನರ ಭಾವನೆ, ಆಚಾರ-ವಿಚಾರಗಳ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಅದೇರೀತಿ ಹಿಂದೂ ಸಂರಕ್ಷಕರು, ಗೋ ಸಂರಕ್ಷಕರು ಎಂದೆಲ್ಲಾ ಹೇಳಿ, 'ನೀವು ಗೋವನ್ನು ಹತ್ಯೆ ಮಾಡಬೇಕೆಂಬ ಉದ್ದೇಶವುಳ್ಳವರು' ಎಂಬುದನ್ನು ಪ್ರತಿಪಾದನೆ ಮಾಡಲು ಹೊರಟರು. ನನಗೆ ಅನಿಸಿದಂತೆ ಅವರು ಗೋವನ್ನು ಸಂರಕ್ಷಣೆ ಮಾಡಲು ಕಾನೂನು ತಂದಿಲ್ಲ, ಈ ರೀತಿ ಭಾಷಣ ಮಾಡಲು ಕಾನೂನು ತಂದಿದ್ದಾರೆ. ಈ ರೀತಿಯ ಭಾಷಣದಿಂದ ಒಂದು ಮತಬ್ಯಾಂಕ್ ಅನ್ನು ತಾತ್ಕಾಲಿಕವಾಗಿ ಮಾಡಿಕೊಳ್ಳಲು ಮಾತ್ರ ಅಷ್ಟೇ. ದೂರಗಾಮಿಯಾಗಿ ಅವರಿಗೂ ಕೂಡ ಒಳ್ಳೆಯದಾಗುವುದಿಲ್ಲ. ಅದರ ಪರಿಣಾಮ ಅವರೇ ಎದುರಿಬೇಕಾಗುತ್ತದೆ. ತಾತ್ಕಾಲಿಕವಾಗಿ ಜನರ ಭಾವನೆಗಳೊಂದಿಗೆ ಚೆಲ್ಲಾಟ ಆಡಲು ಮತ್ತು ಆ ಮುಖೇನ ಸಮಾಜದಲ್ಲಿ ಆಂತರಿಕ ಕಲಹವನ್ನು ಉಂಟು ಮಾಡಲು ಒಂದು ಪ್ರಯತ್ನವನ್ನು ಮಾಡಲು ಹೊರಟಿದ್ದಾರೆ ಎಂಬುದು ನನ್ನ ಭಾವನೆಯಾಗಿದೆ. ನನ್ನ ಜಿಲ್ಲೆಗೆ ಸೀಮಿತವಾಗಿ ವಾಸ್ತವಾಂಶದ ನೆಲೆಗಟ್ಟಿನಲ್ಲಿ ಮಾತನಾಡಲು ಇಚ್ಛಿಸುತ್ತೇನೆ. ನಾವು ಬೆಂಗಳೂರಿಗೆ ಹತ್ತಿರವಾಗಿದ್ದು, ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯನ್ನು ಪ್ರತಿನಿಧಿಸುತ್ತೇನೆ. ನಮಗೆ ಯಾವುದೇ ಶಾಶ್ವತವಾದ ನೀರಾವರಿ ಯೋಜನೆಗಳು ಇಲ್ಲ, ಯಾವುದೇ ಯೋಜನೆ ಇಲ್ಲದಿರುವುದರಿಂದ ನಾವು ಬೆಂಗಳೂರಿಗೆ ಬರಲೇಬೇಕು. ನಮ್ಮ ಹುಡುಗರು ಬೆಂಗಳೂರಿನಲ್ಲಿ ಲೋಟ ಎತ್ತಬೇಕು, ವಿದ್ಯಾಭ್ಯಾಸ ಇಲ್ಲವೆಂದರೆ security guard ಆಗಬೇಕು. ನಮ್ಮಲ್ಲಿ ಮೂರ್‍ನಾಲ್ಕು ಎಕರೆ ಜಮೀನು ಹೊಂದಿದ್ದರೂ ಮಳೆ ಆಧಾರಿತ ಕೃಷಿಯನ್ನು ನಂಬಿರುವುದರಿಂದ, ಇವತ್ತಿನ ಕೃಷಿಯನ್ನು ನಂಬಿ ಜೀವನ ಮಾಡಲು ಸಂಕಷ್ಟವಾಗಿರುವ ಸಂದರ್ಭದಲ್ಲಿ ಬೆಂಗಳೂರಿನ ಯಾವುದಾದರೂ apartment ಗಳಲ್ಲಿ ಮೂರು-ನಾಲ್ಕು ಮನೆಗಳಲ್ಲಿ ಹೆಂಗಸರು ಕೆಲಸ ಮಾಡಬೇಕು, ಗಂಡಸರು security guard ಕೆಲಸ ಮಾಡಬೇಕು. ಆದರೆ ಅವನ ಜಮೀನಿಗೆ ನಮ್ಮಲ್ಲಿ ಎಕರೆಗೆ ರೂ.೫೦ ಲಕ್ಷ ಇದ್ದು, ಅವನು ಮೂರು ಎಕರೆ ಜಮೀನು ಹೊಂದಿದ್ದರೂ ಇಲ್ಲಿ security guard ಕೆಲಸ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಅಶೋಕ:–** ಮಾನ್ಯ ಸದಸ್ಯರ ಮಾತುಗಳನ್ನು ಮಾನ್ಯ ಹರಿಪ್ರಸಾದ್ ರವರು ಒಪ್ಪುವುದಿಲ್ಲ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಈ ರೀತಿಯಾದ ಸಂದರ್ಭ ಇದೆ. ನಮ್ಮ ಭಾಗದ ಜನ ಹೈನುಗಾರಿಕೆ ಮತ್ತು ರೇಷ್ಮೆ ಉದ್ಯಮದಿಂದ ಅತ್ಯಂತ ಗೌರವಯುತವಾಗಿ ಜೀವನ ಮಾಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಅತೀ ಹೆಚ್ಚು ಹಾಲನ್ನು ರಾಮನಗರ ಜಿಲ್ಲೆಯಲ್ಲಿ ಉತ್ಪಾದನೆ ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆ ವಿಸ್ತೀರ್ಣದಲ್ಲಿ ಜಾಸ್ತಿ ಇರುವುದರಿಂದ ೧೧ ಲಕ್ಷ ಲೀಟರ್ ಹಾಲು ಬರಬಹುದು. ಆದರೆ ನಮ್ಮಲ್ಲಿ ೪ ತಾಲ್ಲೂಕುಗಳು ಇದ್ದರೂ ೮ ಲಕ್ಷಕ್ಕೂ ಅಧಿಕವಾದ ಶುದ್ಧವಾದ ಹಸುವಿನ ಹಾಲನ್ನು ಉತ್ಪಾದನೆ ಮಾಡುತ್ತೇವೆ. ಬರೀ ನಾಲ್ಕು ತಾಲ್ಲೂಕಿಗೆ ಮಾತ್ರ ಒಳಪಟ್ಟು ಮಾಡುತ್ತಿದ್ದೇವೆ. ನಮ್ಮ ಹಾಲು ಯಾವ ಮಟ್ಟಕ್ಕೆ ಇದೆ ಎಂದರೆ ಇವತ್ತು ಅತ್ಯಂತ ಪ್ರೀತಿ ಪಾತ್ರವಾದ ತಿರುಪತಿ ದೇವರ ಪ್ರಸಾದವಾಗಿದ್ದು, ಅದರ ಸವಿ ನೋಡಿದರೆ ಸಾಕ್ಷಾತ್ ವೆಂಕಟರಮಣನ ಹತ್ತಿರಕ್ಕೆ ಹೋದಂತೆ ಇರುತ್ತದೆ. ಅದಕ್ಕೆ ನಮ್ಮ ಹಸು ಮತ್ತು dairy ತುಪ್ಪವನ್ನು ಕೊಡುತ್ತೇವೆ. ಅದಕ್ಕಿಂತ ಮೀರಿ ಬಾಬಾ ರಾಮ್‌ದೇವ್ ರವರು ಶುದ್ಧ ನಾಟಿ ಹಸುವಿನ ತುಪ್ಪ ಎಂದು ಅವರ brand ನಲ್ಲಿ ಮಾರಾಟ ಮಾಡುತ್ತಾರೆ, ಇವತ್ತು ಇದು record ಆಗುತ್ತದೆ. ನಮ್ಮ ಬಮೂಲ್ ರವರು supply ಮಾಡಿದ್ದನ್ನೇ ಅವರು label ಹಾಕಿಕೊಂಡು ಮಾರುತ್ತಿದ್ದಾರೆ. ಬಮೂಲ್‌ನಲ್ಲಿ ತೆಗೆದುಕೊಂಡು ಶುದ್ಧ ನಾಟಿ ಹಸುವಿನ ತುಪ್ಪ ಎಂದು ಮಾರಿದ್ದಾರೆ ಎಂಬುದನ್ನು ದಾಖಲೆಯಾಗಿ ಬಮೂಲ್ ಮತ್ತು KMF ನವರ ಬಳಿ ಯಾವ ಯಾವ ವರ್ಷ ಎಷ್ಟು ಖರೀದಿ ಮಾಡಿದ್ದಾರೆ ಎಂಬುದಕ್ಕೆ ದಾಖಲೆ ಇದೆ. ನನ್ನ ಮಾತು ಸುಳ್ಳಾದರೆ ದಾಖಲೆ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಆ ಮಟ್ಟದ ಉದ್ಯಮವನ್ನು ನಮ್ಮಲ್ಲಿ ನಂಬಿದ್ದಾರೆ. ನಮ್ಮ ಭಾಗದ ಹೆಣ್ಣುಮಕ್ಕಳು ಅತ್ಯಂತ ಗೌರವವಾಗಿ ಜೀವನ ಮಾಡುತ್ತಿದ್ದಾರೆ, ಮನೆಯಲ್ಲಿ ಗಂಡ ಕುಡುಕ ಅಥವಾ ಸೋಂಬೇರಿಯಾಗಿ ಬೆಳಗ್ಗೆ ಎದ್ದು ಕೆಲಸ ಮಾಡದೇ ಓಡಾಡಿಕೊಂಡಿದ್ದರೂ ಒಬ್ಬ ಹೆಣ್ಣು ಮಗಳು ಜೀವನ ನಿರ್ವಹಣೆ ಮಾಡುತ್ತಾಳೆ, ಹಬ್ಬ ಹರಿದಿನಗಳನ್ನು ಆಚರಿಸುತ್ತಾಳೆ ಅಥವಾ ಶಿಕ್ಷಣವನ್ನು ಕೊಡುತ್ತಾಳೆ. ಯಶಸ್ವಿಯಾಗಿ ಆರೋಗ್ಯದ ಸಮಸ್ಯೆಗಳನ್ನು ನಿರ್ವಹಣೆ ಮಾಡುತ್ತಾಳೆ ಎಂಬುದು ಹೈನುಗಾರಿಕೆಯಿಂದ ಸಾಧ್ಯ. ಇದು ಬಹಳ ಮಹತ್ವದ ಕಾನೂನಾಗಿದ್ದು, ಅನೇಕ ವಿಚಾರಗಳು ಹೊರಗೆ ಬರಬೇಕಾಗುತ್ತದೆ. ನಮ್ಮಲ್ಲಿ ಇರುವ ಹೈನುಗಾರಿಕೆ ಬಗ್ಗೆ ಇರುವ ಆದ್ಯತೆ ಹೇಳಿದ್ದೇನೆ. ನಮ್ಮಲ್ಲಿ ಹೆಚ್ಚು ಹಾಲು ಬರುವಾಗ ಒಂದು ಹಸು ೨೫ ಲೀಟರ್ ಹಾಲು ಕೊಟ್ಟರೆ ಅದನ್ನು ಸಾಕುವುದು ಕಷ್ಟ. ಯಾವುದೇ ಹಸುವಿನಿಂದ ೧೦ ರಿಂದ ೧೨ ಲೀಟರ್‌ಗಿಂತ ಮೇಲೆ ಹಾಲು ಬಂದರೆ ಅದು ಬಹಳ ಸೂಕ್ಷ್ಮ. HF (Holstein Friesians) ಮೊದಲು ನಾಟಿ cross breeding ಆಗಿರುತ್ತದೆ. ಅದು ೩ ತಳಿ ಆದಮೇಲೆ ವಂಶವಾಹಿನಿಯಾಗಿ ೫ನೇ ತಳಿಗೆ ಬರುವಷ್ಟರಲ್ಲಿ pure HF ಆಗಿಬಿಡುತ್ತದೆ. ಮೊದಲು ಹಳ್ಳಿಕಾರ್, ಸಾಹು, ಗೀರ್ ಯಾವುದನ್ನೋ cross breed ಮಾಡಿ ಮಾಡಿರುತ್ತೇವೆ. ಇದು ೪ ಅಥವಾ ೫ನೇ ಹಂತಕ್ಕೆ ಬರುವಷ್ಟರಲ್ಲಿ pure HF ಅಥವಾ Jersey ನೋ ಆಗುತ್ತದೆ. pure HF, Jersey ಆಗುತ್ತಿದ್ದಂತೆ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಆಗ ವಾತಾವರಣಕ್ಕೆ ಹೊಂದಿಕೊಳ್ಳುವುದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ ಕಡಿಮೆಯಾಗುತ್ತದೆ. ಆ ಹಸುವಿನ ಕೆಚ್ಚಲು ದಪ್ಪವಾದಂತೆ ಹೆಚ್ಚು ಹಾಲು ಬಂದು, ೧೦ ಲೀಟರ್ ಮೇಲೆ ಹಾಲು ಕರೆದರೆ ಆ ಹಸುವನ್ನು maintenance ಮಾಡುವುದು ಬಹಳ ಕಷ್ಟ. ಅದರ ಬೆಲೆ ಒಂದರಿಂದ ಒಂದೂಕಾಲು ಲಕ್ಷ ರೂಪಾಯಿಗಳು ಆಗುತ್ತದೆ. ಇದು ಕೋಲಾರದ ಕಡೆಯವರಿಗೆ ಗೊತ್ತಿರುತ್ತದೆ. ಸಾಮಾನ್ಯ ರೈತಾಪಿ ಕುಟುಂಬ ಇಂತಹ ಎರಡು ಹಸು ಸಾಕಬೇಕೆಂದರೆ ದುಬಾರಿ ಆಗುತ್ತದೆ. ಅವು ಇಡೀ ಅವನ ಆಸ್ತಿಯಾಗುತ್ತದೆ. ಇಂತಹ ಹೆಚ್ಚು ಹಾಲು ಕೊಡುವ ಹಸುಗಳು ಸೂಕ್ಷ್ಮವಾದಂತೆ ಅದರ ನಡುಕಟ್ಟು, ಬೆನ್ನು ಸೂಕ್ಷ್ಮವಾಗಿ ಜಾರಿ ಬೀಳುವುದು ಸಹಜವಾಗಿದ್ದು, ಒಂದು ಸಾರಿ ಜಾರಿ ಬಿದ್ದರೆ ಮತ್ತೆ ಅದನ್ನು ready ಮಾಡುವುದಕ್ಕೆ ಆಗುವುದೇ ಇಲ್ಲ. More ಹಾಲು ಕೊಡುವ ಹಸುವನ್ನು ready ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಒಂದೇ ತಾಲ್ಲೂಕಿನಲ್ಲಿ ೩೫೦ dairy ಗಳಿದ್ದು, ಮಾಗಡಿಯಲ್ಲಿ 380 dairy ಗಳಿದ್ದು, ಪ್ರತಿ ಗ್ರಾಮಕ್ಕೆ ಒಂದೊಂದು dairy ಗಳಿದ್ದು, ಇದೇ ಅವರ ಕೈಗಾರಿಕೆಯಾಗಿದೆ. ನಾವು dairy ಉದ್ಘಾಟನೆ ಸಂದರ್ಭದಲ್ಲಿ ಭಾಷಣ ಮಾಡುತ್ತೇವೆ. ಭಾಷಣದಲ್ಲಿ ಸುಮ್ಮನೆ ಸಾಲ-ಸೋಲ ಮಾಡಿ ೨೦ ಲೀಟರ್ ಹಾಲು ಕರೆಯುವ ಹಸು ಕಟ್ಟುವುದಕ್ಕೆ ಹೋಗಬೇಡಿ, ಆವತ್ತಿಗೆ ೭ ರಿಂದ ೮ ಲೀಟರ್ ಹಾಲು ಕರೆಯುವ ಮತ್ತು ರೂ.೫೦ ರಿಂದ ೬೦ ಸಾವಿರದ ಒಳಗಿರುವ ಹಸುಗಳನ್ನು ಕಟ್ಟಿರಿ, ಅಷ್ಟೇ ಸಾಕು, ಅಂತಹ ಹಸುಗಳನ್ನು ಕಟ್ಟಿಕೊಂಡು ಸ್ವಲ್ಪ ಸೀಮೆ ಹುಲ್ಲು, ಮೇವು ಹಾಕಿಕೊಂಡು ಸಾಕಿ. ಅವರೆಡರಲ್ಲಿ ಒಂದು ಕರಾವು ಮಾಡುತ್ತಿದ್ದು, ಇನ್ನೊಂದು ಆಯಿತು ಎಂದರೆ ಬದಲಾಯಿಸಿಕೊಳ್ಳಿ ಎಂದು ಹೇಳುತ್ತೇವೆ. ಮಾನ್ಯ ಸಭಾಪತಿಯವರೇ, ನಾನು ಎರಡು ಹಸುಗಳನ್ನು ಕಟ್ಟಿಕೊಂಡಿದ್ದೇನೆ. ಮೊದಲು ಏಳೆಂಟು-ಹತ್ತು ಹಸುಗಳನ್ನು ಕಟ್ಟುತ್ತಿದ್ದೆವು, ಆದರೆ ಈಗ maintain ಮಾಡಲು ಆಗುತ್ತಿಲ್ಲ.

**ಶ್ರೀ ಅಡಗೂರು ಹೆಚ್. ವಿಶ್ವನಾಥ್:-** cross breed, pure ಎಂದರೇನು?

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನಾನು cross breed, pure, ಎಮ್ಮೆ ಸೇರಿದಂತೆ ಮೂರನ್ನು ಕಟ್ಟಿದ್ದೇನೆ. ನಾನು ಪ್ರಯೋಗ ಮಾಡಿದ್ದೇನೆ. ಅದರ ಬಗ್ಗೆ ಪುರುಸೊತ್ತಾಗಿದ್ದಾಗ ಮಾತನಾಡೋಣ. ನನ್ನ ಅನುಭವ ಹೇಳುತ್ತೇನೆ. ಆದ್ದರಿಂದ HF ನಲ್ಲಿ ಹೋರಿ ಕರುಗಳು ಪ್ರಯೋಜನಕ್ಕೆ ಬರುವುದಿಲ್ಲ. ಹೋರಿ ಕರುಗಳನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಒಂದು ಹೋರಿ ಕರುವನ್ನು ಸಾಕಲು ಬೆಳಗ್ಗೆ ಒಂದು ಲೀಟರ್ ಮತ್ತು ಸಾಯಂಕಾಲ ಒಂದು ಲೀಟರ್ ಹಾಲು ಕೊಡಬೇಕು. ೬ ರಿಂದ ೭ ಲೀಟರ್ ಕರೆಯುವ ಹಸುಗಳಲ್ಲಿ ೨ ಲೀಟರ್ ಅದಕ್ಕೆ ಹೋದರೆ ಇನ್ನು ೫ ಲೀಟರ್‌ಗಳು ಉಳಿಯುತ್ತದೆ. ನಂತರ ಬಳಕೆ ಮಾಡಿಕೊಂಡು ಕೊನೆಗೆ ಉಳಿಯುವುದು ೨ ಲೀಟರ್ ದುಡ್ಡಾಗುತ್ತದೆ. ಹೆಣ್ಣುಗರುವನ್ನು ಸಾಕಿದರೆ ಕರುವನ್ನಾದರೂ ಹಾಕುತ್ತದೆ. ಆದರೆ ಹೋರಿಯನ್ನು ಏನು ಮಾಡಬೇಕು? ನಮ್ಮ ಒಂದೇ ತಾಲ್ಲೂಕಿನಲ್ಲಿ ೨ ಲಕ್ಷ ಲೀಟರ್ ಹಾಲು ಬರುತ್ತಿರುವಾಗ ದಿನಕ್ಕೆ ೧೫೦ ರಿಂದ ೨೦೦ ಮಾತ್ರವಲ್ಲದೇ ೩೦೦ರ ವರೆಗೆ ಕರುಗಳು ಜನನವಾಗುತ್ತವೆ. ಅವುಗಳನ್ನು ಏನು ಮಾಡಬೇಕು? ಎಲ್ಲಿಗೆ ತೆಗೆದುಕೊಂಡು ಹೋಗಬೇಕು?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನ ಸ್ನೇಹಿತ ಮಾನ್ಯ ಗೋಪಾಲಸ್ವಾಮಿರವರಿಗೆ ತಿಳಿದಂತೆ ಮೊನ್ನೆ ಚೆನ್ನರಾಯಪಟ್ಟಣ RMC ಗೆ ೬೦ ಹೋರುಗರು ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ. ತಹಶೀಲ್ದಾರರು ಏನು ಮಾಡಬೇಕು ಎಂದು ತಲೆ ಚಚ್ಚಿಕೊಳ್ಳುತ್ತಿದ್ದಾನಂತೆ! ಇದಕ್ಕೆ ಒಂದು ಪರಿಹಾರ ಕೊಡಬೇಕು. ಅವರು ಕಾನೂನು ತಂದಿರುವುದು ತಪ್ಪಲ್ಲ. ನಾನು dairy ಮತ್ತು ಬಮೂಲ್ ಅಧಿಕಾರಿಗಳ ಜೊತೆ ಹೆಣ್ಣುಗರು ಆಗುವಂತಹ semen ಕೊಡಿಸಿ, ಹೋರುಗರು ಹುಟ್ಟುವುದೇ ಬೇಡ.

(ಮುಂದು)

**(239)/08.02.2021/7.00/ಹೆಚ್‌ವಿ:ಬಿಎನ್‌ಎಸ್**

**ಶ್ರೀ ಎಸ್.ರವಿ(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ಹೆಣ್ಣು ಕರು ರೈತನಿಗೆ ಲಾಭದಾಯಕವಾಗಿರುತ್ತದೆಂದು ಹೇಳಿದ್ದೆ. ಅವನು ಕರು ಹಾಕಿದ 8 ತಿಂಗಳ ನಂತರ ಹೀಟಿಗೆ ಬಂದರೆ, ಪ್ರಯೋಗ ಮಾಡಿಸಿ, ಆಗ ನಂತರ ಹೆಣ್ಣು ಕರು ಹಾಕುತ್ತದೆಂದು ಹೇಳಿದ. ನಾನು ಸುಮಾರು 6 ಬಾರಿ ಪ್ರಯೋಗ ಮಾಡಿಸಿದೆ. ಡಾಕ್ಟರ್‌ನ್ನು ಕರೆಸಿ, ಸೆಮನ್ಸ್ ಕೊಡಿಸಿದೆ. ಇದು ವಾಸ್ತವಾಂಶವಾಗಿದೆ. ಇವರುಗಳು ನಗುತ್ತಿದ್ದಾರೆ. ನಮ್ಮಲ್ಲಿ ಈ ಬಗ್ಗೆ ಮೀಟಿಂಗ್ ಮಾಡಿದ್ದೇವೆ. ಪ್ರಯೋಗವಾಗಬೇಕೆಂದು ಒತ್ತಡ ಹಾಕಿದ್ದೇವೆ. ಈ ಪ್ರಯೋಗ ಯಶಸ್ವಿಯಾದರೆ, ರೈತ ಬದುಕುತ್ತಾನೆಂದು ಹೇಳಿದ್ದೇನೆ. ಇನ್ನೂ ನಾವು ಯಶಸ್ವಿಯಾಗುವುದಕ್ಕೆ ಸಾಧ್ಯವಾಗಿಲ್ಲ. ನನ್ನ ಹಸುಗಳಿಗೆ ಪ್ರಯೋಗ ಮಾಡಿಸಿದ್ದೇನೆ, ಆದರೂ ಅದು ಇನ್ನೂ ಹೆಣ್ಣು ಕರು ಹಾಕಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಕಾಲದಲ್ಲಿ ಸಗಣಿಯಿಂದ ನೆಲವನ್ನು ಸಾರಿಸಿದರೆ ಅದರಿಂದ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆಂದು ಭಾವಿಸಿ ಮನೆಯ ಒಳಗೆ ಹೊರಗೆ ಸಗಣಿಯಿಂದ ಸಾರಿಸುತ್ತಿದ್ದರು. ಈಗ ಕಾಂಕ್ರಿಟ್, ಗ್ರಾನೇಟ್ ಮತ್ತು ಮಾರ್ಬಲ್‌ಗಳನ್ನು ನೆಲಕ್ಕೆ ಹಾಕಿಸಿರುತ್ತಾರೆ. ಗೋವುಗಳ ಬಗ್ಗೆ ಈ ಸರ್ಕಾರಕ್ಕೆ ಅಷ್ಟು ಕಾಳಜಿ ಇದ್ದರೆ, 'ಇನ್ನು ಮೇಲೆ ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ, ಶಾಲೆಗಳಲ್ಲಿ ನೆಲಹಾಸನ್ನು ಸಂಪೂರ್ಣವಾಗಿ ಸಗಣಿಯಿಂದ ಸಾರಿಸಬೇಕು ಯಾವುದೇ ರೀತಿಯ ಗ್ರಾನೇಟ್, ಮಾರ್ಬಲ್ ಹಾಕಬಾರದು' ಎಂದು ಒಂದು ಕಾನೂನು ಮಾಡಲಿ. ಬೇಕಾದರೆ, ವಿಧಾನಸೌಧದಲ್ಲಿ ಒಂದು ಪಾರ್ಕ್ ಮಾಡಲಿ. ಗೋವುಗಳ ಬಗ್ಗೆ ಅವರಿಗೆ ಅಷ್ಟು ಪ್ರೀತಿ ಇದ್ದರೆ, ಪವಿತ್ರವಾದ ಗೋವಿನ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಕುಳಿತುಕೊಂಡು ಕ್ಯಾಬಿನೆಟ್ ಮೀಟಿಂಗ್ ಮಾಡೋಣ. ಗೋವಿನ ಗಂಜಲಕ್ಕೊಂದು ಮಾರ್ಕೆಟಿಂಗ್ ಸೃಷ್ಟಿ ಮಾಡಲಿ. ಗಂಜಲದ ಬಗ್ಗೆ ಒಂದು ಅಧ್ಯಯನ ಮಾಡಲಿ. ಮೊದಲು ಹೆಣ್ಣುಕರು ಹುಟ್ಟುವಂತೆ ಪ್ರಯೋಗಗಳನ್ನು ಮಾಡಲಿ ಇದನ್ನೆಲ್ಲ ಮಾಡಿದ ಮೇಲೆ ಕಾನೂನು ತಂದರೆ, ನಾವು ಅದನ್ನು ಸ್ವಾಗತಿಸುತ್ತೇವೆ. ಈಗ ಇವರು ಬರೀ ಭಾವನೆಗಳೊಂದಿಗೆ ಚೆಲ್ಲಾಟವಾಡಿ, ಭಾಷಣ ಮಾಡಿ ಒಂದು ಆರ್ಥಿಕ ವ್ಯವಸ್ಥೆಯನ್ನೇ ಹಾಳು ಮಾಡುತ್ತಿದ್ದಾರೆ. ಇವರು ತಂದಿರುವ ಕಾನೂನು ಅಲ್ಪಸಂಖ್ಯಾತರ ಮೇಲೆ, ಕಾಂಗ್ರೆಸ್‌ನವರ ಮೇಲೆ ಅಥವಾ ಜೆ.ಡಿ.(ಎಸ್)ನವರ ಮೇಲೆ ಪ್ರಭಾವ ಬೀರುವುದಿಲ್ಲ. ಈ ಕಾನೂನು ಇಡೀ ಆರ್ಥಿಕ ವ್ಯವಸ್ಥೆಯನ್ನು ಹಾಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕಾಗಿ ತಂದಿರುವಂತಹ ಕಾನೂನಾಗಿದೆ. ಈ ಕಾನೂನು ತರುವುದರಿಂದ ಅವರಿಗೆ ಒಂದಷ್ಟು ಮೆರಗು ಬರಬಹುದು ಅಥವಾ ಭಾಷಣ ಮಾಡುವುದಕ್ಕೆ ಖುಷಿ ತರಬಹುದು. ಮುಂದಿನ ದಿನಗಳಲ್ಲಿ ಇದು ರಾಜ್ಯಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಇವರಿಗೆ ಓಟು ಹಾಕಿದಂತಹ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದೊಂದು ರೈತ ವಿರೋಧಿ ಕಾನೂನಾಗಿದೆ. ಈ ರೈತ ವಿರೋಧಿ ಕಾನೂನನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕಾಗಿದೆ. ಸುಧಾರಣೆಗಳೊಂದಿಗೆ ಪುನಃ ವಾಪಸ್ಸು ತೆಗೆದುಕೊಂಡು ಬಂದರೆ, ನಾವೆಲ್ಲರೂ ಅದನ್ನು ಸ್ವಾಗತಿಸುತ್ತೇವೆ. ಇವರು ಬರೀ ಬಾಯಿ ಮಾತಿನಲ್ಲಿ ನಾವು ಗೋ ಪ್ರಿಯರು ಮತ್ತು ಗೋ ರಕ್ಷಕರೆಂದು ಹೇಳಿಕೊಳ್ಳುತ್ತಾರೆ. ಇವರು ಮಾತ್ರ ಗೋ ಪ್ರಿಯರಲ್ಲ, ಇವರು ಮಾತ್ರ ಗೋ ರಕ್ಷಕರಲ್ಲ ನಮಗೆ ಆ ಗುಣಗಳು ರಕ್ತಗತವಾಗಿ ಬಂದಿದೆ. ಅವರಿಗಿಂತ ಹೆಚ್ಚಾಗಿ ನಾವು ಗೋವುಗಳನ್ನು ಪ್ರೀತಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾವು ರಾಜಕಾರಣ ಮಾಡುತ್ತಿದ್ದೇವೆಂದು ಅವರು ಹೇಳಿದರೆ ಇದಕ್ಕೆ ಅವರು ಬೆಂಬಲ ಕೊಡಲಿ. ಹೆಸರನ್ನು ಅವರೇ ಪಡೆದುಕೊಳ್ಳಲಿ.

**ಶ್ರೀ ಎಸ್.ರವಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಸಂಪೂರ್ಣವಾಗಿ ರಾಜಕಾರಣ ಮಾಡುತ್ತಿದ್ದಾರೆ. ಅವರ ಉದ್ದೇಶ ರಾಜಕಾರಣ ಮಾಡುವುದಾಗಿದೆ. ಈ ವಿಧೇಯಕವನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕಾಗಿದೆ. ಇದನ್ನು ಯಾವರೀತಿಯಲ್ಲಿ ಪ್ರಾಯೋಗಿಕವಾಗಿ ಮತ್ತು ತಾತ್ವಿಕವಾಗಿ ಜಾರಿಗೊಳಿಸಬಹುದು ಎನ್ನುವುದರ ಬಗ್ಗೆ ಅಧ್ಯಯನ ಮಾಡಿ, ಚರ್ಚೆ ಮಾಡಿ, ವಿಚಾರಗಳನ್ನು ಮಂಡನೆ ಮಾಡಿ ಮತ್ತು ನಾವು ಕೊಟ್ಟಿರುವಂತಹ ಸಲಹೆಗಳನ್ನು ಸೇರಿಸಿ ನಂತರ ಈ ವಿಧೇಯಕವನ್ನು ಸದನದ ಮುಂದೆ ತರಲಿ. ಸದ್ಭಾವನೆಯ ಹೆಸರಿನಲ್ಲಿ ಈ ವಿಧೇಯಕವನ್ನು ತಂದಿದ್ದಾರೆ ಆದರೆ, ಈಗ ಇವರು ತಂದಿರುವಂತಹ ವಿಧೆಯಕದಿಂದಾಗಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಕ್ರಮಗಳು ನಡೆಯುವುದಕ್ಕೆ ಮತ್ತು ಸಮಾಜದಲ್ಲಿ ಆಂತರಿಕ ಗಲಭೆಗಳುಂಟಾಗಬಹುದು. ಯಾರಿಗೆ ಯಾರು ಬೇಕಾದರು ಹೊಡೆಯಬಹುದು. ಇವರು ಶಾಶ್ವತವಲ್ಲ, ನಾಳೆ ಇವರು ಅಧಿಕಾರದಿಂದ ಇಳಿಯಬಹುದು ಮುಂದೆ ಬರುವವರ ಕಥೆಯ ಬಗ್ಗೆ ಇವರು ಯೋಜನೆ ಮಾಡಬೇಕಾಗಿದೆ. ಸಮಾಜದಲ್ಲಿರುವ ಸಾಮರಸ್ಯಕ್ಕೆ ಬೆಂಕಿ ಹಚ್ಚುವಂತಹ ಕೆಲಸವನ್ನು ಇವರು ಮಾಡಬಾರದು. ಸಮಾಜದಲ್ಲಿ ಸಾಮರಸ್ಯ ಶಾಂತಿ ಮತ್ತು ಸಹಬಾಳ್ವೆಯಿಂದ ಬಾಳುವಂತೆ ನೋಡಿಕೊಳ್ಳುವುದು ಸರ್ಕಾರದ ಕೆಲಸವಾಗಿದೆ. ಈ ವಿಧೇಯಕವನ್ನು ಜಾರಿಗೆ ತರುವುದರಿಂದ ಸಮಾಜಕ್ಕೆ ಮತ್ತು ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕದಿಂದ ಅಕ್ರಮವಾಗಿ ಗೋ ಸಾಗಾಣಿಕೆ ಮಾಡುವವರಿಗೆ ತೊಂದರೆಯಾಗುತ್ತದೆ. ಈ ವಿಧೇಯಕವನ್ನು ವಿರೋಧಿಸುವ ಮೂಲಕ ಅಕ್ರಮವಾಗಿ ಗೋ ಸಾಗಾಣಿಕೆ ಮಾಡುವುದಕ್ಕೆ ಇವರೇ ಉತ್ತೇಜನ ಕೊಡುತ್ತಿದ್ದಾರೆ.

(ಗೊಂದಲ)

**ಹಂಗಾಮಿ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರ ಅಭಿಪ್ರಾಯವನ್ನು ಹೇಳುವುದಕ್ಕೆ ಬಿಡಿ. ಅವರು ತಮ್ಮ ಮಾತುಗಳನ್ನು ಮುಗಿಸಲಿ.

**ಶ್ರೀಮತಿ ಭಾರತಿ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಒಮ್ಮೆ ಗೋ–ಹತ್ಯೆಗೆ ತಮ್ಮ ಬೆಂಬಲ ಕೊಡುತ್ತಾರೆ, ಮತ್ತೊಮ್ಮೆ ಗೋ–ರಕ್ಷಣೆಯ ಬಗ್ಗೆ ಮಾತನಾಡುತ್ತಾರೆ. ಅವರಲ್ಲಿಯೇ ದ್ವಂದ್ವ ನೀತಿಯಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಸಭಾಪತಿಗಳ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸಲು ನಾವು ಬೆಳಿಗ್ಗೆ 9 ಗಂಟೆಗೆ ವಿಧಾನಸೌಧಕ್ಕೆ ಬಂದಿದ್ದೇವೆ. ಇಲ್ಲಿಗೆ ಸರಿಸುಮಾರು 10 ಗಂಟೆಗಳ ಕಾಲವಾಗಿದೆ. ನಾವೂ ಮನುಷ್ಯರಲ್ಲವೇ? ನಾವು ಇನ್ನೂ ಎಷ್ಟು ಸಮಯಗಳ ಕಾಲ ಸದನದೊಳಗೆ ಕುಳಿತುಕೊಳ್ಳುವುದು? ಇವರು ನಮ್ಮ ಮೇಲೆ ಶೋಷಣೆ ಮಾಡುತ್ತಿದ್ದಾರೆಂದು ಮಾನವ ಹಕ್ಕುಗಳ ಆಯೋಗಕ್ಕೆ ನಾವು ದೂರು ಸಲ್ಲಿಸಬೇಕಾಗುತ್ತದೆ. ದಯಮಾಡಿ ನಾಳೆ ಚರ್ಚೆಯನ್ನು ಮುಂದುವರಿಸಿ ಇನ್ನು ಬಹಳಷ್ಟು ಜನ ಸದಸ್ಯರು ಮಾತನಾಡುವವರಿದ್ದಾರೆ. ಇವತ್ತಿಗೆ ಸದನವನ್ನು ಮುಕ್ತಾಯಗೊಳಿಸಿ ಎನ್ನುವುದು ನನ್ನ ಮನವಿಯಾಗಿದೆ.

**ಹಂಗಾಮಿ ಸಭಾಪತಿಯವರು:–** ನೀವು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ, ವಿಧೇಯಕವನ್ನು ಅಂಗೀಕಾರಕ್ಕಾಗಿ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅವರು ಬಿಲ್ ಪಾಸ್ ಮಾಡಿಕೊಟ್ಟರೆ, ಈಗಲೇ ಸದನವನ್ನು ಮುಕ್ತಾಯಗೊಳಿಸಬಹುದು. ಮಾನ್ಯ ಸಭಾಪತಿಯವರೇ, ತಾವು ಬಿಲ್ ಅನ್ನು ಅಂಗೀಕಾರಕ್ಕಾಗಿ ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಆ ಭಾಗದಲ್ಲಿರುವ ಸದಸ್ಯರು ಮತ್ತು ನಮ್ಮ ಭಾಗದಲ್ಲಿರುವಂತಹ ಸಾಕಷ್ಟು ಜನ ಸದಸ್ಯರು ಈ ವಿಧೇಯಕದ ಮೇಲೆ ಮಾತನಾಡುವವರಿದ್ದಾರೆ. ಆದ್ದರಿಂದ ನಾಳೆ ಬೆಳಿಗ್ಗೆ ಈ ವಿಷಯದ ಮೇಲೆ ಚರ್ಚೆಯನ್ನು ಮುಂದುವರಿಸಿದರೆ, ಸಮಾಧಾನದಿಂದ ಚರ್ಚೆ ಮಾಡಬಹುದು. ದಯಮಾಡಿ ಈ ವಿಚಾರದ ಮೇಲಿನ ಚರ್ಚೆಯನ್ನು ನಾಳೆಗೆ ತೆಗೆದುಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ.

(ಗೊಂದಲ)

**ಶ್ರೀ ಆರ್.ಬಿ.ತಿಮ್ಮಾಪೂರ:–** ಸನ್ಮಾನ್ಯ ಸಭಾಪತಿಯವರೇ, ನಾಳೆ ಈ ವಿಚಾರದ ಮೇಲಿನ ಚರ್ಚೆಯನ್ನು ಮುಂದುವರಿಸೋಣ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಇಂತಹ ವಿಚಾರಗಳ ಮೇಲೆ ಚರ್ಚೆ ಮಾಡುವುದಕ್ಕಾಗಿಯೇ ಜನರು ನಮ್ಮನ್ನು ಆರಿಸಿ ಕಳುಹಿಸಿಕೊಟ್ಟಿರುವುದು.

(ಗೊಂದಲ)

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಮೇಲೆ ಚರ್ಚೆ ಪ್ರಾರಂಭವಾಗಿ ಸುಮಾರು 3 ಗಂಟೆಗಳ ಕಾಲವಾಗಿದೆ. ಈಗ ವಿಧೇಯಕವನ್ನು ಅಂಗೀಕಾರಕ್ಕಾಗಿ ತಾವು ಮೂವ್ ಮಾಡಬೇಕಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕ ಅತ್ಯಂತ ಮಹತ್ವಪೂರ್ಣ ವಿಧೇಯಕವಾಗಿದೆ. ಆದ್ದರಿಂದ ಇದರ ಮೇಲೆ ಎಲ್ಲರೂ ಮಾತನಾಡಬೇಕಾಗಿದೆ. ಅದಕ್ಕಾಗಿ ತಾವು ಅವಕಾಶವನ್ನು ನೀಡಬೇಕಾಗಿದೆ.

(ಗೊಂದಲ)

**ಹಂಗಾಮಿ ಸಭಾಪತಿಯವರು:–** ನಾಳೆ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು 7.30 ಗಂಟೆಗಳವರೆವಿಗೂ ಮಾತನಾಡುವುದಕ್ಕೆ ತಮ್ಮೆಲ್ಲರಿಗೂ ಅವಕಾಶವನ್ನು ನೀಡುತ್ತೇನೆ. ಮಾತನಾಡಲು ಬಯಸುವ ಸದಸ್ಯರು 5 ನಿಮಿಷಗಳ ಕಾಲ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಆಗುವುದಿಲ್ಲ. ಈ ವಿಧೇಯಕದ ಮೇಲೆ ಸುದೀರ್ಘವಾದ ಚರ್ಚೆಯಾಗಬೇಕಾಗಿದೆ. ಆದ್ದರಿಂದ ದಯಮಾಡಿ ನಾಳೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

(ಗೊಂದಲ)

**ಹಂಗಾಮಿ ಸಭಾಪತಿಯವರು:–** ನಾಳೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಬಹಳಷ್ಟು ಜನ ಸದಸ್ಯರು ಮಾತನಾಡುವವರಿದ್ದಾರೆ. ಸಮಯಾವಕಾಶ ಕೇವಲ ಎರಡು ದಿನಗಳು ಮಾತ್ರ ಇದೆ. ಆದ್ದರಿಂದ ಈ ದಿನವೇ ವಿಧೇಯಕವನ್ನು ಅಂಗೀಕಾರಕ್ಕಾಗಿ ತೆಗೆದುಕೊಳ್ಳಬೇಕಾಗಿದೆ. ನೀವುಗಳೇ ಒಂದೊಂದು ನಿಲುವನ್ನು ತೆಗೆದುಕೊಂಡರೆ ನಾವೇನು ಮಾಡುವುದಕ್ಕೆ ಸಾಧ್ಯವಾಗುತ್ತದೆ?

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ನಾವು ಸದನದ ಬಾವಿಗಿಳಿದು ಧರಣಿ ನಡೆಸುತ್ತಿದ್ದ ಸಂದರ್ಭದಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಆದರೆ, ಈಗ ತಾವು ಹೇಳುತ್ತಿರುವ ಮಾತುಗಳನ್ನು ಕೇಳಿದರೆ, ತಾವೇ ತಮ್ಮ ಮಾತನ್ನು ಹಿಂದಕ್ಕೆ ತೆಗೆದುಕೊಂಡಂತಾಗಿದೆ.

(ಗೊಂದಲ)

**ಶ್ರೀ ನಸೀರ್ ಅಹಮದ್:–** ಸನ್ಮಾನ್ಯ ಸಭಾಪತಿಯವರೇ, ನಾವು ಸದನದ ಬಾವಿಯೊಳಗಿದ್ದಾಗ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ತಾವೇ ಹೇಳಿದ್ದೀರಿ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಅವರು ಏನು ಮಾತನಾಡಿದ್ದಾರೆ ಆ ವಿಚಾರಕ್ಕೆಲ್ಲ ನಾನು ಉತ್ತರವನ್ನು ಕೊಡುತ್ತೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಿದರೆ, ಯಾರು ಏನು ಮಾತನಾಡುತ್ತಿದ್ದಾರೆನ್ನುವುದು ಗೊತ್ತಾಗುವುದಿಲ್ಲ. ಯಾರಾದರು ಒಬ್ಬ ಸದಸ್ಯರು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿರುವ ಎಲ್ಲ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಎಲ್ಲ ಸದಸ್ಯರು ನಾಳೆ ಈ ವಿಚಾರದ ಮೇಲೆ ಚರ್ಚೆ ಮಾಡೋಣವೆಂದರೆ, ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

**ಹಂಗಾಮಿ ಸಭಾಪತಿಯವರು:–** ಇಲ್ಲ ನಾಳೆ ಈ ವಿಚಾರದ ಮೇಲೆ ಚರ್ಚೆ ಮಾಡಿ ಅಂಗೀಕಾರ ಮಾಡುವುದಕ್ಕೆ ಕಾಲಾವಕಾಶವಿಲ್ಲ. ನಾಳೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಬಹಳಷ್ಟು ಜನ ಸದಸ್ಯರು ಮಾತನಾಡುವವರಿದ್ದಾರೆ. ನಾಳೆ ಪ್ರಶ್ನೋತ್ತರ ವೇಳೆ ಇಲ್ಲ. ನಾಳೆ ರಾಜ್ಯಪಾಲರ ಭಾಷಣದ ಮೇಲೆಯೇ ಚರ್ಚೆ ನಡೆಸಲಾಗುವುದು. ಇವತ್ತು ವಿಧೇಯಕದ ಅಂಗೀಕಾರವನ್ನು ಪೂರ್ಣಗೊಳಿಸಬೇಕಾಗಿದೆ. ಯಾರಾದರು ಮಾತನಾಡುವವರು ಇದ್ದರೆ ಹೇಳಿ ಅವರಿಗೆ ಅವಕಾಶ ಕೊಡುತ್ತೇನೆ. ಈ ವಿಧೇಯಕವನ್ನು ಇವತ್ತೇ ಅಂಗೀಕಾರಕ್ಕಾಗಿ ತೆಗೆದುಕೊಳ್ಳಬೇಕಾಗಿದೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸದಸ್ಯರ ಹಕ್ಕನ್ನು ಕಿತ್ತುಕೊಳ್ಳುವುದು ಸರಿಯಲ್ಲ.

(ಗೊಂದಲ)

**ಶ್ರೀ ಆರ್.ಬಿ.ತಿಮ್ಮಾಪೂರ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶವನ್ನು ಕೊಡಿ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಮಾತನಾಡಿ. ಇಲ್ಲದಿದರೆ ಬೇರೆಯವರಿಗೆ ಮಾತನಾಡಲು ಅವಕಾಶವನ್ನು ನೀಡಲಾಗುತ್ತದೆ. ನಾನು ಪೀಠದಿಂದ ಹೇಳುತ್ತಿದ್ದೇನೆ, ಮಾನ್ಯ ಪಿ.ಆರ್.ರಮೇಶ್‌ರವರೇ ತಾವು ಮಾತನಾಡಿ, ಇಲ್ಲದಿದ್ದರೆ ನಾನು ನೇರವಾಗಿ ವಿಧೇಯಕವನ್ನು ಅಂಗೀಕಾರಕ್ಕಾಗಿ ತೆಗೆದುಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಆರ್.ಬಿ.ತಿಮ್ಮಾಪೂರ:–** ಸನ್ಮಾನ್ಯ ಸಭಾಪತಿಯವರೇ, ಅವರಿಗಿಂತ ಮೊದಲು ನಾನು ಮಾತನಾಡಲು ಹೆಸರು ಕೊಟ್ಟಿದ್ದೇನೆ. ನನಗೆ ಮಾತನಾಡಲು ತಾವು ಮೊದಲು ಅವಕಾಶವನ್ನು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

(ಗೊಂದಲ)

**ಹಂಗಾಮಿ ಸಭಾಪತಿಯವರು:–** ಎಲ್ಲರೂ ನಿಮ್ಮವರೇ, ಮಾನ್ಯ ಪಿ.ಆರ್.ರಮೇಶ್‌ರವರು ಮಾತನಾಡಲಿ, ಮಾತನಾಡುವಾಗ ಸಮಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ.

(ಗೊಂದಲ)

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, **XXX**

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ನನಗೆ ಅವಕಾಶ ನೀಡಿದಕ್ಕಾಗಿ ಧನ್ಯವಾದಗಳು.

(ಗೊಂದಲ)

**ಶ್ರೀ ಆರ್.ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ಉತ್ತರವನ್ನು ನೀಡಲಿ ಏನಾದರೂ ಸ್ಪಷ್ಟೀಕರಣಗಳಿದ್ದರೆ ಇನ್ನೂ 5 ಜನ ಬೇಕಾದರೂ ಮಾತನಾಡಲಿ. ಈ ಚರ್ಚೆ ಪ್ರಾರಂಭ ಮಾಡಿ ಸುಮಾರು 3 ಗಂಟೆಗಳ ಕಾಲವಾಗಿದೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಸಾಧ್ಯವೇ ಇಲ್ಲ. ಚರ್ಚೆಯಾಗಬೇಕು ಆಮೇಲೆ ಉತ್ತರ.

---

**XXX ಮಾನ್ಯ ಸಭಾಪತಿ (ಹಂಗಾಮಿ)ಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಮಾನ್ಯ ರಮೇಶ್‌ರವರೇ ಸಮಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ, ಸಮಯ ಮೀರಿದರೆ, ನಾನು ವಿಧೇಯಕವನ್ನು ಅಂಗೀಕಾರಕ್ಕಾಗಿ ತೆಗೆದುಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಅಲ್ಲಂ ವೀರಭದ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ತಿಮ್ಮಾಪೂರ್‌ರವರಿಗೆ ಮಾತನಾಡಲು ಅವಕಾಶವನ್ನು ನೀಡಿ. ಅವರ ಜನಾಂಗಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹೇಳುತ್ತಾರೆ.

**ಹಂಗಾಮಿ ಸಭಾಪತಿಯವರು:–** ನಾನು ಒಂದು ಬಾರಿ ಜೆ.ಡಿ.(ಎಸ್) ಪಕ್ಷದ ಸದಸ್ಯರನ್ನು, ಮತ್ತೊಂದು ಬಾರಿ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶವನ್ನು ನೀಡುತ್ತಿದ್ದೆ. ಮಾನ್ಯ ತಿಮ್ಮಾಪೂರ್‌ರವರು ಈ ಸದನದೊಳಗೆ ಜಾತಿಯ ಬಗ್ಗೆ ಪ್ರಸ್ತಾಪ ಮಾಡಿರುವುದು ದುರಂತದ ವಿಚಾರವಾಗಿದೆ. ಹಿರಿಯ ಸದಸ್ಯರಾಗಿರುವ ಅವರು ಈ ರೀತಿ ಮಾತನಾಡಿರುವುದು ಸರಿಯೇ? ಅವರಿಗೆ ಅವಕಾಶ ಕೊಡುವುದಿಲ್ಲವೆಂದು ಯಾರು ಹೇಳಿದ್ದಾರೆ? ಅವರ ಅವಕಾಶವನ್ನು ಅವರಿಗೆ ಕೊಡುತ್ತೇನೆ. **ತಿಮ್ಮಾಪೂರ್‌ರವರು ಏನು ಉಲ್ಲೇಖ ಮಾಡಿದ್ದಾರೆ ಅದನ್ನು ಕಡತದಿಂದ ತೆಗೆಯಿರಿ.** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಮಾತನಾಡಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಸನ್ಮಾನ್ಯ ಸಭಾಪತಿಯವರೇ, ಜಾತಿಯ ಪ್ರಶ್ನೆಯಲ್ಲ. ಈ ವಿಧೇಯಕದಿಂದ ಆ ಜನಾಂಗದವರಿಗೆ ಏನು ತೊಂದರೆಯಾಗುತ್ತದೆ ಎನ್ನುವುದನ್ನು ನಾನು ಹೇಳಬೇಕಾಗಿದೆ. ನಾನು ಆ ಜನಾಂಗದ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ. ನಾನು ಸುಮ್ಮನೆ ಕುಳಿತುಕೊಳ್ಳಬೇಕೇ? ಇಲ್ಲಿ ಆ ಜನಾಂಗದ ಪ್ರಶ್ನೆಯಿದೆ, ಅವರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಅದನ್ನು ಈ ಸದನದೊಳಗೆ ಪ್ರಸ್ತಾಪ ಮಾಡಬಾರದು ಎನ್ನುವುದಾದರೆ, ನಾನು ಇಲ್ಲಿಗೆ ಯಾಕೆ ಬರಬೇಕು?

(ಮುಂದುವರಿದಿದೆ)

(240) 08–02–2021/7.10/ಡಿಎಸ್–ಜಿಆರ್

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಪೀಠದ ತೀರ್ಮಾನದಂತೆ ಈ ಹಿಂದೆ ನಾವೆಲ್ಲರೂ ಕೂಡ ಈ ವಿಧೇಯಕದ ಬಗ್ಗೆ ಚರ್ಚೆ ಮಾಡುವುದಕ್ಕೆ ಒಪ್ಪಿಗೆ ಸೂಚಿಸಿದ್ದೇವೆ. ಈಗ ಕೆಲವೇ ಕೆಲವು ಮಂದಿ ಸದಸ್ಯರು ಮಾತನಾಡಿದ್ದಾರೆ. ಕೆಲವು ಸದಸ್ಯರು ನಾಳೆ ತೆಗೆದುಕೊಳ್ಳಿ ಎಂದು ಹೇಳಿದರು. ತಾವು ಆಗುವುದಿಲ್ಲ ಎಂದು ಹೇಳುತ್ತಿದ್ದೀರಿ. ನಾನು ತಮಗೆ ವಿನಂತಿ ಮಾಡುವುದೇನೆಂದರೆ, ತಾವು ಪೀಠದಿಂದ ಹೇಳಿದ್ದೀರಿ. ಎಲ್ಲರಿಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದಕ್ಕೆ ಸಾಕಷ್ಟು ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ. ಈಗ ವಿಧೇಯಕವನ್ನು ತಂದಿರತಕ್ಕಂಥವರು ಅತ್ಯಂತ ಪ್ರಮುಖವಾದಂತಹ ಮಹತ್ವ ಪೂರ್ಣವಾದಂತಹ ವಿಧೇಯಕವನ್ನು ತಂದಿದ್ದೇವೆಂದು ಹೇಳಿದ್ದಾರೆ. ನಾವು ಕೂಡ ಈ ಮಹತ್ವ ಪೂರ್ಣ ವಿಧೇಯಕದ ಬಗ್ಗೆ ಬಹಳ ಚರ್ಚೆಯಾಗಬೇಕೆಂದು ಹೇಳಿದ್ದೇವೆ. ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ದಯವಿಟ್ಟು ಎಲ್ಲರಿಗೂ ಅವಕಾಶ ಕೊಡಿ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ನಾನು ಕಾಲಾವಕಾಶ ಕೊಟ್ಟಿದ್ದೇನೆ, ಮತ್ತೆ ಏಕೆ ಕಾಲಹರಣ ಮಾಡುತ್ತಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಹಂಗಾಮಿ ಸಭಾಪತಿಯವರು:–** ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಈಗ ನಾನು ಅವಕಾಶ ಕೊಡುತ್ತೇನೆ. ಮಾನ್ಯ ಮರಿತಿಬ್ಬೇಗೌಡರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಪಿ.ಆರ್.ರಮೇಶ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಇಡೀ ರಾತ್ರಿ ಚರ್ಚೆಯನ್ನು ಮಾಡುತ್ತೇವೆ. ದಯವಿಟ್ಟು ಅವಕಾಶ ಮಾಡಿಕೊಡಿ.

**ಹಂಗಾಮಿ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲ ಎಂದು ಕಾಣುತ್ತಿದೆ.

(ಗೊಂದಲ)

**ಹಂಗಾಮಿ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಪರ್ಯಾಲೋಚಿಸುವುದು"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 22 ರವರೆಗೆ**

**ಹಂಗಾಮಿ ಸಭಾಪತಿಯವರು:–** “ಖಂಡ 2 ರಿಂದ 22 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.”

**(ಈ ಹಂತದಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಹಾಗೂ ಶ್ರೀ ನಸೀರ್ ಅಹಮದ್‌ರವರು ಪೀಠದ ಬಳಿ ಆಗಮಿಸುತ್ತಾ ಡಿವಿಜ಼ನ್‌ಗೆ ಒತ್ತಾಯಿಸಿದರು ಹಾಗೂ ಅವರ ಜೊತೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಹಲವಾರು ಸದಸ್ಯರುಗಳು ಸದನದ ಬಾವಿಯೊಳಗೆ ಬಂದು ಘೋಷಣೆಗಳನ್ನು ಕೂಗುತ್ತಿದ್ದರು. ಶ್ರೀ ಎಂ.ನಾರಾಯಣಸ್ವಾಮಿಯವರು ಹಾಗೂ ಶ್ರೀ ನಸೀರ್ ಅಹ್ಮದ್‌ರವರು ವಿಧೇಯಕದ ಪ್ರತಿಯನ್ನು ಹರಿದು ಎಸೆದರು)**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 22 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಪ್ರಭು ಬಿ. ಚವ್ಹಾಣ್(ಪಶು ಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಅಂಗೀಕರಿಸುವುದು."**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>

**ಹಂಗಾಮಿ ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 9ನೇ ಫೆಬ್ರವರಿ ಮಾಹೆ 2021ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "